# ಬೃಹಚ್ಚರಣ

ಸಂಘದ ವಾರ್ತಾ ಪತ್ರಿಕೆ

50

## ಸುವರ್ಣ ಸಂಚಿಕೆ

With Best Compliments From

केनरा बैंक
Canara Bank
A Government of India Undertaking

120 Years of Trust

Together We Can

# SPREADING SMILES ALL AROUND

Canara Angel
Dream beyond boundaries



*An Exclusive Savings Account for Women aged 18-70 years*

- Cancer Care Insurance upto ₹ 10 Lakhs*
- Personal Accident Insurance upto ₹ 26 Lakhs*

Scan QR Code to know more

Exclusive card offers:

blinkit India's Last Minute App | Myntra | book my show

*T&C apply

1 Bank Number 1800 1030 | www.canarabank.com

# ಬೃಹಚ್ಚರಣ

ಸಂಘದ ವಾರ್ತಾ ಪತ್ರಿಕೆ

ಸಂಪುಟ : 16 ಸಂಚಿಕೆ : 3 ಖಾಸಗಿ ಪ್ರಸಾರಕ್ಕಾಗಿ ಆಗಸ್ಟ್ – ಡಿಸೆಂಬರ್ 2025

E-mail : queries@mmdbs.in magazines@mmdbs.in web : www.mmdbs.in




# ಸುವರ್ಣ ಸಂಚಿಕೆ

## "ಬೃಹಚ್ಚರಣ" ಸುವರ್ಣ ಸಂಚಿಕೆ ಸಂಪಾದಕ ಮಂಡಳಿ

ಸುಬ್ರಹ್ಮಣ್ಯಂ ಬಿ. – ಸಂಪಾದಕರು
ಅರುಣ್ ಕೆ.ಎಸ್. – ಅಧ್ಯಕ್ಷರು
ಶ್ಯಾಮಸುಂದರ್ ಆರ್.ಎ. – ಕಾರ್ಯದರ್ಶಿ

ಸೋಮಸುಂದರ ಎಸ್., ನಟರಾಜ್ ಕೆ.ಸಿ., ಮಣಿ ವಿ.ಎಸ್., ಶಶಿಧರ್ ಹೆಚ್.ಕೆ., ಅರುಣ್ ವಿ., ಶ್ರೀನಿವಾಸ ಎಸ್.ಸಿ., ರಮೇಶ್ ಆರ್., ಲಲಿತಾ ಹೆಚ್.ಆರ್., ಗೌರಿ ಬಿ. ನಟರಾಜ್, ರೂಪಶ್ರೀ ಎಂ., ಶಿವಕುಮಾರ್ ಎನ್.

**Register Office : 'BRUHACHARANA SANGHA', # 27/1, Bull Temple Road, Basavanagudi, Bengaluru - 560004.**

Published by Sri K.S. Arun, President, 'BRUHACHARANA SANGHA', # 27/1, Bull Temple Road, Basavanagudi, Bengaluru - 560004.
Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070.



श्री श्री जगद्गुरु शङ्कराचार्य महासंस्थानम्, दक्षिणाम्नाय श्रीशारदापीठम्, शृङ्गेरी

**SRI SRI JAGADGURU SHANKARACHARYA MAHASAMSTHANAM**
**DAKSHINAMNAYA SRI SHARADA PEETHAM**
**SRINGERI - 577 139, KARNATAKA, INDIA**



'Guru Seva Nirata'
**P A Murali** B.Com., ACA
CEO & Administrator
Sri Sringeri Math and its Properties

Website : www.sringeri.net
E-mail : adminoffice@sringeri.net
Phone Off : 08265 - 252525 / 262626 / 272727 / 250123

G-06/ 01-11-2025

ಗೆ,

ಶ್ರೀ ಅರುಣ್
ಅಧ್ಯಕ್ಷರು
ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ
27/1, ಬುಲ್ ಟೆಂಪಲ್ ರಸ್ತೆ
ಬಸವನಗುಡಿ
ಬೆಂಗಳೂರು-560004
ಮೊ. 636603769

ಮಾನ್ಯರೇ,

ನೀವು ದಿನಾಂಕ 29-10-2025ರಂದು ಬರೆದ ಪತ್ರ ಅಡಕದೊಂದಿಗೆ ತಲುಪಿದೆ. ವಿಷಯಗಳನ್ನು ಉಭಯ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪಾದಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮ ಪೂರ್ವಕ ವಿಜ್ಞಾಪಿಸಲಾಯಿತು.

ಶತಮಾನಗಳ ಹಿಂದೆ ತಮಿಳುನಾಡಿನ ಮಂಜಪತ್ತೂರು ಗ್ರಾಮದಿಂದ ಮೈಸೂರು ಗ್ರಾಮಾಂತರ ಪ್ರದೇಶಕ್ಕೆ ವಲಸೆ ಬಂದ ಬೃಹಚ್ಚರಣ ಯಜುರ್ವೇದಿ ಬ್ರಾಹ್ಮಣರ ವಂಶಸ್ಥರು ಸಂಘಟಿಸಿರುವ ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ಅನೇಕ ದಶಕಗಳಿಂದ ಅಸ್ತಿತ್ವದಲ್ಲಿದ್ದು ಬೃಹಚ್ಚರಣ ಪರಿವಾರಗಳ ಉಳಿವು ಮತ್ತು ಕ್ಷೇಮಾಭ್ಯುದಯಕ್ಕಾಗಿ ಶ್ರಮಿಸುತಿದ್ದು, ಪ್ರಸ್ತುತ 'ಬೃಹಚ್ಚರಣ' ಪತ್ರಿಕೆಯು 50ನೇ 'ಸುವರ್ಣ ಸಂಚಿಕೆ'ಯನ್ನು ಹೊರತ್ತರುತ್ತಿರುವ ವಿಚಾರವನ್ನರಿತು ಉಭಯ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಸಂತೋಷಪಟ್ಟಿರುತ್ತಾರೆ.

ಶ್ರೀ ಶಾರದಾಚಂದ್ರಮೌಳೀಶ್ವರರ ಕೃಪೆಯಿಂದ ನೀವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಿ ಪೂರ್ತಿಗೊಳ್ಳಲಿ, ಪ್ರಕಟಿಸುತ್ತಿರುವ 'ಸುವರ್ಣ ಸಂಚಿಕೆ'ಯು ಉತ್ತಮ ಲೇಖನಗಳಿಂದೊಡಗೂಡಿ ಸುಂದರವಾಗಿ ಮೂಡಿ ಬರಲಿ, ಸಂಸ್ಥೆಯು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವಂತಾಗಲಿ ಎಂದು ಶ್ರೀ ಶ್ರೀಗಳವರು ಆಶೀರ್ವದಿಸಿ, ಅನುಗ್ರಹಿಸಿದ ಆಶೀರ್ಮಂತ್ರಾಕ್ಷತೆ, ಶ್ರೀ ಶಾರದಾ ಅರ್ಚನಾ ಪ್ರಸಾದವನ್ನು ಇದರೊಂದಿಗೆ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

(ಪಿ.ಎ. ಮುರಳಿ)

ಅಡಕ : ಆಶೀರ್ಮಂತ್ರಾಕ್ಷತೆ, ಪ್ರಸಾದ.

SRI SHARADA PEETHAM SRINGERI-577139

श्री आदिशङ्कराचार्य शारदा लक्ष्मीनृसिंह पीठम्, श्री मठम् – हरिहरपुरम्
SRI ADISHANKARACHARYA SHARADA LAKSHMI NARASIMHA PEETAM
ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್






ದಿವ್ಯಕ್ಷೇತ್ರ ಹರಿಹರಪುರದ ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠಾಧೀಶ್ವರರಾದ
ಪರಮಪೂಜ್ಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರ

# ಅನುಗ್ರಹ ಸಂದೇಶ

**ಅಧ್ಯಕ್ಷರು ಮತ್ತು ಸದಸ್ಯರು**
ಶ್ರೀ ಮೈಸೂರು ಮಂಜಪ್ಪತ್ತೂರು ದ್ರಾವಿಡ ಬೃಹಚ್ಚರಣ ಸಂಘ
ಬೆಂಗಳೂರು

ಮಾನ್ಯರೇ,

ಶತಮಾನಗಳ ಹಿಂದೆ ತಮಿಳುನಾಡಿನ ಮಂಜಪ್ಪತ್ತೂರು ಗ್ರಾಮದ ಕಡೆಯಿಂದ ಕರ್ನಾಟಕದ ಕಡೆ ವಲಸೆಬಂದ ಯಜುರ್ವೇದಿ ಬ್ರಾಹ್ಮಣರ ವಂಶಸ್ಥರಾಗಿರುವ ತಾವುಗಳು, ಬೃಹಚ್ಚರಣ ಎಂಬ ಹೆಸರಿನಲ್ಲಿ ಸಂಘವೊಂದನ್ನು ಸಂಘಟಿಸಿ, ತಮ್ಮ ಪರಿವಾರಗಳ ಉಳಿವು ಮತ್ತು ಅಭ್ಯುದಯಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿಯೂ ಹಾಗೂ ಇದೀಗ ಬೃಹಚ್ಚರಣ ಎಂಬ ತಮ್ಮ ಪತ್ರಿಕೆಯ 50ನೆಯ ಸಂಚಿಕೆಯನ್ನು ವಿಶೇಷವಾಗಿ ''**ಸುವರ್ಣ ಸಂಚಿಕೆ**'' ಎಂಬ ಶೀರ್ಷಿಕೆಯಡಿ ಪ್ರಕಟಿಸುತ್ತಿರುವುದಾಗಿ ತಿಳಿಸಿರುವ ತಮ್ಮ ವಿಜ್ಞಾಪನೆಯನ್ನು ಪರಮಪೂಜ್ಯ ಮಹಾಸ್ವಾಮಿಗಳವರಲ್ಲಿ ನಿವೇದಿಸಲಾಯಿತು.

ವಿಷಯವನ್ನು ತಿಳಿದ ಪರಮಪೂಜ್ಯ ಮಹಾಸ್ವಾಮಿಗಳವರು ಅತ್ಯಂತ ಸಂತೋಷಪಟ್ಟು, ನೀವು ಹೊರತರುತ್ತಿರುವ ಈ ವಿಶೇಷ ಸಂಚಿಕೆಯು ಸುಂದರವಾಗಿ ಮೂಡಿಬರಲಿ ಹಾಗೂ ನಿಮ್ಮ ಈ ಸಂಘವು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅಭ್ಯುದಯವನ್ನು ಹೊಂದಲಿ ಎಂದು ನುಡಿದು ಹೃತ್ಪೂರ್ವಕವಾಗಿ ಆಶೀರ್ವದಿಸಿರುತ್ತಾರೆ.

ಇದೇ ಸಂದರ್ಭದಲ್ಲಿ ಪರಮಪೂಜ್ಯ ಮಹಾಸ್ವಾಮಿಗಳವರು ತಮ್ಮ ಕುಟುಂಬದವರೆಲ್ಲರಿಗೂ ಆಶೀರ್ವದಿಸಿ ಅನುಗ್ರಹಿಸಿದ ದಿವ್ಯ ಮಂತ್ರಾಕ್ಷತೆಯನ್ನು ನಿಮಗೆ ತಲುಪಿಸುತ್ತಿದ್ದೇನೆ.

ವಂದನೆಗಳೊಂದಿಗೆ,

**ಪಿ. ರಘುನಾಥ ಶಾಸ್ತ್ರೀ ,**
ಪರಮಪೂಜ್ಯ ಶ್ರೀ ಶ್ರೀಗಳವರ ಆಪ್ತಕಾರ್ಯದರ್ಶಿ,
ಶ್ರೀಮಠ ಹರಿಹರಪುರ.

ದಿನಾಂಕ: 13-11-2025
ಸ್ಥಳ: ಹರಿಹರಪುರ

Phone : 080-2677 0066, 080-2677 1695

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

# AKHILA KARNATAKA BRAHMANA MAHASABHA (R.)

Gayathri Bhavana, # 3070, Gayathri Bhavana Road (14th Cross), 9th Main, BSK 2nd Stage
BANGALORE - 560 070. E-mail : info@akbms.com Website : www.akbms.com

**S. RAGHUNATH**
PRESIDENT

**R. LAKSHMIKANTH**
SENIOR VICE PRESIDENT

**SUBBANARASIMHA**
TREASURER

ಪತ್ರಸಂಖ್ಯೆ: 119-11/2025

11.11.2025

## ಸಂದೇಶ

ಕಳೆದ ದಶಕಗಳಿಂದ ಅಸ್ತಿತ್ವದಲ್ಲಿರುವ ಮೈಸೂರು ಮಂಜಪತ್ತೂರು ಬೃಹಚ್ಚರಣ ಸಂಘವು ಬೃಹಚ್ಚರಣ ಪರಿವಾರಗಳ ಕ್ಷೇಮಾಭ್ಯುದಯಕ್ಕಾಗಿ ಕೈಗೊಂಡ ಹಲವು ಕಾರ್ಯಕ್ರಮಗಳನ್ನು ತಿಳಿದು ಬಹಳ ಸಂತೋಷವಾಗಿದೆ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 75 ವಸಂತಗಳನ್ನು ಪೂರೈಸಿದ ಹಿರಿಯರಿಗೆ ಸನ್ಮಾನ, ಶಿಕ್ಷಣ ಕ್ಷೇತ್ರದ ಸಾಧಕರಿಗೆ, ಸದಸ್ಯರ ಮರಣದ ಸಂದರ್ಭದಲ್ಲಿ ಸಹಾಯ, "ವೈಕುಂಠವಾಹನ ನೀಡಿಕೆ", ಬೃಹಚ್ಚರಣ ವಾರ್ತಾಪತ್ರಿಕೆಯನ್ನು ಪ್ರಕಟಿಸುತ್ತಿರುವುದು ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವಾದುದು.

ಇದೇ ಸಂದರ್ಭದಲ್ಲಿ "ಬೃಹಚ್ಚರಣ" ಪತ್ರಿಕೆಯ 50ನೇ ಸಂಚಿಕೆಯು ಡಿಸೆಂಬರ್ 2025ರಂದು ಪ್ರಕಟಿಸುತ್ತಿರುವುದು ಸ್ಮರಣೀಯವಾಗಿದೆ. ಸ್ಮರಣ ಸಂಚಿಕೆಯು ವಿಶೇಷ ಲೇಖನಗಳನ್ನು ಒಳಗೊಂಡು ಸರ್ವ ಸದಸ್ಯರಿಗೂ ಉಪಯೋಗವಂತಾಗಲಿ, ಭವಿಷ್ಯದಲ್ಲಿ ಬೃಹಚ್ಚರಣ ಬ್ರಾಹ್ಮಣರ ಸರ್ವತೋಮುಖ ಏಳಿಗೆಯನ್ನು ಸಾಧಿಸುವಂತಾಗಲಿ ಎಂದು ಶುಭವಾಗಲಿ ಎಂದು ಹಾರೈಸುತ್ತೇನೆ.

ಎಸ್. ರಘುನಾಥ್
ಅಧ್ಯಕ್ಷರು.

# ಪ್ರಕಟವಾಗಿರುವ "ಬೃಹಚ್ಚರಣ" ಸಂಚಿಕೆಗಳು (1-49)



# ಪರಿವಿಡಿ


| ಕ್ರ.ಸಂ. | ಲೇಖನ/ಚಿತ್ರ | ವಿಷಯ | ಪುಟ |
|---|---|---|---|
| 1 | | ಅಧ್ಯಕ್ಷರ ನುಡಿ – ಅರುಣ್ ಕೆ.ಎಸ್. | 08 |
| 2 | | ಸಂಪಾದಕೀಯ – ಸುಬ್ರಹ್ಮಣ್ಯಂ ಬಿ. | 09 |
| 3 | | ಈಗಿನ ಕಾರ್ಯಕಾರಿ ಸಮಿತಿಯ ಸದಸ್ಯರು | 10 |
| 4 | | ಹಿಂದಿನ ಅವಧಿಗಳಲ್ಲಿ ಸೇವೆ ಸಲ್ಲಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರು | 12 |
| 5 | | ಕಾರ್ಯಕಾರಿ ಸಮಿತಿ ಸದಸ್ಯರು (2010ಕ್ಕೆ ಮುಂಚೆ) | 14 |
| 6 | | "ಬೃಹಚ್ಚರಣ ಸಂಘ" ನಡೆದು ಬಂದ ದಾರಿ – ನಟರಾಜ್ ಕೆ.ಸಿ. | 16 |
| 7 | | ಸುವರ್ಣ ಸಂಚಿಕೆ – ನನ್ನ ಅನಿಸಿಕೆ – ಡಿ.ಎಸ್. ಗಾಯತ್ರಿ | 21 |
| 8 | | ಕಿತ್ತಿಗಾನಹಳ್ಳಿಯಲ್ಲಿ ನಾಗರಕಟ್ಟೆ ಜೀರ್ಣೋದ್ಧಾರ ಸಂದರ್ಭ | 22 |
| 9 | | ಕಿತ್ತಿಗಾನಹಳ್ಳಿ ಕ್ಷೇತ್ರದಲ್ಲಿನ ದೇವರುಗಳು | 23 |
| 10 | | ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ ಸಂದರ್ಭ | 24 |
| 11 | | ಸಂಘದಿಂದ ಶಿಕ್ಷಕರನ್ನು ಗೌರವಿಸಿದ ಸಂದರ್ಭ | 25 |
| 12 | | ಸಂಘದಿಂದ 'ಆರ್ಯಾವರ್ತ' ಸಂಸ್ಥೆಗೆ ವೈಕುಂಠ ವಾಹನ ನೀಡಿದ ಸಂದರ್ಭ | 27 |
| 13 | | ಸಂಘದಿಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಗಾಯತ್ರಿ ಭವನಕ್ಕೆ ಕುರ್ಚಿಗಳನ್ನು ನೀಡಿದ ಸಂದರ್ಭ | 28 |
| 14 | | ಸಂಘಕ್ಕೆ ಉದಾರವಾಗಿ ದೇಣಿಗೆ ನೀಡಿರುವ ದಾನಿಗಳನ್ನು ಗೌರವಿಸಿದ ಸಂದರ್ಭ | 29 |
| 15 | | ಸಂಘದ ಲೆಕ್ಕಪತ್ರ ಪರಿಶೋಧಕರನ್ನು ಗೌರವಿಸಿದ ಸಂದರ್ಭ | 29 |
| 16 | | ಸಂಘದ ಕ್ಯಾಲೆಂಡರ್ ಬಿಡುಗಡೆಯ ಸಂದರ್ಭ | 30 |
| 17 | | ಸಂಘದ ವೆಬ್‌ಸೈಟ್ ಬಿಡುಗಡೆಯ ಸಂದರ್ಭ | 31 |
| 18 | | ಸಂಘದ ಸದಸ್ಯರ ಕೈಪಿಡಿ ಬಿಡುಗಡೆಯ ಸಂದರ್ಭ | 31 |
| 19 | | ಸಂಘದ 'ಸಾಂತ್ವನ ನಿಧಿ' ಕಾರ್ಯಕ್ರಮ ಪ್ರಾರಂಭ ಮಾಡುವ ಮುನ್ನ ಸದಸ್ಯರೊಂದಿಗೆ ಚರ್ಚೆ | 31 |
| 20 | | ಸಂಘದಲ್ಲಿ 75 ವಸಂತಗಳನ್ನು ಪೂರೈಸಿದ ಹಿರಿಯರನ್ನು ಗೌರವಿಸಿದ ಸಂದರ್ಭ | 32 |
| 21 | | ಸಮುದಾಯದ ಪ್ರತಿಭಾ ಪುರಸ್ಕೃತರು / ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಮುದಾಯದವರು | 32 |
| 22 | | ಸಂಘದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು | 33 |
| 23 | | ಬೃಹಚ್ಚರಣ ಸಂಘ ಅಂದು-ಇಂದು – ಚಂದ್ರಮೌಳಿ ಎನ್. | 34 |
| 24 | | ದ್ವಿಪದಿ, ತ್ರಿಪದಿಗಳ ಸಮೂಹ ಘೋಷ ವಾಕ್ಯ – ನಡುವತ್ತಿ ಎನ್.ವಿ. ಸುಂದರ್ | 35 |
| 25 | | ವಿವಿಧ ಕಲೆ – ನಳಿನಿ ಸುಬ್ರಹ್ಮಣ್ಯಂ | 35 |
| 26 | | "ಬೃಹಚ್ಚರಣ"ದಲ್ಲಿ ಈವರೆಗೆ ಪ್ರಕಟವಾಗಿರುವ ವ್ಯಕ್ತಿಚಿತ್ರಣಗಳ ಪಕ್ಷಿನೋಟ – ಆರ್. ರಮೇಶ್ & ಹೆಚ್.ಆರ್. ಲಲಿತಾ | 42 |
| 27 | | ಗೊಂಬೆಗಳ ಮುಖಾಂತರ ನೈತಿಕ ಮೌಲ್ಯಗಳ ಕಲಿಕೆಯ ಅನಾವರಣ – ರೂಪಾ ವಿಶ್ವೇಶ್ | 52 |
| 28 | | ಬ್ರಾಹ್ಮಣರು – ಗೋವಿಂದ್ ಬಿ.ಈ. | 54 |
| 29 | | ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ – 2025 | 55 |
| 30 | | ಶ್ರೀ ನಾಗೇಶ್ವರ ಕ್ಷೇತ್ರದ ಇತಿಹಾಸ – ವಿ.ಎಸ್. ಮಣಿ | 60 |
| 31 | | "ಮರೆಗುಳಿತನ" (DEMENTIA) ಎಂಬ ಬೇನೆ – ಬಿ.ಪಿ. ಸರಸ್ವತಿ | 62 |
| 32 | | ಮೃಗ – ಸಮಾಹಿತ ಶಿವಕುಮಾರ್ | 63 |

# ಪರಿವಿಡಿ


| ಕ್ರ.ಸಂ. | ಲೇಖನ/ ಚಿತ್ರ | ವಿಷಯ | ಪುಟ |
|---|---|---|---|
| 39 | | ಓಂ ಶ್ರೀ ಗಣೇಶಾಯ ನಮಃ – ಅಂಬ ನಡವತ್ತಿ | 63 |
| 40 | | ಕೊಲ್ಕತ್ತದ ಸಾಂಪ್ರದಾಯಿಕ ದುರ್ಗಾ ಪೂಜೆ – ರಾಜೇಶ್ವರಿ ಆರ್. | 64 |
| 41 | | 'ಲೋಕ ಸಂಚಾರ' – ರಾಜಲಕ್ಷ್ಮೀ ಎಸ್. | 65 |
| 42 | | ಕೈಲಾಸ ಮತ್ತು ಮಾನಸ ಸರೋವರ ಯಾತ್ರೆ – ನಮ್ಮ ಅವಿಸ್ಮರಣೀಯ ಅನುಭವ – ಬಿ.ಎನ್. ಗೋವಿಂದ ಪ್ರಸಾದ್ | 66 |
| 43 | | "ಕಾಚರಕನಹಳ್ಳಿ" ಯ ಈಗಿನ ಪರಿಚಯ – ನಾಗರಾಜ್ ಸುಬ್ಬರಾವ್ | 69 |
| 44 | | ಶ್ರೀ ಸರಸ್ವತೀ ಕನ್ನಡ ವರ್ಣಮಾಲಾ ಸ್ತೋತ್ರಂ – ನಡುವತ್ತಿ ಗೋಪಾಲಯ್ಯ | 70 |
| 45 | | ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ | 71 |
| 46 | | "ಶ್ರೀ ವಿಷ್ಣು ಸಹಸ್ರನಾಮ" – ಜಿ.ಪಿ. ಲಕ್ಷ್ಮೀದೇವಿ | 73 |
| 47 | | "ಸಣ್ಣ ಶಿಸ್ತು – ದೊಡ್ಡ ವ್ಯಕ್ತಿತ್ವ" – ಸಂಧ್ಯಾ ನಾಗರಾಜ್ | 76 |
| 48 | | ಅರುಂಧತಿ – ಪ್ರಕೃತಿ ದೇವಿ | 77 |
| 49 | | ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು – ಗೋವಿಂದ್ ಬಿ.ಈ. | 81 |
| 50 | | ಆದಿಗುರು ಶ್ರೀ ಶಂಕರಾಚಾರ್ಯರ "ವಿವೇಕಚೂಡಮಣಿ" ಪ್ರಕರಣ ಗ್ರಂಥದ ಸಾಧನಾ ಚತುಷ್ಟಯ | 84 |
| 51 | | ಗಿರಿಜಾ ಕಲ್ಯಾಣೋತ್ಸವ ಸಂದರ್ಭ | 85 |
| 52 | | ಶ್ರೀ ಶಂಕರ ಜಯಂತಿಯ ದಿನ ಭಕ್ತಿ ಸಂಗೀತ ಕಾರ್ಯಕ್ರಮ | 86 |
| 53 | | 'ನಮ್ಮ ಬದುಕೇ ಒಂದು ಸಂಭ್ರಮವಾಗಿ ಬಿಡಲಿ!' – ಎಸ್.ಎಲ್. ವರಲಕ್ಷ್ಮೀ ಮಂಜುನಾಥ್ | 91 |
| 54 | | ಸಂಘದಿಂದ ವಾರ್ಷಿಕ ಒಂದು ದಿನದ ಪ್ರವಾಸಗಳನ್ನು ಕೈಗೊಂಡ ಸಂದರ್ಭ | 94 |
| 55 | | ತನಾಂತರಂಗ – ಸುದರ್ಶನ್ ಸುಬ್ಬರಾವ್ | 97 |
| 56 | | ಅಮ್ಮಣ್ಣಮ್ಮ ವಿದ್ಯಾರ್ಥಿನಿಲಯ – ಸುಮಾರು 1950–60ರ ಕಾಲ – ಜಿ.ಎಸ್. ಸತ್ಯಮೂರ್ತಿ | 99 |
| 57 | | ಅರಣ್ಯಗಳು ಮತ್ತು ವನ್ಯಜೀವಿಗಳ ಸೌಂದರ್ಯ ಮತ್ತು ಪ್ರಾಮುಖ್ಯತೆ – ಎನ್. ಶಿವಕುಮಾರ್ | 100 |
| 58 | | ಕಾರ್ಯಕಾರಿ ಸಮಿತಿ ಸಭೆಯು ನಮ್ಮವರ ಗ್ರಾಮಗಳಲ್ಲಿ : ಕಿತ್ತಿಗಾನಹಳ್ಳಿ, ಗುಮ್ಮಳಾಪುರ, ಬನ್ನೇರುಘಟ್ಟ | 103 |
| 59 | | ಕಾರ್ಯಕಾರಿ ಸಮಿತಿ ಸದಸ್ಯರ ಸಭೆ "ಸಂಪತ್ತು" ಸಂಸ್ಥೆಯಲ್ಲಿ | 104 |
| 60 | | ಬೃಹಚ್ಚರಣದ ಬೃಹತ್ ವ್ಯಕ್ತಿ ಪಂಡಿತ್ ಶೇಷಾದ್ರಿ ಗವಾಯಿ (1924 –2003) – ಸರಸ್ವತಿ ನಟರಾಜ್ | 105 |
| 61 | | ಮಂಕುತಿಮ್ಮನ ಕಗ್ಗ – ಎಸ್. ಶ್ರೀನಿವಾಸಯ್ಯ | 108 |
| 62 | | ಕೂರ್ಮದಾಸನ ಭಕ್ತಿ – ಭ್ರಮರಾ ಗೋಪಿನಾಥ್ | 110 |
| 63 | | ಯುವಕರಿಗೆ ಅತ್ಯವಶ್ಯಕ ಸಂದೇಶ – ಜಲಜಾ ಎಸ್. ಪ್ರಕಾಶ್ | 112 |
| 64 | | ಮಂಡಲ ಕಲೆ – ಸೋನಿಯಾ ಶಿವರಾಂ | 113 |
| 65 | | ಚಾರ್ ಧಾಮ್ ಯಾತ್ರೆಯ ನಮ್ಮ ಪ್ರವಾಸ ಕಥನ (2025) – ಹೆಚ್.ಕೆ. ಶಶಿಧರ್, ಎಸ್.ಸಿ. ಶ್ರೀನಿವಾಸ | 114 |
| 66 | | ಎಂ.ಎಂ.ಡಿ.ಬಿ.ಎಸ್. – ಭವಿಷ್ಯದಲ್ಲಿ ಬೆಳವಣಿಗೆಯ ಮಾರ್ಗನಕ್ಷೆ – ಡಾ॥ ಶುಭ ಗಾಯತ್ರಿ ಎನ್. | 119 |
| 67 | | ನಮ್ಮ ಸಮುದಾಯದ ಹೆಮ್ಮೆಯ ನಿಸ್ವಾರ್ಥ ವ್ಯಕ್ತಿಗಳು – ಗಣಶ್ರೀ | 123 |
| 68 | | ಬೃಹಚ್ಚರಣ ಕಾಲೋನಿ – ಒಂದು ಸವಿ ನೆನಪು – ಕೆ.ಸಿ. ನಟರಾಜ್ | 127 |
| 69 | | ಮರೆಯಲಾಗದ ವ್ಯಕ್ತಿತ್ವ – ನಮ್ಮ "Soil" ವಾಸು – ದೀಪ್ತಿ ಚಂದ್ರಶೇಖರ್ | 132 |
| 70 | | ವಾರ್ತಾಚಿತ್ರ | 134 |
| 71 | | ಗಣ್ಯರಿಂದ "ಬೃಹಚ್ಚರಣ" ಪತ್ರಿಕೆ ವೀಕ್ಷಣೆ / ಎ.ಕೆ.ಬಿ.ಎಂ.ಎಸ್. ಅಧ್ಯಕ್ಷರುಗಳನ್ನು ಭೇಟಿ ಮಾಡಿದ ಸಂದರ್ಭ | 139 |
| 72 | | ಸಂಘದ ಇತ್ತೀಚಿನ ನೋಂದಣಿ ಪ್ರಮಾಣ ಪತ್ರ | 140 |

# ಅಧ್ಯಕ್ಷರ ನುಡಿ

ಆತ್ಮೀಯ ಬಂಧು ಬಾಂಧವರಿಗೆ ನಮಸ್ಕಾರಗಳು.

ಮೈಸೂರು ಮಂಜಪತ್ತೂರು. ದ್ರಾವಿಡ ಬ್ರಹಚ್ಚರಣ ಸಂಘಕ್ಕೆ ಈಗ 15 ವರ್ಷಗಳ ಸಂಭ್ರಮ. ಸಂಘವು ಈಗ ಹದಿಹರೆಯ ಘಟ್ಟದಲ್ಲಿದೆ. ಈ ಸಂದರ್ಭದಲ್ಲಿ ಸಂಭ್ರಮಿಸುವ ಸಲುವಾಗಿ ಸಂಘದಿಂದ ಪ್ರಕಟವಾಗುವ ವಾರ್ತಾಪತ್ರಿಕೆಯ 50ನೇ ಸಂಚಿಕೆಯು "ಸುವರ್ಣ ಸಂಚಿಕೆ"ಯಾಗಿ ತಮ್ಮ ಕೈ ಸೇರಿದೆ.

ಈ ಸಂದರ್ಭದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು, ಸರ್ವ ಸದಸ್ಯರು, ಪೋಷಕರು, ದಾನಿಗಳು ಎಲ್ಲರಿಗೂ ಸಂಘದ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಕಳೆದ 15 ವರ್ಷಗಳಲ್ಲಿ ತಮ್ಮೆಲ್ಲರ ಬೆಂಬಲ ಸಹಕಾರಗಳಿಂದ ಸಂಘವು ನಿರಂತರವಾಗಿ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಇವುಗಳಲ್ಲಿ ನಿಯಮಿತವಾಗಿ ನಡೆಯುವ ನಾಗರಾಧನೆಯು ಪ್ರಮುಖವಾಗಿದೆ. ಇದಲ್ಲದೆ ಸಂಘವು ವಿವಿಧ ಕಾರ್ಯಕ್ರಮಗಳನ್ನು ವಿಶಿಷ್ಟವಾಗಿ ಆಯೋಜಿಸುತ್ತಾ ಬರುತ್ತಿದೆ. ಇದರಲ್ಲಿ ಪ್ರತಿಭಾ ಪುರಸ್ಕಾರ. ದಂಪತಿಗಳಿಗೆ, ಹಿರಿಯ ಚೇತನರಿಗೆ ಗೌರವ ಸಮರ್ಪಣೆ, ಸಾಮೂಹಿಕ ಉಪಾ ಕರ್ಮ, ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ, ಗಿರಿಜಾ ಕಲ್ಯಾಣೋತ್ಸವ, ಸತ್ಯನಾರಾಯಣ ಪೂಜೆ, ಗುರುವಂದನೆ ಇವುಗಳಲ್ಲದೇ ಸಂಘದ ಸರ್ವ ಸದಸ್ಯರ ಸಭೆ, ಒಂದು ದಿನದ ಪ್ರವಾಸ, ಶಂಕರ ಜಯಂತಿಯನ್ನು ಆಚರಿಸುತ್ತಾ ಬಂದಿರುತ್ತೇವೆ.

ನಮ್ಮ ಸಂಘದ ಸದಸ್ಯರ ಸಹಕಾರದಿಂದ ವಾರ್ಷಿಕ ನಿರ್ವಹಣಾ ವೆಚ್ಚವನ್ನು ನಿಯಮಿತವಾಗಿ ಸಂಗ್ರಹಿಸಲಾಗುತ್ತಿದೆ. ಇದರಿಂದ ಸಂಘದ ಖರ್ಚುಗಳನ್ನು ಭರಿಸಲಾಗುತ್ತಿದೆ.

ಯಾವುದೇ ಸಂಘವು ಸಮಾಜದಲ್ಲಿ ಗುರುತಿಸಿಕೊಳ್ಳುವುದು ಎರಡು ಕಾರಣಗಳಿಂದ. ಒಂದು, ಸಂಘವು ಕೈಗೊಳ್ಳುವ ಕಾರ್ಯಕ್ರಮಗಳು ಹಾಗೂ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ. ಈ ನಿಟ್ಟಿನಲ್ಲಿ ನಮ್ಮ ಸಂಘವು ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಈಗಾಗಲೇ ನಮ್ಮ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಯಶಸ್ಸು ಕಂಡು, ನಮ್ಮ ಮುಂದಿನ ಕಾರ್ಯಗಳಿಗೆ ದಿಕ್ಸೂಚಿಯಾಗಿದೆ. ಎರಡು ಸದಸ್ಯರ ಸಂಖ್ಯೆ. ನಮ್ಮ ಸಮುದಾಯದ ಸದಸ್ಯರ ಸಂಖ್ಯೆಗೆ ಹೋಲಿಸಿದರೆ ನಮ್ಮ ಸಂಘದ ಸದಸ್ಯರ ಸಂಖ್ಯೆಯು ಇನ್ನೂ ಬೆಳೆಯಬೇಕಾಗಿದೆ. ಪ್ರಸ್ತುತ ಸಂಘದ ಸದಸ್ಯರ ಸಂಖ್ಯೆಯು ಕೇವಲ 630 ಆಗಿದೆ. ನಮ್ಮ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರ ನಿರಂತರ ಪ್ರಯತ್ನ ಹಾಗೂ ಎಲ್ಲಾ ಸದಸ್ಯರ ಸಹಕಾರ ಈ ನಿಟ್ಟಿನಲ್ಲಿ ಅವಶ್ಯಕವಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಸಂಘದ ಸದಸ್ಯತ್ವ ಅಭಿಯಾನವನ್ನು ವ್ಯಾಪಕವಾಗಿ ಕೈಗೊಳ್ಳಲು ಯೋಚಿಸಲಾಗಿದೆ. ಇದರಲ್ಲಿ ಎಂದಿನಂತೆ ತಮ್ಮೆಲ್ಲರ ಸಹಕಾರ ಕೋರುತ್ತೇನೆ.

ಎಲ್ಲರಿಗೂ ನಮಸ್ಕಾರಗಳು



**ಅರುಣ್ ಕೆ ಎಸ್**
ಅಧ್ಯಕ್ಷರು
6366037069



**ಈಗಿನ ಕಾರ್ಯಕಾರಿ ಸಮಿತಿ ಸದಸ್ಯರು**

# ಸಂಪಾದಕೀಯ

ಬೃಹಚ್ಚರಣ ಸಂಘದ ಸದಸ್ಯರಿಗೆ ಮತ್ತು ಅವರ ಕುಟುಂಬವರ್ಗದವರಿಗೆ ನಮಸ್ಕಾರಗಳು.

ಸಂಘದಿಂದ ಪ್ರಕಟವಾಗಿರುವ ಈ ಐವತ್ತನೆಯ "ಬೃಹಚ್ಚರಣ" ಪತ್ರಿಕೆಯನ್ನು "ಸುವರ್ಣ ಸಂಚಿಕೆ" ಯ ರೂಪದಲ್ಲಿ ನಿಮ್ಮ ಕೈಗಿಡಲು ಸಂತಸವಾಗುತ್ತಿದೆ. ಸದಸ್ಯರ ಲೇಖನಿಯಿಂದ ಮೂಡಿಬಂದ ಬರಹಗಳಿಂದ, ಓದುಗರ ಮನದಲ್ಲಿ ಸವಿನೆನಪಿನ ಸರಮಾಲೆಗಳನ್ನು ಸೃಷ್ಟಿಸುವ ಭಾವಚಿತ್ರಗಳಿಂದ ಬಹುವರ್ಣಗಳಲ್ಲಿ ಅಚ್ಚಾಗಿರುವ ಈ ಸಂಚಿಕೆ ನಿಮ್ಮೆಲ್ಲರಿಗೆ ಮೆಚ್ಚುಗೆಯಾಗುತ್ತದೆಂದು ಭಾವಿಸುತ್ತೇನೆ.

ಈ "ಬೃಹಚ್ಚರಣ" ಪತ್ರಿಕೆಯು ಪ್ರಾರಂಭವಾಗಲು ಮತ್ತು ಹದಿನಾಲ್ಕು ವರ್ಷಗಳ ಕಾಲ ಯಶಸ್ವಿಯಾಗಿ ಪ್ರಕಟ ವಾಗುತ್ತಿರುವ ಈ ಘಟ್ಟದಲ್ಲಿ ಇದಕ್ಕೆ ಕಾರಣೀಭೂತರಾದ ಎಲ್ಲ ಮಹನೀಯ–ಮಹಿಳೆಯರಿಗೆ ಅಭಿನಂದನಾಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಪತ್ರಿಕೆಯ ಪ್ರಾರಂಭದಲ್ಲಿ ಸಂಪಾದಕರಾಗಿ ಸೇವೆ



ಸಲ್ಲಿಸಿ ಸಂಚಿಕೆಗೆ ಉತ್ತಮ ಬುನಾದಿ ಹಾಕಿಕೊಟ್ಟವರು ಹಿರಿಯ ಸದಸ್ಯ ಶ್ರೀ ಮಧುಸೂದನ. ಇವರ ಕಾರ್ಯ ಕಾಲದಲ್ಲಿ ಬೃಹಚ್ಚರಣರ ಆಡುಭಾಷೆಯ ಕಲಿಯುವಿಕೆಗೆ ಹೆಚ್ಚು ಒತ್ತು ದೊರಕಿತು.

ಇವರೊಂದಿಗೆ ಕೆಲಕಾಲ ಹಿರಿಯ ಪೋಷಕ ಬಿ.ಎಸ್. ಸೂರ್ಯನಾರಾಯಣ, ಶ್ರೀಯುತರಾದ ವೈ.ಜಿ. ಗಿರಿಶಾಸ್ತ್ರಿ ಮತ್ತು ಎನ್. ಚಂದ್ರಮೌಳಿ ಅವರುಗಳು ಸಹಕರಿಸಿರುತ್ತಾರೆ.



ನಂತರ ಸಂಪಾದಕರಾಗಿ "ಬೃಹಚ್ಚರಣ" ವು ವರ್ಷದಲ್ಲಿ ನಾಲ್ಕು ಬಾರಿ ಉತ್ತಮ ಗುಣಮಟ್ಟದಲ್ಲಿ ಪ್ರಕಟವಾಗಲು ಶ್ರಮಿಸಿದ ಹಿರಿಯ ಸದಸ್ಯ ಶ್ರೀ ಕೆ.ಸಿ. ನಟರಾಜನ್ ಅವರ ನಿಸ್ಪೃಹ ಸೇವೆಯನ್ನು ಇಲ್ಲಿ ಸ್ಮರಿಸಿ ಕೊಳ್ಳುತ್ತೇನೆ. 2015ರಿಂದ 2021ರ ವರೆಗೂ ಸಂಪಾದಕರಾಗಿ ಸೇವೆ ಸಲ್ಲಿಸಿದ ಶ್ರೀಯುತರು "ಬೃಹಚ್ಚರಣ"ದ ಗುಣಮಟ್ಟ ಸುಧಾರಿಸಲು ಅಪಾರವಾಗಿ ಶ್ರಮಿಸಿದ್ದಾರೆ. ಇವರ ಕಾರ್ಯಕಾಲದಲ್ಲಿ ಅನೇಕ ಸದಸ್ಯರಲ್ಲಿ



ಸುಪ್ತವಾಗಿದ್ದ ಲೇಖನ ಕಲೆ ಬೆಳಕಿಗೆ ಬಂದಿತು.

ಅಧ್ಯಕ್ಷರಾಗಿದ್ದ ಪೋಷಕ ಶ್ರೀ ಸೋಮ ಸುಂದರ ಅವರು ಕೆಲಕಾಲ ಪ್ರಧಾನ ಸಂಪಾದಕರಾಗಿದ್ದು ಸಂಪಾದಕ ಮಂಡಳಿಗೆ ಸಲಹೆ–ಸೂಚನೆಗಳ ಮೂಲಕ ಮಾರ್ಗದರ್ಶನ ನೀಡಿದ್ದಾರೆ. ಈ ಮಹನೀಯರೆಲ್ಲರಿಗೂ ಆದರ ಪೂರ್ವಕ ನಮಸ್ಕಾರಗಳು.



ಇವರ ನಂತರ ಮಹಾಪೋಷಕ ಶ್ರೀ ಆರ್. ರಮೇಶ್ ಅವರು ಸಂಪಾದಕರ ಜವಾಬ್ದಾರಿಯನ್ನು ವಹಿಸಿಕೊಂಡು ಸಂಚಿಕೆಗಳು ಉತ್ತಮವಾಗಿ ಮೂಡಿ ಬರಲು ಶ್ರಮಿಸಿರುತ್ತಾರೆ.

ಈ ಸಂದರ್ಭದಲ್ಲಿ "ಬೃಹಚ್ಚರಣ"ದ ಮೊದಲ ಸಂಚಿಕೆಯನ್ನು ಪ್ರಾಯೋಜಿಸಿದ, ಸಂಘದ ಪೋಷಕರಾಗಿದ್ದ ದಿ|| ಟಿ.ಎಸ್. ಕೃಷ್ಣನ್ ಅವರ ಔದಾರ್ಯತೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ.

ಈ ಸಂದರ್ಭದಲ್ಲಿ ನಮ್ಮ ಸಮುದಾಯದಲ್ಲಿ ಉದಯಿಸಿದ್ದ ಯುವ ಪ್ರತಿಭೆ, ಅಕಾಲಿಕವಾಗಿ ನಮ್ಮನ್ನಗಲಿದ ಕುಮಾರಿ ಅಚಲಾ ರಮೇಶ್ ಅವರನ್ನು ನೆನಪಿಸಿಕೊಳ್ಳುತ್ತೇನೆ.

ಮುಂಬರುವ ದಿನಗಳಲ್ಲಿ ಸಂಘದ ಸದಸ್ಯರುಗಳು "ಬೃಹಚ್ಚರಣ"ಕ್ಕೆ ಉತ್ತಮ ಲೇಖನಗಳನ್ನು ಕಳುಹಿಸುವ ಮೂಲಕ ಈ ನಿಮ್ಮ ಪತ್ರಿಕೆಯನ್ನು ಅಭಿಮಾನದಿಂದ ಬೆಳೆಸುವಿರೆಂದು ಆಶಿಸುತ್ತೇನೆ. ನಮ್ಮ ಆಚಾರ–ವಿಚಾರ, ಧಾರ್ಮಿಕ ಚಿಂತನೆ, ಸ್ಫೂರ್ತಿಪ್ರದಾಯಕ ಬರಹಗಳು ಇಷ್ಟೇ ಅಲ್ಲದೇ ಕಲೆ, ಸಾಹಿತ್ಯ, ವಿಜ್ಞಾನ, ಪರಿಸರ, ಕ್ರೀಡೆ ಈ ವಿಷಯಗಳ ಬಗ್ಗೆ ಲೇಖನಗಳನ್ನು ಕಳುಹಿಸಬಹುದು. ನಿಮ್ಮ ಲೇಖನಿಯಿಂದಲೇ ಮೂಡಿಬಂದ ಬರಹಗಳಿಗೆ ಆದ್ಯತೆ. "ಸಂಗ್ರಹ"ಗಳು ಅಪೇಕ್ಷಣೀಯವಲ್ಲ.

ನಿಮ್ಮೆಲ್ಲರ ಪ್ರೋತ್ಸಾಹ, ಸಹಕಾರಗಳಿಂದ "ಬೃಹಚ್ಚರಣ"ವು ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಾ ಇನ್ನು ಕೆಲ ವರ್ಷಗಳಲ್ಲಿ 75ನೆಯ ಸಂಚಿಕೆಯು ನಿಮ್ಮ ಕೈ ಸೇರುವಂತಾಗ ಲೆಂದು ಹಾರೈಸುತ್ತೇನೆ.

ಸಂಘದ ಸದಸ್ಯರು, ಅವರುಗಳ ಕುಟುಂಬವರ್ಗ ಮತ್ತು ಇತರ ಎಲ್ಲಾ ಓದುಗರಿಗೂ ನೂತನ ವ್ಯವಹಾರಿಕ ವರ್ಷವು ಮಂಗಳಕರ ವಾಗಿ ಪರಿಣಮಿಸಲೆಂದು ಹಾರೈ ಸುತ್ತೇನೆ.

** ಧನ್ಯವಾದಗಳು **



**ಬಿ. ಸುಬ್ರಹ್ಮಣ್ಯಂ**
ಸಂಪಾದಕರು
9449869667

# ಈಗಿನ ಕಾರ್ಯಕಾರಿ ಸಮಿತಿಯ ಸದಸ್ಯರು

| ಕ್ರ. ಸಂ. | ಭಾವಚಿತ್ರ | ಹೆಸರು | ಪದವಿ |
|---|---|---|---|
| 1. |  | ಅರುಣ್ ಕೆ.ಎಸ್. | ಅಧ್ಯಕ್ಷರು |
| 2. |  | ಶಶಿಧರ್ ಎಚ್.ಕೆ. | ಉಪಾಧ್ಯಕ್ಷರು |
| 3. |  | ಶ್ಯಾಮಸುಂದರ್ ಆರ್.ಎ. | ಕಾರ್ಯದರ್ಶಿ |
| 4. |  | ನಾಗೇಶ | ಜಂಟಿ ಕಾರ್ಯದರ್ಶಿ |
| 5. |  | ಸತ್ಯನಾರಾಯಣ ಎಸ್. | ಖಜಾಂಚಿ |
| 6. |  | ಅರುಣ್ ವಿ. | ಸಹ ಖಜಾಂಚಿ |
| 7. |  | ಶಿವಕುಮಾರ್ ಎನ್. | ಆಂತರಿಕ ಲೆಕ್ಕ ಪರಿಶೋಧಕರು |
| 8. |  | ಸೋಮಸುಂದರ ಎಸ್. | ಸದಸ್ಯರು |
| 9. |  | ಶರ್ಮ ಕೆ.ಬಿ.ಎಸ್. | ಸದಸ್ಯರು |
| 10. |  | ಸುಬ್ರಹ್ಮಣ್ಯಂ ಬಿ. | ಸದಸ್ಯರು |
| 11. |  | ಸೂರ್ಯನಾರಾಯಣ್ ಟಿ.ಪಿ. | ಸದಸ್ಯರು |

# ಈಗಿನ ಕಾರ್ಯಕಾರಿ ಸಮಿತಿಯ ಸದಸ್ಯರು

| ಕ್ರ. ಸಂ. | ಭಾವಚಿತ್ರ | ಹೆಸರು | ಅವಧಿ |
|---|---|---|---|
| 12. |  | ಮಂಜುನಾರಾಯಣ್ ಕೆ. | ಸದಸ್ಯರು |
| 13. |  | ಶ್ರೀನಿವಾಸ ಎಸ್.ಸಿ. | ಸದಸ್ಯರು |
| 14. |  | ಗಣೇಶ್ ಶ್ರೀಧರ್ | ಸದಸ್ಯರು |
| 15. |  | ರಮೇಶ್ ಆರ್. | ಸದಸ್ಯರು |
| 16. |  | ಲಲಿತಾ ಹೆಚ್.ಆರ್. | ಸದಸ್ಯರು |
| 17. |  | ರವಿಶಂಕರ್ ಆರ್.ಪಿ. | ಸದಸ್ಯರು |
| 18. |  | ವೆಂಕಟೇಶ್ ಆರ್.ಎಸ್. | ಸದಸ್ಯರು |
| 19. |  | ವಿಜಯಕುಮಾರ್ ಎಸ್.ಆರ್. | ಸದಸ್ಯರು |
| 20. |  | ನಿತಿನ್ ಭಾಸ್ಕರ್ | ಸದಸ್ಯರು |
| 21. |  | ಅರುಣ್. ಎಚ್.ಜಿ. | ಸದಸ್ಯರು |

## ಹಿಂದಿನ ಅವಧಿಗಳಲ್ಲಿ ಸೇವೆ ಸಲ್ಲಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರು

| ಕ್ರ. ಸಂ. | ಭಾವಚಿತ್ರ | ಹೆಸರು | ಅವಧಿ |
|---|---|---|---|
| 1. |  | ಮಣಿ ವಿ.ಎಸ್. | 2010 – 2019 |
| 2. |  | ಸರಸ್ವತಿ ನಟರಾಜನ್ | 2010 – 2024 |
| 3. |  | ಈಶ್ವರನ್ ಆರ್.ಎ. | 2010 – 2015 |
| 4. |  | ಡಾ॥ ವೆಂಕಟೇಶ್ ಕೆ.ಜಿ. | 2010 – 2024 |
| 5. |  | ಡಾ॥ ಶ್ರೀನಿವಾಸನ್ ಹೊಸಕೋಟೆ | 2010 – 2015 |
| 6. |  | ಡಾ॥ ಮಂಜುನಾಥ್ ಎ.ವಿ. | 2012 – 2016 |
| 7. |  | ಗುಂಡಪ್ಪ ಕೆ. | 2017 – 2024 |
| 8. |  | ರಮೇಶ್ ಟಿ.ಎಸ್. | 2012 – 2021 |
| 9. |  | ಗೋಪಾಲಕೃಷ್ಣ ಆರ್. | 2010 – 2015 |
| 10. |  | ಸುರೇಶ್ ಕೆ.ಬಿ. | 2010 – 2012 |
| 11. |  | ಮುರಳಿ ಕೆ.ಬಿ. | 2010 – 2015 |

## ಹಿಂದಿನ ಅವಧಿಗಳಲ್ಲಿ ಸೇವೆ ಸಲ್ಲಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರು

| ಕ್ರ. ಸಂ. | ಭಾವಚಿತ್ರ | ಹೆಸರು | ಅವಧಿ |
|---|---|---|---|
| 12. |  | ಶ್ರೀಧರ್ ಬಿ. | 2010 – 2015 |
| 13. |  | ಮಣಿ ಟಿ.ಎಸ್. | 2010 – 2018 |
| 14. |  | ನಟರಾಜ್ ಕೆ.ಸಿ. | 2012 – 2015 |
| 15. |  | ಅನಂತ ಕೆ.ಎಸ್. | 2015 – 2018<br>2021 – 2024 |
| 16. |  | ಶಂಕರಪ್ರಸಾದ್ ಬಿ.ಆರ್. | 2015 – 2024 |
| 17. |  | ಗೋವಿಂದ ಪ್ರಸಾದ್ ಬಿ.ಎನ್.ಜಿ. | 2015 – 2018 |
| 18. |  | ರವಿಕಿರಣ್ ಟಿ.ಎನ್. | 2017 – 2018 |
| 19. |  | ಸುನಿಲ್ ವಿಜಯಕುಮಾರ್ | 2017 – 2018 |
| 20. |  | ಅನಿಲ್ ರಮೇಶ್ | 2021 – 2023 |
| 21. |  | ನಟರಾಜ ಬಿ.ಸಿ. | 2021 – 2023 |

**ಸಂಘವು ಹಿಂದಿನ ಕಾರ್ಯಕಾರಿ ಸಮಿತಿಗಳ ಸದಸ್ಯರಾಗಿದ್ದ ಇವರೆಲ್ಲರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.**

# ಕಾರ್ಯಕಾರಿ ಸಮಿತಿ ಸದಸ್ಯರು (೨೦10ಕ್ಕೆ ಮುಂಚೆ)



**ನಿಂತಿರುವವರು – ಎಡಗಡೆಯಿಂದ ಬಲಗಡೆಗೆ**

ಶ್ರೀ ಎಸ್. ಸತ್ಯನಾರಾಯಣ, ದಿ॥ ಕೆ. ಎಸ್. ಸೀತಾರಾಮಯ್ಯ, ಶ್ರೀ ಕೆ. ಹನುಮಂತನ್ (ಕಲ್ಲು), ದಿ॥ ಕೆ. ಎಸ್. ಛಾಯಾಪತಿ ದಿ॥ ಲಕ್ಷ್ಮೀಪತಿ, ಶ್ರೀ ವಿ. ಎಸ್. ಮಣಿ, ದಿ॥ ಕೆ. ಟಿ. ಲಕ್ಷ್ಮಣ ಅಯ್ಯರ್, ದಿ॥ ಹಿನ್ನಕ್ಕಿ ಕೃಷ್ಣಪ್ಪ, ದಿ॥ ಕೆ. ಟಿ. ಪಟ್ಟಾಭಿರಾಮನ್, ದಿ॥ ಶ್ರೀನಿವಾಸ್ (ಅಪೆಕ್ಸ್ ಬ್ಯಾಂಕ್), ದಿ॥ ಕೆ. ಆರ್. ಛಾಯಾಪತಿ, ದಿ॥ ಆರ್. ಎಸ್. ಅಶ್ವಥನಾರಾಯಣ್, ಶ್ರೀ ಎಸ್. ಶ್ರೀನಿವಾಸಯ್ಯ

**2 ನೇ ಸಾಲು**

ದಿ॥ ಎಸ್. ಸೂರಪ್ಪ (ಕಿತ್ತಿಗಾನಹಳ್ಳಿ), ದಿ॥ ಟಿ. ಎಸ್. ಕೃಷ್ಣನ್, ಶ್ರೀ ಕೆ. ಬಿ. ಸುರೇಶ್, ದಿ॥ ಟಿ. ಜಿ. ಸತ್ಯನಾರಾಯಣ, ದಿ॥ ಟಿ. ಪಟ್ಟಾಭಿರಾಮಯ್ಯ, ದಿ॥ ಎಚ್. ಕೃಷ್ಣಸ್ವಾಮಿ, ದಿ॥ ಆರ್. ಕೃಷ್ಣಮೂರ್ತಿ, ದಿ॥ ಎಸ್. ರಾಮೇಶ್ವರಯ್ಯ, ದಿ॥ ಆರ್. ನಾಗರಾಜ್, ದಿ॥ ಗವಾಯಿ ಶೇಷಾದ್ರಿ, ದಿ॥ ನಾರಾಯಣಸ್ವಾಮಿ, ದಿ॥ ನಡವತ್ತಿ ಶಾಮಣ್ಣ, ದಿ॥ ಜಿ. ವಿ. ಸುಬ್ಬಣ್ಣ

**ಕುಳಿತಿರುವವರು**

ದಿ॥ ಎ. ವಿ. ಲಕ್ಷ್ಮಣ ಅಯ್ಯರ್, ದಿ॥ ಆರ್. ಎಸ್. ರಾಜಗೋಪಾಲ್, ದಿ॥ ಆರ್. ಎಸ್. ವೆಂಕಟಗಿರಿಯಪ್ಪ, ದಿ॥ ಗೋಪಾಲಯ್ಯ (ಬೇಕರಿ), ದಿ॥ ಬಿಲ್ಲಾಪುರ ವೆಂಕಟರಾಮಯ್ಯ, ದಿ॥ ಬಿ. ಎಸ್. ಪದ್ಮನಾಭ

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು ।**
**ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।**
**ಜಸವು ಜನಜೀವನಕೆ – ಮಂಕುತಿಮ್ಮ ॥ 522 ॥**

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ ।**
**ಹೊರಕೋಣೆಯಲಿ ಲೋಗರಾಟಗಳನಾಡು ॥**
**ವಿರಮಿಸೊಬ್ಬನೆ ಮೌನದೊಳಮನೆಯಲಿ ಶಾಂತಿಯಲಿ ।**
**ವರಯೋಗಸೂತ್ರವಿದು – ಮಂಕುತಿಮ್ಮ ॥ 701 ॥**

With Best Compliments From




**ONE-STOP SHOP FOR ALL TYPES OF SCHOOLS & OFFICE STATIONERY**

**Up to 25% Off On Back-To-School Sale On Note Books & Long Note books Only**

## CHAMPAK T.L. DAMAN
## Mobile No.: 99723 12122

**# 32, 7th Main Road, Tata Silk Farm, Bengaluru 560028**





# "ಬೃಹಚ್ಚರಣ ಸಂಘ" ನಡೆದು ಬಂದ ದಾರಿ

ಮೊಟ್ಟಮೊದಲ ಬಾರಿಗೆ ಸಂಘವು ದಿನಾಂಕ 2.11.1938ರಲ್ಲಿ ರಚನೆಯಾಯಿತು. ನಂತರ 1980ರಲ್ಲಿ ಸಂಘವು ದಿ॥ ತಟ್ನಹಳ್ಳಿ ಪಟ್ಟಾಭಿರಾಮಯ್ಯನವರು ಮತ್ತು ಅವರ ಸಹೋದರ ದಿ॥ ತಟ್ನಹಳ್ಳಿ ಕೃಷ್ಣನ್‌ರವರು ಇತರೆ ಸದಸ್ಯರೊಂದಿಗೆ ಸಂಘದ ಕಾರ್ಯಚಟುವಟಿಕೆಗಳನ್ನು ನಡೆಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಬೃಹಚ್ಚರಣ ಸಂಘವು ದಿನಾಂಕ 3.10.2010ರಂದು ಪುನರ್ಜೀವನಗೊಂಡಿತು. ಸಂಘದ ನೂತನ ಕಾರ್ಯಕಾರಿ ಸಮಿತಿಯು ದಿ॥ ಸಣ್ಣೆ ಸೂರಪ್ಪನವರ ಪುತ್ರ ಶ್ರೀ ಸೋಮಸುಂದರರವರ ಅಧ್ಯಕ್ಷತೆಯಲ್ಲಿ, ಕಿತ್ತಿಗಾನಹಳ್ಳಿ ದಿ॥ ಆರ್.ಎಸ್. ವೆಂಕಟಗಿರಿಯಪ್ಪನವರ ಪುತ್ರ ಶ್ರೀ ಮಣಿ, ಕಾರ್ಯದರ್ಶಿಯಾಗಿ ಮತ್ತು ಕಿತ್ತಿಗಾನಹಳ್ಳಿಯ ದಿ॥ ಸೂರಪ್ಪನವರ ಪುತ್ರ ಶ್ರೀ ಸತ್ಯನಾರಾಯಣ ಖಜಾಂಚಿಯಾಗಿ ಜೊತೆಗೆ ಇತರ ಉತ್ಸಾಹಿ ಯುವಕರ ತಂಡವು ಸರ್ವಾನುಮತದಿಂದ ರೂಪಗೊಂಡಿತು ಹಾಗೂ ಮೊದಲ ಮಹಿಳಾ ಸದಸ್ಯೆಯಾಗಿ ಶ್ರೀಮತಿ ಸರಸ್ವತಿ ನಟರಾಜ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಂಘವನ್ನು ಮುನ್ನಡೆಸುವ ಜವಾಬ್ದಾರಿಯನ್ನು ವಹಿಸಿಕೊಂಡಿತು.

ಮೊದಲ ಸರ್ವ ಸದಸ್ಯರ ಸಭೆಯು ದಿನಾಂಕ 01–05–2012ರಂದು ಜರುಗಿತು. ಇದಕ್ಕೂ ಮೊದಲೇ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ನಲ್ಲಿ "ಬೃಹಚ್ಚರಣ" ಎಂಬ ಪುಟವನ್ನು ಪ್ರಾರಂಭಿಸಲಾಗಿತ್ತು..

ನೂತನ ಕಾರ್ಯಕಾರಿ ಸಮಿತಿಯು ಮೊದಲನೆಯದಾಗಿ ಕಿತ್ತಿಗಾನಹಳ್ಳಿಯಲ್ಲಿ ಶಿಥಿಲವಾಗಿದ್ದ ನಾಗರಕಟ್ಟೆಯನ್ನು ಜೀರ್ಣೋದ್ಧಾರ ಮಾಡುವ ಸದುದ್ದೇಶದೊಂದಿಗೆ ಕಾರ್ಯ ನೆರವೇರಿತು. ಎರಡನೆಯ ಬಾರಿಗೆ ನಾಗರಕಟ್ಟೆಗೆ ಮತ್ತು ಮೆಟ್ಟಲುಗಳಿಗೆ ಸ್ಟೀಲ್ ರೈಲಿಂಗ್ಸ್ (ತಡೆಗೋಡೆ) ಹಾಕಿಸಲಾಯಿತು.

ಬೃಹಚ್ಚರಣ ಸಮುದಾಯದವರನ್ನೆಲ್ಲಾ ಒಟ್ಟಾಗಿ ಸೇರಿಸುವ ಮತ್ತು ಅವರಲ್ಲಿರುವ ಪ್ರತಿಭೆಗಳನ್ನೆಲ್ಲಾ ಗುರುತಿಸುವ ಕಾರ್ಯ ಆಗಬೇಕಿದೆ ಎಂದು ನಿರ್ಧರಿಸಿ ಮುಂದೆ ಸಾಂಸ್ಕೃತಿಕ ಕಾರ್ಯಕ್ರಮ, ಸಂಗೀತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

| ದಿನಾಂಕ | ಕಾರ್ಯಕ್ರಮದ ಹೆಸರು | ಸ್ಥಳ ಮತ್ತು ಸಂಕ್ಷಿಪ್ತ ವಿವರ |
|---|---|---|
| 30.12.2010 | ಸಾಂಸ್ಕೃತಿಕ ಸಂಜೆ ಸಂಗೀತ | ಆದಿರಾಮಯ್ಯ ಆದಿಲಕ್ಷ್ಮಮ್ಮ ಕಲ್ಯಾಣ ಮಂಟಪ, ವಿಶ್ವೇಶ್ವರಪುರದಲ್ಲಿ ನಮ್ಮ ಸಮುದಾಯದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. |
| 28.08.2011 | ವಂದನಾ ಕಾರ್ಯಕ್ರಮ | ವಿದ್ಯಾಪೀಠದಲ್ಲಿ ಹಿರಿಯ ಚೇತನರು ಮತ್ತು ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಗೌರವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. |
| 31.12.2011 | ಸಾಂಸ್ಕೃತಿಕ ಸಂಜೆ | ಆದಿರಾಮಯ್ಯ ಆದಿಲಕ್ಷ್ಮಮ್ಮ ಕಲ್ಯಾಣ ಮಂಟಪ, ವಿಶ್ವೇಶ್ವರಪುರದಲ್ಲಿ ಸಂಗೀತ, ನೃತ್ಯ ಮತ್ತು ನಮ್ಮ ಸದಸ್ಯರು ನಮ್ಮ ಭಾಷೆಯಲ್ಲಿ ಕವಿತೆ ರಚಿಸಿ, ಸಂಗೀತ ಸಂಯೋಜಿಸಿ ಹಾಡಿದ ಗೀತೆಗಳಿದ್ದವು. |
| 30.12.2012 | ಬೃಹಚ್ಚರಣರ ಸಮಾವೇಶ | ಆದಿರಾಮಯ್ಯ ಆದಿಲಕ್ಷ್ಮಮ್ಮ ಕಲ್ಯಾಣ ಮಂಟಪ. ವಿಶ್ವೇಶ್ವರಪುರದಲ್ಲಿ ಹಿರಿಯ ಚೇತನರಿಗೆ ಗೌರವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. |
| 31.05.2015 | ಸಂಗೀತ ಕಾರ್ಯಕ್ರಮ | ಬಸವನಗುಡಿಯ ನವಮಂತ್ರಾಲಯ ಸಭಾಂಗಣದಲ್ಲಿ ಸದಸ್ಯ ವಿದ್ವಾನ್ ದಕ್ಷಿಣಾಮೂರ್ತಿಯವರಿಂದ ವೀಣೆ, ಸದಸ್ಯೆ ವಿದೂಷಿ ರಂಜನಿ ವೆಂಕಟೇಶ್‌ರವರಿಂದ ಮೃದಂಗ ಮತ್ತು ಸದಸ್ಯ ವಿದ್ವಾನ್ ಆರ್.ಪಿ. ರವಿಶಂಕರ್‌ರವರಿಂದ ಘಟ. ಇದೇ ಸಮಯದಲ್ಲಿ ವಿದ್ವಾನ್ ದಕ್ಷಿಣಾಮೂರ್ತಿಯವರ ಸಂಗೀತದ ಸಿ.ಡಿ. ಬಿಡುಗಡೆ ಮಾಡಲಾಯಿತು. |

**ಸಂಘವು ಮೊದಲ ಬಾರಿಗೆ ಬೃಹಚ್ಚರಣ ಸಮುದಾಯದ ಕುಟುಂಬದವರಿಗಾಗಿ ಒಂದು ದಿನದ ಪ್ರವಾಸವನ್ನು 2013ರಲ್ಲಿ ಹಮ್ಮಿಕೊಂಡಿತ್ತು.**

**ಮುಂದಿನ ಪ್ರವಾಸಗಳ ವಿವರ:**

| **ದಿನಾಂಕ** | **ಪ್ರವಾಸ ಸ್ಥಳಗಳು** | **ಪ್ರವಾಸಕ್ಕೆ ಆಗಮಿಸಿದ ಸಮುದಾಯದವರ ಸಂಖ್ಯೆ** |
|---|---|---|
| 02.10.2013 | ತಲಕಾಡು ಮತ್ತು ಟಿ. ನರಸೀಪುರ | 45 (🚌) |
| 21.09.2014 | ರಾಮನಾಥಪುರ | 100 (🚌🚌🚌) |
| 02.10.2015 | ದೊಡ್ಡಮಳೂರು, ಕರಿಘಟ್ಟ ಮತ್ತು ಗುಂಜಾ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳು | 120 (🚌🚌🚌🚌🚌) |
| 27.11.2016 | ಮೇಲುಕೋಟೆ ಮತ್ತು ಕೆರೆತೊಂಡನೂರು | 134 (🚌🚌🚌) |
| 19.11.2017 | ಮುಳಬಾಗಿಲು ಆಂಜನೇಯ, ಕೂಡುಮಲೆಯ ಗಣಪತಿ, ಕೊಲದೇವಿಯ ಗರುಡ, ಆವನಿ ಶಾರದಾದೇವಿ ಮತ್ತು ವಿರೂಪಾಕ್ಷಿಯ ವಿರೂಪಾಕ್ಷ ದೇವಾಲಯಗಳು | 160 (🚌🚌🚌🚌) |
| 25.11.2018 | ಕಲ್ಲಹಳ್ಳಿ ಶ್ರೀನಿವಾಸ, ಮಧ್ಯರಂಗ ರಂಗನಾಥಸ್ವಾಮಿ, ಮೀನಾಕ್ಷಿ ಸಮೇತ ಸೋಮೇಶ್ವರ ಮತ್ತು ಸತ್ಯಗಾಲ ವರದರಾಜಸ್ವಾಮಿ ದೇವಾಲಯ | 90 (🚌🚌) |
| 10.11.2019 | ಕಲ್ಲೂರು ಶ್ರೀರಾಮ, ಸಂಪಿಗೆ ಶ್ರೀನಿವಾಸ, ಹೆಬ್ಬೂರು ಸಂಸ್ಥಾನ, ಕೈದಾಳ ಚೆನ್ನಕೇಶವ ಮತ್ತು ಗೂಳೂರು ಗಣಪತಿ ದೇವಾಲಯಗಳು | 125 (🚌🚌🚌) |
| 10.12.2023 | ಗಡಿದಂ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ಮತ್ತು ರಂಗಸ್ಥಳ ಶ್ರೀ ರಂಗನಾಥ ದೇವಾಲಯಗಳು | 182 (🚌🚌🚌🚌) |
| 08.12.2024 | ಆದಿಚುಂಚನಗಿರಿ ಶ್ರೀ ಕಾಲಭೈರವೇಶ್ವರ ಮತ್ತು ನೊಣವಿನಕೆರೆ ತ್ರಿಕೂಟಾಚಲ ದೇವಾಲಯಗಳು | 168 (🚌🚌🚌🚌🚌) |

**"ಗೌರವ ಅರ್ಪಣೆ:"**

ಕಳೆದ ಹದಿನೈದು ವರ್ಷಗಳಲ್ಲಿ ಬೃಹಚ್ಚರಣ ಸಂಚಿಕೆಗಳನ್ನು ಸಮುದಾಯದ ಹಿತೈಷಿಗಳು ಹಾಗೂ ಹಿರಿಯರಾದ ಡಾ॥ ಡಿ.ವಿ. ಗುಂಡಪ್ಪ, ಡಾ॥ ಬಿ.ಜಿ.ಎಲ್. ಸ್ವಾಮಿ, ವೈ.ಎಸ್. ಗುಂಡಪ್ಪ, ಆನೇಕಲ್ ರಾಜಾಪುರ ಕೃಷ್ಣಮೂರ್ತಿ, ಚೂಡಸಂದ್ರ ಶ್ರೀಕಂಠೇಶ್ವರ ಅಯ್ಯರ್, ತಟ್ಟನಹಳ್ಳಿ ಪಟ್ಟಾಭಿರಾಮಯ್ಯ, ರಾಜಾಪುರ ಶೇಷಾದ್ರಿ ಗವಾಯಿ, ಭಾರತಿ ಸಂಪಂಗಿರಾಮ, ಆಡಶನಟ್ಟಿ ಲಕ್ಷ್ಮಣ ಅಯ್ಯರ್, ಸಂಣೆ ಸೂರಪ್ಪ, ಡಾ॥ ಕೆ.ಎಲ್. ದಾನಪ್ಪ, ಸರ್ಜಾಪುರ ರಾಮೇಶ್ವರಯ್ಯ, ಗುಂಜೂರು ವೆಂಕಟರಮಣಯ್ಯ, ಕಿತ್ತಿಗಾನಹಳ್ಳಿ ವೇದ ಬ್ರಹ್ಮ ಶ್ಯಾಮಣ್ಣ ದೀಕ್ಷಿತ್, ನಾಗಾವಾರಪಾಳ್ಯ ಶ್ರೀಕಂಠಯ್ಯ, ರಾಜಾಪುರ ಶಿರಸ್ತೇದಾರ ಕೃಷ್ಣಮೂರ್ತಿ, ಬಿದರಗೆರೆ ನಾಗರಾಜ್, ಕಾಚರಕಾನಹಳ್ಳಿ ಗೋಪಾಲಯ್ಯ, ಕಿತ್ತಿಗಾನಹಳ್ಳಿ ವೆಂಕಟಾಚಲಯ್ಯ, ನಾರಾಯಣಸ್ವಾಮಿ, ಹೊಸಹಳ್ಳಿ ಕೃಷ್ಣಸ್ವಾಮಿ, ರಾಚಮಾನಹಳ್ಳಿ ಗಮಕಿ ಶಂಕರನಾರಾಯಣ್, ಕಿತ್ತಿಗಾನಹಳ್ಳಿ ನಂಜುಂಡ ದೀಕ್ಷಿತ್, ಬಿನ್ನಮಂಗಲ ಪದ್ಮನಾಭ, ಚೂಡಸಂದ್ರ ಶಿವರಾಂ, ರಾಮಕ್ಕಮ್ಮ ಮತ್ತು ಕಾಚರಕನಹಳ್ಳಿ ವೆಂಕಟೇಶ್. ಇವರುಗಳಿಗೆ ಗೌರವಪೂರ್ವಕವಾಗಿ ಅರ್ಪಣೆ ಮಾಡಲಾಗಿದೆ.

**"ಶಂಕರ ಜಯಂತಿ:"**

ಶಂಕರ ಜಯಂತಿಯನ್ನು 2018ರಿಂದ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ಪ್ರತಿ ವರ್ಷದ ವೈಶಾಖ ಶುದ್ಧ ಪಂಚಮಿಯಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಬೃಹಚ್ಚರಣ ಸಮುದಾಯದ ಕಲಾವಿದರಿಂದ ಭಜನೆ, ಭಕ್ತಿ ಗೀತೆ, ಶಾಸ್ತ್ರೀಯ ಸಂಗೀತ, ದೇವರನಾಮ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಸಂಘವು ಪ್ರಸಾದ ವಿನಿಯೋಗದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆಡಳಿತ ವರ್ಗದೊಂದಿಗೆ ಕೈಜೋಡಿಸುತ್ತಿದೆ.

**ಸಾಮೂಹಿಕ ಪೂಜಾ ಕೈಂಕರ್ಯ:**

| ಕಾರ್ಯಕ್ರಮ | ದಿನಾಂಕ | ಸಂಕಲ್ಪಿಸಿದವರ ಸಂಖ್ಯೆ |
|---|---|---|
| ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ | 01.12.2013 | 44 ದಂಪತಿಗಳು |
| ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ | 25.12.2014 | 39 ದಂಪತಿಗಳು |
| ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ | 06.12.2015 | 30 ದಂಪತಿಗಳು |
| ಸಾಮೂಹಿಕ ಸತ್ಯನಾರಾಯಣ ಪೂಜೆ | 01.10.2017 | 350ಕ್ಕೂ ಹೆಚ್ಚು ಸಮುದಾಯದವರು |
| ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ | 29.12.2019 | 39 ದಂಪತಿಗಳು |
| ಸಾಮೂಹಿಕ ಗಿರಿಜಾ ಕಲ್ಯಾಣ | 27.11.2022 | 400ಕ್ಕೂ ಹೆಚ್ಚು ಸಮುದಾಯದವರು |

**ವಿಶೇಷ ಕಾರ್ಯಕ್ರಮಗಳು:**

| ದಿನಾಂಕ | ಕಾರ್ಯಕ್ರಮ | ವಿವರ |
|---|---|---|
| 11.09.2016 | ಗುರುವಂದನೆ | ಸಮುದಾಯದ 41 ಶಿಕ್ಷಕರಿಗೆ ಗೌರವ ಸಮರ್ಪಣೆ |
| 01.10.2017 | 50 ವರ್ಷ ದಾಂಪತ್ಯ ಜೀವನ | 21 ದಂಪತಿಗಳಿಗೆ ಗೌರವ ಸಮರ್ಪಣೆ |
| 28.10.2018 | ವೈಕುಂಠ ವಾಹನ ಕೊಡುಗೆ | ಆರ್ಯಾವರ್ತ ಸಂಸ್ಥೆಗೆ |
| 03.10.2021 | ಸದಸ್ಯರ ಕೈಪಿಡಿ ಬಿಡುಗಡೆ | ಎಂ.ಎಂ.ಡಿ.ಬಿ.ಎಸ್. ಕೈಪಿಡಿ ಬಿಡುಗಡೆ |
| 03.10.2021 | ಜಾಲತಾಣ ಲೋಕಾರ್ಪಣೆ | mmdbs.in<br>ಜಾಲತಾಣ ಲೋಕಾರ್ಪಣೆ |
| 10.12.2021 | ದೇವಾಲಯಕ್ಕೆ ಕುರ್ಚಿಗಳ ಕೊಡುಗೆ | ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ<br>ಗಾಯತ್ರಿ ಭವನಕ್ಕೆ 100 ಕುರ್ಚಿಗಳ ಕೊಡುಗೆ |
| 27.11.2022 | 50 ವರ್ಷ ದಾಂಪತ್ಯ ಜೀವನ | 16 ದಂಪತಿಗಳಿಗೆ ಗೌರವ ಸಮರ್ಪಣೆ |

**ಬೃಹಚ್ಚರಣ ಗ್ರಾಮಗಳಲ್ಲಿ ಮತ್ತು ಇತರೆ ಸ್ಥಳದಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಗಳು:**

| ದಿನಾಂಕ | ಸ್ಥಳ | ಪ್ರಾಯೋಜಕರು |
|---|---|---|
| 07.07.2013 | ಕಿತ್ತಿಗಾನಹಳ್ಳಿ | ಸಂಘದ ಖಜಾಂಚಿ ಹಾಗೂ ಮಹಾಪೋಷಕರಾದ ಶ್ರೀ ಎಸ್. ಸತ್ಯನಾರಾಯಣ |
| 04.08.2013 | ಬನ್ನೇರುಘಟ್ಟ | ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶ್ |
| 15.09.2013 | ಗುಮ್ಮಳಾಪುರ | ಹಿರಿಯ ಸದಸ್ಯ ಹಾಗೂ "ಬೃಹಚ್ಚರಣ" ಪತ್ರಿಕೆಯ ಪ್ರಥಮ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮಧುಸೂದನ್ |
| 03.03.2024 | ಸಂಪತ್ತು (ಆಶ್ರಯಧಾಮ) | ಸದಸ್ಯರಾದ ಶ್ರೀ ಬಿ.ಈ. ರಮೇಶ್ ಮತ್ತು ಶ್ರೀ ಬಿ.ಈ. ಸುರೇಶ್ |

**ಸಾಂತ್ವನ ನಿಧಿ:**

ಸಂಘವು ದಿನಾಂಕ 1.4.2023ರಿಂದ ಸಮುದಾಯದ ನಮ್ಮನ್ನಗಲಿದ ಚೇತನಗಳ ಕುಟುಂಬದವರಿಗೆ ತತ್‌ಕ್ಷಣ ಸಂತಾಪ ಸೂಚಿಸಿ ರೂ. 5000/– ಗಳನ್ನು ಒಟ್ಟು 62 ಕುಟುಂಬಗಳಿಗೆ ಇದುವರೆವಿಗೂ ಸಾಂತ್ವನಪೂರ್ವಕವಾಗಿ ನೀಡಲಾಗಿದೆ.

**ವಾರ್ಷಿಕ ಕ್ಯಾಲೆಂಡರ್:**

ಪ್ರತೀ ವರ್ಷವೂ ವಾರ್ಷಿಕ ಕ್ಯಾಲೆಂಡರ್‌ನ್ನು ಸಂಘದ ವತಿಯಿಂದ ಸದಸ್ಯರಿಗೆ ಮತ್ತು ಪ್ರಾಯೋಜಕರಿಗೆ ಕೊಡಲಾಗುತ್ತಿದೆ. ಇದಕ್ಕೆ ಹಲವಾರು ಸಂಘದ ವಿಶ್ವಾಸಿಗಳು ಸತತವಾಗಿ ಪ್ರಾಯೋಜಕರಾಗಿ ಸಹಾಯ ಹಸ್ತ ನೀಡುತ್ತಿದ್ದಾರೆ. ಅವರಿಗೆ ಅಭಿನಂದನಾ ಪೂರ್ವಕ ಧನ್ಯವಾದಗಳು.

**"ಬೃಹಚ್ಚರಣ" ತ್ರೈಮಾಸಿಕ ವಾರ್ತಾ ಪತ್ರಿಕೆ:**

"ಬೃಹಚ್ಚರಣ" ಸಂಘದ ಮೊದಲ ಪತ್ರಿಕೆಯನ್ನು ದಿನಾಂಕ 28.8.2011ರಂದು ಬೆಂಗಳೂರಿನ ವಿದ್ಯಾಪೀಠದಲ್ಲಿ ಬಸವನಗುಡಿಯ ಶಾಸಕ ಶ್ರೀ ರವಿ ಸುಬ್ರಹ್ಮಣ್ಯ ಮತ್ತು ಬೆಂಗಳೂರು ನಗರ ಪಾಲಿಕೆ ಸದಸ್ಯ ಶ್ರೀ ಕಟ್ಟೆ ಸತ್ಯನಾರಾಯಣ ಬಿಡುಗಡೆ ಮಾಡಿದರು. ನಮ್ಮ ತ್ರೈಮಾಸಿಕ 'ಬೃಹಚ್ಚರಣ' ಪತ್ರಿಕೆಯಲ್ಲಿ ಸಂಘದ ಕಾರ್ಯ ಚಟುವಟಿಕೆಗಳು, ಸಮುದಾಯದವರಿಂದ ಬರಹಗಳು, ಹಿರಿಯ ಮತ್ತು ಕಿರಿಯ ಪ್ರತಿಭೆಗಳ ಪರಿಚಯ, ಸಂಘದ ವಾರ್ಷಿಕ ಪ್ರವಾಸ ಛಾಯಾ ಚಿತ್ರಗಳು, ಪ್ರವಾಸ ಲೇಖನಗಳು, ಕಥೆ, ವ್ಯಕ್ತಿ ಪರಿಚಯ, ಜನನ–ಮರಣ ವಿವರಗಳು, ಮದುವೆ, ಗೃಹಪ್ರವೇಶ, ಸರ್ವ ಸದಸ್ಯರ ಸಭೆಯ ವರದಿ, ಸಮುದಾಯದವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶಿಸುವ ಛಾಯಾಚಿತ್ರಗಳು, ಹಳೆಯ ತುಂಬು ಕುಟುಂಬದ ಛಾಯಾಚಿತ್ರಗಳು, ಕ್ರೀಡೆ, ಕ್ವಿಜ್, ಪದಬಂಧ, ಮನೋರಂಜನೆಗಾಗಿ ಗಣಿತ, ರಂಗೋಲಿ, ರೇಖಾ ಚಿತ್ರ, ನೃತ್ಯ ಮತ್ತು ಸಂಗೀತ ಸಂಬಂಧಿತ ಲೇಖನಗಳು, ವಧು–ವರಾನ್ವೇಷಣೆಗಾಗಿ ವಿವರ ಮತ್ತು ಇತರೆ ಲೇಖನಗಳನ್ನು ಒಳಗೊಂಡಿರುತ್ತದೆ. ಇವುಗಳಿಂದ ಸಮುದಾಯದವರ ಸಂಪ್ರದಾಯ, ಸಂಸ್ಕೃತಿ ಮತ್ತು ಪ್ರಗತಿ ಇತರರಿಗೆ ತಿಳಿದಂತಾಗುತ್ತದೆ.

ಈಗ 50ನೇ ಸಂಚಿಕೆ ಹೊರತರಲಾಗುತ್ತಿದೆ. ಪತ್ರಿಕೆಯು ಪ್ರಕಟವಾಗುವುದಕ್ಕೆ ಸಂಪಾದಕ ಮಂಡಳಿಯ ಸದಸ್ಯರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಸಮಯೋಚಿತ ಸಲಹೆಗಳು ನೀಡಿ ನೆರವಾಗುತ್ತಿದ್ದಾರೆ.

ದಿನಾಂಕ 3.10.2021ರ ಎಂ.ಎಂ.ಡಿ.ಬಿ.ಎಸ್. ಸದಸ್ಯರ ಕೈಪಿಡಿಯ ಬಿಡುಗಡೆ ಆಯಿತು. ಅಕ್ಟೋಬರ್ 2021 ನಂತರ ಸೇರ್ಪಡೆಯಾದ ಸದಸ್ಯರ ವಿವರಗಳನ್ನು ಜನವರಿ–ಮಾರ್ಚ್ 2024 ಮತ್ತು ತಿದ್ದುಪಡಿಗಳನ್ನು ಏಪ್ರಿಲ್–ಆಗಸ್ಟ್ 2024 ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

**ನಾಗಾರಾಧನೆ:**

ಪ್ರತಿ ವರ್ಷವೂ ಸಮುದಾಯದವರು ಒಟ್ಟಾಗಿ ಕಿತ್ತಿಗಾನಹಳ್ಳಿಯ ನಾಗರಕಟ್ಟೆಯಲ್ಲಿ ಪ್ರತಿಷ್ಠಾಪಿಸಿರುವ ನಾಗರ ಕಲ್ಲುಗಳಿಗೆ ತನಿ ಎರೆದು, ಪ್ರಾಕಾರೋತ್ಸವದಲ್ಲಿ ಕುಟುಂಬದವರೊಂದಿಗೆ ಭಾಗವಹಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಸಮುದಾಯದ ರಾಜಾಪುರದ ಗೋಪಾಲರಾವ್ ಮತ್ತು ಶಿರಸ್ತೇದಾರ್ ಕೃಷ್ಣಮೂರ್ತಿ ಕುಟುಂಬದವರು ಸತತವಾಗಿ ಪಾನಕ, ಕೋಸಂಬರಿ ಮತ್ತು ಹುಳಿ ಅವಲಕ್ಕಿಯನ್ನು ಪ್ರಸಾದವಾಗಿ ಎಲ್ಲರಿಗೂ ನೀಡುತ್ತಿದ್ದಾರೆ.

ಪ್ರತಿ ವರ್ಷ ಬಾಣಸಿಗರಿಗೆ ಪಂಚೆ, ಶಲ್ಯ ನೀಡಲಾಗುತ್ತಿದೆ. ಸಂಘದ ವತಿಯಿಂದ ಪ್ರಸಾದ ಭೋಜನದೊಂದಿಗೆ ವಡೆ ಪ್ರಸಾದವನ್ನು ನೀಡಲಾಗುತ್ತಿದೆ. ಈ ದೈವಕಾರ್ಯಕ್ಕೆ ಸಮುದಾಯದವರು ಖಾದ್ಯ ಮತ್ತು ನೀರು ಪ್ರಾಯೋಜಕತ್ವ ಮಾಡುತ್ತಿದ್ದಾರೆ. ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಸಮಯೋಚಿತವಾಗಿ ಧನ ಸಹಾಯ ಮಾಡುತ್ತಿದ್ದಾರೆ. ಸದಸ್ಯರು ಮತ್ತು ಸಮುದಾಯದವರಿಂದ ಉದಾರವಾಗಿ ಧನ ಸಹಾಯ ದೊರೆಯುತ್ತಿದೆ.

**ಸರ್ವ ಸದಸ್ಯರ ಸಭೆ:**

ಪ್ರತಿ ವರ್ಷ ಸರ್ವ ಸದಸ್ಯರ ಸಭೆಯನ್ನು ನಡೆಸಲಾಗುತ್ತಿದೆ. ಇದರಲ್ಲಿ ನಮ್ಮ ಸಮುದಾಯದವರಿಂದಲೇ ಕಾರ್ಯಕ್ರಮದ ನಿರೂಪಣೆ, ಪ್ರಾರ್ಥನೆ, ಅಗಲಿದ ನಮ್ಮವರಿಗೆ ಶ್ರದ್ಧಾಂಜಲಿ, ಕಾರ್ಯದರ್ಶಿಯವರಿಂದ ವರದಿ, ವಾರ್ಷಿಕ ಆಯ–ವ್ಯಯ ಪತ್ರ ಮಂಡನೆ, ಅಧ್ಯಕ್ಷರ ಭಾಷಣ, ಸದಸ್ಯರ ಸಲಹೆ, ಸೂಚನೆ, ಅನಿಸಿಕೆಗಳಿಗೆ ಅವಕಾಶ, ಹಿರಿಯ ಚೇತನರಿಗೆ ಗೌರವ, ಪ್ರತಿಭಾ ಪುರಸ್ಕಾರ, ಸಮುದಾಯದ ಕುಟುಂಬದವರಿಗೆಲ್ಲಾ ಭೋಜನ ಏರ್ಪಾಡಾಗಿರುತ್ತದೆ.

ಇಲ್ಲಿಯವರಿಗೆ ಸುಮಾರು 182 ಹಿರಿಯ ಚೇತನರಿಗೆ ಗೌರವ ಸಮರ್ಪಣೆ ಮತ್ತು 292 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗಿದೆ. ಪ್ರತಿಭಾ ಪುರಸ್ಕಾರವು ರೂ. 500/– ರಿಂದ ಪ್ರಾರಂಭವಾಗಿ ಈಗ ರೂ. 2500/–ವರೆಗೆ ಕೊಟ್ಟು ಜೊತೆಗೆ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ಮತ್ತು ಅಭಿನಂದನಾ ಪತ್ರಗಳನ್ನು ನೀಡಲಾಗುತ್ತಿದೆ. ಸಭೆಯ ಮುನ್ನಾ ದಿನದಂದು ಕಾರ್ಯಕಾರಿ ಸಮಿತಿ ಸದಸ್ಯರು ಕಾರ್ಯ ಚಟುವಟಿಕೆಗಳಿಗೆ ಸಹಾಯ ಹಸ್ತ ನೀಡುತ್ತಿದ್ದಾರೆ.

ಇತ್ತೀಚಿಗೆ ದಸರ ಬೊಂಬೆಗಳನ್ನು ತಮ್ಮ ಮನೆಗಳಲ್ಲಿ ಪ್ರದರ್ಶಿಸಿ ಅದರ ಛಾಯಚಿತ್ರಗಳನ್ನು ಹಂಚಿಕೊಂಡವರಿಗೆ ಸಂಘದಿಂದ ನೆನಪಿನ ಕಾಣಿಕೆಯನ್ನು ನೀಡಲಾಗುತ್ತಿದೆ.

ಸಂಘವು ಪ್ರಾರಂಭವಾದಾಗಿನಿಂದ ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್. ಗೋವಿಂದ ಪ್ರಸಾದ್ ಮತ್ತು ಶ್ರೀ ಬಿ.ಎನ್.ಜಿ. ಕುಮಾರ್‌ರವರು ಸತತವಾಗಿ ಆಯ–ವ್ಯಯ ಪತ್ರಗಳನ್ನು ಸಮಯಕ್ಕೆ ಸರಿಯಾಗಿ ನೀಡುವುದಲ್ಲದೇ, ಸಭೆಯಲ್ಲಿ ಹಾಜರಿದ್ದು ಸದಸ್ಯರಿಗೆ ಸಂದೇಹಗಳಿದ್ದರೆ ಅದಕ್ಕೆ ಸರಿಯಾದ ಉತ್ತರಗಳನ್ನು ನೀಡುತ್ತಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎನ್. ಶಿವಕುಮಾರ್‌ರವರು ಮತ್ತು ಕುಟುಂಬದವರು ಕಾರ್ಯಕ್ರಮಗಳ ಛಾಯಚಿತ್ರಗಳನ್ನೂ ತೆಗೆದು ಮತ್ತು ಅವುಗಳು ಪತ್ರಿಕಾ ಮುದ್ರಣಕ್ಕೆ ಅನುಕೂಲವಾಗುವಂತೆ ಪರಿಷ್ಕರಿಸಿ ನೀಡುತ್ತಿದ್ದಾರೆ. ಸಂಘದ ಸಮಾರಂಭಗಳ ಮುನ್ನಾದಿನದಂದು ಸ್ವಯಂ ಪ್ರೇರಿತವಾಗಿ ಸಹಾಯಹಸ್ತ ನೀಡುತ್ತಿರುವವರಿಗೆ ಧನ್ಯವಾದಗಳು

**ಉಪಾಕರ್ಮ:**

ಮೊದಲ ಬಾರಿಗೆ ದಿನಾಂಕ 9.8.2025ರಂದು ಬೃಹಚ್ಚರಣ ಬಂಧುಗಳಿಗಾಗಿಯೇ ಸಂಘದ ವತಿಯಿಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿ ಉಪಾಕರ್ಮವನ್ನು ಶಾಸ್ತ್ರೋಕ್ತವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮುದಾಯದ 50 ಜನ ಭಾಗವಹಿಸಿದ್ದರು.

**ದಾಖಲೆಗಳ ವ್ಯವಸ್ಥೆ:**

ಉಳಿದೆಲ್ಲ ಕಾರ್ಯಚಟುವಟಿಕೆಗಳ ನಡುವೆ ಹಿನ್ನೆಲೆಯಲ್ಲಿ ಸದ್ದಿಲ್ಲದೇ ಜರುಗಿದ ಕೆಲಸವೆಂದರೆ, ಸದಸ್ಯತ್ವ ದಾಖಲೆಗಳ ನೇರ್ಪುಗೊಳಿಸುವಿಕೆ. ಆರುನೂರ ಐವತ್ತಕ್ಕೂ ಹೆಚ್ಚು ಸದಸ್ಯರ ವಿವರಗಳುಳ್ಳ ಫಾರಂಗಳಲ್ಲಿ

* ಕಣ್ತಪ್ಪಿನಿಂದ ಕಾಣಿಸದಿದ್ದ ವಿವರಗಳನ್ನು ಭರ್ತಿಮಾಡಿ,

* ಅಲ್ಲಲ್ಲಿ ನುಸುಳಿದ್ದ ಲೋಪಗಳನ್ನು ಸರಿಪಡಿಸಿ,

* ಸದಸ್ಯತ್ವ ಸಂಖ್ಯೆಗಳನ್ನು ಪರಿಷ್ಕರಿಸಿ,

- ಅವನ್ನು ಪ್ರತಿಯೊಂದು ಫಾರಂನಲ್ಲಿ ಮತ್ತೆ  ದಾಖಲಿಸಿ,
- ವಿವಿಧ ರೀತಿಯ ಗೊಂದಲಗಳನ್ನು ಕ್ರಮಬದ್ಧವಾಗಿ ನಿವಾರಿಸಿಕೊಂಡು ಸದಸ್ಯರುಗಳ ಇಡೀ ಮಾಹಿತಿ ವ್ಯವಸ್ಥೆಯನ್ನು ಗಣಕೀರಣಗೊಳಿಸಿದ್ದು ಒಂದು ಸಾಧನೆ. ಹಲವಾರು ತಿಂಗಳುಗಳಷ್ಟು ಕಾಲವನ್ನು ತೆಗೆದುಕೊಂಡ ಈ ಕಾರ್ಯದಿಂದ ಇಂದು ಎಲ್ಲ ಸದಸ್ಯರ ವಿವರಗಳು ಸುಲಭವಾಗಿ ದೊರಕುವಂತಾಗಿದೆ.
- 2021ರಿಂದ ಸಂಘಕ್ಕೆ ಸಂದಾಯವಾದ ಹಣಕ್ಕೆ ಡಿಜಿಟಲೀಕರಿಸಿದ ರಸೀದಿಗಳನ್ನು ಹಾಕಲಾಗುತ್ತಿದೆ ಮತ್ತು ವಾಟ್ಸ್‌ಅಪ್ ಮೂಲಕ ಕಳುಹಿಸಲಾಗುತ್ತಿದೆ.

ಇದರಿಂದ ಸುಲಭವಾಗಿ ಹಣ ಸಂದಾಯದ ಮಾಹಿತಿಗಳು ದೊರಕುವಂತಾಗಿದೆ ಮತ್ತು ಪರಿಸರ ಸ್ನೇಹಿ ಕ್ರಮದ ಭಾಗವಾಗಿದೆ.

**ಶುಭಾಶಯ ಹಾರೈಕೆ**

ಸಂಘದ ಸದಸ್ಯರ ಜನ್ಮದಿನದಂದು ಸಂಘದ ಪರವಾಗಿ ಕಾರ್ಯಕಾರಿ ಸಮಿತಿಯು ಸದಸ್ಯರಿಗೆ ಶುಭಾಶಯ ಕೋರುವ ಪರಿಪಾಠ ನಡೆದುಕೊಂಡು ಬರುತ್ತಿದೆ.

**ದಾನಿಗಳು:**

ಸಂಘ ಪುನರ್ಜೀವನಗೊಂಡ ಸಮಯದಿಂದಲೂ ಸದಸ್ಯರು, ಹಿತೈಷಿಗಳು ಮತ್ತು ಸ್ನೇಹಿತರು ಅನ್ನ ಸಂತರ್ಪಣೆ, ವಿದ್ಯಾನಿಧಿ ಮತ್ತು ಇತರ ಕಾರ್ಯಕ್ರಮಗಳಿಗೆ ಧನ ಸಹಾಯ ಮಾಡಿದ್ದಾರೆ. ಅಂತಹವರ ಸಹಾಯಕ್ಕೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.



**ನಟರಾಜ್ ಕೆ.ಸಿ.**
9845113475

## ಸುವರ್ಣ ಸಂಚಿಕೆ – ನನ್ನ ಅನಿಸಿಕೆ

"ಬೃಹಚ್ಚರಣ" ಪತ್ರಿಕೆಯ ಐವತ್ತನೆಯ ಸಂಚಿಕೆಯನ್ನು ಸುವರ್ಣಸಂಚಿಕೆಯ ರೂಪದಲ್ಲಿ ಹೊರತರುತ್ತಿರುವುದು ತುಂಬಾ ಸಂತಸದ ವಿಷಯ.

"ಬೃಹಚ್ಚರಣ" ಸಂಚಿಕೆಗಳನ್ನು ಓದುತ್ತಿದ್ದರೆ, ದಶಕಗಳ ಹಿಂದೆ ನಮ್ಮ ಮನೆಯಲ್ಲಿ ಜರುಗುತ್ತಿದ್ದ ಸಂಘದ ಸಭೆಗಳ ನೆನಪು ಮನದಲ್ಲಿ ಮೂಡಿಬರುತ್ತದೆ.

ನನ್ನ ಮಾವನವರಾಗಿದ್ದ ದಿ|| ಬಿ. ವೆಂಕಟರಾಮಯ್ಯ ನವರು 'ಬೃಹಚ್ಚರಣ' ಸಂಘದ  ಸಭೆಯನ್ನು ಪ್ರತಿ ವರ್ಷ ಅಕ್ಟೋಬರ್ 2ರಂದು ರಾಜಾಜಿನಗರದಲ್ಲಿದ್ದ ಸ್ವಗೃಹ 'ಕಮಲ್ ಕುಂಜ್'ನಲ್ಲಿ ನಡೆಸುತ್ತಿದ್ದರು.

ಆ ದಿನ ನಮ್ಮ ಸಂಘದ ಅಂದಿನ ಸದಸ್ಯರುಗಳಾಗಿದ್ದ ದಿ|| ಶ್ರೀಕಂಠೇಶ್ವರ ಅಯ್ಯರ್ ದಂಪತಿಗಳು, ದಿ|| ಪಟ್ಟಾಭಿ ರಾಮಯ್ಯನವರು, ದಿ|| ಕೃಷ್ಣನ್‌ರವರು, ದಿ|| ಸೂರಪ್ಪನವರು, ದಿ|| ಕೃಷ್ಣಮೂರ್ತಿ, ಶ್ರೀ ಸತ್ಯಮೂರ್ತಿ ಮತ್ತು ಶ್ರೀ ಗೋಪಾಲಸ್ವಾಮಿ ಯವರು, ಇನ್ನೂ ಅನೇಕ ಸದಸ್ಯರು ಆಗಮಿಸುತ್ತಿದ್ದರು. ಆ ದಿನ ಹಬ್ಬದ ವಾತಾವರಣವಿರುತ್ತಿತ್ತು. ನನಗೆ ತಿಳಿದ ಮಟ್ಟಿಗೆ ತುಂಬ ವರುಷ ತಪ್ಪದೇ ವಾರ್ಷಿಕೋತ್ಸವದ ಸಭೆ ಇಲ್ಲಿಯೇ ನಡೆಯುತ್ತಿತ್ತು. ನಂತರ ಅವರ ಅನಾರೋಗ್ಯದ ಕಾರಣ ನಿಂತಿತ್ತು.

ದಿ|| ವೆಂಕಟರಾಮಯ್ಯನವರು ಮತ್ತು ಅವರ ಮಗನಾದ ದಿ|| ಬಿ. ವೆಂಕಟಕೃಷ್ಣರವರು ಸಂಘದಲ್ಲಿ ಸಕ್ರಿಯರಾಗಿ ಭಾಗವಹಿಸುತ್ತಿದ್ದರು.

ದಿ|| ವೆಂಕಟರಾಮಯ್ಯನವರು ಎಲೆಮರೆಯ ಕಾಯಿಯಂತೆ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿರುತ್ತಾರೆ. ಆದರೆ ಎಲ್ಲಿಯೂ ಅದನ್ನು ಬಹಿರಂಗಪಡಿಸಿಲ್ಲ. ಅವರ ಮೊಮ್ಮಕ್ಕಳು ಅನೇಕ ಒಳ್ಳೆಯ ಕಾರ್ಯಗಳನ್ನು ಅವರ ತಾತನಂತೆ ಮುಂದುವರೆಸಿಕೊಂಡು ಬಂದಿರುತ್ತಾರೆ.

ಬೃಹಚ್ಚರಣ ಸಂಘವು ಅನೇಕ ಒಳ್ಳೆಯ ಕಾರ್ಯಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ. ಇನ್ನು ಸಂಘವು ಪ್ರವರ್ಧಮಾನಕ್ಕೆ ಬರಲು ಯುವ ಪೀಳಿಗೆಯು ಕೈ ಜೋಡಿಸಬೇಕು. ನಮ್ಮ ಸಂಘದ ಹಿರಿಮೆಯನ್ನು ಎತ್ತಿಹಿಡಿಯಬೇಕು.

ದಿ|| ವೆಂಕಟರಾಮಯ್ಯನವರ ತಂದೆ ಮತ್ತು ಚಿಕ್ಕಪ್ಪನವರು ಯಾರೂ ಯಾವುದಕ್ಕೂ ಆಸೆ ಪಡದೆ ಸಾಮಾನ್ಯರಾಗಿ ಎಲೆಮರೆಯ ಕಾಯಿಯಂತೆ ಬದುಕಿ ಬಾಳಿದವರು. ಅವರ ಆದರ್ಶವೇ ನಮ್ಮ ಮನೆಗೆ ಶ್ರೀರಕ್ಷೆ. ಅವರು ನಡೆಸಿಕೊಂಡು ಬಂದ ಸಂಘವನ್ನು ಈಗಿನ ಪೀಳಿಗೆಯುವರು ಮುನ್ನಡೆಸಿಕೊಂಡು ಬರುತ್ತಿರುವುದು ತುಂಬ ಸಂತಸದ ವಿಷಯ. ಹಿಂದೆಲ್ಲಾ ಭಾವಚಿತ್ರಗಳನ್ನು ಕಾಪಿಟ್ಟುಕೊಳ್ಳುವ ಹವ್ಯಾಸ ಅಪರೂಪವಾಗಿತ್ತು. ಆದ್ದರಿಂದ ನನ್ನ ಬಳಿ ಯಾವುದೇ ಪರಿವಾರಗಳ ಭಾವಚಿತ್ರವಿಲ್ಲ.

ಬೃಹಚ್ಚರಣ ಸಂಘವು ಇನ್ನೂ ಯಶಸ್ವಿಯಾಗಿ ಮುಂದುವರೆಯಲಿ ಎಂದು ಕಾಯಾ ವಾಚಾ ಮನಸಾ ಹಾರೈಸುತ್ತೇನೆ.



**ಡಿ.ಎಸ್. ಗಾಯತ್ರಿ**
8050539971

# ಕಿತ್ತಿಗಾನಹಳ್ಳಿಯಲ್ಲಿ ನಾಗರಕಟ್ಟೆ ಜೀರ್ಣೋದ್ಧಾರ ಸಂದರ್ಭ


















# ಕಿತ್ತಿಗಾನಹಳ್ಳಿ ಕ್ಷೇತ್ರದಲ್ಲಿನ ದೇವರುಗಳು











# ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ ಸಂದರ್ಭ











# ಸಂಘದಿಂದ ಶಿಕ್ಷಕರನ್ನು ಗೌರವಿಸಿದ ಸಂದರ್ಭ











# ಸಂಘದಿಂದ ಶಿಕ್ಷಕರನ್ನು ಗೌರವಿಸಿದ ಸಂದರ್ಭ











## ಸಂಘದಿಂದ 'ಆರ್ಯಾವರ್ತ' ಸಂಸ್ಥೆಗೆ ವೈಕುಂಠ ವಾಹನ ನೀಡಿದ ಸಂದರ್ಭ











## ಸಂಘದಿಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಗಾಯತ್ರಿ ಭವನಕ್ಕೆ ಕುರ್ಚಿಗಳನ್ನು ನೀಡಿದ ಸಂದರ್ಭ













## ಸಂಘಕ್ಕೆ ಉದಾರವಾಗಿ ದೇಣಿಗೆ ನೀಡಿರುವ ದಾನಿಗಳನ್ನು ಗೌರವಿಸಿದ ಸಂದರ್ಭ



ಡಾ|| ಅನುರಾಧ ಉಡುಪ ಮತ್ತು ಶ್ರೀ ಶ್ರೀಹರಿ ಉಡುಪ



ಡಾ|| ಎಸ್. ರಾಮಚಂದ್ರರಾವ್ ಮತ್ತು ಶ್ರೀಮತಿ ಸುಲೋಚನ



ಶ್ರೀಮತಿ ವೈಜಯಂತಿ

## ಸಂಘದ ಲೆಕ್ಕಪತ್ರ ಪರಿಶೋಧಕರನ್ನು ಗೌರವಿಸಿದ ಸಂದರ್ಭ



ಶ್ರೀಯುತರಾದ ಬಿ.ಎಸ್. ಗೋವಿಂದ ಪ್ರಸಾದ್ ಮತ್ತು ಬಿ.ಎಸ್.ಜಿ. ಕುಮಾರ್

# ಸಂಘದ ಕ್ಯಾಲೆಂಡರ್ ಬಿಡುಗಡೆಯ ಸಂದರ್ಭ







## ಸಂಘದ ವೆಬ್‌ಸೈಟ್ ಬಿಡುಗಡೆಯ ಸಂದರ್ಭ





## ಸಂಘದ ಸದಸ್ಯರ ಕೈಪಿಡಿ ಬಿಡುಗಡೆಯ ಸಂದರ್ಭ



## 'ಸಾಂತ್ವನ ನಿಧಿ' ಕಾರ್ಯಕ್ರಮ ಪ್ರಾರಂಭ ಮಾಡುವ ಮುನ್ನ ಸದಸ್ಯರೊಂದಿಗೆ ಚರ್ಚೆ



## ಸಂಘದಲ್ಲಿ 75 ವಸಂತಗಳನ್ನು ಪೂರೈಸಿದ ಹಿರಿಯರನ್ನು ಗೌರವಿಸಿದ ಸಂದರ್ಭ





## ಸಮುದಾಯದ ಪ್ರತಿಭಾ ಪುರಸ್ಕೃತರು





## ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಮುದಾಯದವರು





# ಸಂಘದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು










# ಬೃಹಚ್ಚರಣ ಸಂಘ ಅಂದು–ಇಂದು

**ಅಂದು**

ಬೃಹಚ್ಚರಣ ಪಂಗಡದವರಿಗೆ ಪವಿತ್ರ ಸ್ಥಳವಾದ ಕಿತ್ತಿಗಾನಹಳ್ಳಿಯ ಶ್ರೀನಾಗೇಶ್ವರ ಕ್ಷೇತ್ರ ಶಿಥಿಲವಾಗಿದ್ದು, ಪೂಜಾಕಾರ್ಯಗಳಿಗೆ ತೊಂದರೆಯಾಗಿದ್ದುದರಿಂದ ಸಬ್ ಜಡ್ಜ್ ಲಕ್ಷ್ಮೀನಾರಾಯಣಪ್ಪನವರು ಕ್ಷೇತ್ರದ ಜೀರ್ಣೋದ್ಧಾರಕ್ಕೆ ಸಂಕಲ್ಪಿಸಿ ಕಾರ್ಯಪ್ರವೃತ್ತರಾದರು. ಈ ಕಾರ್ಯವು ಅವರ ಕಾಲದಲ್ಲಿ ಪ್ರಾರಂಭವಾಗಿ, ನಂತರ ಅವರ ಮಕ್ಕಳಾದ ಶ್ರೀ ಪದ್ಮನಾಭಯ್ಯ ಮತ್ತು ಡಾ॥ ಕೆ.ಎಲ್. ದಾನಪ್ಪ, ಹೊಸಕೋಟೆ ವೆಂಕಟಸುಬ್ಬಯ್ಯನವರಂತಹ ಮಹನೀಯರ ಕಾಲದಲ್ಲಿ ಪೂರ್ಣಗೊಂಡಿತು. ಇವರುಗಳು ಅಲ್ಲಿ ನಾಗರಕಟ್ಟೆ, ಶ್ರೀನಿವಾಸ ದೇವಸ್ಥಾನ, ಛತ್ರ, ಭೋಜನಶಾಲೆಗಳನ್ನು ಕಟ್ಟಿಸಿದರು.

ಮುಂದೆ ಶ್ರೀ ಶ್ರೀಕಂಠೇಶ್ವರ ಐಯ್ಯರ್, ಶ್ರೀ ಆರ್. ಕೃಷ್ಣಮೂರ್ತಿ, ಶ್ರೀ ಟಿ. ಪಟ್ಟಾಭಿರಾಮಯ್ಯ, ಶ್ರೀ ಎ.ವಿ. ಲಕ್ಷೀನಾರಾಯಣ ಐಯ್ಯರ್, ಶ್ರೀ ಹೆಚ್. ಕೃಷ್ಣಸ್ವಾಮಿ, ಶ್ರೀ ಎಸ್. ಶ್ರೀನಿವಾಸಯ್ಯ, ಶ್ರೀ ಆರ್.ವಿ. ನಂಜುಂಡ ಐಯ್ಯರ್, ಶ್ರೀ ಸಣ್ಣೆ ಸೂರಪ್ಪ ಮತ್ತು ಇತರ ಹಿರಿಯರು ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವನ್ನು 1981ರಲ್ಲಿ ಸ್ಥಾಪಿಸಿ ಮರು ವರ್ಷವೇ, ಅಂದರೆ 1982ರಲ್ಲಿ 'ಬೃಹಚ್ಚರಣ' ಎಂಬ ಸ್ಮರಣ ಸಂಚಿಕೆಯನ್ನು ಹೊರತಂದರು. ಅದು ಉಪಯುಕ್ತ ವಿಷಯಗಳಿಂದ ಕೂಡಿದ್ದು ಸಂಗ್ರಹ ಯೋಗ್ಯವಾಗಿದೆ. (ಇನ್ನೂ ಅನೇಕ ಮಹನೀಯರ ಹೆಸರುಗಳು ಬಿಟ್ಟು ಹೋಗಿವೆ. ದಯಮಾಡಿ ಕ್ಷಮಿಸಿ).

ಆಗೆಲ್ಲಾ ಈಗಿನಂತೆ ಫೋನ್, ಮೊಬೈಲ್‌ಗಳಿಲ್ಲದ ಕಾಲ. ಕೆಲವೇ ಸದಸ್ಯರು ಕಾರುಗಳನ್ನು ಹೊಂದಿದ್ದರು. ಸೀಮಿತ ಸಂಪನ್ಮೂಲಗಳಿದ್ದರೂ ಬೃಹಚ್ಚರಣ ಸಂಘಕ್ಕಾಗಿ ತಮ್ಮ ವೃತ್ತಿಯಿಂದ ಬಿಡುವು ಮಾಡಿಕೊಂಡು ತಮ್ಮ ಮನೆಗಳಲ್ಲಿಯೇ ಸಂಘದ ಮೀಟಿಂಗ್ ನಡೆಸಿ, ನಿರ್ವಹಣಾ ವೆಚ್ಚವನ್ನು ತಾವೇ ಭರಿಸಿ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ, ನಿಸ್ವಾರ್ಥವಾಗಿ ದುಡಿದಿದ್ದಾರೆ. ಅವರಲ್ಲಿ ಕೆಲವು ಹಿರಿಯರು ಈಗಲೂ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ತಮ್ಮ ಅಮೂಲ್ಯ ಸಲಹೆ, ಸೂಚನೆ , ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಎಲ್ಲಾ ಪೂರ್ವಸೂರಿಗಳು ಪ್ರಾತಃ ಸ್ಮರಣೀಯರು.

**ಇಂದು**

ಕಾರಣಾಂತರಗಳಿಂದ ಸಂಘದ ಚಟುವಟಿಕೆಗಳು ಕೆಲಕಾಲ ಸ್ಥಗಿತಗೊಂಡಿದ್ದವು. 15 ವರ್ಷಗಳ ಹಿಂದೆ ಮತ್ತೆ ಸಂಘವನ್ನು ಪುನಶ್ಚೇತನಗೊಳಿಸಿದವರು ಶ್ರೀಯುತರಾದ ಎಸ್. ಸೋಮಸುಂದರ, ಎಸ್. ಸಿ. ಶ್ರೀನಿವಾಸ, ವಿ. ಅರುಣ್, ಹೆಚ್.ಕೆ ಶಶಿಧರ್, ವಿ.ಎಸ್. ಮಣಿ, ಬಿ.ಎನ್. ಗೋವಿಂದಪ್ರಸಾದ್ ಸಹೋದರರು ಇತ್ಯಾದಿ (ಇಲ್ಲಿ ಬಹಳಷ್ಟು ಹೆಸರುಗಳನ್ನು ಸ್ಥಳಾಭಾವದಿಂದ ಕೊಡಲಾಗುತ್ತಿಲ್ಲ. ದಯವಿಟ್ಟು ಕ್ಷಮಿಸಿ) ಇವರುಗಳು ಹಗಲೂ ರಾತ್ರಿ ದುಡಿದು ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ನೋಂದಾಯಿದ್ದಾರೆ. ಇವರು ಹೊರತರುತ್ತಿರುವ 'ಬೃಹಚ್ಚರಣ' ವಾರ್ತಾಪತ್ರಿಕೆ ಮತ್ತು ಬೃಹಚ್ಚರಣ ವಾಟ್ಸಾಪ್ ಗ್ರೂಪ್‌ಗಳಿಂದಾಗಿ ಸದಸ್ಯರು ಪರಸ್ಪರ ಹತ್ತಿರವಾಗಿದ್ದಾರೆ. ಈ ವಾರ್ತಾಪತ್ರಿಕೆಯ 50 ಸಂಚಿಕೆಗಳನ್ನು ಹೊರತಂದಿದ್ದು ಸದಸ್ಯರ ಕುಟುಂಬದಲ್ಲಿ ನಡೆಯುವ ಜನನ, ಮರಣ, ಉಪನಯನ, ವಿವಾಹ, ನೂತನ ಗೃಹಪ್ರವೇಶ, ಅಲ್ಲದೇ ಪ್ರತಿಭಾವಂತರ ಸಾಧನೆಗಳ ಬಗ್ಗೆ, ವಾರ್ಷಿಕ ಪ್ರವಾಸದ ಬಗ್ಗೆ ಪೂರ್ಣ ಮಾಹಿತಿ ನೀಡುತ್ತದೆ. ಯಾವುದೇ ಪ್ರತಿಕೆಯ 50 ಸಂಚಿಕೆಗಳ ಪ್ರಕಟಣೆ ಸುಲಭ ಸಾಧ್ಯವಲ್ಲ. ಪತ್ರಿಕೆಯು ಉತ್ತಮ ಮುದ್ರಣದಲ್ಲಿ ಸುಂದರ ಛಾಯಾಚಿತ್ರಗಳೊಂದಿಗೆ, ಅಚ್ಚಿನ ದೋಷಗಳಿಲ್ಲದೆ ಸರ್ವಾಂಗ ಸುಂದರವಾಗಿ ಮೂಡಿಬರುತ್ತಿದೆ. ಶ್ರೀಯುತರಾದ ಮಧುಸೂಧನ್, ವೈ.ಜಿ. ಗಿರಿಶಾಸ್ತ್ರೀ, ಕೆ.ಸಿ. ನಟರಾಜ್, ಬಿ ಸುಬ್ರಮಣ್ಯಂ, ರಮೇಶ್ ಮತ್ತು ಶ್ರೀಮತಿ ಹೆಚ್. ಆರ್. ಲಲಿತಾ ಇವರೊಡಗೂಡಿದ ಸಂಪಾದಕೀಯ ಬಳಗದವರಿಗೆ ನೂರೊಂದು ನಮನಗಳು.

ಪ್ರತಿ ವರ್ಷ ನವೆಂಬರ್ – ಡಿಸೆಂಬರ್‌ನಲ್ಲಿ ಸಂಘದಿಂದ ಏರ್ಪಡಿಸಲಾಗುವ ಒಂದು ದಿನದ ಪ್ರವಾಸವಂತೂ ಮನೆ ಮಾತಾಗಿದೆ. ಪ್ರತಿ ವರ್ಷ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿರುವುದಕ್ಕೆ ಅದರ ಜನಪ್ರಿಯತೆಯೇ ಕಾರಣ. ಪ್ರತಿ ಬಸ್‌ನಲ್ಲಿ 3–4 ಕಾರ್ಯಕಾರಿ ಸಮಿತಿ ಸದಸ್ಯರು ಇದ್ದು ಸದಸ್ಯರ ಕಾಫಿ, ತಿಂಡಿ, ಊಟೋಪಚಾರ ಮತ್ತು ಇತರ ಸೌಕರ್ಯಗಳನ್ನು ಗಮನಿಸುತ್ತಾರೆ.

ಪ್ರತಿವರ್ಷವೂ ಗಿರಿಜಾ ಕಲ್ಯಾಣ, ಸತ್ಯನಾರಾಯಣ ಪೂಜೆ, ವಾರ್ಷಿಕ ಸರ್ವ ಸದಸ್ಯರ ಸಭೆ, ಸಾಮೂಹಿಕ ಕಲ್ಯಾಣೋತ್ಸವಗಳು, ಸಾಮೂಹಿಕ ಉಪಾಕರ್ಮಗಳಲ್ಲಿ ಹಾಗೂ ಕಿತ್ತಿಗಾನಹಳ್ಳಿಯಲ್ಲಿ ನಡೆಯುವ ರಥೋತ್ಸವ ಮತ್ತು ನಾಗಾರಾಧನೆಗಳಲ್ಲಿ ಸದಸ್ಯರು ಮತ್ತವರ ಕುಟುಂಬಗಳು ಅತ್ಯಂತ ಸಂಭ್ರಮಗಳಿಂದ ಪಾಲ್ಗೊಳ್ಳುತ್ತಾರೆ. ಇನ್ನು ಸದಸ್ಯರು ವಾರ್ಷಿಕ ನಿರ್ವಹಣೆ ವೆಚ್ಚ, ಅನ್ನಸಂತರ್ಪಣಾ ನಿಧಿಗೆ, ಪ್ರತಿಭಾ ಪುರಸ್ಕಾರಕ್ಕೆ, ವಿದ್ಯಾನಿಧಿಗೆ, ನಾಗಾರಾಧನೆಗೆ ಹಾಗೂ ಸಾಂತ್ವನ ನಿಧಿಗೆ ಮುಕ್ತವಾಗಿ ಕೊಡುಗೆ ನೀಡುತ್ತಿದ್ದಾರೆ. ಈಗಾಗಲೇ ಸಂಘದ ವತಿಯಿಂದ ಆರ್ಯಾವರ್ತಕ್ಕೆ ಒಂದು ವೈಕುಂಠ ವಾಹನವನ್ನು ನೀಡಲಾಗಿದೆ. ವಾರ್ತಾಪತ್ರಿಕೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ 'ವಧೂ–ವರ ಸಂಪದ' ಅತ್ಯಂತ ಪ್ರಶಂಸನೀಯ. ಇವಿಷ್ಟು ಕಾರ್ಯಗಳಿಗೆ ನಿಸ್ವಾರ್ಥ ಮನೋಭಾವನೆಯಿಂದ ದುಡಿಯುತ್ತಿರುವ ಸಂಘದ ಎಲ್ಲಾ ಪದಾಧಿಕಾರಿ ಗಳಿಗೆ, ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೆ ವಂದನೆ. ಅಭಿನಂದನೆಗಳು. ಇವರ ಸಂತತಿ ಸಾವಿರವಾಗಲಿ.



**ಚಂದ್ರಮೌಳಿ ಎಸ್.**
9986236449

# ದ್ವಿಪದಿ, ತ್ರಿಪದಿಗಳ ಸಮೂಹ ಘೋಷ ವಾಕ್ಯ

ಬೃಹಚ್ಚರಣ ಪತ್ರಿಕೆಯು ಸದಸ್ಯರಿಗೆ ಉತ್ತಮ ಕೊಡುಗೆ ।
ಸಮಾಜಕ್ಕೆ ಉಣಬಡಿಸುತ್ತಿದೆ ಸಾಹಿತ್ಯ ಹೂರಣದ ಅಡುಗೆ ॥

ಬೃಹಚ್ಚರಣ ಪಂಗಡ ಸಮುದಾಯಕ್ಕೊಂದು ಅಪೂರ್ವ ಶಕ್ತಿ ।
ಇದರಿಂದ ಪಸರಿಸುತ್ತಿದೆ ಇಡೀ ಸಮಾಜಕ್ಕೆ ದೇಶಭಕ್ತಿ ॥

ಉತ್ತಮ ಸಾಹಿತ್ಯ ಓದುವುದು ಅದ್ವಿತೀಯ ।
ಓದಿನ ಸಾರವನ್ನು ಇತರರಿಗೆ ಹಂಚುವ ಕಾರ್ಯ ಆತ್ಮೀಯ ।
ಇವುಗಳೆರಡನ್ನು ಕಾರ್ಯರೂಪಕ್ಕೆ ತರುವುದು ಪ್ರಶಂಸನೀಯ ॥

ಸ್ವಚ್ಛ ಬೆಂಗಳೂರು ಎಂದು ಹೆಸರಿರುವ ನಗರದಲ್ಲಿ
ನಮ್ಮಿಚ್ಛೆಯಂತೆ ಕಸ ಎಸೆಯುವ ನಾವೆಂತಹ ನಾಗರೀಕರು!

ಎಲ್ಲೆಂದರಲ್ಲಿ ಕಸ ಎಸೆಯುವ ಕಾರ್ಯಕ್ಕೆ ಇತಿಶ್ರೀ ಹಾಡಿ ।
ಸ್ವಚ್ಛ ಬೆಂಗಳೂರಿನ ಮೂಲಕ ದೇಶದ ಪರಿಸರ ಕಾಪಾಡಿ ॥

ಸನಾತನ ಧರ್ಮ ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ ।
ಇದು ಸಾಧ್ಯವಾಗಲು ಕಲ್ಪಿಸಬೇಕು ಉತ್ತಮ ಸೌಕರ್ಯ ॥

ದೇಶಭಕ್ತಿ ಹಾಗೂ ಸನಾತನ ಧರ್ಮ ಬೆಳೆಸಿ ।
ಭಾರತೀಯತೆ ಮತ್ತು ಹಿಂದೂ ಸಾಮ್ರಾಜ್ಯ ಉಳಿಸಿ ॥

ಶಾಂತಿ, ಸಂಸ್ಕೃತಿ ಭಾರತೀಯ ಪರಂಪರೆಯ ಶಕ್ತಿ ।
ಇದರಿಂದಾಗಿ ವೃದ್ಧಿಸುವುದು, ಸಾಮಾಜಿಕ ಸ್ಥಿತಿಗತಿ ।
ಇದನ್ನು ವಿಶ್ವಮಾನ್ಯವಾಗಿಸಲು ಬೇಕು ಆಸಕ್ತಿ ॥



ನಡವತ್ತಿ ಎನ್. ವಿ. ಸುಂದರ್
8277685806

---









ವಿವಿಧ ಕಲೆ: ನಳಿನಿ ಸುಬ್ರಹ್ಮಣ್ಯಂ
9886196008



ದಿ॥ ಶ್ರೀ ಚಂದ್ರಶೇಖರ ಅಯ್ಯರ್
ಮತ್ತು
ದಿ॥ ಶ್ರೀಮತಿ ಶಾರದಮ್ಮ

ಇವರ ಸವಿನೆನಪಿಗಾಗಿ ಪ್ರಣಾಮಗಳೊಂದಿಗೆ

ಬಿ.ಸಿ. ನಟರಾಜ ಮತ್ತು ಗೌರಿ ನಟರಾಜ

**# 4, "Shanmukha Krupa", "NG Nilaya"**
**2nd Main, 3rd Cross, SBM Colony**
**Behind Srinidhi Temple**
**Konanakunte**
**Bengaluru 560062**

With Best Compliments From

# SRINIVASAN S.

**M : 8147753093 / 8088189569**

**# 119, 5th Cross, Omkara Nagara**
**Arakere Gate, Bannerughatta Road**
**Bengaluru 560 011**



With Best Compliments From

ಸರ್ವೇ ಜನಃ ಸುಖಿನೋ ಭವಂತು
ಸಮಸ್ತ ಸನ್ಮಂಗಳಾನಿ ಭವಂತು

# Srinivasamurthy C. S.
# &
# Family

With Best Compliments From



Vainika Vidwan
Dr. R.A. Dakshina Murthy

SRI VIDYA SARASWATHI INSTITUTE OF MUSIC

Flat # 003, "AKSHAYA BRICKLANE" APARTMENT
ARAKERE, MICO LAYOUT STAGE II
OMKAR NAGAR, BENGALURU 560076

Mobile No.: 9980944975
e-mail: dakshin1964@rediffmail.com

With Best Compliments From :

SHREEGIRI PEST CONTROL SERVICES

SHREEGIRI

PEST CONTROL SERVICES

FOLLOWING PEST CONTROL SERVICE AVAILABLE AT YOUR DOOR STEP

- GENERAL DISINFESTATION SERVICES
- RODENT CONTROL SERVICES
- MOSQUITOES CONTROL SERVICES
- BEE HEIVES REMOVAL
- ANTI-COCKROACH
- FLY CONTROL.
- FOGGING



No. 537, 2nd Floor, 1st Main, 8th Block, Koramangala, Bengaluru - 560 095.
Mob : 09663305946 / 9880223450



# ಶ್ರೀ ಪ್ರಸನ್ನ ಭದ್ರಕಾಳಿ ದೇವಸ್ಥಾನ

## ಭದ್ರೇಶ್ವರಿ ನಗರ, ಗೆಜ್ಜಗದಹಳ್ಳಿ, ತುಮಕೂರು ರಸ್ತೆಯ ಬಳಿ, ಬೆಂಗಳೂರು

**1181 ವೈಶಾಖ ಮಾಸದ 21ನೇ ದಿನ (4–5–2006) ಗುರುವಾರ ಪುಷ್ಯ ನಕ್ಷತ್ರದ ದಿನ ಬೆಂಗಳೂರಿನ ಗೆಜ್ಜೆಗದಹಳ್ಳಿಯಲ್ಲಿ ಕೇರಳ ಸಂಪ್ರದಾಯದ ವಿಧಿಯಂತೆ ತಿರುವನಂತಪುರ ಕಾರೋಡು ಮಠದ ಬ್ರಹ್ಮಶ್ರೀ ರಾಮರು ರವರಿಂದ ಪ್ರತಿಷ್ಠಾಪಿಸಲಾದ ಹಾಗು ಪ್ರತಿ ದಿವಸ ಮೂರು ಬಾರಿ ಪೂಜೆಗಳನ್ನು ನಡೆಸಲಾಗುವ ಬೆಂಗಳೂರಿನ ಏಕೈಕ ಭದ್ರಕಾಳಿ ದೇವಸ್ಥಾನ**



ಮೊಟ್ಟನಹಳ್ಳಿ ಶ್ರೀಕಂಠ ಸತ್ಯನಾರಾಯಣ ಅವರ ಅಳಿಯಂದಿರಾದ ಶ್ರೀ ಎಸ್. ರಾಧಾಕೃಷ್ಣನ್ ಮತ್ತು ಅವರ ಕಿರಿಯ ಮಗಳಾದ ಶ್ರೀಮತಿ ರಾಧಾ ರವರ ನೇತೃತ್ವದಲ್ಲಿ ಈ ದೇವಸ್ಥಾನವು ನಿರ್ಮಾಣಗೊಂಡಿದೆ.

### ದೇವಸ್ಥಾನದ ಪೂಜಾ ಸಮಯ

**ಬೆಳಿಗ್ಗೆ** : 6.00 ರಿಂದ 11 ಘಂಟೆಯವರೆಗೆ

**ಸಂಜೆ** : 5.00 ರಿಂದ 7.30 ಘಂಟೆಯವರೆಗೆ

### ಮಾಸಿಕ ವಿಶೇಷ ಪೂಜೆಗಳು

ಪ್ರತಿಷ್ಠಾ ನಕ್ಷತ್ರ (ಪುಷ್ಯ) ಪೂಜೆ | ಚತುರ್ಥಿ ದಿನ ಗಣಪತಿ ಪೂಜೆ

ಷಷ್ಠಿ ದಿನ ಸುಬ್ರಮಣ್ಯ ಪೂಜೆ | ಅಶ್ಲೇಷ ದಿನ ನಾಗರ ಪೂಜೆ

ಪ್ರತಿ ಶುಕ್ರವಾರ, ಚತುರ್ಥಿ ಹಾಗು ಪುಷ್ಯ ನಕ್ಷತ್ರ ದಿನದಂದು ಗಣಪತಿ ಹೋಮ







ಪುಷ್ಯ ನಕ್ಷತ್ರದ ದಿನ
ವಿಶೇಷ ಅಲಂಕಾರ,
ವಿಶೇಷ ನೈವೇದ್ಯ ಮತ್ತು
ಅನ್ನದಾನ ಹಾಗು ಇತರೆ
ಕಾರ್ಯಕ್ರಮಗಳು
ನಡೆಯುತ್ತವೆ.

For Temple Location Scan QR Code

For Offerings and Donations Scan QR Code


ಶ್ರೀ ಎಸ್. ರಾಧಾಕೃಷ್ಣನ್
ವ್ಯವಸ್ಥಾಪಕ ಧರ್ಮದರ್ಶಿಗಳು
ಶ್ರೀ ಪ್ರಸನ್ನ ಭದ್ರಕಾಳಿ ದೇವಿ ಸೇವಾ ಟ್ರಸ್ಟ್
✆ 98456 81460

ಶ್ರೀ ಉಮೇಶ್ ಭಟ್
ಅರ್ಚಕರು
✆ 96067 97485

## "ಬೃಹಚ್ಚರಣ"ದಲ್ಲಿ ಈವರೆಗೆ ಪ್ರಕಟವಾಗಿರುವ ವ್ಯಕ್ತಿಚಿತ್ರಣಗಳ ಪಕ್ಷಿನೋಟ

**"ಬೃಹಚ್ಚರಣ" ಪತ್ರಿಕೆಯ ಸುವರ್ಣ ಸಂಚಿಕೆಯು ಪ್ರಕಟವಾಗುತ್ತಿರುವ ಈ ಸಮಯದಲ್ಲಿ ಪತ್ರಿಕೆಯಲ್ಲಿ ಇದುವರೆಗೆ ಪ್ರಕಟವಾಗಿರುವ ಬೃಹಚ್ಚರಣ ಸಮುದಾಯದ ಮಹನೀಯ ಮಹಿಳೆಯರ ವ್ಯಕ್ತಿಚಿತ್ರಣದ ಪಕ್ಷಿನೋಟ ಸಂದರ್ಭೋಚಿತ ವಾಗಿದೆ.**

**ದಿ॥ ಭಾರತಿ ಸಂಪಂಗಿರಾಮು:** ಶ್ರೀಯುತರು ಕನ್ನಡ ಭಾಷೆಯಲ್ಲಿ ಕಥೆ, ಕಾದಂಬರಿ, ಭೂಮಾಪನ ಶಾಸ್ತ್ರ, ಸ್ತೋತ್ರಸಾಹಿತ್ಯ, ತತ್ತ್ವಶಾಸ್ತ್ರ, ವ್ಯಾಖ್ಯಾನ ಕೃತಿಗಳು, ನಿಘಂಟು, ಹಳೆಗನ್ನಡ ಕಾವ್ಯಗಳು, ಜ್ಯೋತಿಷ್ಯ, ಬೋಧನಾಶಾಸ್ತ್ರ, ವ್ರತಮಾಲಾ, ತ್ರಿಚಕಲ್ಪ ಸೂರ್ಯ ನಮಸ್ಕಾರ ವಿಷಯಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಭಾರತಿ ಎಂಬ ನಾಮವನ್ನು ಈ ವಂಶದ ಒಬ್ಬಾನೊಬ್ಬ ವ್ಯಕ್ತಿಗೆ ಶ್ರೀ ಶೃಂಗೇರಿ ಭಾರತಿ ಸ್ವಾಮಿಗಳು ಅನುಗ್ರಹಿಸಿದರೆಂಬ ಐತಿಹ್ಯ ಇದೆ.

**ದಿ॥ ಡಾ॥ ಡಿ.ವಿ. ಗುಂಡಪ್ಪ:** ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಕವಿಯಾಗಿ, ನಾಟಕಕಾರರಾಗಿ, ರಾಜನೀತಿಜ್ಞರಾಗಿ, ವಿಮರ್ಶಕರಾಗಿ ಕನ್ನಡ ಸಾಹಿತ್ಯ ಜಗತ್ತಿಗೆ ಅನರ್ಘ್ಯ ಕೃತಿ ರತ್ನಗಳನ್ನು ನೀಡಿದ್ದಾರೆ. ಕಗ್ಗ ಎಂಬ ಮೌಕ್ತಿಕ ಮಾಲಿಕೆಯು ನಮ್ಮೆಲ್ಲರಿಗೂ ನಾವುಗಳು ಮರೆತಿರಬಹುದಾದ ತಿಳಿವಳಿಕೆಯನ್ನು ಗಳಿಸಿಕೊಳ್ಳಲು ಸಹಾಯಮಾಡುತ್ತದೆ. ಸಾರಸ್ವತ ಲೋಕದ ಅಶ್ವತ್ಥವೃಕ್ಷವಾದ ಡಿ.ವಿ.ಜಿ.ಯವರ ಹೆಸರನ್ನು Divine Vision of God ಮತ್ತು ದಿವ್ಯ ವಿದ್ಯಾ ಜ್ಞಾನಿ ಎಂದು ಭಾವಿಸಿಕೊಳ್ಳಬಹುದು.

**ದಿ॥ ಪಂಡಿತ್ ಶೇಷಾದ್ರಿ ಗವಾಯಿ:** ಸಂಗೀತ ಕ್ಷೇತ್ರದಲ್ಲಿ ಸಂಗೀತ ಶಾಲೆಯನ್ನು ತೆಗೆದು ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಹೇಳಿಕೊಟ್ಟಿರುವ ನಮ್ಮವರಲ್ಲಿ ಹೆಸರಿಸ ಬೇಕಾಗಿರುವುದು ಹಿಂದೂಸ್ತಾನಿ ಸಂಗೀತ ಗಾಯಕ, ವಿಮರ್ಶಕ, ನಟ ಮತ್ತು ಉತ್ತಮ ಗುರುಗಳಾದ, "ಉರಗಾಚಲ" ಅಂಕಿತನಾಮದಿಂದ ಪ್ರಖ್ಯಾತಿಯಾಗಿರುವ ಪಂಡಿತ್ ಶೇಷಾದ್ರಿ ಗವಾಯಿಗಳು. ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ.

**ದಿ॥ ವಿದ್ವಾನ್ ಕೆ.ಎಸ್. ಛಾಯಾಪತಿ:** ಸಂಗೀತ ಕ್ಷೇತ್ರದಲ್ಲಿ ಸಂಗೀತ ಶಾಲೆಗಳನ್ನು ತೆಗೆದು ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಹೇಳಿಕೊಟ್ಟಿರುವ ಕರ್ನಾಟಕ ಸಂಗೀತದ ಗಾಯಕ, ಗುರುಗಳು ಮತ್ತು "ಛಾಯಾಭಕ್ತ" ಅಂಕಿತದಿಂದ ಪ್ರಸಿದ್ಧರಾಗಿರುವ ವಿದ್ವಾನ್ ಕೆ.ಎಸ್. ಛಾಯಾಪತಿಯವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ.

**ದಿ॥ ವೈ.ಎಸ್. ಗುಂಡಪ್ಪ:** ಶ್ರೀಯುತರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮೌಲಿಕ ಕಾಣಿಕೆ ನೀಡಿದ್ದಾರೆ. ವಿಶೇಷವಾಗಿ ಶಿಶುಸಾಹಿತ್ಯರಚನೆ, ಮಕ್ಕಳೊಡನೆ ಒಡನಾಟ ಅವರಿಗೆ ಪ್ರಿಯವಾದದ್ದು. ತಮ್ಮ ಕುಲದೈವ "ಬನ್ನೇರುಘಟ್ಟದ ಚಂಪಕಧಾಮ" ಅಂಕಿತದಲ್ಲಿ ಅಸಂಖ್ಯಾತ ಭಕ್ತಿ ಗೀತೆಗಳನ್ನು ರಚಿಸಿದ್ದಾರೆ.

**ದಿ॥ ಎ.ವಿ. ಲಕ್ಷ್ಮಣ ಅಯ್ಯರ್:** ಬೃಹಚ್ಚರಣ ಗ್ರಾಮ ಕಿತ್ತಿಗಾನಹಳ್ಳಿಯ ಅಪ್ಯಾಯಮಾನ ನಂಟು ಹೊಂದಿದವರು. ಸಮುದಾಯದವರಿಂದ ನಡೆಸುತ್ತಿದ್ದ ಬಡ ಬ್ರಾಹ್ಮಣ ಬಾಲಕರ ವಿದ್ಯಾಭ್ಯಾಸಕ್ಕಾಗಿ ಕಟ್ಟಿದ್ದ ಅಮ್ಮಣ್ಣಮ್ಮ ಹಾಸ್ಟಲ್‌ನ ಟ್ರಸ್ಟಿಯಾಗಿ ಸೇವೆ ಸಲ್ಲಿಸಿದರು. ವಿದ್ಯಾಭ್ಯಾಸ ಹೈಸ್ಕೂಲ್ ಮಟ್ಟದ್ದಾದರೂ ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದವರು. ವಾಹನಗಳೇ ವಿರಳವಾಗಿದ್ದ ಕಾಲದಲ್ಲಿ ಬುಲೆಟ್ ಬೈಕ್ ಹೊಂದಿ ಅದರಲ್ಲಿ ಸವಾರಿ ಮಾಡುತ್ತಿದ್ದರು. ಬಂಧು-ಮಿತ್ರರಿಗೆ ಆರ್ಥಿಕ ನೆರವು, ಸಮಾಜಸೇವೆ, ಬಡವರ ಬಗ್ಗೆ ಇದ್ದ ಕಳಕಳಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

**ದಿ॥ ಟಿ. ಪಟ್ಟಾಭಿರಾಮಯ್ಯ:** ಬೃಹಚ್ಚರಣ ಸಂಘದ ಪುನರುಜ್ಜೀವನಕ್ಕೆ ಕಾರಣರಾದವರು. ವ್ಯವಸಾಯದೊಂದಿಗೆ ಗ್ರಾಮಾಧಿಕಾರಿ ಹುದ್ದೆ, ವಾಣಿಜ್ಯ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶ್ರದ್ಧೆ, ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ. ಅನೇಕ ದೇವತಾ ಕಾರ್ಯಗಳಿಗೆ ಮತ್ತು ಧಾರ್ಮಿಕ ಆಚರಣೆಗಳಿಗೆ ಸಹೃದಯದಿಂದ ಸಹಾಯ ಮಾಡಿರುತ್ತಾರೆ.

**ದಿ॥ ಎಸ್. ಶ್ರೀಕಂಠೇಶ್ವರ ಐಯ್ಯರ್:** ಶ್ರೀಯುತರು ಒಬ್ಬ ವ್ಯಕ್ತಿ ಅಲ್ಲದೆ ಒಂದು ಸಂಸ್ಥೆ ಆಗಿದ್ದರು. ಸಂತ ಜೀವನ, ಹೃದಯ ಶ್ರೀಮಂತಿಕೆ, ಸೌಜನ್ಯ, ಸಚ್ಚಾರಿತ್ರ್ಯದಿಂದ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಗಳಿಸಿದ್ದರು. ಬೆಂಗಳೂರಿನಲ್ಲೇ ಪ್ರಪ್ರಥಮ ವಾಣಿಜ್ಯ ಶಾಲೆಯಾಗಿ 'ವಾಣಿ ವಾಣಿಜ್ಯ ವಿದ್ಯಾಶಾಲೆ'ಯನ್ನು ಪ್ರಾರಂಭಿಸಿದರು. ಅಲ್ಲಿ ಇಂಗ್ಲೀಷ್, ಕನ್ನಡ ಟೈಪಿಂಗ್ ಮತ್ತು ಶೀಘ್ರಲಿಪಿ ಹೇಳಿಕೊಡಲಾಗುತ್ತಿತ್ತು. ಮುಂದೆ ಇದು ಬಹು ದೊಡ್ಡ ಮಟ್ಟಕ್ಕೆ ಬೆಳೆಯಿತು. ಶೃಂಗೇರಿ ಜಗದ್ಗುರುಗಳು, ಮೈಸೂರು ಮಹಾರಾಜರು, ಕರ್ನಾಟಕ ಸರ್ಕಾರದ ರಾಜ್ಯಪಾಲರು, ಮುಖ್ಯಮಂತ್ರಿಗಳು ಅಲ್ಲಿಗೆ ಭೇಟಿ ನೀಡಿ, ಶುಭ ಹಾರೈಸಿದ್ದರು. 50 ವರ್ಷಗಳ ಕಾಲ ಯಶಸ್ವಿಯಾಗಿ ಶಾಲೆ ನಡೆಸಿದ್ದಾರೆ. ವಾಣಿಜ್ಯ ವಿದ್ಯಾ ಸೇವಾನಿರತ ಬಿರುದನ್ನು ಪಡೆದವರಾಗಿದ್ದಾರೆ. ಇದಲ್ಲದೆ, ದೇವಾಲಯ, ಸೊಸೈಟಿಗಳಿಗೆ, ಬೃಹಚ್ಚರಣ ಸಂಘಕ್ಕೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

**ದಿ॥ ಹೆಚ್. ಕೃಷ್ಣಸ್ವಾಮಿ:** ವಾಣಿಜ್ಯ, ಕಾನೂನು ವ್ಯಾಸಂಗ ಮಾಡಿ ಭಾರತೀಯ ಜೀವವಿಮಾ ನಿಗಮದ ಅಧಿಕಾರಿಯಾಗಿ ಅಖಿಲ ಭಾರತ ಪ್ರಾಂತೀಯ ಮತ್ತು ವಿಭಾಗೀಯ ಹಂತಗಳಲ್ಲಿ ಕಾರ್ಯಸಾಧನೆ ಮಾಡಿದ್ದಾರೆ. ಇದಕ್ಕಾಗಿ "ಕೋಟಿಪತಿ", "ಏಜೆಂಟ್ ರತ್ನ" ಎಂಬ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಬೃಹಚ್ಚರಣ ಸಂಘದ ಸ್ಥಾಪಕ ಸದಸ್ಯರೂ, ಪೋಷಕರೂ, ಉಪಾಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದವರು.

**ದಿ॥ ನಾಗವಾರಪಾಳ್ಯ ಶ್ರೀಕಂಠಯ್ಯ:** ಶ್ಯಾನುಭೋಗಿಕೆ

ವೃತ್ತಿಯಲ್ಲಿ ನಿರತರಾಗಿದ್ದುದರೊಂದಿಗೆ HAL ಸಂಸ್ಥೆಯ ಲೋಕೋಪಯೋಗಿ ಕಾರ್ಯಗಳಲ್ಲಿ ಪಾಲ್ಗೊಂಡಿದ್ದವರು. ದೇವಸ್ಥಾನ, ಅಶ್ವತ್ಥಕಟ್ಟೆ ನಿರ್ಮಾಣದಂಥ ಅನೇಕ ಸಮಾಜಮುಖಿ ಕೆಲಸಗಳನ್ನು ಸಾಧಿಸಿದರು. ಸರ್ಕಾರಿ ಶಾಲೆ ಸ್ಥಾಪನೆಗೆ ತಮ್ಮದೇ ಜಮೀನನ್ನು ನೀಡಿದ್ದರು. ವಿನೋಬಾ ಭಾವೆಯವರ ಭೂದಾನ ಚಳುವಳಿಗೆ ತಮ್ಮ ಜಮೀನನ್ನು ದಾನಮಾಡಿದ್ದರು. ನಮ್ಮ ಸಮುದಾಯದ ಅಮ್ಮಣ್ಣಮ್ಮ ವಿದ್ಯಾರ್ಥಿ ನಿಲಯದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದರು. ಬೃಹಚ್ಚರಣ ಸಂಘದ ಸಂಸ್ಥಾಪಕ ಸದಸ್ಯರೂ ಆಗಿದ್ದರು.

**ದಿ|| ಡಾ|| ಕೆ.ಎಲ್. ದಾನಪ್ಪ:** ಬೆಂಗಳೂರು ಸ್ಯೆಂಟ್ ಮಾರ್ಥಾಸ್ ಅಸ್ಪತ್ರೆಯ ಮುಖ್ಯಸ್ಥರಾಗಿ ಬಡ ಜನರ ಆರಾಧ್ಯ ದೈವವಾಗಿ 40 ವರ್ಷಗಳ ಕಾಲ ವೈದ್ಯರಾಗಿ ಸುದೀರ್ಘ ಸೇವೆ ಸಲ್ಲಿಸಿ ತಮ್ಮ ಜೀವನ ಸಾರ್ಥಕ ಮಾಡಿಕೊಂಡವರು. ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯ ಪ್ರಾರಂಭಿಸಿ ದೇವತಾ ಕಾರ್ಯಕ್ರಮಗಳು, ಅನ್ನದಾನಾದಿ ಜನ ಸೇವಾ ಕಾರ್ಯಕ್ರಮಗಳನ್ನು ನಡೆಸಿದ್ದವರು.

**ದಿ|| ಎಸ್. ರಾಮೇಶ್ವರಯ್ಯ:** ಕರಣಿಕ ಕುಟುಂಬದಲ್ಲಿ ಜನಿಸಿದರು. ಆಗಿನ ಕಾಲದ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಔಪಚಾರಿಕ ಶಿಕ್ಷಣದ ಜೊತೆಗೆ ಅಸಾಧಾರಣ ವ್ಯವಹಾರ ಕೌಶಲ್ಯ ರೂಢಿಸಿಕೊಂಡರು. ಕರಣೀಕ ವೃತ್ತಿಯ ಜೊತೆಗೆ ಸಮಾಜ ಸೇವೆಯಲ್ಲಿ ಮುಂದಾಳಾಗಿದ್ದರು. ಸರ್ಜಾಪುರದ SVP ಪ್ರೌಢ ಶಾಲೆಯ ಸ್ಥಾಪಕ ಸದಸ್ಯರು, ಶ್ರೀ ಕಲ್ಯಾಣ ಕೋದಂಡ ರಾಮಸ್ವಾಮಿ ದೇವಾಲಯದ ಧರ್ಮದರ್ಶಿಗಳಾಗಿದ್ದರು. ತಾವು ಸ್ಥಾಪಿಸಿದ ಪ್ರೌಢಶಾಲೆಯ ಗ್ರಂಥಾಲಯಕ್ಕೆ ಒಂದು ಲಕ್ಷಕ್ಕೂ ಮೀರಿದ ಪುಸ್ತಕಗಳನ್ನು ದಾನವಾಗಿ ನೀಡಿದ್ದರು. ಅನೇಕ ಸೇವೆ ಸಲ್ಲಿಸಿರುವ ಇವರು ಬೃಹಚ್ಚರಣ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು.

**ದಿ|| ಗುಂಜೂರು ವೆಂಕಟರಮಣಯ್ಯ:** ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರು. ಶ್ರೀ ರಾಮಕೃಷ್ಣ ಪರಮಹಂಸರ ಪರಮ ಭಕ್ತರು. ಬೆಂಗಳೂರಿನ ರಾಮಕೃಷ್ಣ ಆಶ್ರಮ, ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರ, ರಾಮಕೃಷ್ಣ ಕೃಷಿ ಶಾಲೆಗೆ ನೀಡಿರುವ ದಾನ ಚಿರಸ್ಮರಣೀಯ. ಆಂಜನೇಯಸ್ವಾಮಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಪೂಜೆಗಾಗಿ ದತ್ತಿ ಜಮೀನಗಳನ್ನು ಬಿಟ್ಟಿರುತ್ತಾರೆ. ಉಚಿತ ವಿದ್ಯಾರ್ಥಿನಿಲಯ ಸ್ಥಾಪಿಸಿದರು. ದೀನ ದಲಿತ ರೋಗಿಗಳ ಚಿಕಿತ್ಸೆಗಾಗಿ ಮತ್ತು ಶುಶ್ರೂಷೆಗಾಗಿ ತಮ್ಮ ಮನೆಯ ಒಂದು ಭಾಗದಲ್ಲೇ ವೈದ್ಯಾಲಯ ನಡೆಸಲು ವೈದ್ಯರಿಗೆ ಅನುಕೂಲ ಮಾಡಿಕೊಟ್ಟಿದ್ದರು.

**ದಿ|| ಡಾ|| ಸುಬ್ಬರಾಮಯ್ಯ:** ಅಂದಿನ ಇಂಟರ್ ತೇರ್ಗಡೆಯಾದ ನಂತರ ಬೆಂಗಳೂರು ಮೆಡಿಕಲ್ ಸ್ಕೂಲಿನಲ್ಲಿ LMP ಪದವಿ ಪಡೆದರು. ಸರ್ಕಾರದಲ್ಲಿ ಜನಾನುರಾಗಿ ವೈದ್ಯರಾಗಿದ್ದರು. ಹಿಂದಿನ ಮೈಸೂರು ರಾಜ್ಯದ ವೈದ್ಯಕೀಯ ಇಲಾಖೆಯಲ್ಲಿ ಸಹಾಯದ ಸರ್ಜನ್‌ರಾಗಿದ್ದರು. ನಿವೃತ್ತಿ ನಂತರ ಮರಸೂರು, ಮಡಿವಾಳ, ಬಿನ್ನಮಂಗಲ ಭಾಗಗಳಲ್ಲಿ ವ್ಯವಸಾಯ ವೃತ್ತಿ ಅಳವಡಿಸಿಕೊಂಡಿದ್ದರು. ಗಾಂಧಿವಾದಿ, ಶ್ರಮಜೀವಿ. ಸಮುದಾಯದ ಮೊದಲನೇ LMP ವೈದ್ಯರೆಂಬ ಹೆಗ್ಗಳಿಕೆ.

**ದಿ|| ಜಕ್ಕೂರು ವೆಂಕಟಗಿರಿಯಪ್ಪ:** ಜಕ್ಕೂರು ಶಾಮಣ್ಣರೆಂದೇ ಪರಿಚಿತರು. ಕರ್ನಾಟಕ ಸಂಗೀತ ಮತ್ತು ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶಿಸ್ತಿನ ಜೀವನ, ಸಾಮಾಜಿಕ ಕಳಕಳಿ ಹೊಂದಿದ್ದರು. "ಆನಂದರಾಮ" ಎಂಬ ಕಾವ್ಯನಾಮದಲ್ಲಿ ದೇವರನಾಮ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. 50 ದೇವರನಾಮಗಳ ಸಂಕಲನವನ್ನು "ಆನಂದ ಗೀತಾವಳಿ" ಎಂಬ ಶೀರ್ಷಿಕೆಯಡಿ ರಚಿಸಿದ್ದಾರೆ.

**ದಿ|| ರಾಜಾಪುರ ಶಿರಸ್ತೇದಾರ್ ಕೃಷ್ಣಮೂರ್ತಿ:** ಇಂಟರ್ ಮೀಡಿಯೇಟ್ ನಂತರ ಲೋಕಲ್ ರೆವಿನ್ಯೂ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆನೇಕಲ್ಲಿನಲ್ಲಿ ಶಿರಸ್ತೇದಾರ್ ಆಗಿ ವೃತ್ತಿ ಜೀವನ ಆರಂಭ. ನಂತರ ಬೆಂಗಳೂರು, ಯಲಹಂಕ, ಯಶವಂತಪುರ, ನೆಲಮಂಗಲ, ಹೊಸಕೋಟೆ ವಿಭಾಗದಲ್ಲಿ ಸೇವೆ ಸಲ್ಲಿಸಿದರು. ರೆವಿನ್ಯೂ ಅಧಿಕಾರಿಯಾಗಿದ್ದು, ನಿವೃತ್ತಿ ನಂತರ ಸಿಂಗಸಂದ್ರದ ಶ್ಯಾನುಭೋಗರಾಗಿದ್ದರು. ಜೀವವಿಮಾ ಸಂಸ್ಥೆಯಲ್ಲೂ ಸಹ ಸೇವೆ ಸಲ್ಲಿಸಿದರು. ಶ್ರೀಯುತರು ಹವ್ಯಾಸಿ ಫುಟ್‌ಬಾಲ್ ಆಟಗಾರರಾಗಿದ್ದರು. ಕಿತ್ತಿಗಾನಹಳ್ಳಿ ನಾಗಾರಾಧನೆಗೆ ಬರುವ ಭಕ್ತಾದಿಗಳಿಗೆ ಪ್ರಸಾದ ರೂಪವಾಗಿ ಪಾನಕ, ಕೋಸಂಬರಿ ಸೇವೆಯ ಪ್ರಾಯೋಜಕರಾಗಿದ್ದರು. ಅವರ ಪರಿವಾರದವರು ಇಂದಿಗೂ ಆ ಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

**ದಿ|| ರಾಮಾಯಣದ ರಾಮಚಂದ್ರರಾಯರು:** ವಿದ್ಯಾವಂತರು ಮತ್ತು ಬಹುಭಾಷಾ ಪಂಡಿತರು. ಕಿತ್ತಿಗಾನಹಳ್ಳಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಸಂಗೀತ, ಸಾಹಿತ್ಯಗಳಲ್ಲಿ ಆಸಕ್ತಿ ಹೊಂದಿದವರಾಗಿ ರಾಮಾಯಣ ಪಾರಾಯಣ ಮಾಡುವುದರಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಅದರ ಫಲವಾಗಿ ಇವರಿಂದ ರಚಿತವಾದ "ವಾಲ್ಮೀಕಿ ಹೃದಯ" ಗ್ರಂಥವನ್ನು ಇವರ ಆತ್ಮೀಯ ಗೆಳೆಯ ಹೆಸರಾಂತ ಸಾಹಿತಿ ಸುಬೋಧ ರಾಮರಾಯರು ಮುದ್ರಿಸಿ ಪ್ರಕಟಿಸಿ ಲೋಕಾರ್ಪಣೆ ಮಾಡಿದರು. ಶ್ರೀಯುತ ರಾಮಚಂದ್ರರಾಯರು ಚೆನ್ನಪಟ್ಟಣ ಹಾಗೂ ಬೆಂಗಳೂರಿನ ಕಂದಾಯ ಇಲಾಖೆಯ ತಹಸೀಲ್ದಾರ್ ಕಛೇರಿಯಲ್ಲಿ ಸೇವೆ ಸಲ್ಲಿಸಿದ್ದರು.

**ದಿ|| ಆರ್. ವೆಂಕಟಸುಬ್ಬಯ್ಯ:** ಪ್ರಾರಂಭದಲ್ಲಿ ಶಿಕ್ಷಣ ಆನೇಕಲ್‌ನಲ್ಲಿ. ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನಲ್ಲಿ ನಂತರ ತಿರುಚಿನಾಪಳ್ಳಿಯಲ್ಲಿ ಬಿ.ಎ. ಓದು ಮುಂದುವರಿಸಿ ಮೊದಲ ದರ್ಜೆಯಲ್ಲಿ ಬಿ.ಎ. ಪದವಿ ಗಳಿಸಿದರು. ಅವರ ತಂದೆ

ತಿಮ್ಮಪ್ಪಯ್ಯನವರಿಗೆ ಆಗಿದ್ದ ಆರ್ಥಿಕ ಸ್ಥಿತಿಯಲ್ಲೂ ಬುದ್ಧಿವಂತ ಮಗನನ್ನು ಹೆಚ್ಚು ಓದಿಸಬೇಕೆಂದು ಬಯಕೆ ಇತ್ತು. ಮುಂಬಯಿಯ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಪ್ರವೇಶ ದೊರಕಿತು. ಉನ್ನತ ಶ್ರೇಣಿಯಲ್ಲಿ ಬಿ.ಎಲ್. ಪದವಿ ಗಳಿಸಿದ ನಂತರ ಬೆಂಗಳೂರಿನ ಬಳೇಪೇಟೆಯಲ್ಲಿ ತಮ್ಮ ವಕೀಲಿ ಕಛೇರಿ ತೆರೆದರು. ಆಗ ಕಾಲೇಜಿನಲ್ಲಿ ಮಹಮದ್ ಆಲಿ ಜಿನ್ನಾ ಪ್ರಾಧ್ಯಾಪಕರಾಗಿದ್ದರು. ಆಗಿನ ಕಾಲದ ಅಂದರೆ ಈಗ್ಗೆ 100 ವರ್ಷಗಳ ಹಿಂದೆ ಬ್ರಿಟಿಷ್ ಪದ್ದತಿಯ ಶಿಕ್ಷಣ ಕ್ರಮದಲ್ಲಿ ಅಭ್ಯಾಸ ಮಾಡಿದ ಶ್ರೀಯುತರು ಹಲವಾರು ಭಾಷೆಗಳ ಮೇಲೆ ಹಿಡಿತ, ಸಂಗೀತ ಜ್ಞಾನಗಳ ಜೊತೆಗೆ ಹಾಸ್ಯಮಯ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು.

**ದಿ॥ ಸಣ್ಣೆ ಸೂರಪ್ಪ:** ಮೆಟ್ರಿಕುಲೇಶನ್ ಮುಗಿಸಿದ ನಂತರ ವಿದ್ಯಾರ್ಥಿ ದೆಸೆಯಲ್ಲೇ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ 19ನೇ ವಯಸ್ಸಿನಲ್ಲಿಯೇ ಖಾಸಗಿ ಕಂಪನಿಯಲ್ಲಿ ಉದ್ಯೋಗ ಪ್ರಾರಂಭಿಸಿದವರು. ಕರ್ನಾಟಕದ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಬೃಹಚ್ಚರಣ ಬಂಧುಗಳನ್ನೆಲ್ಲಾ ಸದಸ್ಯರನ್ನಾಗಿಸಿ ಒಗ್ಗೂಡಿಸುವ ಪ್ರಯತ್ನ ಮಾಡಿದರು. ತಮ್ಮ ಸೋದರಮಾವ ಮತ್ತು ಮಾವನವರ ಜೊತೆ ಸೇರಿ ಬೃಹಚ್ಚರಣ ಸಂಘ ಕಟ್ಟಿ ಬೆಳೆಸಿದರು.

**ದಿ॥ ಸರ್ಜಾಪುರ ಲಕ್ಷ್ಮಣರಾವ್:** ಶ್ರೀಯುತರು B.Sc., M.Sc. ಎರಡರಲ್ಲೂ ಮೊದಲನೇ RANK ಗಳಿಸಿದವರು. Ph.D ಪದವೀಧರರಾಗಿದ್ದರು. ಬಿ.ಎಂ.ಎಸ್. ಇಂಜನೀಯರಿಂಗ್ ಕಾಲೇಜ್‌ನಲ್ಲಿ ಅಧ್ಯಾಪಕರಾಗಿ, IIScನಲ್ಲಿ ಸಹಾಯಕ ಸಂಶೋಧಕರಾಗಿ, ಅಲ್ಲಿಯೇ ಗಣಿತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ವಾರಂಗಲ್‌ನ ರೀಜನಲ್ ಇಂಜನೀಯರಿಂಗ್ ಕಾಲೇಜ್‌ನಲ್ಲಿ ಸಹಾಯಕ ಉಪನ್ಯಾಸಕ ಮತ್ತು ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದವರು. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಾಗಿದ್ದರು. ಇವರ ಮಾರ್ಗದರ್ಶನದಲ್ಲಿ 40ಕ್ಕೂ ಅಧಿಕ ವಿದ್ಯಾರ್ಥಿಗಳು Ph.D. ಪಡೆದಿದ್ದಾರೆ. ಗಣಿತಕ್ಕೆ ಸಂಬಂಧಿಸಿದ 74 ಸಂಶೋಧನಾ ವಿಷಯಗಳು ದೇಶೀ ಮತ್ತು ವಿದೇಶೀ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿದೆ. ಎಲೆ ಮರೆಯ ಕಾಯಿಯಂತೆ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯುತರು ಭಾರತ–ಚೀನಾ ದೇಶದ ಯುದ್ಧದ ಸಮಯದಲ್ಲಿ ತಮಗೆ ದೊರಕಿದ ಚಿನ್ನದ ಪದಕವನ್ನು ದೇಶದ ರಕ್ಷಣಾ ನಿಧಿಗಾಗಿ ಸಮರ್ಪಿಸಿದರು. ದಾರ್ಶನಿಕ ಡಿ.ವಿ.ಜಿ.ಯವರ ಮೆಚ್ಚಿನ ಶಿಷ್ಯರಾಗಿ ಅವರಲ್ಲಿ ವೇದ, ಉಪನಿಷತ್ ಅಭ್ಯಸಿಸಿದ್ದಾರೆ.

**ದಿ॥ ಎಸ್. ವೆಂಕಟಾಚಲಯ್ಯ:** ವಿದ್ಯಾಭ್ಯಾಸದ ನಂತರ 1982ರಲ್ಲಿ ತಮ್ಮ ಸ್ವಂತ ಉದ್ಯೋಗದ ಎಸ್.ವಿ. ಸ್ಟೇಷನರೀಸ್ ಸ್ಥಾಪನೆ. ಕಟ್ಟುನಿಟ್ಟಾದ ವ್ಯಕ್ತಿತ್ವ, ಆಹಾರ, ಉಡುಗೆ ತೊಡುಗೆಗಳಲ್ಲಿ ಶಿಸ್ತು, ಗಂಭೀರ ಸ್ವಭಾವ ಎನಿಸಿದರೂ ಹೃದಯ ಶ್ರೀಮಂತಿಕೆಯ ವ್ಯಕ್ತಿ. ಬೃಹಚ್ಚರಣ ಸಂಘದ ಒಗ್ಗೂಡಿಕೆ, ಕೆಲಸ–ಕಾರ್ಯ, ಅಭಿವೃದ್ಧಿಗೆ ಅಪಾರ ಕೊಡುಗೆ.

**ದಿ॥ ಮಟ್ಟನಹಳ್ಳಿ ಶ್ರೀನಿವಾಸಯ್ಯ:** ಬಾಲ್ಯದಿಂದಲೂ ಶಿಕ್ಷಣದಲ್ಲಿ ಮುಂದು. ಬಿ.ಎ. ಪದವಿಯ ನಂತರ (1918)ರಲ್ಲಿ ಟಾಟಾ ವಿಜ್ಞಾನ ಮಂದಿರದಲ್ಲಿ ಶಿಷ್ಯ ವೃತ್ತಿಗೆ ಆಯ್ಕೆಯಾದ ಕರ್ನಾಟಕದ ಏಕೈಕ ವ್ಯಕ್ತಿ. ಶ್ರೀಯುತರು ಜೀವ ರಸಾಯನಶಾಸ್ತ್ರ ಅಭ್ಯಸಿಸಿ ತಮ್ಮ ವೃತ್ತಿ ಜೀವನವನ್ನು ಭಾರತೀಯ ವಿಜ್ಞಾನ ಮಂದಿರದಲ್ಲಿ ಪ್ರಾರಂಭಿಸಿದರು. ಉತ್ತಮ ಸಂಶೋಧನೆಗಳ ಆಧಾರದ ಮೇಲೆ ಇಂಗ್ಲೇಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಆಹ್ವಾನ ಒದಗಿತು. ಹಲವಾರು ಯೂರೋಪಿಯನ್ ದೇಶಗಳಲ್ಲಿ ತಮ್ಮ ಸಂಶೋಧನೆ ನಡೆಸಿದರು. ತಮ್ಮ ಸಂಶೋಧನೆ, ಪ್ರಯೋಗಗಳಿಗೆ ಅವಶ್ಯಕವಾದ ಉಪಕರಣಗಳನ್ನು ತಾವೇ ತಯಾರಿಸಿ ಕೊಳ್ಳುತ್ತಿದ್ದರು. ಭಾರತದಲ್ಲೂ ವಿಶೇಷ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ವಿಜ್ಞಾನ ವಿದ್ಯಾರ್ಥಿಗಳಿಗೆ Ph.D. ಮಾರ್ಗದರ್ಶಕರಾಗಿದ್ದರು.

**ದಿ॥ ನಾರಾಯಣಸ್ವಾಮಿ:** ಸಂಘದ ಸ್ಥಾಪಕ ಸದಸ್ಯ ಮತ್ತು ಪ್ರಥಮ ಲೆಕ್ಕಪರಿಶೋಧಕರು. ಕರ್ನಾಟಕ ಸರ್ಕಾರದ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದರು. ತಮ್ಮ ಬಳಿಯಿದ್ದ ಸಾವಿರಾರು ವಾಣಿಜ್ಯ ಪುಸ್ತಕಗಳನ್ನು ಉಚಿತವಾಗಿ ವಾಚನಾಲಯಗಳಿಗೆ ನೀಡಿದ್ದಾರೆ. ಯುವ ಬರಹಗಾರರಿಗೆ ಉತ್ತೇಜಿಸಿ ಅರ್ಹರಿಗೆ ಧನಸಹಾಯ ಮಾಡಿರುತ್ತಾರೆ. ಹವ್ಯಾಸವಾಗಿ ಸಣ್ಣ ಕಥೆ, ಚುಟುಕ ಹಾಗೂ ವ್ಯಂಗ್ಯ ಚಿತ್ರಗಳನ್ನು ರಚಿಸುತ್ತಿದ್ದರು. ತಮ್ಮ ಚುಟುಕಗಳ ಸಂಕಲವೊಂದನ್ನು ಲೋಕಾರ್ಪಣೆ ಮಾಡಿದ್ದಾರೆ.

**ದಿ॥ ಎಸ್. ಸಂಪಂಗಿರಾಮಯ್ಯ:** ಚಿಕ್ಕಂದಿನಲ್ಲೇ ಸಂಸಾರ ನಿರ್ವಹಣೆ ಜವಾಬ್ದಾರಿ. ಶಾಲಾ ಜೀವನದಲ್ಲಿ ಎಲ್ಲಾ ಪಠ್ಯ ವಿಷಯಗಳಲ್ಲೂ ಪ್ರಥಮ ದರ್ಜೆ. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ, B.Sc., M.Sc. ನಲ್ಲಿ ಉತ್ತಮ ಶ್ರೇಣಿ ಪದವಿ ನಂತರ ಅಲ್ಲೇ ಅಧ್ಯಾಪಕ ವೃತ್ತಿ ನಡೆಸಿದರು. ಮಂಡ್ಯ, ಧಾರವಾಡ, ದಾವಣಗೆರೆಗಳ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ನಿವೃತ್ತಿ ನಂತರ ವೈಟ್‌ಫೀಲ್ಡ್ ಖಾಸಗಿ ಕಾಲೇಜು, PES ಕಾಲೇಜ್‌ನಲ್ಲಿ ಉಪನ್ಯಾಸ ಮಾಡುತ್ತಿದ್ದರು. ಶಿಸ್ತು, ವೃತ್ತಿಪರತೆಗೆ, ಜನಪ್ರಿಯತೆ ಪಡೆದರು. ಸದಾ ಅಭ್ಯಾಸ ನಿರತರಾಗಿದ್ದವರು.

**ದಿ॥ ಡಾ॥ ಜಿ.ಎಸ್. ವೇಣುಗೋಪಾಲ್:** ಕರ್ನಾಟಕ ವಿಶ್ವವಿದ್ಯಾಲಯದಿಂದ B.Sc. 4ನೇRANK. ಶಿಲೆ ಮತ್ತು ಖನಿಜ ವಿಭಾಗದಲ್ಲಿ M.Sc. ಪದವಿಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದರು. ಭಾರತೀಯ ವಿಜ್ಞಾನ ಸಂಸ್ಥೆಯಿಂದ ಸ್ನಾತಕೊತ್ತರ ಪದವಿಯನ್ನು ಪಡೆದರು. ದೇಶ, ವಿದೇಶಗಳ ವಿದ್ಯಾಲಯಗಳಿಂದ ವಿದ್ಯಾರ್ಥಿ ವೇತನ ಪಡೆದ ಹೆಗ್ಗಳಿಕೆ ಇವರಿಗಿದ್ದಿತು. ಹಲವಾರು ವಿದ್ಯಾ ಕ್ಷೇತ್ರಗಳಲ್ಲಿ, ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ

ಸಲ್ಲಿಸಿದರು. ಪ್ರಸಿದ್ಧ ವಿದ್ಯಾ ಸಂಸ್ಥೆಗಳಲ್ಲಿ ಸಂಶೋಧಕ, ಅತಿಥಿ ಉಪನ್ಯಾಸಕ, ಅಧ್ಯಾಪಕ, ಅರ್ಹತಾ ಸಂಶೋಧಕರಾಗಿ ಸೇವೆ ಸಲ್ಲಿಸಿದರು. ಸ್ನಾತಕೋತ್ತರ, ಡಾಕ್ಟರೇಟ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಶ್ರೀಯುತರು ದಶಕಗಳ ಹಿಂದೆ ವಿಂಗ್ ಕಮಾಂಡರ್ ರಾಕೇಶ್ ಶರ್ಮ ಅವರ ಬಾಹ್ಯಾಕಾಶ ಯಾನದ ಸಮಯದಲ್ಲಿ ಅವಶ್ಯಕವಾಗಿದ್ದ ವಿಶೇಷ ಆಹಾರವನ್ನು ವೈಜ್ಞಾನಿಕವಾಗಿ ರೂಪಿಸಿದವರು.

**ದಿ|| ಎಸ್.ಎನ್. ಸುಬ್ಬರಾವ್:** ಎಲ್.ಎಲ್.ಬಿ. ಪದವೀಧರರು. ವಿಶ್ವಶಾಂತಿ ಸಹೃದಯ ಭಾತೃತ್ವಗಳ ಧ್ಯೇಯವನ್ನಿಟ್ಟುಕೊಂಡು, "ಸರ್ವೋದಯ" ಚಳುವಳಿಯ ಪ್ರವರ್ತಕ ಜಯಪ್ರಕಾಶ್ ನಾರಾಯಣ್ ಅವರ ನೇತೃತ್ವದಲ್ಲಿ ಚಂಬಲ್ ಕಣಿವೆಯ ಭಯಾನಕ ಡಕಾಯಿತರನ್ನು ಮುಖ್ಯ ವಾಹಿನಿಗೆ ತರುವಲ್ಲಿ ಶ್ರಮಿಸಿದ ಗಾಂಧೀವಾದಿ. ರಾಷ್ಟ್ರೀಯ ಯುವಚೇತನ ಪುರಸ್ಕಾರ, ಡಾಕ್ಟರೇಟ್ ಪದವಿ, ಸದ್ಭಾವನ ಪುರಸ್ಕಾರ, ಬಜಾಜ್ ಪುರಸ್ಕಾರ, ಮಹಾತ್ಮಗಾಂಧಿ ಪುರಸ್ಕಾರ, ಅಲ್ಲದೇ ಮಾಜಿ ರಾಷ್ಟ್ರಪತಿ APJ ಅಬ್ದುಲ್ ಕಲಾಂ ಅವರಿಂದ ಅನುವೃತ್ ಪುರಸ್ಕಾರವನ್ನು ಪಡೆದಿರುತ್ತಾರೆ. ರಾಷ್ಟ್ರೀಯ ಸೇವಾದಳ ಸೇರಿ ಒಳ್ಳೆಯ ಹೆಸರು ಪಡೆದರು. ಸತ್ಯ, ಶಿಸ್ತಿನ ಸರಳ ಜೀವನ, ದೇಶಭಕ್ತಿ, ದೈವಭಕ್ತಿ, ಗಾಯನವನ್ನು ರೂಢಿಸಿಕೊಂಡಿದ್ದರು. ಹಲವಾರು ದೇಶೀಯ ಮುಖ್ಯಸ್ಥರ ಸಮೀಪವರ್ತಿಯಾಗಿದ್ದರು. ರಾಜ್ಯಸಭಾ ಸದಸ್ಯರಾಗಿದ್ದಾಗಲೂ ಖಾಕಿ ಚಡ್ಡಿ, ಖಾದಿ ಶರ್ಟ್ ಸರಳ ಉಡುಪು ಧರಿಸಿ ಭಾಗವಹಿಸುತ್ತಿದ್ದರು.

**ದಿ|| ಬಿ.ಎಸ್. ಪದ್ಮನಾಭ:** ಬಿ.ಕಾಂ, ಎಂ.ಕಾಂ, ಬಿ.ಎಡ್ ಪದವೀಧರರು. ಬೆಂಗಳೂರು ಹೈಸ್ಕೂಲ್‌ನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ "ಬೆಸ್ಟ್ ಎನ್.ಸಿ.ಸಿ. ಆಫೀಸರ್" ಎನಿಸಿದ್ದರು. ಆಚಾರ್ಯ ಪಾಠಶಾಲೆ ಸಂಜೆ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ಉಪಾಧ್ಯಾಯರಾಗಿ, ಅಲ್ಲೇ ಪ್ರಾಂಶುಪಾಲರಾದರು. ನಿವೃತ್ತಿ ನಂತರ ವಾಸವಿ ವಿದ್ಯಾ ನಿಕೇತನ ಸಂಸ್ಥೆ ಸೇರಿ ಪ್ರಾಂಶುಪಾಲರಾಗಿ, ನಿರ್ದೇಶಕರಾಗಿ, ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕಾಲೇಜು ಅಲ್ಲದೆ ಉಚಿತವಾಗಿ ಖಾಸಗಿ ಪಾಠಗಳನ್ನೂ ಹಲವಾರು ವರ್ಷ ನಡೆಸಿಕೊಟ್ಟಿದ್ದಾರೆ. ಶಿಸ್ತುಬದ್ಧ, ಜೀವನ ಶೈಲಿ, ವಿದ್ಯಾರ್ಥಿಗಳೊಂದಿಗೆ ಒಡನಾಟ, ಆತ್ಮವಿಶ್ವಾಸ, ಸೇವಾ ಮನೋಭಾವ, ಹುರುಪು, ಕ್ರೀಡಾಸಕ್ತಿ, ಬೋಧನಾಶೈಲಿಗೆ ಪ್ರಸಿದ್ಧರಾಗಿದ್ದರು. ಕೆಂಪೇಗೌಡ ಪ್ರಶಸ್ತಿ, ಗೌರವ ಶಿಕ್ಷಕರೆಂದು ಗೌರವಿತರಾಗಿದ್ದಾರೆ. ಬೃಹಚ್ಚರಣ ಸಂಘದ ಹಿಂದಿನ ಪದಾಧಿಕಾರಿಯೂ ಆಗಿದ್ದರು.

**ದಿ|| ಡಾ|| ಬಿ.ಜಿ.ಎಲ್. ಸ್ವಾಮಿ:** ಸಸ್ಯಶಾಸ್ತ್ರಜ್ಞ, ಇತಿಹಾಸಕಾರ, ಬರಹಗಾರ, ಸಂಗೀತಾಸಕ್ತಿ ಮತ್ತು ಇನ್ನೂ ಮುಂತಾದವು ಇವರ ಆಸಕ್ತಿ ಕ್ಷೇತ್ರಗಳು. ನ್ಯಾಷನಲ್ ಹೈಸ್ಕೂಲ್ ನಂತರ ಸೆಂಟ್ರಲ್ ಕಾಲೇಜಿನಿಂದ ಸಸ್ಯಶಾಸ್ತ್ರ ಪದವಿ, ಮೈಸೂರು ವಿಶ್ವವಿದ್ಯಾಲಯ ದಿಂದ ಸ್ನಾತಕೋತ್ತರ, ಡಾಕ್ಟರೇಟ್ ಪದವಿಯನ್ನೂ ಪಡೆದರು. ಇವರಿಗೆ 23 ಭಾಷೆಗಳು ತಿಳಿದಿದ್ದವು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಭಾರತ ಸರ್ಕಾರದಿಂದ ಚಿನ್ನದ ಪದಕ ಪಡೆದರು. ಬರವಣಿಗೆ, ಸಾಹಿತ್ಯ ಅಭಿರುಚಿ ಇದ್ದುದರಿಂದ ಸಸ್ಯಶಾಸ್ತ್ರದಲ್ಲಿ ಬಹಳ ಪುಸ್ತಕಗಳನ್ನು ಅಲ್ಲದೇ ಕೆಲವು ವಿದ್ಯಾ ಕ್ಷೇತ್ರದ ವಿಚಾರ ತುಂಬಿದ ಕಾದಂಬರಿಗಳನ್ನು ಬರೆದರು. ಹಸಿರು ಹೊನ್ನು ಪುಸ್ತಕಕ್ಕೆ ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದರು.

**ದಿ|| ಆರ್. ಶಂಕರನಾರಾಯಣ್:** ಎಂ.ಎ. ಪದವಿಧರರು. ITI ಕಾರ್ಖಾನೆಯಲ್ಲಿ ಉದ್ಯೋಗ. ಅಲ್ಲೇ ಜನ ಸಂಪರ್ಕಾಧಿಕಾರಿ ಯಾಗಿ ಬಡ್ತಿ ಪಡೆದರು. ದೂರವಾಣಿ ಮಾಸ ಪತ್ರಿಕೆಯ ಸಂಪಾದಕರಾಗಿದ್ದರು. ಕಾವ್ಯಗಳ ಹಾಡುಗಾರಿಕೆ, ಗಮಕ ಕಲೆಯಲ್ಲಿ ತೊಡಗಿಸಿಕೊಂಡರು. ತಮ್ಮ ನಿವಾಸದಲ್ಲೇ "ಕಾವ್ಯ ಪ್ರಚಾರ ಮಂಡಳಿ" ಎಂಬ ಗಮಕ ಸಂಸ್ಥೆ ಪ್ರಾರಂಭಿಸಿದರು. ಹಲವಾರು ಶಿಷ್ಯರನ್ನು ತಯಾರು ಮಾಡಿದರು. ಕನ್ನಡ ಸಂಸ್ಕೃತಿ ಇಲಾಖೆಯೊಂದಿಗೆ ಅನ್ಯ ಭಾಷಿಕರು ಕನ್ನಡ ಕಲಿತು ಮಾತನಾಡುವಂತೆ ಮಾಡಿದ ಹೆಗ್ಗಳಿಕೆ ಇವರದ್ದು. ಹಲವಾರು ಪುಸ್ತಕಗಳನ್ನು ಹೊರತಂದಿದ್ದಾರೆ. ಇವರಿಗೆ ವಾರ್ಧಕ ಷಟ್ಪದಿ ಕರಗತವಾಗಿತ್ತು. ಪುಸ್ತಕದ ದಾನ ಮಹಾದಾನ ಎಂದು ನಂಬಿದ್ದ ಇವರು ತಮ್ಮ ಖರ್ಚಿನಲ್ಲೇ ಪುಸ್ತಕಗಳನ್ನು ಪ್ರಕಟಿಸಿ ಗಮಕಿಗಳಿಗೆ ಹಾಗೂ ಆಸಕ್ತರಿಗೆ ಉಚಿತವಾಗಿ ಹಂಚಿರುತ್ತಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಇವರಿಗೆ "ಕರ್ನಾಟಕ ಕಲಾಶ್ರೀ" ಬಿರುದನ್ನಿತ್ತು ಗೌರವಿಸಿದೆ.

**ದಿ|| ಆರ್.ಎಸ್. ರಾಜಗೋಪಾಲ್:** ಬಸವನಗುಡಿಯ ಆಚಾರ್ಯ ಪಾಠಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಉತ್ತಮ ಶಿಕ್ಷಕ, ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ. ನಿವೃತ್ತಿ ನಂತರ ಕೋರಿಕೆ ಮೇಲೆ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪಾಠ ಮಾಡುತ್ತಿದ್ದರು. ಗಣಿತ ಶಾಸ್ತ್ರದ ಬಗ್ಗೆ 18 ಪುಸ್ತಕ, ಸಾಹಿತ್ಯದ ಬಗ್ಗೆ 8 ಪುಸ್ತಕ ಬರೆದು ಪ್ರಕಟಿಸಿದ್ದಾರೆ.

**ದಿ|| ಹೆಚ್.ಪಿ. ರಾಮಕೃಷ್ಣ:** ವಕೀಲವೃತ್ತಿ, ಬ್ಯಾಂಕ್ ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ನಾಟಕ, ಚಲನಚಿತ್ರ, ಟಿ.ವಿ. ಧಾರಾವಾಹಿಗಳಲ್ಲಿ ಅಭಿನಯ, ಹಾಸ್ಯ ಪ್ರಹಸನ, ವಿಡಂಬನೆ, ಚುಟುಕಗಳನ್ನು ಸಭೆ ಸಮಾರಂಭಗಳಲ್ಲಿ ಪ್ರಸ್ತುತಪಡಿಸುತ್ತಾ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲುವಂತೆ ಮಾಡುವ ಪ್ರತಿಭೆಯಿದ್ದವರು.

**ದಿ|| ಆರ್.ಜಿ. ವಿಜಯಸಾರಥಿ:** ಬ್ಯಾಂಕಿಂಗ್, ಚಲನಚಿತ್ರ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು. ಕ್ರೀಡೆ ಮತ್ತು ಚಲನಚಿತ್ರ ಬರಹಗಳ ಅಂಕಣಕಾರರಾಗಿದ್ದರು. ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಸಮರ್ಥ ಬರಹಗಾರ ರಾಗಿದ್ದವರು. ಮಾತು, ಬರವಣಿಗೆ ಇವರ ಬಂಡವಾಳ. ರುಚಿಯಾದ ಊಟ–ತಿಂಡಿಗಳನ್ನು ಬಯಸುತ್ತಿದ್ದವರು. ಉತ್ತಮ ರುಚಿ ಮತ್ತು ಅಭಿರುಚಿಗಳನ್ನು ಸಮಾನವಾಗಿ

ಬೆಳೆಸಿಕೊಂಡಿದ್ದವರು.

**ದಿ॥ ಡಾ॥ ಗಾಯತ್ರಿ ರಾಜಾಪುರ್:** ಗೋಟುವಾದ್ಯ ಪ್ರವೀಣೆ, ಸಂಸ್ಕೃತ, ಸಂಗೀತ ಕ್ಷೇತ್ರದಲ್ಲಿ ಚಿಕ್ಕಂದಿನಿಂದ ಆಸಕ್ತಿ ಇದ್ದವರು. ಹಲವಾರು ಪ್ರಖ್ಯಾತ ವಿದ್ವಾಂಸರಲ್ಲಿ ಅಭ್ಯಾಸ ಮಾಡಿದರು. ದೇಶ ವಿದೇಶಗಳಲ್ಲಿ ಕಲಿತು, ಕರ್ನಾಟಕ ಜಾನಪದ ಸಂಗೀತ ಸಾಹಿತ್ಯದಲ್ಲಿ ಸಂಶೋಧನೆಗಾಗಿ ಡಾಕ್ಟರೇಟ್ ಪದವಿ ಪಡೆದರು.

**ದಿ॥ ದೇಶ ಕುಲಕರ್ಣಿ ರಾಮರಾಯರು:** ರಾಮರಾಯರ ಪೂರ್ವಜರು ಕ್ಷಾಮದ ಕಾಲದಲ್ಲಿ ಗ್ರಾಮಸ್ಥರಿಗೆ ಅವಶ್ಯಕವಾದ ದವಸ, ಧಾನ್ಯವನ್ನು ದಾನವಾಗಿ ನೀಡಿದ್ದುದರಿಂದ ಮೈಸೂರು ಮಹಾರಾಜರು "ದೇಶ ಕುಲಕರ್ಣಿ" ಎಂಬ ಗೌರವ ಬಿರುದು ನೀಡಿ, ಇದನ್ನು ಇವರ ಮುಂದಿನ ಪೀಳಿಗೆಯವರು ತಮ್ಮ ನಾಮಧೇಯದೊಂದಿಗೆ ಸೇರಿಸಿಕೊಳ್ಳಬಹುದು ಎಂದಿದ್ದರು. ವಿದ್ಯಾಭ್ಯಾಸದ ನಂತರ ಪೋಲೀಸ್ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿ ವಿವಿಧ ಹುದ್ದೆಯಲ್ಲಿದ್ದರು. ನಂಜನಗೂಡು, ತುಮಕೂರು, ಮಾಲೂರು ಮುಂತಾದ ಕಡೆಗಳಲ್ಲಿ ಸೇವೆ ಸಲ್ಲಿಸಿದರು.

**ದಿ॥ ಡಾ॥ ಎಸ್.ಕೆ. ವಿಜಯಲಕ್ಷಮ್ಮ:** ಬಾಲ್ಯದ ದಿನಗಳಲ್ಲಿ ಪ್ರಾಥಮಿಕ ಶಾಲೆಗೆ ಹೋಗದೆಯೇ ನೇರವಾಗಿ ಮಾಧ್ಯಮಿಕ ಶಾಲೆಗೆ ಸೇರಿದರೂ ವಿದ್ಯಾಭ್ಯಾಸದಲ್ಲಿ ಸದಾ ಮೊದಲಿಗರಾಗಿ ಇರುತ್ತಿದ್ದರು. ಬಡತನ, ಹೆಣ್ಣು ಮಕ್ಕಳು ಹೆಚ್ಚು ಓದದೇ ಇದ್ದ ದಿನಗಳಲ್ಲೂ ಉನ್ನತ ಶಿಕ್ಷಣ ಪಡೆದರು. ರಾಸಾಯನಿಕ ಶಾಸ್ತ್ರ ಸಂಶೋಧನೆಯನ್ನು ಆಯ್ದುಕೊಂಡರು. ಸೆಂಟ್ರಲ್ ಕಾಲೇಜಿನಲ್ಲಿ B.Sc., M.Sc., ಭಾರತೀಯ ವಿಜ್ಞಾನ ಸಂಸ್ಥೆಯಿಂದ Ph.D. ಪದವಿ ಗಳಿಸಿದರು. ಕೆಲವು ಕಾಲೇಜ್‌ಗಳಲ್ಲಿ ಅಧ್ಯಾಪಕ ವೃತ್ತಿ ಮಾಡಿದರು. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧನಾ ಕಾರ್ಯದ ಜೊತೆಗೆ ಅನೇಕ ವಿದ್ಯಾರ್ಥಿಗಳು ಪಿ.ಹೆಚ್.ಡಿ. ಪಡೆಯಲು ಮಾರ್ಗದರ್ಶಕರಾಗಿದ್ದರು. ಶ್ರೀಲಂಕಾ, ಕೆನಡಾಗಳಿಗೆ ಪ್ರತಿನಿಧಿಯಾಗಿ ತೆರಳಿ ಒಳ್ಳೆಯ ಹೆಸರು ಸಂಪಾದಿಸಿದ್ದರು. ಸ್ವಯಂ ನಿವೃತ್ತಿ ನಂತರ ಎಲೆಕ್ಟ್ರೋ ಕೆಮಿಕಲ್ ಸೊಸೈಟಿ ಜರ್ನಲ್‌ನಿಂದ ಬರುತ್ತಿದ್ದ ಪತ್ರಿಕೆಗೆ ಸಂಪಾದಕರಾಗಿದ್ದರು. ಜೀವನೋತ್ಸಾಹವನ್ನು ಕಳೆದುಕೊಳ್ಳದೆ ಇನ್ನೂ ಹಲವಾರು ವಿಷಯಗಳನ್ನು ಕಲಿತು ಆಸಕ್ತರಿಗೂ ಕಲಿಸುವುದರಲ್ಲಿ ಸಂತೋಷ ಪಡುತ್ತಿದ್ದರು.

**ದಿ॥ ಎಸ್. ವೆಂಕಟರಾಮನ್:** ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. KGFನಲ್ಲಿ ವೃತ್ತಿ ಜೀವನ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂ.ಎ. ಇಂಗ್ಲೀಷ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದರು. B.Edನಲ್ಲಿ ಉತ್ತಮ ಅಂಕ ಪಡೆದು ಮಹಾರಾಜರಿಂದ ಆಶೀರ್ವಾದ ಪಡೆದಿದ್ದರು. ಶಾರ್ಟ್ ಹ್ಯಾಂಡ್ ಮತ್ತು ಟೈಪ್ ರೈಟಿಂಗ್ ಪ್ರೋಫೆಷಿಯನ್ಸಿಯಲ್ಲಿ ತೇರ್ಗಡೆಯಾಗಿದ್ದರು. ಕ್ರೀಡಾ ಪ್ರೇಮಿಯಾಗಿದ್ದರು.

**ದಿ॥ ಸರ್ಜಾಪುರ ವೆಂಕಟಾಚಲಪತಿ:** ಬೆಂಗಳೂರಿನಲ್ಲಿ ಕಲಾ ವಿಭಾಗದಲ್ಲಿ ಪದವಿ ಪಡೆದರು. ಕನ್ನಡ ಸಾಹಿತ್ಯ ಪರಿಷತ್ತಿನ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸಿ ನಂತರ ನಮ್ಮವರೇ ಆದ ಪೂಜ್ಯ ಡಿ.ವಿ.ಜಿ.ಯವರು ಪ್ರಾರಂಭಿಸಿದ ಗೋಖಲೆ ಸಂಸ್ಥೆಗೆ ಸೇರಿದರು. ಡಿ.ವಿ.ಜಿ.ಯವರ ಸಹಾಯಕರಾಗಿ ಅವರ ಉಕ್ತ ಲೇಖನಗಳನ್ನು ಬರೆದುಕೊಳ್ಳುತ್ತಿದ್ದರು. ಹಲವಾರು ಸಾಹಿತಿಗಳ ಸಹವಾಸ ಗಳಿಸಿದ್ದ ಶ್ರೀಯುತರು ಶ್ರೀ ಜಯಚಾಮರಾಜ ಒಡೆಯರ್‌ರವರ ಸಂಸ್ಕೃತದ "ದತ್ತಾತ್ರೇಯ" ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇನ್ನೂ ಹಲವಾರು ಗ್ರಂಥಗಳನ್ನು ಅನುವಾದಿಸಿದ್ದಾರೆ.

**ದಿ॥ ಡಾ॥ ಕೇಘ:** ಇವರ ಪೂರ್ಣ ನಾಮ ಎ.ವಿ. ಕೇಶವಮೂರ್ತಿ, ಎಲ್.ಎಂ.ಪಿ. ವೈದ್ಯಕೀಯ ಪರೀಕ್ಷೆಯಲ್ಲಿ ಪದವಿ ಪಡೆದವರು. ಸಾಹಿತ್ಯ ಆಸಕ್ತಿ ಹೊಂದಿದ್ದ ಇವರ ಇವರದ್ದು. ಲೇಖನಗಳು ಹಾಸ್ಯ, ವಿಡಂಬನೆಗಳಿಂದ ಕೂಡಿದ, ವ್ಯಕ್ತಿ ವಿಶೇಷಕ್ಕೆ ಒತ್ತು ಕೊಡುವಂತಹ ನಗೆ ಬರಹಗಳು ಇವರದ್ದು. ಇವು ಹೆಸರಾಂತ ವೈದ್ಯರಾಗಿದ್ದ ಡಾ॥ ಎಂ.ಶಿವರಾಂ ಅವರ "ಕೊರವಂಜಿ" ಎಂಬ ತಿಳಿ ನಗೆಯ ಮಾಸ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಕೌಟುಂಬಿಕ ಸಮಸ್ಯೆಗಳನ್ನು ಹಾಸ್ಯ ಪ್ರಜ್ಞೆಯಿಂದಲೇ ಬಗೆಹರಿಸಿ ಸಣ್ಣವರ ತಪ್ಪುಗಳನ್ನು ನವಿರಾಗಿ ತಿದ್ದುತ್ತಿದ್ದರು. ಇವರ ನಿಸ್ವಾರ್ಥ ಸೇವಾ ಮನೋಭಾವ, ಸಂತೃಪ್ತ ಜೀವನ, ಮುಗ್ಧತೆಯ ಗುಣಗಳು ಯುವ ವೈದ್ಯರಿಗೆ ಮಾದರಿಯಾಗುವಂತಿದೆ.

**ದಿ॥ ಎಸ್. ಶಿವರಾಂ:** ಗುಬ್ಬಿ ವೀರಣ್ಣನವರ ರಂಗಭೂಮಿ ಪ್ರದರ್ಶನಗಳಿಂದ ಪ್ರಭಾವಿತರಾಗಿ ಚಲನಚಿತ್ರ ನಿರ್ಮಾಣ, ನಟನೆ ಕಡೆಗೆ ಒಲವು ಬೆಳೆಸಿಕೊಂಡರು. ಹಲವಾರು ಕನ್ನಡ ಚಲನಚಿತ್ರಗಳಲ್ಲಿ ನಟಿಸಿರುವ ಇವರು, ನಿರ್ಮಿಸಿರುವ ಚಿತ್ರಗಳು ಹೆಸರುವಾಸಿಯಾಗಿದೆ. ಡಾ॥ ಬಿ. ಸರೋಜಾದೇವಿ ರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ಡಾ॥ ರಾಜ್‌ಕುಮಾರ್ ಜೀವಮಾನ ಸಾಧನೆ ಪ್ರಶಸ್ತಿ ಗಳಿಸಿದ್ದಾರೆ. ಅಯ್ಯಪ್ಪ ಸ್ವಾಮಿ ಭಕ್ತರಿಗೆ "ಗುರುಸ್ವಾಮಿ"ಯಾಗಿ ಮಾರ್ಗದರ್ಶಕರಾಗಿದ್ದರು. ಸಾವಿರಾರು ಪುಸ್ತಕಗಳ ಗ್ರಂಥಾಲಯವನ್ನು ಇವರು ಮಾಡಿದ್ದಾರೆ. ವನ್ಯಜೀವಿ ಛಾಯಾಗ್ರಹಕರೂ ಆಗಿದ್ದರು.

**ದಿ॥ ರಾಮಕ್ಕಮ್ಮ:** ರಾಮಕ್ಕೆ ಎಂದು ಹೆಸರುವಾಸಿಯಾಗಿದ್ದ ದಿ॥ ಹೆಚ್.ಕೆ. ರಮಾಮಣಿಯಮ್ಮನವರು 20ನೇ ವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡರು. ಅದುವರೆವಿಗೂ ಯಾವುದೇ ಶಾಲಾ ಶಿಕ್ಷಣ ಪಡೆದಿರಲಿಲ್ಲದ ಇವರು ನಂತರ ಓದು-ಬರಹಗಳನ್ನು ಕಲಿತರು. ನಂತರ ಕಾಟನ್‌ಪೇಟೆಯ ಶ್ರೀರಾಮ ಮಂದಿರದಲ್ಲಿ ಮಾರುತಿ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿದರು. ಬಂಧು ಬಳಗದವರ ಪ್ರೋತ್ಸಾಹದೊಂದಿಗೆ ಅಲ್ಲಿನ ನೇಕಾರರ ಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಟ್ಟರು. ಶಾಲೆ ಬಳೇಪೇಟೆಗೆ ಸ್ಥಳಾಂತರವಾದಾಗ ಆರ್ಥಿಕವಾಗಿ ಹಿಂದುಳಿದ ವರ್ಗದವರ ಮಕ್ಕಳಿಗೆ ಶಿಕ್ಷಣ ಪಡೆಯಲು ಪ್ರೇರೇಪಿಸಿದರು. ಈ ಶಾಲೆಗೆ ರಾಜ್ಯ ಸರ್ಕಾರದ ಅಂಗೀಕಾರವೂ ಇತ್ತು. ಇವರು ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಭಾಗವಹಿಸಿದ್ದರು. ಈ

ಮಹಿಳೆಯ ಸರಳ ಜೀವನ ಶೈಲಿ, ಸಮಾಜಮುಖಿ ಕಾರ್ಯ, ಜೀವನೋತ್ಸಾಹ, ವಿನಮ್ರತೆ, ಮುಂದಾಳತ್ವ ಇಂದಿಗೂ ಎಲ್ಲರಿಗೆ ಮಾದರಿಯಾಗಿದೆ.

**ದಿ|| ಲಕ್ಷ್ಮಿದೇವಮ್ಮ: "ಅಜ್ಜಿ"** ಎಂಬ ನೆಚ್ಚಿನ ಹೆಸರಿನಿಂದ ಕುಟುಂಬದವರಿಗೆ ಪ್ರಿಯವಾಗಿದ್ದ ವ್ಯಕ್ತಿ. ಚಿಕ್ಕ ವಯಸ್ಸಿನಲ್ಲೇ ಪತಿಯನ್ನು ಕಳೆದುಕೊಂಡು ಅತ್ತೆಯವರ ನೆರವಿನಿಂದ ನರ್ಸಿಂಗ್ ವೃತ್ತಿ ತರಬೇತಿ ಪಡೆದರು. ಸಮುದಾಯದ ಮತ್ತು ಇತರ ಗರ್ಭಿಣಿಯರಿಗೆ ಸುಸೂತ್ರ ಪ್ರಸವವಾಗಲು ಇವರು ನೆರವಾಗಿದ್ದಾರೆ. ಕುಟುಂಬದ ಕಷ್ಟದ ದಿನಗಳಲ್ಲಿ ಸಮಚಿತ್ತ, ಶಿಸ್ತು, ಪರರ ಏಳಿಗೆಗಾಗಿ ಶ್ರಮಪಟ್ಟಿದ್ದ ಜೀವ ತನ್ನ ಮರಣದ ನಂತರವೂ ನೇತ್ರಗಳನ್ನು ಇತರರಿಗೆ ಉಪಯೋಗವಾಗಲೆಂದು ಇಚ್ಛಿಸಿದ್ದು, ಅದು ನೆರವೇರಿತು.

**ದಿ|| ಎಂ.ಎಸ್. ಪ್ರಭಾಕರ್:** ಕಾಮರೂಪಿ ಎನ್ನುವ ಕಾವ್ಯನಾಮದಿಂದ ಪ್ರಸಿದ್ಧಿ. ಪ್ರಭಾಕರ್ ಅವರು ಜೀವಿತದ ಬಹುಕಾಲ ಕಾಮರೂಪ ಎಂದೆನಿಸಿದ ಅಸ್ಸಾಂನಲ್ಲಿ ಇದ್ದಿದ್ದರಿಂದ ಕಾಮರೂಪಿ ಎಂದು ಹೆಸರು. ಬಿ.ಎ. ಆನರ್ಸ್, ಎಂ.ಎ. ಇಂಗ್ಲೀಷ್ ಪದವೀಧರರಾಗಿದ್ದರು. ವೃತ್ತಿಯಲ್ಲಿ ಅಸ್ಸಾಂನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಪತ್ರಕರ್ತರೂ, ಪತ್ರಿಕೆಯ ಸಂಪಾದಕರೂ ಆಗಿದ್ದರು. ಇವರ **"ಕುದುರೆ ಮೊಟ್ಟೆ"** ಎಂಬ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ವಿದೇಶಗಳಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ಜೀವನ ಸಂಜೆಯಲ್ಲಿ ಕೋಲಾರದಲ್ಲಿ ವಾಸವಾಗಿದ್ದರು.

**ದಿ|| ಟಿ.ಎಸ್. ಕೃಷ್ಣನ್:** ಭಗವಂತನು ನಮಗೆ ಕಲ್ಪಿಸಿ ಕೊಟ್ಟ ಅವಕಾಶಗಳನ್ನು ಈ ಜನ್ಮದಲ್ಲಿ ಸದ್ಬಳಕೆ ಮಾಡಿಕೊಂಡರೆ ಮುಂದಿನ ಜನ್ಮ ನಿರ್ಧಾರವಾಗುತ್ತದೆ ಎಂದು ದೃಢವಾದ ನಂಬಿಕೆ ಇದೆ. ಕುಟುಂಬ, ದೇಶ, ಸಮಾಜ, ಸಮುದಾಯದ ಬಗ್ಗೆ ಕಾಳಜಿ ವಹಿಸುವುದು ಕರ್ತವ್ಯ. ಇದೇ ಶಾಂತಿ, ನೆಮ್ಮದಿ ತರುವುದು. ಇದಕ್ಕೆ ಪೂರಕವಾಗಿರುವುದು ಟಿ.ಎಸ್. ಕೃಷ್ಣನ್‌ರವರು. ಹಿಂದೆ ಇದ್ದ ಬೃಹಚ್ಚರಣ ಸಂಘದ ಚಟುವಟಿಕೆಗಳು ಎಂಬತ್ತರ ದಶಕದಲ್ಲಿ ಮುಂದುವರೆಯಲು ಪುನಃಶ್ಚೇತನಗೊಂಡಾಗ ಇವರು ಪ್ರಮುಖ ಪಾತ್ರ ವಹಿಸಿದವರು. ಯುವಕರನ್ನು ಗುರುತಿಸಿ, ಪ್ರೋತ್ಸಾಹಿಸಿ, ಸಲಹೆ, ಉತ್ತೇಜನ, ಮಾರ್ಗದರ್ಶನ ಮಾಡುತ್ತಾ ಸಂಘದ ಬೆಳವಣಿಗೆಗೆ ಕಾರಣರಾದವರು.

**ದಿ|| ಯಮಲೂರು ಶ್ರೀನಿವಾಸಯ್ಯ:** ಈಗಿನ ಹೊಸೂರಾಗಿರುವ ಅಂದಿನ ಕೊತ್ತಕೊಡಪಲ್ಲಿಯಲ್ಲಿ ಜನನ. ವಿದ್ಯಾಭ್ಯಾಸ ಸಲುವಾಗಿ ಬೆಂಗಳೂರಿಗೆ ಬಂದು ಹೋಗುತ್ತಿದ್ದ ಸಮಯ ಮತ್ತು ಬೀದಿ ದೀಪದ ಬೆಳಕಿನಲ್ಲಿ ವ್ಯಾಸಂಗ ನಡೆಸಿದವರು. ಮುಂದೆ ಸೆಂಟ್ರಲ್ ಕಾಲೇಜಿನಲ್ಲಿ ಎಫ್.ಎ. ಪರೀಕ್ಷೆ ತೇರ್ಗಡೆ. ಸರ್ಕಾರದ ಲೆಕ್ಕಪತ್ರ ಇಲಾಖೆಯಲ್ಲಿ ಉದ್ಯೋಗ. ನಂತರ ಎಸ್.ಎ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಲೆಕ್ಕ ಪರಿಶೋಧಕರಾಗಿ ದಶಕಗಳ ಸೇವೆ ಸಲ್ಲಿಸಿದರು. ನಿವೃತ್ತಿ ನಂತರ ಯಮಲೂರಿನಲ್ಲಿ ತೋಟದ ಮನೆಯಲ್ಲಿ ವಾಸ. ಶ್ಯಾನುಭೋಗರಾಗಿ ನೇಮಕಗೊಂಡರು. ಇಂಗ್ಲೀಷ್ ಭಾಷಾ ಜ್ಞಾನ, ಜಾತಕ ವಿಶ್ಲೇಷಣೆ ವಿಶೇಷವಾಗಿತ್ತು. ದಿವಂಗತ ಅಮ್ಮಣ್ಣಮ್ಮನವರ ವಿದ್ಯಾರ್ಥಿ ನಿಲಯಕ್ಕೆ ಮುಖ್ಯ ಸಲಹೆಗಾರರು ಆಗಿದ್ದರು.

**ದಿ|| ಅಟ್ಟೂರು ರಾಮಶರ್ಮ:** ಬಡತನದಲ್ಲಿದ್ದರೂ ಚಿಕ್ಕಂದಿನಲ್ಲೇ ಕುಟುಂಬ ಜವಾಬ್ದಾರಿ ಹೊತ್ತವರು. ಪ್ಲೇಗ್ ಮಾರಿ ಇದ್ದ ಕಾಲದಲ್ಲಿ ಸಮಾಜ ಸೇವೆಗೆ ನಿಸ್ವಾರ್ಥವಾಗಿ ತಮ್ಮ ಆರೋಗ್ಯವನ್ನು ಬದಿಗಿಟ್ಟು ಸ್ನೇಹಿತರೊಂದಿಗೆ ಮೃತದೇಹಗಳ ದಹನ ಸಂಸ್ಕಾರ ಮಾಡುತ್ತಿದ್ದರು. ಹಿಂದೂ, ಮುಸ್ಲಿಂ ಗಲಾಟೆಯಲ್ಲಿ ಒಬ್ಬ ಮುಸ್ಲಿಂ ಸ್ನೇಹಿತನ ಪ್ರಾಣ ಉಳಿಸಲು ಹೋಗಿ ಚಾಕು ಇರಿತದಿಂದ ಗಾಯಗೊಂಡಿದ್ದರು. ವಿದ್ಯಾರ್ಥಿಗಳೇ ದೇಶದ ಮುಂದಿನ ಪ್ರಜೆಗಳು ಎಂಬ ಸಿದ್ಧಾಂತದೊಂದಿಗೆ ಅವರಿಗೆ ತಮ್ಮ ಮನೆಯಲ್ಲಿ ಆಹಾರ, ಆಶ್ರಯ ಕೊಟ್ಟು ಇರಿಸಿಕೊಳ್ಳುತ್ತಿದ್ದರು. ನಿಸ್ವಾರ್ಥ ಸೇವೆ, ಕರ್ಮಯೋಗಿಯಾಗಿ ಜೀವನ ನಡೆಸಿದರು.

**ದಿ|| ಕೆ.ಜಿ. ವೆಂಕಟೇಶ್:** ತುಂಬು ಕುಟುಂಬದಲ್ಲಿ ಜನಿಸಿದವರು. ಬಿ.ಇ.ಎಲ್‌ನಲ್ಲಿ ವೃತ್ತಿ ಆರಂಭಿಸಿದರು. ಅಲ್ಲದೆ ತಂದೆಯವರು ನಿರ್ವಹಿಸುತ್ತಿದ್ದ ಬೇಕರಿಯ ಕೆಲಸಗಳಲ್ಲೂ ತಮ್ಮನ್ನು ತೊಡಗಿಸಿಕೊಂಡರು. ನಿವೃತ್ತಿ ನಂತರ ಬೃಹಚ್ಚರಣ ಸಂಘದ ಮೂಲಕ ಸಮುದಾಯಕ್ಕಾಗಿ ಸೇವೆ ಸಲ್ಲಿಸಿದರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಇಳಿವಯಸ್ಸಿನಲ್ಲಿಯೂ ಸಭೆಗಳಿಗೆ ತಪ್ಪದೇ ಹಾಜರಾಗುತ್ತಾ ಸದಸ್ಯರಿಂದ ದೇಣಿಗೆ ಸಂಗ್ರಹಣೆ ಮತ್ತು ಹೊಸ ಸದಸ್ಯರ ನೋಂದಣಿಗಳಿಗಾಗಿ ಕ್ರೀಯಾಶೀಲವಾಗಿ ಆಗಿ ಶ್ರಮಿಸುತ್ತಿದ್ದವರು.

**ಶ್ರೀಮತಿ ಭ್ರಮರಾ ಗೋಪಿನಾಥ್:** ಸಂಸ್ಕಾರವಂತ, ಸಂಗೀತಾಸಕ್ತಿ ಇರುವ ಕುಟುಂಬದಲ್ಲಿ ಜನಿಸಿದರು. ಇದರೊಂದಿಗೆ ಆಧ್ಯಾತ್ಮಿಕ ಒಲವೂ ಇದ್ದಿದ್ದರಿಂದ ಸದ್ಗುರು ಭದ್ರಗಿರಿ ಕೇಶವದಾಸರ ಅನುಗ್ರಹದಿಂದ **"ಕೇಶವ ಭಗಿನಿ"** ಎಂಬ ನಾಮಾಂಕಿತದೊಂದಿಗೆ ಅನೇಕ ಭಜನೆ ರಚಿಸಿದ್ದಾರೆ. ಸದ್ಗುರು ಭದ್ರಗಿರಿ ಅಚ್ಯುತದಾಸರ ಆಶೀರ್ವಾದದಿಂದ ಸತ್ಸಂಗದ ಮೂಲಕ ಭಜನೆ, ಹರಿಕಥೆ, ಪ್ರವಚನ ಮಾಲಿಕೆ ಮೂಲಕ ಜನಸಾಮಾನ್ಯರಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ದಾರಿ ದೀಪವಾಗಿದ್ದಾರೆ.

**ಶ್ರೀಮತಿ ಜಿ.ಪಿ. ಲಕ್ಷ್ಮಿದೇವಿ:** ಇಂಟರ್ ಮೀಡಿಯೇಟ್ ಶಿಕ್ಷಣ ಪಡೆದರು. ಬಾಲ್ಯದಿಂದಲೇ ಓದಿನೊಂದಿಗೆ ಪುರಾಣ ಪ್ರವಚನಗಳಲ್ಲಿ ಆಸಕ್ತಿ ಬೆಳೆಸಿಕೊಂಡವರು. ಕಲಿಯುವಿಕೆಯಲ್ಲಿ ಆಸಕ್ತಿ, ಸಾಂಸಾರಿಕ ಜೀವನ ಇವೆರಡನ್ನೂ ಜೊತೆ ಜೊತೆಯಾಗಿ ನಿರ್ವಹಿಸಿದವರು. ನಮ್ಮವರಾದ ದಿವಂಗತ ಆರ್. ಶಂಕರನಾರಾಯಣ್ ಅವರಲ್ಲಿ ಕಾವ್ಯವಾಚನ ಕಲಿತು ಕ್ರಮೇಣ ಗಮಕಿ ಎನಿಸಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ ನಡೆಸುತ್ತಿದ್ದ

ಕನ್ನಡ ಭಾಷೆಯ ಪ್ರವೇಶ, ಪ್ರೌಢ, ರನ್ನ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ದಿವಂಗತ ರಾಮಚಂದ್ರ ಶರ್ಮ ತ್ಯಾಗಲಿ ಅವರಿಂದ ಸಂಸ್ಕೃತ ಕಲಿತರು. ಶೃಂಗೇರಿಯ "ಸುರ ಸರಸ್ವತೀ ಸಭಾ" ದ ಮೂರು ಹಂತದ ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ದೇವರನಾಮ, ಭಾವಗೀತೆ, ಕನ್ನಡ ಗೀತೆಗಳನ್ನು ಕಲಿತು ಹಾಡುತ್ತಾರೆ. ಹಲವಾರು ಸಂಗೀತ ಹಾಗೂ ಗಮಕ ವಾಚನ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಮೂಲಕ ಕನ್ನಡ ಎಂ.ಎ. ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಗಮಕ, ಟೈಪಿಂಗ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಆಕಾಶವಾಣಿಯ ಕಾವ್ಯವಾಚನ ನಾಟಕಗಳು, ಇವುಗಳ ನಿರ್ದೇಶನ ಅಲ್ಲದೇ ಕಂಠದಾನ ಸಹ ಮಾಡಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ಸಮಕ್ಷಮದಲ್ಲಿ "ಶ್ರೀ ರಾಮಾಯಣ ದರ್ಶನಂ" ಗಮಕ ಹಾಡಿ ಅವರಿಂದ ಪ್ರಶಂಸೆ ಗಳಿಸಿದ್ದಾರೆ. ಶ್ರೀ ವಿಷ್ಣು ಸಹಸ್ರನಾಮಕ್ಕೆ ಪ್ರತಿ ಪದಾರ್ಥ ಬರೆದು ಪ್ರಕಟಿಸಿದ್ದಾರೆ. ಪೂಜ್ಯ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಭಾಗಗಳನ್ನು ತಮ್ಮದೇ ಸರಳ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. "ಇವನೇ ನಮ್ಮ ಹನುಮ" ಎಂಬ ಕಿರು ಹೊತ್ತಿಗೆ ರಚಿಸಿದ್ದಾರೆ.

**ಶ್ರೀ ಜಿ.ಎಸ್. ಸತ್ಯಮೂರ್ತಿ:** ಇಂಟರ್ ಮೀಡಿಯೇಟ್ ಶಿಕ್ಷಣ ಪಡೆದು ಹೆಚ್.ಎ.ಎಲ್.ನಲ್ಲಿ ತರಬೇತಿ ನಂತರ ಅದರ ವತಿಯಿಂದ ಅಲ್ಲೇ ಡಿಪ್ಲೊಮಾ ಪರೀಕ್ಷೆ ಪೂರೈಸಿ ಸುಮಾರು 38 ವರ್ಷಗಳ ಸುದೀರ್ಘ ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತರಾದರು. ಇದಲ್ಲದೆ ಆಸಕ್ತಿಯೇ ಹವ್ಯಾಸವಾಗಿ ಸಾಹಿತ್ಯ ಅಭಿರುಚಿ ಬೆಳೆದು ಲೇಖನಗಳನ್ನು ರಚಿಸಿದ್ದಾರೆ. ಅನೇಕ ನಾಟಕಗಳಲ್ಲಿ ಅಭಿನಯಿಸಿ ನಿರ್ದೇಶಿಸಿದ್ದಾರೆ. ಕನ್ನಡ ಚಳುವಳಿಯಲ್ಲಿ ಅನಕೃರವರೊಂದಿಗೆ ಕನ್ನಡತನ ಬೆಳೆಸಲು ಶ್ರಮಿಸಿದ್ದಾರೆ. ಇವರು ಹಲವಾರು ಪುಸ್ತಕಗಳನ್ನು ಹೊರತಂದಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಶ್ರೀಯುತರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

**ಶ್ರೀ ಎಸ್. ಸುದರ್ಶನ್:** ಎಂ.ಎ., ಎಲ್.ಎಲ್.ಬಿ ಪದವೀಧರರು. ವಕೀಲ ವೃತ್ತಿಯೊಂದಿಗೆ ಮೃದಂಗ ವಿದ್ವಾನ್ ದಿವಂಗತ ಟಿ.ಎ.ಎಸ್. ಮಣಿಯವರಲ್ಲಿ ಮೃದಂಗ ವಾದನವನ್ನು ಅಭ್ಯಸಿಸಿದ್ದಾರೆ. ಹಲವಾರು ಅಂತಾರಾರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇದಲ್ಲದೇ ಶ್ರೀಯುತರು ಆಕಾಶವಾಣಿಯ ರೇಡಿಯೋ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಲೇಖಕರಾಗಿ, ನಾಟಕಕಾರರಾಗಿಯೂ ಗುರುತಿಸಿಕೊಂಡಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಹೆಸರಾಂತ ಸಂಘ ಸಂಸ್ಥೆಗಳು ಇವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

**ಶ್ರೀ ಅಟ್ಟೂರು ರಾಮಕೃಷ್ಣ ಶರ್ಮ:** ಸಿವಿಲ್ ಇಂಜಿನೀಯರಿಂಗ್ ಪದವಿ ಗಳಿಸಿ ನಂತರ ಭಾರತ ಸರ್ಕಾರದ "ಬಾರ್ಡರ್ ರೋಡ್ ಆರ್ಗನೈಝೇಶನ್" ಮಿಲಿಟರಿ ಸಂಸ್ಥೆಯಲ್ಲಿ ವೃತ್ತಿ ಮಾಡುತ್ತಾ ದೇಶ ಸೇವೆ ಮಾಡಿದ್ದಾರೆ. ಹಲವಾರು ರಾಜ್ಯಗಳಲ್ಲಿ ಅಲ್ಲದೆ ಲಿಬ್ಯಾ ದೇಶದಲ್ಲೂ ಕೆಲಸ ಮಾಡಿದ್ದಾರೆ. ನಿವೃತ್ತಿ ನಂತರ ಕರ್ನಾಟಕ ಸರ್ಕಾರದ ಭೂಸೇನೆ ಅಲ್ಲದೆ ವಿವಿಧ ಸಂಸ್ಥೆಗಳಲ್ಲಿ, ಒಮೆನ್ ಮತ್ತು ಇಥಿಯೋಪಿಯಾ ದೇಶಗಳಲ್ಲಿ ರಸ್ತೆ ನಿರ್ಮಾಣದಲ್ಲಿ ತಮ್ಮ ಪರಿಣಿತಿ ತೋರಿಸಿದ್ದಾರೆ. ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಶ್ರೀಯುತರು ತಮ್ಮ ಈ ಅನುಭವಗಳನ್ನು ಪುಸ್ತಕ ರೂಪದಲ್ಲಿ ಬರೆದು ಪ್ರಕಟಿಸಿದ್ದಾರೆ.

**ಶ್ರೀ ಆನೇಕಲ್ ನಾಗರಾಜ್:** ಆರಂಭದ ಶಿಕ್ಷಣ ಆನೇಕಲ್‌ನಲ್ಲಿ. ನಂತರ ಕ್ರೈಸ್ಟ್ ಕಾಲೇಜನಲ್ಲಿ ಪಿ.ಯು.ಸಿ. ಮುಗಿಸಿದರು. ಅನಿವಾರ್ಯ ಕಾರಣಗಳಿಂದ ಪದವಿ ಶಿಕ್ಷಣ ಮುಂದುವರೆಸಲಿಲ್ಲ. ಜಿಗಣಿಯಲ್ಲಿ ವೃತ್ತಿ ಪ್ರಾರಂಭ ಮಾಡಿದರು. ಶ್ರೀಯುತರು ಪ್ರತಿನಿತ್ಯ ದೇವತಾರ್ಚನೆ, ವಿಶೇಷ ದಿನಗಳಲ್ಲಿ ವಿಶೇಷ ಪಾರಾಯಣಗಳನ್ನು ನಡೆಸುತ್ತಿದ್ದಾರೆ. ಶ್ರೀ ಲಲಿತಾ ಸಹಸ್ರನಾಮ ಸಂಪುಟೀಕರಣ ಮಾಡುತ್ತಾರೆ. ಶ್ರೀ ವಿಷ್ಣು ಸಹಸ್ರನಾಮ ಪಾರಾಯಣದೊಂದಿಗೆ ಅರ್ಥ, ವ್ಯಾಖ್ಯಾನ ರಚಿಸಿದ್ದಾರೆ. ಪೌರೋಹಿತ್ಯವನ್ನು ಮಾಡುತ್ತಾರೆ. ಅನೇಕಲ್‌ನಲ್ಲಿ ಯಾವುದೇ ಮನೆಯಲ್ಲಿ ಸಾವು ಸಂಭವಿಸಿದರೂ ತಿಳಿದ ಕೂಡಲೇ ಒಬ್ಬರೇ ಅಥವಾ ಸಹಚರರೊಂದಿಗೆ ಅಲ್ಲಿಗೆ ತೆರಳಿ ಬೇಕಾದ ಸಕಲ ಅನುಕೂಲ, ಸಂಸ್ಕಾರ ಕಾರ್ಯ ಜರುಗಲು ನೆರವಾಗುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಇಂತಹ ಕಾರ್ಯ ಮಾಡುತ್ತಿರುವುದು ಇವರ ಸಜ್ಜನಿಕೆ, ಸರಳತೆ ತೋರಿಸುತ್ತದೆ.

**ಡಾ॥ ಜಿ. ಸ್ವಾಮಿನಾಥ್:** ಪ್ರಸಿದ್ಧ ಮನೋತಜ್ಞರಾಗಿ ಡಾ॥ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಮತ್ತು ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಿಮ್ಹಾನ್ಸ್ ಸಂಸ್ಥೆಯಿಂದ ಎಂ.ಡಿ. ಪದವಿ ಗಳಿಸಿದರು. ಹಲವಾರು ಸಂಘ, ಸಂಸ್ಥೆ, ಸಮಿತಿಗಳಿಗೆ ಪ್ರತಿನಿಧಿಯಾಗಿ, ಸಂಪಾದಕರಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಮಾಜ ಮುಖಿಯಾಗಿ ಸೇವೆ ಸಲ್ಲಿಸುವ ಮನೋಭಾವದ ವಿವೇಕಾನಂದ ಸ್ಮಾರಕ ಆಸ್ಪತ್ರೆಯು (ಬುಡಕಟ್ಟು) ಮನೋತಜ್ಞರಾಗಿ ಹೆಗ್ಗಡದೇವನ ಕೋಟೆಗೆ ಕಳೆದ ಹಲವಾರು ವರ್ಷಗಳಿಂದ ನಿಯತವಾಗಿ ಭೇಟಿ ನೀಡುತ್ತಿದ್ದಾರೆ. ಚಿತ್ತಧಾಮ ಪುನರ್ವಸತಿ ಕೇಂದ್ರಕ್ಕೆ ಹಾಗೂ "ಬಾಲ ಸಖ" ಧರ್ಮಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ. ಕಡಂಬಸ್‌ರವರ ಪ್ರತಿಷ್ಠಿತ "ಮನೋತಜ್ಞ" ಪ್ರಶಸ್ತಿ ಪಡೆದಿದ್ದಾರೆ. ಉತ್ಸಾಹಿ ಪರ್ವತಾರೋಹಣ ಹವ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ಸಮುದಾಯಕ್ಕೆ, ನಾಡಿಗೆ ಮಾರ್ಗದರ್ಶಕರಾಗಿದ್ದಾರೆ.

**ಶ್ರೀ ಆರ್.ಎ. ದಕ್ಷಿಣಾಮೂರ್ತಿ:** ಶ್ರೀಯುತರು ವಿದ್ವಾನ್ ಹೆಚ್.ಎಸ್. ಕೃಷ್ಣಮೂರ್ತಿ ಮತ್ತು ವಿದ್ವಾನ್ ಆರ್.ಎಸ್. ಕೇಶವಮೂರ್ತಿಯವರಲ್ಲಿ ವೀಣಾವಾದನ ಅಭ್ಯಸಿಸಿ ಆಕಾಶವಾಣಿ ಮತ್ತು ದೂರದರ್ಶನದ "A" ಶ್ರೇಣಿ ಕಲಾವಿದರಾಗಿದ್ದಾರೆ. ಐ.ಐ.ಟಿ. (ದೆಹಲಿ) ಯಲ್ಲಿ ಎಂ.ಟೆಕ್. ಪದವಿ ಗಳಿಸಿ ಟಾಟಾ ಸಂಸ್ಥೆಯಲ್ಲಿ 10 ವರ್ಷಗಳ ಕಾಲ ಉನ್ನತ

ಹುದ್ದೆಯಲ್ಲಿದ್ದವರು, ನಂತರ ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ವೃತ್ತಿಯಲ್ಲಿದ್ದವರು.

**ಶ್ರೀ ಆರ್.ಪಿ. ರವಿಶಂಕರ್:** ಶ್ರೀಯುತರು ಘಟಂ ವಾದನವನ್ನು ವಿದ್ವಾನ್ ಶಶಿಕಿರಣ್, ವಿದ್ವಾನ್ ಆರ್.ಎ. ರಾಜಗೋಪಾಲ್ ಮತ್ತು ವಿದ್ವಾನ್ ಟಿ.ಎ.ಎಸ್. ಮಣಿಯರಿಂದ ಮಾರ್ಗದರ್ಶನ ಪಡೆದಿದ್ದಾರೆ. ಹಾಗೂ ವಿದೂಷಿ ಸುಕನ್ಯಾ ರಾವ್ ಗೋಪಾಲ್ ಅವರಲ್ಲಿ ಉನ್ನತ ಅಭ್ಯಾಸ ಮಾಡುತ್ತಿದ್ದಾರೆ. ಅನೇಕ ಪ್ರಸಿದ್ಧ ಸಂಗೀತ ಕಲಾವಿದರಿಗೆ ಸಾಥ್ ನೀಡಿದ್ದಾರೆ.

**ಶ್ರೀ ಜಗದೀಶ್:** ಜಯನಗರದ Community Centre ಶಾಲೆಯಲ್ಲಿ ಸುದೀರ್ಘ ಸೇವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಿವೃತ್ತಿ ನಂತರ ಕೋರಿಕೆ ಮೇಲೆ ವಿಜಯ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ವಿದ್ಯಾರ್ಥಿಗಳಿಗಾಗಿ 32ಕ್ಕೂ ಹೆಚ್ಚಿನ ಪುಸ್ತಕ ಪ್ರಕಟಿಸಿದ್ದಾರೆ.

**ಶ್ರೀಮತಿ ವಾಗ್ದೇವಿ ಬದರಿನಾರಾಯಣ್:** ಬಣ್ಣ ಬಣ್ಣದ ಹಲವಾರು ವಿನ್ಯಾಸಗಳ ರಂಗೋಲಿಗಳನ್ನು ಬಿಡಿಸುವುದರಲ್ಲಿ ಪರಿಣಿತಿ ಗಳಿಸಿರುವ ಶ್ರೀಮತಿಯವರು ಸಾಂಪ್ರದಾಯಿಕ ಕಲೆಯನ್ನು ಉಳಿಸಿ ಸಂಸ್ಕೃತಿ ಬೆಳೆಸುವುದರಲ್ಲಿ ಮಾದರಿ ಯಾಗಿದ್ದಾರೆ. "ರಂಗವಲ್ಲಿ" ಗುಂಪಿನ ಮೂಲಕ ಹಲವಾರು ಪ್ರಸಿದ್ಧ ದೇವಾಲಯಗಳ ಪ್ರಾಕಾರಗಳಲ್ಲಿ ನೋಡುಗರ ಕಣ್ಮನ ಸೂರೆಗೊಳ್ಳುವಂತೆ ತೈಲವರ್ಣದಲ್ಲಿ ರಂಗವಲ್ಲಿ ಬಿಡಿಸಿದ್ದಾರೆ. ಹಲವಾರು ಸಂಘ, ಸಂಸ್ಥೆಗಳಿಂದ ಇವರು ರಂಗೋಲಿ ಬಿಡಿಸುವುದಕ್ಕಾಗಿ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

**ಶ್ರೀಮತಿ ನಾಗಲಕ್ಷ್ಮಿ ನಾಗರಾಜನ್:** ಸುಪ್ರಸಿದ್ಧ ಭರತನಾಟ್ಯ ಕಲಾವಿದೆ, ಸಂಯೋಜಕಿ ಮತ್ತು ಗುರು. ಶ್ರೀಮತಿ ವಸಂತಲಕ್ಷ್ಮಿರವರ ಬಳಿ ಭರತನಾಟ್ಯ ಕಲಿತು, ವಿದ್ವತ್ ಪರೀಕ್ಷೆಯಲ್ಲಿ ಮೊದಲನೆ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಸ್ತ್ರೀಯ ನೃತ್ಯದ ಜೊತೆ ಯೋಗ ಶಿಕ್ಷಕಿಯಾಗಿದ್ದಾರೆ. ಕೇರಳದ ಕಲರಿಪಟ್ಟು ಕಲಿತಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ಮಾಡುತ್ತಿದ್ದಾರೆ. ಹಲವಾರು ಉತ್ಸವಗಳಲ್ಲಿ ತಮ್ಮ ನಾಟ್ಯ ಪ್ರದರ್ಶನ ನೀಡಿದ್ದಾರೆ. ಸಿವಿಲ್ ಇಂಜನೀಯರಿಂಗ್ ಪದವೀಧರೆ. ಭರತನಾಟ್ಯ ಪರೀಕ್ಷೆಗಳಿಗೆ ಪರೀಕ್ಷಕರಾಗಿ ಸೇವೆ ಸಲ್ಲಿಸುತ್ತಿರುತ್ತಾರೆ.

**ಶ್ರೀಮತಿ ರಶ್ಮಿ ಅನಂತ್:** ನಿತ್ಯಶ್ರೀ ನಾಟ್ಯಶಾಲಾ ಪ್ರಾರಂಭಿಸಿ ಆಸಕ್ತ ಮಕ್ಕಳಿಗೆ ಭರತನಾಟ್ಯ ಕಲಿಸುತ್ತಿದ್ದಾರೆ. ಆರ್ಯಭಟ ಪ್ರಶಸ್ತಿ ವಿಜೇತೆ. ಹಂಪೆಯ ಕದಂಬ ಉತ್ಸವ, ಜಾನಪದ ಜಾತ್ರೆ, ಈ ಟಿ.ವಿ. ಪರಿಪೂರ್ಣ ಮಹಿಳೆ, ರಾಜ್ಯೋತ್ಸವ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭರತನಾಟ್ಯ ಪ್ರದರ್ಶನ ನೀಡಿರುತ್ತಾರೆ. ಕಂಸಾಳೆ ಪದ, ಡೊಳ್ಳು ಕುಣಿತ, ಪಟ್ಟದ ಕುಣಿತ, ಪೂಜಾ ಕುಣಿತ, ಭಾಂಗ್ರ, ಗರ್ಬ, ಲಾವಣಿ, ದಾಂಡಿಯ ನೃತ್ಯಗಳಲ್ಲೂ ಪರಿಶ್ರಮ ಇದೆ.

**ಡಾ॥ ಎಸ್. ಪ್ರವೀಣ್ ಕುಮಾರ್:** ವಿಖ್ಯಾತ ವಿಕ್ಟೋರಿಯ ಆಸ್ಪತ್ರೆ ಹಾಗೂ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ನರರೋಗ ವಿಭಾಗದ ಪ್ರಾಧ್ಯಾಪಕರು. ಮೂರು ಚಿನ್ನದ ಪದಕದೊಂದಿಗೆ ಎಂ.ಬಿ.ಬಿ.ಎಸ್. ಶಿಕ್ಷಣ ಪದವಿ ಪಡೆದರು. ನಿಮ್ಹಾನ್ಸ್ ವಿಶ್ವವಿದ್ಯಾಲಯದಲ್ಲಿ ಡಿ.ಎಂ. ಪದವಿ ಪಡೆದರು. ವೃತ್ತಿ ಜೀವನವನ್ನು ಸೀನಿಯರ್ ರೆಸಿಡೆಂಟ್ ಆಗಿ ಅಲ್ಲೇ ಪ್ರಾರಂಭಿಸಿದರು. ಪ್ರಾಧ್ಯಾಪಕರಾಗಿ, ನರರೋಗ ವಿಭಾಗದ ಮುಖ್ಯಸ್ಥರಾಗಿದ್ದರು. ಇವರ ಸಂಶೋಧನಾ ಲೇಖನಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇವರು "YOUNG SCIENTIST AWARD" ಗೆ ಭಾಜನರಾಗಿದ್ದಾರೆ. ಇನ್ನೂ ಹಲವಾರು ಪ್ರಶಸ್ತಿ ಪಡೆದಿರುತ್ತಾರೆ.

**ಡಾ॥ ಆರ್.ವೈ. ಕಲ್ಪನಾ:** ಕಲ್ಬುರ್ಗಿಯಲ್ಲಿ ವೈದ್ಯಕೀಯ ಶಿಕ್ಷಣ ಪೂರೈಸಿ ಬಳ್ಳಾರಿಯಲ್ಲಿ ಡಿ.ಸಿ.ಹೆಚ್. ಸ್ನಾತಕೋತ್ತರ ಶಿಕ್ಷಣದೊಂದಿಗೆ 'ನಾರಾಯಣ ಹೃದಯಾಲಯ'ದಿಂದ ಡಿ.ಎನ್.ಬಿ. ಪದವಿ ನಂತರ "ಫೆಲೋಷಿಪ್ ಇನ್ ನ್ಯೂರಾಲಜಿ" ಪಡೆದಿರುತ್ತಾರೆ. ಶಿಶುರೋಗ ತಜ್ಞೆಯಾದ ಇವರು ವಿಶೇಷ ನಿಗಾ ಘಟಕದಲ್ಲಿ ಕಾರ್ಯನಿರ್ವಹಿಸುವ ತರಬೇತಿ ಹೊಂದಿದ್ದಾರೆ. ಪ್ರಸ್ತುತ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

**ಶ್ರೀಮತಿ ಸೌಮ್ಯ ಯೋಗೀಶ್:** ಚಿತ್ರಕಲಾ ಪರಿಷತ್ತಿನಲ್ಲಿ ಸಾಂಪ್ರಾದಾಯಿಕ ಮೈಸೂರು ಶೈಲಿ ಚಿತ್ರಕಲೆ ತರಬೇತಿ ಪಡೆದು ಅಭ್ಯಸಿಸಿದ್ದಾರೆ. ನೂರಾರು ಚಿತ್ರಗಳನ್ನು ರಚಿಸಿ, ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರಶಂಸೆ, ಪ್ರಶಸ್ತಿ ಗಳಿಸಿರುತ್ತಾರೆ.

**ಕುಮಾರಿ ಸಂಪದಾ:** ಸಂಪದಾ ತನ್ನ 8ನೇ ವರ್ಷದಲ್ಲಿ ಭರತನಾಟ್ಯ ಕಲಿಕೆ ಪ್ರಾರಂಭಿಸಿದರು. 13 ವರ್ಷಗಳ ಸತತ ಪರಿಶ್ರಮ ಇದೆ. ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪರೀಕ್ಷೆಗಳಲ್ಲಿ ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಗಮಕ ಕಲೆಯಲ್ಲೂ ವಿಶೇಷ ಅಭ್ಯಾಸ ಮಾಡಿದ್ದಾರೆ. ಸ್ನಾತಕೋತ್ತರ ಪದವೀಧರೆ.

**ಶ್ರೀಮತಿ ಪಲ್ಲವಿ ಗುರುಪ್ರಸನ್ನ:** ಸಂಗೀತ, ಚಿತ್ರಕಲೆ, ತೋಟಗಾರಿಕೆ, ಕವಿತೆ ರಚನೆ, ಹೀಗೆ ಹಲವಾರು ಹವ್ಯಾಸಗಳನ್ನು ಹೊಂದಿದ್ದಾರೆ. ಆಸಕ್ತಿಯ ಜೊತೆಗೆ ಅಪಾರ ತಾಳ್ಮೆಯನ್ನು ಬೇಡುವ ರಂಗೋಲಿ ಬಿಡಿಸುವ ಕಲೆ ಇವರಿಗೆ ಸಿದ್ಧಿಸಿದೆ. ಸಂಗೀತ ಶಾಲೆ ನಡೆಸುವುದಲ್ಲದೆ "ಸಮತ್ವ" ಪ್ರತಿಷ್ಠಾನದ ಮೂಲಕ ಕಲೆಯ ವಿವಿಧ ಪ್ರಾಕಾರಗಳನ್ನು ಪಸರಿಸುತ್ತಿದ್ದಾರೆ.

**ಶ್ರೀಮತಿ ರಂಜನಿ ಸಿದ್ಧಾಂತಿ ವೆಂಕಟೇಶ್:** ಮೃದಂಗ ವಾದಕಿ, ಗಾಯಕಿಯೂ ಆಗಿರುವ ಇವರು ಸಂಗೀತದ ಕುಟುಂಬದಿಂದ ಬಂದವರು. ಪ್ರಸಿದ್ಧ ವಿದ್ವಾಂಸರು, ವಿದೂಷಿಗಳ ಬಳಿ ಸಂಗೀತ, ಮೃದಂಗ ವಾದನವನ್ನು ಕಲಿತಿದ್ದಾರೆ. ವಿದ್ವತ್ ಪರೀಕ್ಷೆಯಲ್ಲಿ

ಮೃದಂಗ – ಪ್ರಥಮ ಶ್ರೇಣಿ, ಗಾಯನ – ದ್ವಿತೀಯ ಶ್ರೇಣಿ ಪಡೆದಿರುತ್ತಾರೆ. ಆಕಾಶವಾಣಿ, ದೂರದರ್ಶನದ "ಎ" ದರ್ಜೆಯ ಕಲಾವಿದೆ. ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹಲವಾರು ಪ್ರಸಿದ್ಧ ಸಂಗೀತಗಾರರಿಗೆ ಪಕ್ಕವಾದ್ಯ ನುಡಿಸಿದ್ದಾರೆ. ಹಲವಾರು ಸಂಘ, ಸಂಸ್ಥೆ, ಮಂಡಳಿಗಳಲ್ಲಿ ತಮ್ಮ ಪ್ರಾವೀಣ್ಯತೆ ಪ್ರದರ್ಶಿಸಿರುವ ಇವರು ದೇಶ, ವಿದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇವರಿಗೆ ಹಲವಾರು ಪ್ರಶಸ್ತಿಗಳು ದೊರಕಿವೆ.

**ಶ್ರೀಮತಿ ವೀಣಾ ವಿಶ್ವನಾಥ್:** ಪದವೀಧರೆ ಜೊತೆಗೆ ಕರಕುಶಲ ಕಲೆ ಬಗ್ಗೆ ಆಸಕ್ತಿ ಇದ್ದದ್ದು ಹವ್ಯಾಸವನ್ನು ಬಹು ಕಲಾಕೃತಿ ಮಾಡುವುದರೊಂದಿಗೆ ಬೆಳೆಸಿಕೊಂಡಿದ್ದಾರೆ. ಇವುಗಳಿಂದ ತಮ್ಮ ಮನೆಯನ್ನು ಅಲಂಕರಿಸಿಕೊಂಡಿದ್ದಾರೆ. ಮಣಿ, ವೈರ್, Anchor ದಾರ ಬಳಸಿ ಕಲಾ ಚಿತ್ರ, ನಿಟ್ಟಿಂಗ್, ಕ್ರೋಶಾ ಬಳಸಿ ವುಲ್ಲನ್ ಸ್ವೆಟರ್, ಶಾಲು ಹೆಣೆದಿದ್ದಾರೆ. ಬೊಂಬೆಗಳ ಸಂಗ್ರಹ ಮತ್ತು ಅವುಗಳನ್ನು ದಸರಾದಲ್ಲಿ ಜೋಡಿಸುವುದು ವಿಶೇಷ. ಪುಟ್ಟ ಕೈತೋಟವನ್ನೂ ಮಾಡಿದ್ದಾರೆ.

**ಶ್ರೀ ಭರತ್ ಶರ್ಮ:** ಚಿಕ್ಕಮಗಳೂರಿನಲ್ಲಿ 12ನೇ ತರಗತಿಯಲ್ಲಿದ್ದಾಗ ಹಾಗೂ CETಗಾಗಿ ತಯಾರಿ ಆಗುತ್ತಿದ್ದ ಸಂದರ್ಭದಲ್ಲಿ ಅಶ್ವಿನ್ ಕಾರ್ತಿಕ್ ಎಂಬ ವಿದ್ಯಾರ್ಥಿ ಪರಿಚಯವಾಗಿ ಕ್ರಮೇಣ ಒಳ್ಳೆಯ ಸ್ನೇಹ ಬೆಳೆಯಿತು. ದುರ್ದೈವವಶಾತ್ ಅಶ್ವಿನ್ ಅವರ ಕೈಕಾಲುಗಳಿಗೆ ಪಾರ್ಶ್ವ ವಾಯು ತಗುಲಿದ್ದು, ಅವರು ಮಿದುಳಿಗೆ ತ್ರಾಸ ಕೊಡುವ ಕಾಯಿಲೆಯಿಂದ ಬಳಲುತ್ತಿದ್ದರು. ತನ್ನ ಸ್ನೇಹಿತನು ಇಂಜಿನೀಯರ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ವಿದ್ಯಾಭ್ಯಾಸ ಮುಗಿಸಿ ಮುಂದೆ ಒಳ್ಳೆಯ ಉದ್ಯೋಗ ಪಡೆಯುವವರೆಗೂ ಭರತ್ ತಮ್ಮ ವಿದ್ಯಾರ್ಜನೆಯನ್ನು ಸ್ಥಗಿತಗೊಳಿಸಿ ಸ್ನೇಹಿತನಿಗೆ ಪೂರ್ಣಪ್ರಮಾಣದ ನೆರವಿಗೆ ನಿಂತರು. ಅಶ್ವಿನ್‌ನ ಕನಸುಗಳು ಸಾಕಾರವಾದ ನಂತರವೇ ಭರತ್, ವಿಳಂಬವಾಗಿಯಾದರೂ ತಮ್ಮ ಸ್ವಂತ ವಿದ್ಯಾರ್ಜನೆಯುನ್ನು ಮುಂದುವರೆಸಿ, ಇಂಜಿನಿಯರಿಂಗ್ ಪದವಿ ಪಡೆದು ನಂತರ ಉದ್ಯೋಗ ಪ್ರವೃತ್ತರಾದರು. ತಮ್ಮ ಭವಿಷ್ಯದ ಕನಸುಗಳನ್ನು ಸಂಪೂರ್ಣ ವಾಗಿ ಬದಿಗಿಟ್ಟು ವ್ಯಾಧಿಪೀಡಿತ ಮಿತ್ರನ ಏಳಿಗೆಗಾಗಿ ಪೂರ್ಣಾವಧಿಯ ನೆರವು ನೀಡುವುದರ ಮೂಲಕ ತಮ್ಮ ಜೀವನದ ಸಾಫಲ್ಯವನ್ನು ಕಂಡುಕೊಂಡರು. ಶ್ರೀ ಭರತ್ ಶರ್ಮ ಅವರು ಸ್ನೇಹನಿಷ್ಠೆಗಾಗಿ, ಉಚ್ಚಮಟ್ಟದ ತ್ಯಾಗಕ್ಕಾಗಿ ಒಳ್ಳೆಯ ನಿದರ್ಶನವಾಗಿದ್ದಾರೆ.

**ಕುಮಾರಿ ವಾಣಿಶ್ರೀ ರಾಮಕೃಷ್ಣ:** ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ವಿದೂಷಿ ಸೌಮ್ಯರವರಲ್ಲಿ ಪ್ರಾರಂಭಿಸಿ ನಂತರ ವಿದೂಷಿ ಕಲಾವತಿ ಅವಧೂತ್ ಅವರಲ್ಲಿ ಅಭ್ಯಾಸ ಮುಂದುವರೆಸುತ್ತಿದ್ದಾರೆ. ಹಲವಾರು ಸಂಘ, ಸಂಸ್ಥೆ, ಮಂಡಳಿಗಳಲ್ಲಿ ಭಕ್ತಿ ಪ್ರಧಾನ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. TV9 ಅಲ್ಲದೆ TTDಯಲ್ಲೂ ಸಂಗೀತ ಸೇವೆ ಸಲ್ಲಿಸಿದ್ದಾರೆ. ಈ ಯುವ ಪ್ರತಿಭಾವಂತೆ ಕರ್ನಾಟಕ ಸರ್ಕಾರದ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಉತ್ತೀರ್ಣರಾಗಿದ್ದಾರೆ.

**ಶ್ರೀ ರೋಹಿತ್ ಭಾನುಪ್ರಕಾಶ್:** ಕನ್ನಡ ಚಲನಚಿತ್ರರಂಗದ ಬಹುಮುಖ ಯುವ ಪ್ರತಿಭೆ. "ಅಭಿನಯ ತರಂಗ"ದಲ್ಲಿ ಡಿಪ್ಲೊಮಾ ಮತ್ತು "ಆಕ್ಟರ್ ಪ್ರಿಪೇರ್ಸ್‌ನಲ್ಲಿ" ಅಭಿನಯ, ನೃತ್ಯ ಕಲಿತಿದ್ದಾರೆ. ಹಲವು ಕಾರ್ಟೂನ್, ಜಾಹಿರಾತು, ಟಿ.ವಿ. ಷೋ, ಕ್ರೀಡಾ ಷೋಗಳಿಗೆ ಧ್ವನಿ ನೀಡಿದ್ದಾರೆ. ಇವರು ನಟಿಸಿರುವ "ಸೀಸಾ" ಎಂಬ ಚಿತ್ರವು ಗಿನ್ನೆಸ್ ರೆಕಾರ್ಡ್‌ನಲ್ಲಿ ದಾಖಲಾಗಿದೆ.

**ಶ್ರೀ ಮುತ್ತುರಾಜ್:** ತಮ್ಮನ್ನು ನಿರ್ದೇಶಕರಾಗಿ, ನಟರಾಗಿ ಗುರುತಿಸಿಕೊಂಡಿದ್ದಾರೆ. ಇವರು ಕಿರು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಚಲನಚಿತ್ರದ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಚಲನಚಿತ್ರಗಳಲ್ಲೂ ನಟರಾಗಿ ನಟಿಸಿದ್ದಾರೆ. ಇವರ ನಿರ್ದೇಶನದ 'ವಿಮರ್ಶೆ' ಕಿರುಚಿತ್ರಕ್ಕೆ ಅತ್ಯುತ್ತಮ ಯುವ ನಿರ್ದೇಶಕ ಪುರಸ್ಕಾರ ದೊರಕಿದೆ. ಇದೇ ಚಿತ್ರಕ್ಕೆ ಹಲವಾರು ಅಂತಾರಾರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ದೊರಕಿದೆ.

**ಕುಮಾರಿ ಪ್ರಣವಿ:** ಕರ್ನಾಟಕ ಸಂಗೀತ ಹಾಡುಗಾರಿಕೆಯನ್ನು ತಾಯಿಯಿಂದ ಮತ್ತು ವಯೋಲಿನ್ ವಾದನವನ್ನು ವಿದ್ವಾನ್ ಹೆಚ್.ಕೆ. ವೆಂಕಟರಾಮ್ ಅವರಿಂದ ಕಲಿತರು. ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಬಳಿ ಕಲಿಕೆ ಮತ್ತು ವಿದೂಷಿ ಕಲಾವತಿ ಅವಧೂತ್ ಅವರಲ್ಲಿ ಹಾಡುಗಾರಿಕೆ ಮುಂದುವರೆಸಿದರು. ಹಲವಾರು ಹೆಸರಾಂತ ಸಂಸ್ಥೆ, ಮಂಡಳಿಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಹಲವಾರು ಬಹುಮಾನ, ಪುರಸ್ಕಾರ ಗಳಿಸಿದ್ದಾರೆ. ಕರ್ನಾಟಕ ಸರ್ಕಾರ ಪ್ರೌಢಶಾಲಾ ಶಿಕ್ಷಣ ಮಂಡಳಿ ಆಯೋಜಿಸುವ ಹಾಡುಗಾರಿಕೆ ಮತ್ತು ವಯೋಲಿನ್ ಪರೀಕ್ಷೆಗಳಲ್ಲಿ ಅತ್ಯುತ್ತಮ ದರ್ಜೆಯಲ್ಲಿ ಯಶಸ್ಸು ಗಳಿಸಿದ್ದಾರೆ.

ಹಿಂದಿನ "ಬೃಹಚ್ಚರಣ" ಸಂಚಿಕೆಗಳಲ್ಲಿ ವಿಸ್ತೃತವಾಗಿ ಪರಿಚಯಿಸಲ್ಪಟ್ಟ ಬೃಹಚ್ಚರಣ ಸಮುದಾಯದ ಮಹನೀಯ ಮಹಿಳೆರನ್ನು ಈ "ಸುವರ್ಣ ಸಂಚಿಕೆ"ಯಲ್ಲಿ ಪುನಃ ಸ್ಮರಿಸಿಕೊಳ್ಳುವ ಪ್ರಯತ್ನ ಇದು. ಇವರಲ್ಲಿ ನಮ್ಮನ್ನು ಅಗಲಿರುವ ವ್ಯಕ್ತಿತ್ವಗಳನ್ನು ನೆನಪಿಸಿಕೊಳ್ಳುತ್ತಾ, ವರ್ತಮಾನದಲ್ಲಿ ಸಾಧನೆಯ ಏರುಹಾದಿಯಲ್ಲಿರುವವರಿಗೆ ಭವಿಷ್ಯವು ಮಂಗಳಕರವಾಗಿ ಪರಿಣಮಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.



**ಆರ್. ರಮೇಶ್**
9886034048



**ಹೆಚ್.ಆರ್. ಲಲಿತಾ**
9945199637


With Best Compliments From
A SYMBOL OF QUALITY
RKHP
ರಾಧಾಕೃಷ್ಣ ಹೋಂ ಮೇಡ್ ಪ್ರಾಡಕ್ಟ್ಸ್
ಪ್ರಮುಖ ಶಾಖೆ : # 670, 22ನೇ 'A' ಕ್ರಾಸ್, ಬಿ.ಡಿ.ಎ. ಪಾರ್ಕ್ಎದುರು, ಬನಶಂಕರಿ 2ನೇ ಹಂತ, ಬೆಂಗಳೂರು – 560070
ಮೊಬೈಲ್ ನಂ..: 9886617876 / 8553360703
ಮನೆಯಲ್ಲಿ ತಯಾರಿಸಿದ, ಶ್ರೇಷ್ಟ ಗುಣಮಟ್ಟದ ಆಹಾರ ಪದಾರ್ಥಗಳು ಸೂಕ್ತ ಬೆಲೆಯಲ್ಲಿ ದೊರೆಯುತ್ತವೆ.
ಮಸಾಲೆ ಪುಡಿಗಳು, ತಿಂಡಿ ಪದಾರ್ಥಗಳು, ಸಿಹಿ ತಿನಿಸು, ಡ್ರೈ ಫ್ರೂಟ್ಸ್ ಇನ್ ಸ್ಟೆಂಟ್ ಮಿಕ್ಸ್‌ಗಳು, ಹಪ್ಪಳ – ಸಂಡಿಗೆಗಳು, ಆರೋಗ್ಯವರ್ಧಕ ಶರಬತ್ತುಗಳು, ಉಪ್ಪಿನಕಾಯಿಗಳು, ಶುದ್ಧತುಪ್ಪ, ಬೆಣ್ಣೆ, ಚಿಕ್ಕಮಗಳೂರು ಕಾಫಿಪುಡಿ
ಸಂಕ್ರಾಂತಿಯ ಸಮಯದಲ್ಲಿ ಮನೆಯಲ್ಲಿ ತಯಾರಿಸಿದ ಸಕ್ಕರೆ ಅಚ್ಚು, ಎಳ್ಳು ಇವುಗಳು ದೊರೆಯುತ್ತವೆ.
ಮದುವೆ, ಸೀಮಂತ ಹಾಗೂ ಇತರ ಸಮಾರಂಭಗಳಿಗೆ ಬಾಗಿನದ ಚಕ್ಕುಲಿ, ಪುರಿಉಂಡೆ ಇತ್ಯಾದಿ ದೊರೆಯುತ್ತವೆ.
ಮಲ್ಲೇಶ್ವರಂ ಶಾಖೆ
# 1, 8 ನೇ ಮುಖ್ಯರಸ್ತೆ, 5 ನೇ ಕ್ರಾಸ್, ರಾಯರ ಮಠದ ಹಿಂಭಾಗ ಸ್ವಿಮಿಂಗ್ ಪೂಲ್ ಬಡಾವಣೆ, ಮಲ್ಲೇಶ್ವರಂ, ಬೆಂಗಳೂರು – 560003
ಉತ್ತರಹಳ್ಳಿ ಶಾಖೆ
# 133, "ಪಾರಿಜಾತ, 11 ನೇ ಕ್ರಾಸ್, 1 ನೇ 'ಬಿ' ಮೇನ್ ರೋಡ್ ಪಾದುಕಾ ಮಂದಿರ ರಸ್ತೆ, ಬಿ.ಎಡ್. ಸಿ. ಎಸ್. ಲೇ ಔಟ್ ಉತ್ತರಹಳ್ಳಿ, ಬೆಂಗಳೂರು – 560061
ರುಚಿಯಾದ, ಶುಚಿಯಾದ ಪದಾರ್ಥಗಳಿಗೆ ದಯವಿಟ್ಟು ಒಮ್ಮೆ ಭೇಟಿಕೊಡಿ


With Best Compliments From
PADMANJALI
ENTERPRISES
The House of Values
S. Chandrashekhar
M : 93428 44499
'Mathoshree',
#8, 3rd Cross
Annayappa Block,
Bengaluru - 560 020

# ಗೊಂಬೆಗಳ ಮುಖಾಂತರ ನೈತಿಕ ಮೌಲ್ಯಗಳ ಕಲಿಕೆಯ ಅನಾವರಣ

ಕಳೆದ ಇಪ್ಪತ್ತು ವರ್ಷಗಳಿಂದ ಶ್ರೀಲಲಿತಾ ಪರಮೇಶ್ವರಿ ದೇವಿಯ ಅನುಗ್ರಹದಿಂದ ನಡೆಸಿಕೊಂಡು ಬರುತ್ತಿರುವ ನಮ್ಮ ಮನೆಯ ಗೊಂಬೆ ಹಬ್ಬದಲ್ಲಿ, ಈ ಬಾರಿ ಯಾವ ಮುಖ್ಯ ವಿಷಯದ (Main Theme) ಮೇಲೆ ಗೊಂಬೆಗಳ ಜೋಡಣೆ ಮಾಡುವುದು ಎಂದು ಚಿಂತಿಸಿದಾಗ ರಾಮಾಯಣ ಹಾಗೂ ಮಹಾಭಾರತದ ಒಂದೆರಡು ಪ್ರಸಂಗಗಳ ಗೊಂಬೆ ಜೋಡಿಸಿ, ಅದರಿಂದ ಪ್ರಸ್ತುತ ಸಾಮಾಜಿಕ ಜೀವನದಲ್ಲಿ ನಾವು ಅಳವಡಿಸಿಕೊಳ್ಳಬಹುದಾದ ಹಲವು ನೀತಿ ಕಥೆಗಳನ್ನು ನೋಡುಗರಿಗೆ ಆಸಕ್ತಿ ಕೆರಳಿಸುವಂತೆ ಬರೆದು, ಅವರಲ್ಲಿ ಆ ಬಗ್ಗೆ ಚಿಂತನೆ ಮೂಡಿಸುವುದು ಒಂದು ಒಳ್ಳೆಯ ಪ್ರಯತ್ನ ಎಂದೆನಿಸಿತು. ನಂತರ ನನ್ನ ಈ ಒಂದು ಪರಿಕಲ್ಪನೆಗೆ ಎಲ್ಲಾ ವಯಸ್ಸಿನ ನೋಡುಗರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನನಗೆ ಬಹಳ ತೃಪ್ತಿಯಾಯಿತು. ನನ್ನ ಪರಿಕಲ್ಪನೆಯನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಈ ಲೇಖನದ ಮೂಲಕ ಪ್ರಯತ್ನಿಸಿದ್ದೇನೆ. ನಾನು ಅರ್ಥೈಸಿಕೊಂಡಿರುವ ರೀತಿಯಲ್ಲೋ ಅಥವಾ ಬರವಣಿಗೆಯಲ್ಲೋ ತಪ್ಪಾಗಿದ್ದರೆ ಕ್ಷಮಿಸಿ, ನನ್ನ ಉದ್ದೇಶವನ್ನು ಪ್ರೋತ್ಸಾಹಿಸುವಂತೆ ಓದುಗರಲ್ಲಿ ಮನವಿ.

**ಜೀವನ ನಡೆಸಲು ಉತ್ತಮ ನೈತಿಕ ಪ್ರಜ್ಞೆ ಉಂಟು ಮಾಡುವ ನಮ್ಮ ಧಾರ್ಮಿಕ ಗ್ರಂಥವಾದ ರಾಮಾಯಣದಿಂದ ಒಂದೆರಡು ಪ್ರಸಂಗಗಳು.**

**➢ ಸೀತಾಪಹರಣ ಪ್ರಸಂಗ:**

ಸೀತೆಯ ಸೌಂದರ್ಯದ ವರ್ಣನೆಯನ್ನು ಶೂರ್ಪನಖಿಯ ಮೂಲಕ ಕೇಳಿದ ರಾವಣನು ಮಾರೀಚನನ್ನು ಬಳಸಿಕೊಂಡು ಸೀತೆಯನ್ನು ಅಪಹರಿಸಲು ಒಂದು ಯೋಜನೆಯನ್ನು ರೂಪಿಸಿಕೊಂಡನು. ಮಾರೀಚನು ಸ್ವರ್ಣ ಜಿಂಕೆಯ ರೂಪದಲ್ಲಿ ಸೀತೆಯ ಎದುರು ಕಾಣಿಸಿಕೊಂಡನು. ಸೀತೆಯು ಆ ಮಾಯಾಜಿಂಕೆಯನ್ನು ನೋಡಿ ಮೋಹಗೊಂಡು, ಅದನ್ನು ಹಿಡಿದು ತರುವಂತೆ ರಾಮನನ್ನು ಕೇಳಿದಳು. ಶ್ರೀರಾಮನಿಗೆ ಇದರಲ್ಲಿ ಕುತಂತ್ರದ ಸಂಶಯವಿದ್ದರೂ, ವನವಾಸಕ್ಕೆ ತನ್ನೊಂದಿಗೆ ಬಂದು ಕಷ್ಟಪಡುತ್ತಿರುವ ಸೀತೆಯನ್ನು ಸಂತೋಷಪಡಿಸಲು ಒಪ್ಪಿಗೆ ನೀಡಿದನು. ಲಕ್ಷ್ಮಣನನ್ನು ಸೀತೆಯ ರಕ್ಷಣೆಗಾಗಿ ಬಿಟ್ಟು, ರಾಮನು ಆ ಮೃಗದ ಬೆನ್ನಟ್ಟಿ, ಅದನ್ನು ಬಾಣದಿಂದ ಹೊಡೆದು, ಅದರ ನಿಜವಾದ ದೈತ್ಯರೂಪವನ್ನು ಕಂಡುಕೊಂಡನು. ಗಾಯಗೊಂಡ ಮಾರೀಚನು ರಾಮನ ಧ್ವನಿಯಲ್ಲಿ "ಓ ಲಕ್ಷ್ಮಣಾ, ಓ ಸೀತಾ" ಎಂದು ಕೂಗಿ ನಂತರ ಪ್ರಾಣವನ್ನು ತ್ಯಜಿಸಿದನು. ಇದನ್ನು ಕೇಳಿ ಸೀತಾಮಾತೆಯು ಗಾಬರಿಗೊಂಡು, ಲಕ್ಷ್ಮಣನನ್ನು ರಾಮನ ಸಹಾಯಕ್ಕೆ ಹೋಗುವಂತೆ ಒತ್ತಾಯಿಸಿದಳು. ಲಕ್ಷ್ಮಣನು ರಾಮನ ಆಜ್ಞೆಯಿಂದ ಬಂಧಿತನಾಗಿದ್ದರೂ, ಕೊನೆಗೆ ಸೀತೆಯ ಬಲವಾದ ಆದೇಶದ ಮೇರೆಗೆ ಹೋಗಲು ಒಪ್ಪಿಕೊಂಡನು. ಹೋಗುವ ಮೊದಲು, ಅವನು ಪರ್ಣಕುಟಿರದ ಸುತ್ತಲೂ ರಕ್ಷಣೆಗಾಗಿ ರೇಖೆಯಾದ ಲಕ್ಷ್ಮಣ ರೇಖೆಯನ್ನು ಎಳೆದು, ಸೀತೆಯನ್ನು ಆ ರೇಖೆ ದಾಟಿ ಆಚೆ ಹೋಗದಂತೆ ಕೋರಿಕೊಂಡನು. ಅತ್ತ ಲಕ್ಷ್ಮಣನು ಕಾಡಿಗೆ ತೆರಳುತ್ತಿದ್ದಂತೆಯೇ ಇತ್ತ ರಾವಣನು ಸಾಧುವಿನ ರೂಪದಲ್ಲಿ ಬಂದು ಸೀತೆಯನ್ನು ಭಿಕ್ಷೆ ನೀಡುವಂತೆ ಕೇಳಿದನು. ತನ್ನ ಧರ್ಮಕ್ಕೆ ಬದ್ಧವಾಗಿದ್ದ ಸೀತೆಯು ಲಕ್ಷ್ಮಣ ರೇಖೆಯ ಒಳಗೆ ನಿಂತು ಭಿಕ್ಷೆ ನೀಡಿದಳು. ಆದರೆ ಸಾಧುವಿನ ರೂಪದಲ್ಲಿ ಬಂದ ರಾವಣನು ಕೋಪಗೊಂಡವನಂತೆ ನಟಿಸಿ, ಹೊಸ್ತಿಲಿನಿಂದ ಆಚೆ, ರೇಖೆ ದಾಟಿ ಬಂದು ಭಿಕ್ಷೆ ನೀಡುವಂತೆ ಒತ್ತಾಯಿಸಿ, ಇಲ್ಲವಾದಲ್ಲಿ ಶಾಪ ನೀಡುವುದಾಗಿ ಹೆದರಿಸಿದನು. ಕಳವಳಗೊಂಡ ಸೀತೆಯು ಲಕ್ಷ್ಮಣ ರೇಖೆ ದಾಟಿ ಆಚೆ ಬರುತ್ತಿದ್ದಂತೆಯೇ ರಾವಣನು ತನ್ನ ದೈತ್ಯರೂಪವನ್ನು ಬಹಿರಂಗಪಡಿಸಿ ಸೀತಾಳನ್ನು ಬಂಧಿಸಿ ಕರೆದೊಯ್ದನು.

**ಪ್ರಸ್ತುತ ಪೀಳಿಗೆಗೆ ನೈತಿಕ ಪಾಠಗಳು:-**

1. ದುರಾಸೆ (ಪ್ರಲೋಭನ) ವ್ಯಥೆಗೆ ಕಾರಣವಾಗಬಹುದು.

2. ಹೊರಗಿನ ರೂಪ ಮಾತ್ರ ನೋಡಿ ಯಾರ ಮೇಲೂ ಒಂದು ಅಭಿಪ್ರಾಯ ತಾಳಬಾರದು.

3. ದೊಡ್ಡವರೇ ಆಗಲಿ, ಚಿಕ್ಕವರೇ ಆಗಲಿ, ಬುದ್ಧಿವಂತ ಸಲಹೆಯನ್ನು ನೀಡಿದಾಗ, ಅದು ನಿಮ್ಮಿಚ್ಛೆಯಂತಿಲ್ಲದಿದ್ದರೂ ಗೌರವಿಸಬೇಕು.

4. ದುಷ್ಟರು ಸೋಗು ಹಾಕಿಕೊಂಡು ಬಂದಾಗ ಅವರನ್ನು ಕಡಿಮೆಯಾಗಿ ಅಂದಾಜಿಸಬೇಡಿ.

5. ಯಾರದೇ ಆಜ್ಞೆಯನ್ನು ಅನುಸರಿಸುವಾಗ ವಿವೇಕದಿಂದ ಯೋಚಿಸಬೇಕು.

**➢ ರಾವಣನ ಆಸ್ಥಾನದಲ್ಲಿ ಹನುಮಂತ :**

ಶ್ರೀರಾಮನ ಸಂದೇಶವನ್ನು ಸೀತಾಮಾತೆಗೆ ತಲುಪಿಸಲು ಲಂಕೆಗೆ ಹಾರಿದ ಹನುಮಂತ ಅಶೋಕ ವನದಲ್ಲಿ ಸೀತೆಯನ್ನು ಕಂಡು ಶ್ರೀರಾಮನ ಮುದ್ರೆಯುಂಗುರವನ್ನು ತೋರಲು, ಸೀತಾಮಾತೆಯು ರಾಮನನ್ನು ನೆನೆದು ದುಃಖಿಸಿ ತನ್ನ ಚೂಡಾಮಣಿಯನ್ನು ರಾಮನಿಗೆ ನೀಡುವಂತೆ ತಿಳಿಸಿ ರಾಮ ದೂತನಾದ ಹನುಮಂತನ ಬಳಿ ನೀಡುತ್ತಾಳೆ. ಆ ನಂತರ ಹನುಮಂತನು ರಾವಣನನ್ನು ಮುಖಾಮುಖಿ ಭೇಟಿಯಾಗುವ ಸಲುವಾಗಿ ತನ್ನನ್ನು ಹಿಡಿಯಲು ರಾವಣನ ಸೈನ್ಯಕ್ಕೆ ಅವಕಾಶ ನೀಡುತ್ತಾನೆ. ಸೈನ್ಯದ ದೊಡ್ಡ ಸಮೂಹದೊಂದಿಗೆ ಹನುಮಂತನನ್ನು ಅರಮನೆಗೆ ಕರೆತಂದಾಗ ಹನುಮಂತನು ಎತ್ತರದಲ್ಲಿ ಭಯರಹಿತನಾಗಿ ನಿಂತಿದ್ದನು. ರಾವಣನ ಮುಂದೆ

ಹನುಮಂತನನ್ನು ನಿಲ್ಲಿಸಲಾಗಿ, ಯಾವ ಆಸನ ಗೌರವವನ್ನು ನೀಡಲಿಲ್ಲ. ತನ್ನ ಆತ್ಮಗೌರವವನ್ನು ಉಳಿಸಲು ಮತ್ತು ತನ್ನ ಯಜಮಾನ ಶ್ರೀರಾಮನ ಸಂದೇಶವನ್ನು ಗೌರವಿಸಲು, ಹನುಮಾನ್ ತನ್ನ ಶಕ್ತಿಶಾಲಿ ಬಾಲವನ್ನು ಬಳಸಿ ಆಸನವನ್ನು ರೂಪಿಸಿ ಅದರಲ್ಲಿ ರಾವಣನ ಸಿಂಹಾಸನಕ್ಕಿಂತ ಎತ್ತರಕ್ಕೆ ಕುಳಿತನು. ಈ ಕ್ರಿಯೆ ಎಲ್ಲರಿಗೂ ಆಶ್ಚರ್ಯ ತಂದಿತು. ರಾವಣನ ಸಿಂಹಾಸನಕ್ಕಿಂತಲೂ ಎತ್ತರಕ್ಕೆ ಕುಳಿತಿರುವುದು ರಾವಣನ ಅಹಂಕಾರಕ್ಕೆ ನೇರವಾಗಿ ಸವಾಲಾಗಿತ್ತು, ಆದರೆ ಹನುಮಂತನು ಶಾಂತವಾಗಿಯೂ ಗೌರವಪೂರ್ವಕವಾಗಿಯೂ ಧೈರ್ಯದಿಂದ ರಾವಣನಿಗೆ "ಸೀತೆಯನ್ನು ಮರಳಿ ನೀಡು ಮತ್ತು ಬದುಕು, ಇಲ್ಲದಿದ್ದರೆ ಶ್ರೀರಾಮನಿಂದ ನಾಶವನ್ನು ಎದುರಿಸು" ಎಂದು ಎಚ್ಚರಿಕೆ ನೀಡಿದನು. ಕೋಪಗೊಂಡ ರಾವಣ, ಹನುಮಂತನ ಬಾಲಕ್ಕೆ ಬೆಂಕಿ ಹಾಕುವಂತೆ ಆಜ್ಞೆ ನೀಡಿದನು. ಹನುಮಾನ್ ಬೆಂಕಿಯಿಟ್ಟ ಬಾಲವನ್ನೇ ತನ್ನ ಶಸ್ತ್ರವಾಗಿ ಬಳಸಿಕೊಂಡು, ಮುಕ್ತವಾಗಿಯೇ ಹೊರಬಂದು, ಲಂಕೆಯನ್ನೇ ಅಗ್ನಿಗೆ ಆಹುತಿ ನೀಡಿದನು. ಆದರೆ ಸೀತೆ ಇರುವ ಅಶೋಕ ವಾಟಿಕೆಯನ್ನು ಮಾತ್ರ ಉಳಿಸಿಕೊಂಡನು.

**ಪ್ರಸ್ತುತ ಪೀಳಿಗೆಗೆ ನೈತಿಕ ಪಾಠಗಳು:–**

1. ನಮ್ಮ ಸ್ವಯಂ ಮೌಲ್ಯವನ್ನು ಅರಿತುಕೊಳ್ಳಬೇಕು.

2. ಸತ್ಯವು ಯಾವುದೇ ಶಕ್ತಿಯ ಮುಂದೆ ಬಾಗುವುದಿಲ್ಲ.

3. ಯಾವುದೇ ಸತ್ಕಾರ್ಯ ಮಾಡುವಾಗ ಧೈರ್ಯವು ಕಾರ್ಯದ ಉದ್ದೇಶದಿಂದ ಬರುತ್ತದೆಯೇ ವಿನಾ ಅಹಂಕಾರದಿಂದಲ್ಲ.

4. ದುರುದ್ದೇಶದಿಂದ ಯಾರಾದರೂ ಪ್ರಚೋದಿಸಿದಾಗ ಶಾಂತವಾಗಿ ಯೋಚಿಸಬೇಕು.

5. ಒಬ್ಬ ವ್ಯಕ್ತಿಗೆ ತನ್ನ ಗುಣ, ಸ್ವಭಾವಗಳಿಂದ ಗೌರವ, ಮರ್ಯಾದೆ ದೊರೆಯುತ್ತದೆಯೇ ಹೊರತು ತನ್ನ ಸ್ಥಾನ–ಮಾನದಿಂದಲ್ಲ.

**ಜೀವನ ನಡೆಸಲು ಉತ್ತಮ ನೈತಿಕ ಪ್ರಜ್ಞೆ ಉಂಟು ಮಾಡುವ ನಮ್ಮ ಧಾರ್ಮಿಕ ಗ್ರಂಥವಾದ ಮಹಾಭಾರತದಿಂದ ಒಂದೆರಡು ಪ್ರಸಂಗಗಳು**

**❖ ಶ್ರೀಕೃಷ್ಣನ ನೆರವು:**

ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಸಹಾಯಕ್ಕಾಗಿ ಅರ್ಜುನ ಮತ್ತು ದುರ್ಯೋಧನರಿಬ್ಬರೂ ಒಂದೇ ವೇಳೆಗೆ ಶ್ರೀಕೃಷ್ಣನ (ದೇವರ ಅವತಾರ) ಮನೆಗೆ ಸಹಾಯ ಕೋರಿ ಬರುತ್ತಾರೆ. ಆಗ ಶ್ರೀಕೃಷ್ಣನು ಭೋಜನದ ನಂತರ ವಿಶ್ರಾಂತಿಯಲ್ಲಿರುತ್ತಾನೆ. ದುರ್ಯೋಧನ ತನ್ನ ಘನತೆಗೆ ತಕ್ಕಂತೆ ಶ್ರೀಕೃಷ್ಣನ ತಲೆಯ ಬಳಿ ಕೂರುವುದೇ ಸರಿ ಎಂದುಕೊಂಡು ಹಾಗೆಯೇ ಕುಳಿತುಕೊಳ್ಳುತ್ತಾನೆ. ಅರ್ಜುನ ಶ್ರೀಕೃಷ್ಣನ ಪಾದವೇ ತನಗೆ ಶ್ರೀರಕ್ಷೆ ಎಂದು ಭಾವಿಸಿ, ಭಗವಂತನ ಪಾದದ ಬಳಿಯೇ, ಕೂರುತ್ತಾನೆ. ಎಚ್ಚರಗೊಂಡ ಭಗವಂತನು ಪಾಂಡವ ಹಾಗೂ ಕೌರವರ ಕ್ಷೇಮವನ್ನು ವಿಚಾರಿಸಿ ಬಂದ ವಿಷಯ ಏನೆಂದು ಕೇಳಲು, ಇಬ್ಬರೂ ಯುದ್ಧಕ್ಕೆ ಸಹಾಯ ಕೋರಿ ಬಂದಿರುವುದಾಗಿ ತಿಳಿಸುತ್ತಾರೆ. ಆಗ ಶ್ರೀಕೃಷ್ಣನು ಅವರಿಬ್ಬರಿಗೂ ತನ್ನ ಹದಿನಾರು ಅಕ್ಷೌಹಿಣಿ ಸೇನೆ ಅಥವಾ ತಾನು ಮಾತ್ರ ಇವೆರಡರಲ್ಲಿ ಒಬ್ಬರು ಒಂದನ್ನು ಮಾತ್ರ ಆಯ್ಕೆಮಾಡಿ ಕೊಳ್ಳುವಂತೆ ಹೇಳುತ್ತಾನೆ. ದುರ್ಯೋಧನನು ಶ್ರೀಕೃಷ್ಣನ ಹದಿನಾರು ಅಕ್ಷೌಹಿಣಿ ಸೇನೆಯನ್ನು ಆಯ್ಕೆಮಾಡಿ ಕೊಳ್ಳುವ ಅವಕಾಶ ಸಿಕ್ಕಾಗ ತುಂಬಾ ಸಂತೋಷದಿಂದ ಸೇನೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಅರ್ಜುನ ಸಿಕ್ಕಿದ ಅವಕಾಶಕ್ಕಾಗಿ ಕೃತಜ್ಞನಾಗಿ ತಕ್ಷಣ ಕೃಷ್ಣನನ್ನು ಆಯ್ಕೆ ಮಾಡುತ್ತಾನೆ.

ಅಂತಿಮವಾಗಿ ಕೌರವರು ಯುದ್ಧದಲ್ಲಿ ಸೋತು ಹೋಗುತ್ತಾರೆ.

ಈ ಪ್ರಸಂಗದಲ್ಲಿ ಅರ್ಜುನ ಮತ್ತು ದುರ್ಯೋಧನನ ಆಯ್ಕೆಗಳಿಂದ ಗೋಚರವಾಗುವ **ನೈತಿಕ ಪಾಠಗಳು — ಇಂದಿನ ಜೀವನಕ್ಕಾಗಿ:**

1. ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಜ್ಞಾನದ ಅಗತ್ಯವಿದೆ.

2. ಜೀವನದಲ್ಲಿ ಸೂಕ್ತ ಮಾರ್ಗದರ್ಶಕರಿದ್ದಲ್ಲಿ ಏನನ್ನಾದರೂ ಸಾಧಿಸಬಹುದು.

3. ಧರ್ಮದ ಮೇಲೆ ನಂಬಿಕೆ ನಿಜವಾದ ಯಶಸ್ಸಿನೆಡೆಗೆ ಕರೆದೊಯ್ಯುತ್ತದೆ.

4. ಅಹಂಕಾರವು ನಿರ್ಣಯ ಕೈಗೊಳ್ಳುವ ಕ್ಷಮತೆಯನ್ನು ಹಾಳುಮಾಡುತ್ತದೆ.

5. ನಾಯಕತ್ವ ಎಂದರೆ ಒಬ್ಬರನ್ನು ತಮ್ಮ ನಿಯಂತ್ರಣದಲ್ಲಿಟ್ಟು ಕೊಳ್ಳುವುದಲ್ಲ, ಬದಲಾಗಿ ಸೂಕ್ತ ಮಾರ್ಗದರ್ಶನ ನೀಡುವುದು.

**❖ ಭೀಮನ ಗರ್ವಭಂಗ:**

ಪಾಂಡವರ ವನವಾಸದ ಸಂದರ್ಭದಲ್ಲಿ, ಭೀಮನು (ದ್ವಿತೀಯ ಪಾಂಡವ ಸೋದರ, ಅಪಾರ ಶಕ್ತಿಗೆ ಪ್ರಸಿದ್ಧ) ದ್ರೌಪದಿಯ ಆಸೆಯನ್ನು ನೆರವೇರಿಸಲು ಸೌಗಂಧಿಕಾ ಪುಷ್ಪದ ಹುಡುಕಾಟಕ್ಕೆ ಹೋದನು. ಹಿಮಾಲಯದ ಮಾರ್ಗದಲ್ಲಿ ಅವನು ಬಲಹೀನವಾಗಿ ಕಾಣುವ ಒಂದು ಮುದಿ ಕೋತಿಯನ್ನು (ಹನುಮಂತನನ್ನು) ಕಂಡನು. ಅದರ ಬಾಲ ಹಾದಿಗಡ್ಡಲಾಗಿತ್ತು. ಭೀಮ ಆ ಮುದಿ ಕೋತಿಯ ನಿಜವಾದ ಗುರುತಿನ ಬಗ್ಗೆ ಅರಿವಿರದೆ, ಗರ್ವದಿಂದ ಹೇಳಿದನು, "ಎಲವೋ ಮುದಿ ಕೋತಿ, ಸರಿಸು ನಿನ್ನ ಬಾಲವನ್ನು" ಮುದಿ ಕೋತಿಯು ಉತ್ತರಿಸಿತು, "ನನಗೆ ಬಹಳ ವಯಸ್ಸಾಗಿದೆ. ಕ್ಷೀಣನಾಗಿದ್ದೇನೆ.

ನೀವು ಶಕ್ತಿಶಾಲಿಯಾಗಿ ಕಾಣುತ್ತೀರಿ. ನನ್ನ ಬಾಲವನ್ನು ಎತ್ತಿ ನಿಮ್ಮ ಪ್ರಯಾಣ ಮುಂದುವರೆಸಿರಿ." ಭೀಮನು ಆ ಮುದಿ ಕೋತಿಯ ಬಾಲವನ್ನು ಪಕ್ಕಕ್ಕೆ ಸರಿಸಲು ಮುಂದಾದನು. ಬಾಲವನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸಿದನು, ಆದರೆ ಎಷ್ಟೇ ಪ್ರಯತ್ನಿಸಿದರೂ ಅದು ಒಂದು ಇಂಚೂ ಕದಲಲಿಲ್ಲ. ಭೀಮನು ಆಶ್ಚರ್ಯಚಕಿತನಾಗಿ ಇದು ಸಾಮಾನ್ಯ ಮುದಿ ಕೋತಿಯಲ್ಲವೆಂದು ಅರಿತು, ವಿನಯಪೂರ್ಣನಾಗಿ, ಮುದಿ ಕೋತಿಯಲ್ಲಿ ತನ್ನ ತಪ್ಪಿನ ಕ್ಷಮೆ ಯಾಚಿಸಿದನು. ಹನುಮಂತನು ಆಗ ತನ್ನ ನಿಜವಾದ ರೂಪವನ್ನು ಬಹಿರಂಗಪಡಿಸಿದನು. (ಇಬ್ಬರೂ ವಾಯು ಪುತ್ರರು ಹಾಗೂ ಸಹೋದರರು) ಹನುಮಂತನು ಭೀಮನ ಪ್ರಾರ್ಥನೆಗೆ ಸಂತುಷ್ಟನಾಗಿ, ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ರಥ ಧ್ವಜದಲ್ಲಿ (ಹನುಮನ ಧ್ವಜದಲ್ಲಿ) ತಾನು ಇದ್ದುಕೊಂಡು ಜಯ ಮತ್ತು ರಕ್ಷಣೆಯನ್ನು ನೀಡುವುದಾಗಿ ಆಶೀರ್ವದಿಸಿದನು.

**ಪ್ರಸ್ತುತ ಪೀಳಿಗೆಗೆ ನೈತಿಕ ಪಾಠಗಳು:–**

1. ನಿಜವಾದ ಪೌರುಷ ಮೆರೆಯಲು ವಿನಯದಿಂದ ವರ್ತಿಸುವುದು ಅಗತ್ಯ.

2. ಬಾಹ್ಯರೂಪವನ್ನಾಧರಿಸಿ ಯಾರೊಬ್ಬರ ಬಲಾಬಲಗಳನ್ನು ನಿರ್ಧರಿಸಬಾರದು.

3. ಹಿರಿಯರು ಮತ್ತು ಜ್ಞಾನಿಗಳನ್ನು ಗೌರವಿಸಬೇಕು.

4. ಅಹಂಕಾರವು ಮಾನವನ ಪ್ರಗತಿಗೆ ಶತ್ರು.

5. ವಿನಯವಂತ ಮನುಷ್ಯರಿಗೆ ದೈವಿಕ ಸಹಾಯ ಒದಗಿ ಬರುವದು.

**❖ ಅರಗಿನ ಮನೆ ಪ್ರಸಂಗ:**

ಪಾಂಡವರ ಮೇಲಿನ ಅಸೂಯೆಯಿಂದ ಕೌರವರು, ಅವರನ್ನು ವಾರಣಾವತ ಎಂಬ ಪ್ರದೇಶದಲ್ಲಿ ಪುರೋಚನನಿಂದ ನಿರ್ಮಿಸಲಾದ ಅರಗಿನ ಅರಮನೆಗೆ ಪೂಜೆಯ ನೆಪವೊಡ್ಡಿ ಕಳುಹಿಸಿದರು. ಆ ಸಮಯದಲ್ಲಿ ಕುಂತಿ ಮಾತೆಯೊಡಗೂಡಿ ಐದು ಜನ ಪಾಂಡವರನ್ನು ಅಲ್ಲಿಯೇ ಸುಟ್ಟು ಕೊಲ್ಲಲು ಕೌರವರು ಯೋಜನೆಯನ್ನು ರೂಪಿಸಿದರು . ಜ್ಞಾನಿಯಾದ ಮಂತ್ರಿ ವಿದುರ, ಗುಪ್ತವಾಗಿ ಯುಧ್ಧಿಷ್ಠಿರನಿಗೆ ಎಚ್ಚರಿಸಿದರು. ಅಪಾಯವನ್ನು ತಿಳಿದುಕೊಂಡ ಯುಧಿಷ್ಠಿರನು ಭೀಮನಿಗೆ ವಿಷಯವನ್ನು ತಿಳಿಸಿ, ಒಬ್ಬ ಸುರಂಗ ನಿರ್ಮಿಸುವವನ ಸಹಾಯದಿಂದ ಮನೆಯ ಕೆಳಗೆ ಸುರಂಗ ನಿರ್ಮಿಸುವಂತೆ ಭೀಮನಿಗೆ ಹೇಳಿದನು. ಇದರಿಂದಾಗಿ ಬಹಳ ಎಚ್ಚರಿಕೆಯಿಂದಿದ್ದ ಭೀಮನು ಒಂದು ರಾತ್ರಿ ಪುರೋಚನನು ಅರಮನೆಗೆ ಬೆಂಕಿಯನ್ನಿಟ್ಟಾಗ ತಾಯಿ ಹಾಗೂ ಎಲ್ಲಾ ಸಹೋದರರನ್ನು ಹೊತ್ತು ಪಥಕದ ಮೂಲಕ ತಪ್ಪಿಸಿಕೊಂಡು ಆಚೆ ಹೋಗುತ್ತಾನೆ. ಪರಿಸ್ಥಿತಿ ಪಾಂಡವರು ಸತ್ತಂತೆ ತೋರುವಂತೆ ಮಾಡಿದವು. ಕೌರವರ ಈ ಯೋಜನೆ ವಿಫಲಗೊಂಡಿತು, ಪಾಂಡವರು ಗುಪ್ತವಾಗಿ ಬದುಕುಳಿದರು.

**ಪ್ರಸ್ತುತ ಪೀಳಿಗೆಗೆ ನೈತಿಕ ಪಾಠಗಳು:–**

1. ಸುಖ ಸೌಕರ್ಯದ ಹಿಂದಿನ ಗುಪ್ತ ಅಪಾಯಗಳ ಬಗ್ಗೆ ಎಚ್ಚರಿಕೆಯಾಗಿರಬೇಕು.

2. ಜ್ಞಾನ, ಸಮಯ ಸ್ಫೂರ್ತಿ ಮತ್ತು ಯೋಜನೆಗಳಿಂದ ದುಷ್ಟ ಉದ್ದೇಶಗಳನ್ನು ವಿಫಲಗೊಳಿಸಬಹುದು.

3. ನಿಷ್ಠಾವಂತರು, ಜ್ಞಾನಿಗಳು ಆದ ಸ್ನೇಹಿತರನ್ನು ಗೌರವಿಸಬೇಕು.

4. ಮೌನವಾಗಿರುವ ಬುದ್ಧಿವಂತರ ಶಕ್ತಿಯನ್ನು ಕಡಿಮೆಯಾಗಿ ಅಂದಾ–ಜಿಸಬಾರದು.




**ರೂಪಾ ವಿಶ್ವೇಶ್**
7259826957


## ಬ್ರಾಹ್ಮಣರು

ಬ್ರಾಹ್ಮಣರಲ್ಲ ಭೋಜನ ಪ್ರಿಯರು
ಬ್ರಾಹ್ಮಣರೆಲ್ಲ ಬಹುಜನ ಪ್ರಿಯರು
ವೇದಶಾಸ್ತ್ರಗಳ ಪಠಣಕೆ ಮಾತ್ರ
ಸೀಮಿತರಲ್ಲ ಈ ಜನರು ।
ಸಮಯವು ಬರಲು ಸಮರ ಸಿದ್ಧರಿಹ
ಭಾರ್ಗವ ರಾಮನ ವಂಶಜರು ॥
ಅಡುಗೆಯ ಮಾಡುವ ಪಾಕ ಪ್ರವೀಣರು
ಮಾತ್ರವೇ ಅಲ್ಲ ಇವರುಗಳು ।
ರಾಷ್ಟ್ರವ ಕಟ್ಟಲು ಸಮರ್ಥನಿದ್ದ
ವಿಶ್ವೇಶ್ವರಯ್ಯನ ಬಂಧುಗಳು ॥
ಕಾರಂತ, ಮಾಸ್ತಿ, ಬೇಂದ್ರೆ, ಗುಂಡಪ್ಪ
ಸಾಹಿತ್ಯ ಲೋಕದ ತಾರೆಯರು ।
ಬಾಲಮುರಳಿ, ಸುಬ್ಬಲಕ್ಷ್ಮಿಯರು
ಸಂಗೀತ ಕ್ಷೇತ್ರದ ದಿಗ್ಗಜರು ॥
ಛತ್ರಪತಿಯ ಗುರು ರಾಮದಾಸರು
ವಿಜಯನಗರದ ವಿದ್ಯಾರಣ್ಯರು ।
ಆದಿಶಂಕರ, ಚಾಣಕ್ಯರಂಥ
ಮನನಿಗರೆಲ್ಲಾ ಬ್ರಾಹ್ಮಣರು ॥
ಬ್ರಾಹ್ಮಣನಾದರೂ ರಾವಣನನ್ನು
ಎಂದೂ ಒಪ್ಪದ ಸಾತ್ವಿಕರು ।
ಸ್ವಾರ್ಥವ ತ್ಯಜಿಸಿ
ಸಮಾಜಸೇವೆಯ
ಮಾಡುತಲಿರುವವರು
ಬ್ರಾಹ್ಮಣರು ॥




**ಗೋವಿಂದ್ ಬಿ.ಈ.**
9167762988

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ - ೨೦೨೫


ರಘುನಂದನ್ ಎ.ಜಿ.


ರವಿಶಂಕರ್ ಆರ್. ಪಿ.


ರಾಧಾ ಶ್ರೀಕಾಂತ್


ಸರಸ್ವತಿ ನಟರಾಜ್


ಯೋಗೀಶ್ ಬಿ. ಈ.


ಲಕ್ಷ್ಮೀಶ್ರೀ ಅಜಯ್


ರೂಪಾ ವಿಶ್ವೇಶ್

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ – ೨೦೨೫


ಅರುಣ್ ವೆಂಕಟಾಚಲಯ್ಯ


ನಾಗರಾಜ್ ಎನ್. (ಬಾಣಸವಾಡಿ)


ನಿರ್ಮಲಾ ಸುಧೀಂದ್ರ


ಪದ್ಮನಾಭ್


ಪೂರ್ಣಿಮಾ ಆರ್.ಎ.


ಭಾನುಮತಿ ಟಿ.ಎನ್.


ಸರ್ವಮಂಗಳಾ ಶ್ರೀನಿವಾಸ್


ಮಂಜುನಾಥ್ ಆರ್.ಎನ್.

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ - ೨೦೨೫


ನಳಿನಿ ಸುಬ್ರಹ್ಮಣ್ಯಂ


ನಾಗರತ್ನ ರಾಮು


ತಂಗಮಣಿ ಪದ್ಮನಾಭನ್


ನಂದಿನಿ ಪಿ. ಕುಮಾರ್


ಅರುಣ್ ಎಚ್.ಜಿ.


ಉಮಾಶಂಕರ್ ಆರ್. ಪಿ.


ಗೋವಿಂದರಾಜು ಡಿ.ಎಸ್.

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ - ೨೦೨೫


ಲತಾ ಎಸ್.ಆರ್.


ವನಿತಾ ಮಂಜುನಾರಾಯಣ್


ಶುಭ ಗಾಯತ್ರಿ


ವಿಜಯಕುಮಾರ್ ಎಸ್. ಆರ್.


ಶೈಲಾ ಚಂದ್ರಮೌಳಿ


ಶೇಷಗಿರಯ್ಯ ಜೆ.ಡಿ.ಕೆ.

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆ ಪ್ರದರ್ಶನ - ೨೦೨೫



ಶ್ರೀದೇವಿ ಬಾಲಸುಬ್ರಹ್ಮಣ್ಯ



ಶ್ರೀನಿವಾಸ್ ಆರ್. ಎ.



ಸತ್ಯಪ್ರಸಾದ್ ಎಸ್. ಆರ್.



ಸುಹಾಸಿನಿ ಅಜಯ್



ಸುಮನ್ ಜಿ. ಕೃಷ್ಣ

# ಶ್ರೀ ನಾಗೇಶ್ವರ ಕ್ಷೇತ್ರದ ಇತಿಹಾಸ

ಭರತಖಂಡದಲ್ಲಿ ಪುಣ್ಯಕ್ಷೇತ್ರಗಳಿಗೆ ಲೆಕ್ಕವಿಲ್ಲ. ಪ್ರತಿಯೊಂದಕ್ಕೂ ಒಂದೊಂದು ಇತಿಹಾಸ, ಜನಜನಿತವಾದ ದಂತಕಥೆಗಳು ಇತ್ಯಾದಿ ಅನೇಕ ವಿಷಯಗಳು ಆಧಾರವಾಗಿವೆ.

ಇಂತಹ ಪವಿತ್ರ ಕ್ಷೇತ್ರಗಳಲ್ಲಿ ಶ್ರೀ ನಾಗೇಶ್ವರ ಕ್ಷೇತ್ರ ಒಂದು. ಇದು ಬೆಂಗಳೂರು ಡಿಸ್ಟ್ರಿಕ್ಟ್, ಅನೇಕಲ್ ತಾಲ್ಲೂಕಿಗೆ ಸೇರಿದ ಕಿತ್ತಿಗಾನಹಳ್ಳಿಯ ಬಳಿ ಇದೆ. ಈ ಗ್ರಾಮ ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಶೃಂಗೇರಿ ಮಠದ ಶಾಖೆಯಾದ ಶ್ರೀ ಶಿವಗಂಗಾ ಮಠಕ್ಕೆ ಹಿಂದೆ ಅಲ್ಲಿ ಪಟ್ಟಾಭಿಷಿಕ್ತರಾಗಿದ್ದ ಶ್ರೀಗಂಗಾಧರ ಭಾರತಿ ಸ್ವಾಮಿಗಳೆಂಬುವವರ ಕಾಲದಲ್ಲಿ ಶ್ರೀಮಠಕ್ಕೆ ಪಾಳೆಯಗಾರರಿಂದ ದತ್ತಿಯಾಗಿ ಕೊಡಲ್ಪಟ್ಟಿತೆಂದು ತಿಳಿದುಬರುತ್ತೆ. ಪ್ರಸ್ತುತ ಶ್ರೀ ನಾಗೇಶ್ವರ ಕ್ಷೇತ್ರವು ಬೆಂಗಳೂರಿನ ಪೂರ್ವ ದಿಕ್ಕಿನಲ್ಲಿ, ಸೇಲಂ ಬೆಂಗಳೂರು ರಸ್ತೆಯಲ್ಲಿ ಬೆಂಗಳೂರಿನಿಂದ 14 ಮೈಲಿ ದೂರದಲ್ಲಿ, ರಸ್ತೆಯಿಂದ 2 ಫರ್ಲಾಂಗ್ ಅಂತರದಲ್ಲಿದೆ.

ಈ ಕ್ಷೇತ್ರದ ವಿಷಯವಾಗಿ ಜನಜನಿತವಾದ ಒಂದು ದಂತಕಥೆ ಇದೆ.

ಈಗ್ಗೆ ಸುಮಾರು ಎಂಟು ಶತಮಾನಗಳ ಹಿಂದೆ ಈ ಗ್ರಾಮಕ್ಕೆ ಕೃಷ್ಣಗಾನಹಳ್ಳಿ > ಕಿಟ್ಟಿಗಾನಹಳ್ಳಿ ಎಂಬ ಹೆಸರಿತ್ತು. ಆಗ ಮದ್ರಾಸ್ ಪ್ರಾಂತದ ಸೇಲಂ ಜಿಲ್ಲೆಯಲ್ಲಿ ಮುಂಜಪತ್ತೂರು ಎಂಬ ಅಗ್ರಹಾರವಿತ್ತು. ಅಲ್ಲಿ "ಬೃಹಚ್ಚರಣ" ಎಂಬ ಸ್ಮಾರ್ತ ಬ್ರಾಹ್ಮಣ ವರ್ಗಕ್ಕೆ ಸೇರಿದ, ಕೌಂಡಿನ್ಯಸ ಗೋತ್ರದ ಕುಟುಂಬವಿದ್ದಿತು. ಆಗಿನ ರಾಜಕೀಯದಲ್ಲಿನ ಪ್ರತಿಕೂಲ ಪರಿಸ್ಥಿತಿಗೆ ತುತ್ತಾದ ಆ ಕುಟುಂಬದವರು ಅಲ್ಲಿಂದ ಹೊರಟು ಎಲ್ಲೆಲ್ಲಿಯೋ ಅಲೆದು ಕಡೆಗೆ ಈ ಕೃಷ್ಣಗಾನಹಳ್ಳಿಗೆ ಬಂದು ನೆಲೆಸಿದರು.

ಈ ದಂಪತಿಗಳಿಗೆ ಬಹುಕಾಲ ಮಕ್ಕಳಾಗಲಿಲ್ಲ. ಅವರು ಸಂತತಿಯಿಲ್ಲವೆಂಬ ವ್ಯಥೆಯಿಂದ ನೊಂದವರಾಗಿ ಒಬ್ಬ ಮಹನೀಯರ ಆಜ್ಞಾನುಸಾರವಾಗಿ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯನ್ನು ಉಪಾಸನೆ ಮಾಡುತ್ತಿದ್ದರು.

ಹೀಗೆ ಕೆಲವು ಕಾಲ ಕಳೆಯಲು ಆ ಬ್ರಾಹ್ಮಣನ ಪತ್ನಿಯು ಗರ್ಭವತಿಯಾದಳು. ನವಮಾಸಗಳು ತುಂಬಲು ಆಕೆಯು ಒಂದು ಗಂಡು ಕೂಸನ್ನೂ, ಜೊತೆಯಲ್ಲೇ ಒಂದು ನಾಗರಹಾವನ್ನೂ ಹಡೆದಳು. ಇದು ಎಲ್ಲರಿಗೂ ಪರಮಾಶ್ಚರ್ಯವಾಗಿ ಕಂಡಿತು. ಆದರೂ ಅವರು ಆ ಮಗುವನ್ನು ಮತ್ತು ಆ ಸರ್ಪವನ್ನೂ ಆದರದಿಂದ ಪೋಷಿಸುತ್ತಿದ್ದರು. ಆ ಸರ್ಪವೂ ಮನುಷ್ಯ ಯೋನಿಯಲ್ಲಿ ಜನಿಸಿದ್ದುದರಿಂದ ವಿಷಮಯವಾಗಿಲ್ಲದೇ ಆ ಬಾಲಕನ ಜೊತೆಯಲ್ಲಿ ಆಟಪಾಟಗಳನ್ನು ಆಡಿಕೊಂಡು ಕಾಲ ಕಳೆಯುತ್ತಿದ್ದಿತು. ಆ ಬ್ರಾಹ್ಮಣನು ಮಗುವಿಗೆ ಸುಬ್ರಹ್ಮಣ್ಯನೆಂದು ನಾಮಕರಣ ಮಾಡಿದನು. ಹೀಗೆಯೇ ಎಂಟು ವರ್ಷ ಕಳೆಯಲು ಆತನು ಗರ್ಭಾಷ್ಟಮದಲ್ಲಿ ಗಂಡುಮಗುವಿಗೆ ಉಪನಯನ ಮಾಡಬೇಕೆಂದು ನೆಂಟರಿಷ್ಟರಿಗೆಲ್ಲಾ ಆಹ್ವಾನ ಕಳುಹಿಸಿದನು.

ಉಪನಯನದ ದಿನ ಪ್ರಾತಃಕಾಲದಲ್ಲಿ ದಂಪತಿಗಳು ತಮ್ಮ ಕಾರ್ಯಗೌರವಗಳಲ್ಲಿ ಮಗ್ನರಾಗಿರಲು ಹಾವಿನ ಜ್ಞಾಪಕವೇ ಅವರಿಗೆ ಬರಲಿಲ್ಲ. ಅದು ಎಂದಿನಂತೆ ಆಹಾರದ ಕಾಲಕ್ಕೆ ಸರಿಯಾಗಿ ತಾಯಿ ಅಡುಗೆ ಮಾಡುತ್ತಿದ್ದ ಒಲೆಯ ಬಳಿ ಬಂದು ತೆಕ್ಕೆ ಹಾಕಿ ಮಲಗಿತ್ತು. ಆ ದಿನ ಅಡಿಗೆಗೆ ತಾಯಿ ಸ್ವತಃ ನಿಲ್ಲದೇ ಬೇರೆಯವರು ನಿಂತಿದ್ದರು. ಮದ್ಯಾಹ್ನದ ವೇಳೆಗೆ ಅಡಿಗೆ ಪೂರೈಸಲು ಹಾವು ಇರುವುದನ್ನು ತಿಳಿಯದೇ ಅಡಿಗೆ ಮಾಡುತ್ತಿದ್ದವರು ಅನ್ನದ ತಪ್ಪಲೆಯನ್ನೋ, ಪಾಯಸದ ತಪ್ಪಲೆಯನ್ನೋ ಆ ಹಾವಿನ ಮೇಲೆ ಇಳಿಸಿದರು. ಆ ಬಿಸಿಯು ತಗಲುತ್ತಲೇ ಆ ಸರ್ಪವು ಇದ್ದ ಕಡೆಯಲ್ಲೇ ಮೃತಪಟ್ಟಿತು.

ಉಪನಯನದ ಕಾರ್ಯಕಲಾಪಗಳೆಲ್ಲವೂ ಮುಗಿದ ನಂತರ ತಾಯಿಯ ಗಮನ ಸರ್ಪದ ಮೇಲೆ ಬಿದ್ದಿತು. ಎಲ್ಲಿ ಹುಡುಕಿದರೂ ಅದು ಸಿಗಲಿಲ್ಲ. ಕಡೆಗೆ ಒಲೆಯ ಹತ್ತಿರ ಮಾಮೂಲು ಸ್ಥಳದಲ್ಲಿ ನೋಡಲು ಅದು ಸತ್ತು ಬಿದ್ದಿತ್ತು. ಆಗ ಏನು ಮಾಡಬೇಕೆಂದು ತೋಚಲಿಲ್ಲ. ಮನೆಯಲ್ಲಿ ಮಂಗಳಕಾರ್ಯದ ಮಧ್ಯೆ ಅಮಂಗಳ ಪ್ರಾಪ್ತಿಯಾಯಿತು. ಅನೇಕರಿಗೆ ಸತ್ತದ್ದು ಹಾವೆಂದು ಉದಾಸೀನವಿದ್ದರೂ ಹೆತ್ತ ಮಾತಾಪಿತೃಗಳಿಗೆ ದುಃಖದ ವ್ಯಾಪ್ತಿ ಹೇಗೆ ತಪ್ಪುತ್ತದೆ?

ಇವರು ಹೀಗೆ ಯೋಚಿಸುತ್ತಿರಲು ಆ ಸತ್ತ ನಾಗಪ್ಪ ಅದರ ಸಹೋದರನಾದ ನೂತನ ವಟು ಸುಬ್ರಹ್ಮಣ್ಯನ ಮೇಲೆ ಆವೇಶ ಬಂದು ತನಗಾಗಿ ದುಃಖಿಸಬಾರದೆಂದೂ, ತಾನು ಶಾಪಗ್ರಸ್ತನಾಗಿ ಮನುಷ್ಯರ ಹೊಟ್ಟೆಯಲ್ಲಿ ಹುಟ್ಟಿದ್ದುದಾಗಿಯೂ, ತನಗೆ ತೃಪ್ತಿಯಾಗಬೇಕಾದರೆ ಅವರು ಸರ್ಪಸಂಸ್ಕಾರ ಪೂರ್ವಕವಾಗಿ ತನ್ನ ಹೆಸರಿನಲ್ಲಿ ಅಶ್ವತ್ಥ ಪ್ರತಿಷ್ಠೆ, ನಾಗ ಪ್ರತಿಷ್ಠೆಗಳನ್ನು ಮಾಡಬೇಕೆಂದೂ ವರ್ಷಂಪ್ರತಿ ಆ ದಿನದಲ್ಲಿ ತನ್ನ ಆರಾಧನೆಯನ್ನು ಆ ವಂಶದವರೆಲ್ಲಾ ಆಚರಿಸಬೇಕೆಂದೂ ಈ ರೀತಿಯಾಗಿ ಮಾಡುತ್ತಾ ಬಂದರೆ, ತಾನು ಸಂತೋಷ ಪಡುವುದಲ್ಲದೇ, ಅವರ ವಂಶವೂ ಅಭಿವೃದ್ಧಿಯಾಗುವುದೆಂದೂ ಹೇಳಿತು. ಅದರ ಮಾತಿನಂತೆ ಆ ಬ್ರಾಹ್ಮಣನು ಗ್ರಾಮದ ಪಕ್ಕದಲ್ಲಿ ಆ ಸರ್ಪವನ್ನು ಸಂಸ್ಕರಿಸಿ ಅದೇ ಸ್ಥಳದಲ್ಲಿ ಒಂದು ಅಶ್ವತ್ಥ ವೃಕ್ಷವನ್ನು ನೆಡಿಸಿ ಅಲ್ಲಿ ನಾಗಪ್ರತಿಷ್ಠೆಯನ್ನೂ ಮಾಡಿಸಿದನು.

ಹೀಗೆಯೇ ಕೆಲವು ಕಾಲ ಕಳೆಯಲು ಆ ನಾಗಪ್ಪ ಪುನಃ ತನ್ನ ತಂದೆಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಸಮೀಪದಲ್ಲಿಯೇ ಪೂರ್ವಿಕರು ಗುಪ್ತವಾಗಿರಿಸಿದ್ದ ಧನವನ್ನು ತೋರಿಸಿ, ಆ ಹಣದಿಂದ ಕೆರೆಯನ್ನು ಕಟ್ಟಿಸುವಂತೆ ಹೇಳಿ ಕೆರೆಯನ್ನು ಕಟ್ಟಿಸುವ ಸ್ಥಳವನ್ನೂ, ಹಣವಿರುವ ಸ್ಥಳವನ್ನೂ ತೋರಿಸಿ ಹೊರಟು ಹೋಯಿತು. ಮರುದಿನ ಎದ್ದು ಆತನು ಸ್ವಪ್ನದ ನಿರ್ದೇಶದಂತೆ ಭೂಮಿಯನ್ನು ಅಗೆಯಲು ಅಲ್ಲಿ ಹೇರಳವಾದ ಧನವು ಸಿಕ್ಕಿತು. ಅದರಿಂದ ಆತನು ಹೆನ್ನಾಗರ, ಮೇನಾಗರ, ಪೆನ್ನಾಗರ ಎಂಬ ಮೂರು ಸ್ಥಳಗಳಲ್ಲಿ ಕೆರೆಗಳನ್ನು ಕಟ್ಟಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿಸಿ ಕೀರ್ತಿಶೇಷನಾದನು.

ಆ ಬ್ರಾಹ್ಮಣನ ವಂಶವು ಬೆಳೆದು ಈಗ ನೂರಾರು ಮನೆಗಳಾಗಿ ನಿಂತಿವೆ. ಆ ಕೆರೆಗಳ ಕೆಳಗೆ ಸಾವಿರಾರು ಎಕರೆ ಜಮೀನು ಸಾಗುವಳಿ ಆಗುತ್ತಾ ಲೋಕೋಪಕಾರವಾಗುತ್ತಿದೆ. ಆ ವಂಶಸ್ಥರೂ ಅವರ ಬಂಧು ಮಿತ್ರರೂ ಆ ದಿನ ಅಂದರೆ ಫಾಲ್ಗುಣ ಶು॥ ಪಂಚಮಿ ದಿನ ವರ್ಷಂಪ್ರತಿ ಅಂದಿನಿಂದ ಇಂದಿನವರೆಗೂ ಕೊಲೆನಾಗರೆಂಬ ಹೆಸರಿನಿಂದ ನಾಗಾರಾಧನೆ ಮಾಡುತ್ತಾ ಬರುತ್ತಿದ್ದಾರೆ.

ಈ ಕ್ಷೇತ್ರವು ಅಪ್ರಕಾಶವಾಗಿ ಅನೇಕರಿಗೆ ತಿಳಿಯದೇ ಅವ್ಯವಸ್ಥೆಯಲ್ಲಿದ್ದುದನ್ನು ಕಂಡು ಬಹುಧಾನ್ಯ ಸಂವತ್ಸರ ಮಾಘ ಬಹುಳ ಪಂಚಮಿ ತಾ॥ 8– 2 – 1939ನೇ ದಿನ ಸುಪ್ರಸಿದ್ಧ ಲೇಖಕರಾದ ಶ್ರೀ ಡಿ.ವಿ. ಗುಂಡಪ್ಪನವರೇ ಮೊದಲಾದ ಅನೇಕ ಮಹನೀಯರು ಆ ಮನೆತನಕ್ಕೆ ಸೇರಿದ ಕೀರ್ತಿಶೇಷರಾದ ಶ್ರೀ ಕೆ. ಪದ್ಮನಾಭಯ್ಯನವರ ಮೂಲಕ ಆ ಪುರಾತನ ನಾಗರುಗಳಿಗೂ, ಆ ಅಶ್ವತ್ಥಮರಕ್ಕೂ ಒಂದು ದೊಡ್ಡ ಜಗುಲಿಯನ್ನು ಕಟ್ಟಿಸಿ ಕ್ಷೇತ್ರವನ್ನು ಜೀರ್ಣೋದ್ಧಾರ ಮಾಡಿರುವುದಲ್ಲದೇ ಇದಕ್ಕೆ ಸಂಬಂಧಿಸಿದಂತೆ ಪಕ್ಕದಲ್ಲಿ ಶ್ರೀ ಶ್ರೀನಿವಾಸದೇವರ ಪುಟ್ಟ ದೇವಸ್ಥಾನ, ಚಿಕ್ಕದಾದರೂ ಅಚ್ಚುಕಟ್ಟಾದ ಶ್ರೀಲಕ್ಷ್ಮೀನಾರಾಯಣ ಎಂಬ ಕಲ್ಯಾಣಮಂಟಪ, ರಮ್ಯವಾದ ಪುಷ್ಪವಾಟಿಕೆ ಮುಂತಾದವುಗಳನ್ನು ಕಟ್ಟಿಸಿರುತ್ತಾರೆ, ಕ್ಷೇತ್ರಕ್ಕೆ ಅನೇಕರು ದತ್ತಿಗಳನ್ನು ಕೊಟ್ಟಿರುತ್ತಾರೆ. ನಾಗಾರಾಧನೆಯ ಕಾಲದಲ್ಲಿ ಷಷ್ಠೀದಿನ ಅಲ್ಲಿನ ಶ್ರೀ ಶ್ರೀನಿವಾಸದೇವರ ರಥೋತ್ಸವವೂ ನಡೆಯುತ್ತದೆ.

ಈ ಕ್ಷೇತ್ರವು ಮನಸ್ಸಿಗೆ ಶಾಂತಿದಾಯಕವಾಗಿಯೂ ಇದೆ.

ಮಂತ್ರೇ ತೀರ್ಥೇ ತಥಾದೈವೇ ದೈವಜ್ಞೇ ಭೇಷಜೇಗುರೌ।
ಯಾದೃಶೀ ಭಾವನಾಯತ್ರ ಸಿದ್ಧಿರ್ಭವತಿ ತಾದೃಶೀ॥

(ಮಂತ್ರದಲ್ಲಿಯೂ, ತೀರ್ಥದಲ್ಲಿಯೂ, ದೇವರಲ್ಲಿಯೂ, ಜೋತಿಷ್ಕನಲ್ಲಿಯೂ, ವೈದ್ಯನಲ್ಲಿಯೂ ಮತ್ತು ಗುರುವಿನಲ್ಲಿಯೂ ನಾವು ನಂಬಿಕೆಯನ್ನು ಹೇಗಿಟ್ಟರೆ ಹಾಗೆ ಫಲವನ್ನು ಕೊಡುವುದರಿಂದ ನಮ್ಮ ಸುತ್ತಮುತ್ತಲಿನಲ್ಲಿಯೇ ಇರುವ ಮಹಿಮಾನ್ವಿತವಾದ ಸ್ಥಳಗಳಿಗೆ ಹೋಗಿ ಪೂಜಿಸಿದರೆ ಸದ್ಗತಿಯುಂಟಾಗುವುದರಲ್ಲಿ ಸಂದೇಹವಿಲ್ಲ.)

ಮೂಲ: ಶ್ರೀನಾಗೇಶ್ವರ ಕ್ಷೇತ್ರದ ಇತಿಹಾಸ (ಪ್ರಕಟಣೆ: 1958)
ಲೇ॥: ಶಾಮಣ್ಣ ದೀಕ್ಷಿತರು









**ವಿ.ಎಸ್. ಮಣಿ**
9845055582

# "ಮರೆಗುಳಿತನ" (DEMENTIA) ಎಂಬ ಬೇನೆ



ಈ ವಿಷಯದ ಬಗ್ಗೆ ನನ್ನ ಚಿಂತನೆಯನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಈ ಒಂದು ತೊಂದರೆ ಸಾಮಾನ್ಯವಾಗಿ ವಯೋಸಹಜವೆನಿಸುತ್ತದೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ "ಡಿಮೆನ್ಶಿಯಾ" ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ವಯಸ್ಕರಲ್ಲಿ ಹೆಚ್ಚಾಗಿ ಕಾಣಬರುತ್ತದೆ. ಇದು ಮುಖ್ಯವಾಗಿ ನರಗಳ ದೌರ್ಬಲ್ಯ, ಸ್ಮರಣಶಕ್ತಿಯ ಏರುಪೇರು, ಚಿಂತನಾಶಕ್ತಿಯ ಅಡಚಣೆ ಇವುಗಳಿಂದ ಉಂಟಾಗಬಹುದು.

ಸಾಮಾನ್ಯವಾಗಿ ವಯಸ್ಸಾದಂತೆ ನೆನಪಿನ ಶಕ್ತಿಯ ನಷ್ಟ, ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ತೊಂದರೆ ಹಾಗೂ ಗೊಂದಲ ಉಂಟಾಗುತ್ತದೆ. ಎರಡನೆಯದಾಗಿ, ಮಾತನಾಡುವುದು, ಆಲೋಚನೆಗಳನ್ನು ವ್ಯಕ್ತಪಡಿಸುವುದು. ಓದು ಹಾಗೂ ಬರೆಯುವ ಹವ್ಯಾಸವಿದ್ದಲ್ಲಿ ಎಲ್ಲವೂ ಕ್ರಮೇಣ ಕುಂಠಿತವಾಗುತ್ತದೆ. ಮೂರನೆಯದಾಗಿ ಹಣಕಾಸಿನ ವ್ಯವಹಾರಗಳಲ್ಲಿ ಗೊಂದಲ, ದೈನಂದಿನ ಚಟುವಟಿಕೆಗಳಿಗೆ ಆಸಕ್ತಿ ಕಡಿಮೆ ಆಗುತ್ತದೆ. ಈ ದೌರ್ಬಲ್ಯದಿಂದ ಕುಟುಂಬದವರಿಗೂ ಸ್ವಲ್ಪ ಮಟ್ಟಿಗೆ ಕಿರಿಕಿರಿ ಅನ್ನಿಸಬಹುದು.

ಮರೆಗುಳಿತನದಿಂದ ಬಳಲುವ ವ್ಯಕ್ತಿಗೆ ದೈನಂದಿನ ಜೀವನದಲ್ಲಿ ತೊಂದರೆಗಳು ಆಗುವುದು ಸರ್ವೇಸಾಮಾನ್ಯ. ಮುಖ್ಯವಾಗಿ ಪರಿಚಯದವರೂ ಸಹ ಇದನ್ನು ಕಂಡು ತೊಂದರೆ ಕೊಡುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಹಾಗಾಗಿ ವಯಸ್ಸಾದಂತೆ ನಾವು ನಮ್ಮ ಆಲೋಚನೆ, ಸ್ಮರಣಶಕ್ತಿಯ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ವೈದ್ಯರು ಮರೆಗುಳಿತನ ಅನುಭವಿಸುತ್ತಿರುವ ಹಿರಿಯರಿಗೆ ಕುಟುಂಬದವರ ಅನುಕಂಪ, ನೆರವು, ಬಹುಮುಖ್ಯ ಎಂದು ಹೇಳುತ್ತಾರೆ. ಅವರ ನೆನಪಿನಶಕ್ತಿ ಹೆಚ್ಚು ಸಕ್ರಿಯವಾಗಲು ಬಂಧು-ಮಿತ್ರವರ್ಗದವರು ದಿನದಲ್ಲಿ ಕೊಂಚ ಸಮಯವಾದರೂ ಅವರೊಟ್ಟಿಗೆ ಕಳೆಯಬೇಕು. ಇದು ಅವರು ಹೆಚ್ಚು ಚಟುವಟಿಕೆಯಿಂದ ಇರಲು, ತನ್ಮೂಲಕ ಈ ಬೇನೆಯನ್ನು ಹತೋಟಿಯಲ್ಲಿಟ್ಟಿರಲು ಸಹಾಯವಾಗುತ್ತದೆ.

ಆದರೆ ಇಂದಿನ ಪರಿಸ್ಥಿತಿಯಲ್ಲಿ ಕುಟುಂಬದಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಸಮಸ್ಯೆಗಳಿರುತ್ತದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಸಮಯದ ಕೊರತೆ ಒಂದು ಸಮಸ್ಯೆ. ಇದರಿಂದಾಗಿ ಹಿರಿಯರೊಂದಿಗೆ ಆದರ, ಸಹನೆಗಳಿಂದ ಕಾಲ ಕಳೆಯುವುದು ಕಷ್ಟಸಾಧ್ಯ ಆದರೆ ಅತ್ಯವಶ್ಯಕ. ವೈದ್ಯರ ಪ್ರಕಾರ ಹಿರಿಯರೊಂದಿಗೆ ಅವರಿಗೆ ಪ್ರಿಯವಾದ, ನೆಮ್ಮದಿ ನೀಡುವ ವಿಷಯಗಳ ಚರ್ಚೆ, ಸಂಗೀತ, ಸಾಹಿತ್ಯ ಇತ್ಯಾದಿ ಚಟುವಟಿಕೆಗಳು ಅವರ ಮಾನಸಿಕ ಆರೋಗ್ಯಕ್ಕೆ ಸಹಾಯಕ.

ಮರೆಗುಳಿತನ ಒಂದು ವಯೋಸಹಜ ತೊಂದರೆಯಷ್ಟೇ. ಅದಕ್ಕೆ ಇರುವ ಕಾರಣಗಳನ್ನು ತಿಳಿಯಬೇಕು. ಇದು ವಿಟಮಿನ್ ಬಿ-12 ಕೊರತೆ, ರಕ್ತದೊತ್ತಡ, ತೀವ್ರವಾದ ಖಿನ್ನತೆ ಮುಂತಾದವುಗಳಿಂದ ಉಂಟಾಗಬಹುದೆಂಬ ಅಭಿಪ್ರಾಯ ವೈದ್ಯರದು. ಪ್ರಾರಂಭಿಕ ಹಂತದಲ್ಲೇ ಇದನ್ನು ನಾವು ಗಮನಿಸಿದರೆ ಸ್ವಲ್ಪಮಟ್ಟಿಗೆ ಉಪಶಮನ ಸಾಧ್ಯ. ಒಟ್ಟು ಕುಟುಂಬವಿದ್ದರೆ ಹಿರಿಯರಿಗೆ ಸಮಯ ಕಳೆಯಲು ಸಾಧ್ಯತೆಗಳು ಹೆಚ್ಚು. ಮನೆಯಲ್ಲಿ ಮೊಮ್ಮಕ್ಕಳಿದ್ದರೆ ಅವರ ಸಹವಾಸದಲ್ಲಿ ವೃದ್ಧರು ಹೆಚ್ಚು ಉಲ್ಲಾಸದಿಂದಿರುತ್ತಾರೆ. ತಮ್ಮ ಬಾಲ್ಯದ ಅನುಭವಗಳನ್ನು ಮಕ್ಕಳಿಗೆ ತಿಳಿಸಿ ಆನಂದಿಸುತ್ತಾರೆ.

"ಮರೆಗುಳಿತನ"ವನ್ನು ತಡೆಯುವುದು ಪೂರ್ತಿ ಸಾಧ್ಯವಿಲ್ಲದಿದ್ದರೂ ನಾವು ಅದನ್ನು ಕಡೆಗಣಿಸಿದರೆ, ವ್ಯಕ್ತಿಗೆ ಮತ್ತು ಕುಟುಂಬದವರಿಗೆ ತೊಂದರೆಯಾಗುತ್ತದೆ. ಮುಖ್ಯವಾಗಿ, ಮರೆಗುಳಿತನ ಇರುವವರಿಗೆ ಅವರ ಸಮಸ್ಯೆಯ ಬಗ್ಗೆ ಹೆಚ್ಚು ಅರಿವು ಇರುವುದಿಲ್ಲ. ತಾವು ಎಲ್ಲಿಗೆ ಹೋಗುತ್ತೇವೆ ಎಂಬುದು ಅರಿಯದೆ ತೊಂದರೆಗೆ ಒಳಗಾಗುತ್ತಾರೆ. ಈ ಸಂದರ್ಭದಲ್ಲಿ ಅಪರಿಚಿತರು ತೊಂದರೆ ಕೊಡುವ ಸಾಧ್ಯತೆ ಹೆಚ್ಚು. ಇದರಿಂದ ಕುಟುಂಬಗಳಿಗೂ ಕಷ್ಟ - ನಷ್ಟಗಳುಂಟಾಗಬಹುದು. ಪ್ರತಿಯೊಂದು ಮನೆಯಲ್ಲೂ ಹಿರಿಯರು ಇದ್ದೇ ಇರುತ್ತಾರೆ. ಅವರನ್ನು ನಾವು ಪ್ರೀತಿ ವಿಶ್ವಾಸಗಳಿಂದ ನೋಡಿಕೊಳ್ಳಬೇಕು. ತಾನು "ಮರೆಗುಳಿ" ಎಂಬ ಕೀಳರಿಮೆ ಅವರಿಗೆ ಬಾರದಂತೆ ಎಚ್ಚರ ವಹಿಸೋಣ. ಅಂಥವರಿಗೆ ನಮ್ಮ ಕೈಲಾದಷ್ಟು ನೆರವು ನೀಡೋಣ.



**ಬಿ ಪಿ ಸರಸ್ವತಿ**
7760634277

# ಮೃಗ



ಶತಮಾನಗಳ ಹಿಂದಿನ ಮಾತು. ಮನುಷ್ಯನು ತನ್ನ ಲಾಭಕ್ಕಾಗಿ ಕಾಡುಗಳನ್ನು ಅತಿಕ್ರಮಿಸಿಕೊಂಡು, ನಾಶ ಮಾಡಿ, ಕಾಡುಪ್ರಾಣಿಗಳನ್ನು ಹಿಡಿದು ತನ್ನ ಅನುಕೂಲಕ್ಕಾಗಿ ಬಳಸಲು ಶುರು ಮಾಡಿದನು. ಆಗ ಕಾಡಿನ ಪ್ರಾಣಿಗಳೆಲ್ಲ ಸೇರಿ ತಮ್ಮ ರಾಜನಾದ ಹುಲಿಯ ಬಳಿ ತೆರಳಿ, ಮನುಷ್ಯನಿಂದ ಆಗುತ್ತಿರುವ ತೊಂದರೆಗಳನ್ನು ತಿಳಿಸಿ, ಮನುಷ್ಯರ ವಿರುದ್ಧ ಯುದ್ಧ ಸಾರುವ ಬಗ್ಗೆ ಪ್ರಸ್ತಾಪಿಸಿತು.

ಕಾಡಿನ ರಾಜನಾದ ಹುಲಿ, ಈ ವಿಷಯವನ್ನು ವಿಮರ್ಶಿಸಿ, ನಂತರ ಕಾಡು ಪ್ರಾಣಿಗಳಿಗೆ ಮನುಷ್ಯನ ತಂಟೆಗೆ ಹೋಗುವುದು ಬೇಡ, ನಾವೆಲ್ಲ ಕಾಡು ಮೃಗಗಳು, ಮುಂದೊಂದು ದಿನ ನಮಗೆ ಮನುಷ್ಯನಿಂದ ಒಳ್ಳೆಯದಾಗಬಹುದು, ನಾವು ಕಾಡಿನಲ್ಲಿ ಇದ್ದುಬಿಡುವ ಎಂದು ಹೇಳಿ ಕಳುಹಿಸಿತು.

ಇದಾದ ನಂತರ ಮನುಷ್ಯ ಕಾಡನ್ನು ಮತ್ತೆ ಮತ್ತೆ ಅತಿಕ್ರಮಿಸುತ್ತಾ ಕಾಡುಪ್ರಾಣಿಗಳಾದ ಕೋತಿ, ಕರಡಿ, ಒಂಟೆ, ಆನೆ ಹಾಗೂ ಕೆಲ ಪಕ್ಷಿಗಳನ್ನು ಹಿಡಿದು ತನ್ನ ಮನರಂಜನೆ ಹಾಗೂ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಿದ್ದನು.

ಕೆಲ ಸಮಯದ ನಂತರ ಮತ್ತೆ ಒಂದೆಡೆ ಸೇರಿದ ಕಾಡು ಪ್ರಾಣಿಗಳು ತಮ್ಮ ರಾಜನಾದ ಹುಲಿ ಬಳಿ ತೆರಳಿ ಮನುಷ್ಯ ಮತ್ತು ಆತನಿಂದ ಆಗುತ್ತಿರುವ ಕಷ್ಟ-ನಷ್ಟಗಳ ಬಗ್ಗೆ ತಿಳಿಸಿತು. "ಮನುಷ್ಯ ಹೀಗೆ ಸರಿಸುಮಾರು ಹತ್ತು ಸಾವಿರ ವರ್ಷಗಳಿಂದ ನಮ್ಮ ಕಾಡಿನ ಮಿತ್ರರಾದ ಕುರಿ, ಮೇಕೆ, ಆಕಳು, ಕೋಳಿ ಇವುಗಳನ್ನೆಲ್ಲ ಹಿಡಿದು, ಪಳಗಿಸಿ ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದು, ಈಗ ಕೋತಿ, ಕರಡಿ, ಒಂಟೆ, ಆನೆ ಹಾಗೂ ಕೆಲ ಪಕ್ಷಿಗಳನ್ನು ಹಿಡಿದು ತನ್ನ ಸ್ವಾರ್ಥಕ್ಕೆ ಬಳಸಿಕೊಂಡಿರುತ್ತಾನೆ. ಇದೇ ರೀತಿ ಮುಂದುವರೆದರೆ ಮನುಷ್ಯ ಇಡೀ ಕಾಡನ್ನೇ ನಾಶಪಡಿಸುತ್ತಾನೆ" ಎಂದು ಹೇಳಿದವು. ಕಾಡಿನ ರಾಜನಾದ ಹುಲಿ ಈ ವಿಷಯವನ್ನು ಪರಾಮರ್ಶಿಸಿ ಮುಂಚೆ ಹೇಳಿದಂತೆ "ಮನುಷ್ಯನನ್ನು ನಾವು ಯಾವುದೇ ರೀತಿ ತಡೆಯಲಾಗುವುದಿಲ್ಲ. ಮನುಷ್ಯನ ತಂಟೆಗೆ ಹೋಗುವುದು ಬೇಡ, ನಾವೆಲ್ಲ ಕಾಡು ಮೃಗಗಳು, ಮುಂದೊಂದು ದಿನ ನಮಗೆ ಮನುಷ್ಯನಿಂದ ಒಳ್ಳೆಯದಾಗಬಹುದು, ನಾವು ಕಾಡಿನಲ್ಲಿ ಇದ್ದುಬಿಡುವ" ಎಂದು ಹೇಳಿ ಕಳುಹಿಸಿತು.

ಹಲವು ವರ್ಷಗಳ ನಂತರ, ಕಾಡಿನ ರಾಜನಾದ ಹುಲಿ ಹೇಳಿದಂತೆ ಮನುಷ್ಯನಿಂದ ಕಾಡು ಮತ್ತು ಕಾಡು ಪ್ರಾಣಿಗಳಿಗೆ ಒಳ್ಳೆಯದಾಗಬಹುದಾದ ಆ ಒಂದು ದಿನ ಬಂದೆ ಬಿಟ್ಟಿತು. ಅಂದು ಮನುಷ್ಯ ಕಾಡಿಗೆ ತೆರಳಿ, ಒಂದಲ್ಲ ಎರಡಲ್ಲ ಐದು ಹುಲಿಗಳಿಗೆ ವಿಷ ಉಣಿಸಿ, ಕಾಡಿನ ರಾಜನನ್ನೆ ತನ್ನ ಸ್ವಾರ್ಥಕ್ಕಾಗಿ ಕೊಂದುಬಿಟ್ಟನು.

ಮನುಷ್ಯ ತಾನು ಕಾಡು ಹಾಗೂ ಕಾಡು ಪ್ರಾಣಿಗಳಿಂದ ಪಡೆದ ಅನುಕೂಲಕ್ಕೆ ಪ್ರತಿಯಾಗಿ ತಾನೆಷ್ಟು ಕೃತಘ್ನ ಎಂಬುದನ್ನು ಪ್ರದರ್ಶಿಸಿ, ಕಾಡು ಪ್ರಾಣಿಗಳಿಗಿಂತ ಕೀಳಾದ ಕ್ರೂರ ಮೃಗವಾಗಿ ಪರಿವರ್ತನೆಗೊಂಡಿದ್ದ.



**ಸಮಾಹಿತ ಶಿವಕುಮಾರ್**
6362337254

# ಓಂ ಶ್ರೀ ಗಣೇಶಾಯ ನಮಃ



ನೆರೆನಂಬಿರುವೆನು ವಿನಾಯಕ
ವಿಘ್ನವ ಮಾಡದೆ ವಿಘ್ನೇಶ್ವರ
ವಿದ್ಯೆಯ ಅಧಿಪತಿ ಗಜಮುಖನೆ
ವಿದ್ಯೆಯ ಪಾಲಿಸು ಗಜವದನ
ಮಹೇಶ ಪುತ್ರನೆ ಮಕುಟಧರಾ
ದಾರಿಯ ತೋರಿಸೋ ಗಣಪತಿಯೇ
ಮೂಷಿಕ ವಾಹನ ಶಿವಸುತನೆ
ಮೋದಕ ಪ್ರಿಯನೇ ಮಣಿಯುವೆನು
ಏಕದಂತನೇ ಲಂಬೋದರ
ಆರತಿ ಎತ್ತುತ್ತ ಬೇಡುವೆನು
ಅಂಬಾಸುತನೆ ಆನಂದದಿ
ಕೃಪೆಯನ್ನು ತೋರೋ ಗಜಾನನ



**ಅಂಬಾ ನಡವತ್ತಿ**

# ಕೊಲ್ಕತ್ತದ ಸಾಂಪ್ರದಾಯಿಕ ದುರ್ಗಾ ಪೂಜೆ

ದೇವ-ದೇವಿಯರಿಗೆ ನಾವುಗಳು ಸಲ್ಲಿಸುವ ಪೂಜೆಗಳಲ್ಲಿ ಹೆಸರುವಾಸಿಯಾಗಿರುವುದು ದುರ್ಗಾ ಪೂಜೆ.

ದೇವಿಯು ಕೈಲಾಸದಿಂದ ಧರೆಗಿಳಿದು ದುಷ್ಟ ಸಂಹಾರ ಮಾಡಿ ಶಿಷ್ಟ ರಕ್ಷಣೆಯನ್ನು ಮಾಡುವುದರ ಸಾಂಕೇತಿಕ ಅಭಿವ್ಯಕ್ತಿಯೇ ದುರ್ಗಾ ಪೂಜೆ. ಇದಲ್ಲದೇ, ಮನುಷ್ಯತ್ವ, ಪಶು-ಪಕ್ಷಿ ಸಂಕುಲವನ್ನೊಳಗೊಂಡ ಪರಿಸರದೊಡನೇ ಸಹಬಾಳ್ವೆ, ಪರಸ್ಪರ ಸಹನೆ, ಶಾಂತಿ, ಕರುಣೆ, ಮಮತೆ, ದಯೆ, ವಾತ್ಸಲ್ಯ ಇವೆಲ್ಲದರ ಓಕುಳಿಯೇ ದುರ್ಗಾ ಪೂಜೆ.

ಪ್ರಾಚೀನ ಕಾಲದಲ್ಲಿ ಶ್ರೀಮಂತರ ಮನೆಯಲ್ಲಿ ಆರಂಭವಾದದ್ದು 1920 ರಿಂದ ಸಾರ್ವಜನಿಕ ಪೂಜೆಯಾಗಿ ಮಾರ್ಪಟ್ಟಿತು. ,ಸಮಾಜದಿಂದ ದೊರಕುವ ಧನಸಹಾಯ ಸಂಘ-ಸಂಸ್ಥೆಗಳ ಪ್ರಾಯೋಜಕತ್ವದಿಂದ ಪೂಜೆಯ ವೈಖರಿಯಲ್ಲಿ ಮಾರ್ಪಾಡಾಯಿತು. ವಿವಿಧ ಸಂಘ-ಸಂಸ್ಥೆಗಳು ಆಯೋಜಿಸುವ ವೈವಿಧ್ಯಮಯ ಪೆಂಡಾಲ್ (ಮಂಟಪ) ಗಳಲ್ಲಿ, ದೇವಿಯ ಮಣ್ಣಿನ ಮೂರ್ತಿಗಳಲ್ಲಿ, ಬೆಳಕಿನ ಸಂಯೋಜನೆಯಲ್ಲಿ, ನಿರೂಪಣೆಗಳಲ್ಲಿ ವಿಷಯ ಪ್ರತಿ ವರ್ಷವೂ ವೈವಿಧ್ಯತೆಯು ಮೂಡಿಬರುತ್ತಿದೆ.

ನಲವತ್ತು ವರ್ಷಗಳ ಹಿಂದೆ, 1985ರಲ್ಲಿ ಏಷ್ಯನ್ ಪೈಂಟ್ಸ್‌ನ ಪ್ರಾಯೋಜಕತ್ವದಲ್ಲಿ ಪ್ರಾರಂಭವಾದ ಶಾರದ ಸನ್ಮಾನವು ಕಲಾಭಿರುಚಿ, ಕಲಾ ನೈಪುಣ್ಯತೆಯ ಅಭಿವ್ಯಕ್ತಿಗೆ ವೇದಿಕೆಯಾಗಿದೆ. ಅಲ್ಲದೇ, ಪೂಜೆಯ ಗತಿಯಲ್ಲಿ ಸ್ಪರ್ಧೆಯ ಮನೋಭಾವದಲ್ಲಿ ತೋರ್ಪಡುವ ಉತ್ಸಾಹವು ನಾಲ್ಮಡಿಯಾಗಿ ವಿವಿಧ ಸಂಘಟನೆಗಳ ಉತ್ಸವಗಳಲ್ಲಿನ ವೈವಿಧ್ಯತೆಯು ನೂರ್ಪಟ್ಟಾಗಿದೆ.

ಮಹಾಲಯದಂದು ರೇಡಿಯೋನಲ್ಲಿ ಬೆಳಗ್ಗೆ 4:00 ಗಂಟೆಗೆ ಬೈದ್ಯನಾಥ್ ಭಟ್ಟಾಚಾರ್ಯ (ಬಾನಿ ಕುಮಾರ್) ರಚಿಸಿದ ಚಂಡೀಪಾಠವನ್ನು ಬೀರೇನ್ ಕೃಷ್ಣ ಭದ್ರರ ಧ್ವನಿಯಲ್ಲಿ ಹಾಗೂ ಆಗೊಮೋನಿ ಹಾಡುಗಳನ್ನು ವಿವಿಧ ಕಲಾವಿದರ ಧ್ವನಿಯಲ್ಲಿ ಪಂಕಜ್ ಕುಮಾರ್ ಮಲ್ಲಿಕ್ ಸಂಗೀತ ಸಂಯೋಜನೆಯನ್ನು ಆಲಿಸದ ಬೆಂಗಾಲಿಯಿಲ್ಲ. ದೇವಿಯ ಆಗಮನವನ್ನು ಮಹಾಲಯದಂದು ದೇವಿ ಮೂರ್ತಿಯಲ್ಲಿ ಕಣ್ಣುಗಳನ್ನು ಪೈಂಟ್ ಮಾಡುವ ಮೂಲಕ ಬರಮಾಡಿಕೊಳ್ಳುತ್ತಾರೆ.

ದುರ್ಗಾ ಮೂರ್ತಿಯ ಎಡಪಕ್ಕದಲ್ಲಿ ಸರಸ್ವತಿ, ಗಣೇಶ, ಬಲಪಕ್ಕದಲ್ಲಿ ಲಕ್ಷ್ಮಿ ಹಾಗೂ ಕಾರ್ತಿಕೇಯ ಉಪಸ್ಥಿತರಿರುತ್ತಾರೆ. ಷಷ್ಠಿಯಂದು ಸರಸ್ವತಿ ವಂದನೆಯೊಂದಿಗೆ ಪ್ರಾರಂಭಿಸಿ, ಬಾಳೇಕಂದನ್ನು (ಕೊಲಾಬೌ) ಗಂಗಾನದಿಯಲ್ಲಿ ಪೂಜಿಸಿ ಗಣೇಶನ ಪಕ್ಕದಲ್ಲಿ ಕೂಡಿಸುವುದು ಪೂಜೆಯ ಆರಂಭ. ಮಹಾಸಪ್ತಮಿಯ ಪೂಜೆ, ಮಹಾ ಅಷ್ಟಮಿ ಸಂಧಿಕಾಲ ಪೂಜೆ (ಮಹಾ ಅಷ್ಟಮಿಯ 20 ನಿಮಿಷ ಹಾಗೂ ಮಹಾ ನವಮಿಯ 20 ನಿಮಿಷ) ದ ಸಮಯದಲ್ಲಿ ಚಂಡಮುಂಡರ ವಧೆಯಾಗಿ, ಮಹಾನವಮಿಯಂದು ಮಹಿಷಾಸುರನ ವಧೆಯಿಂದ ಮುಕ್ತಾಯವಾಗುವುದು. ವಿಜಯದಶಮಿಯನ್ನು ದುಷ್ಟ ದಮನ, ಶಿಷ್ಟ ರಕ್ಷಣೆಯ ದಿನವೆಂದು ವಿಜಯೋತ್ಸವವಾಗಿ ಆಚರಿಸಲಾಗುತ್ತದೆ. ವಿಜಯದಶಮಿಯಂದು ಮುತ್ತೈದೆಯರು ದೇವಿಯ "ಸಿಂಧೂರ ಖೇಲಾ" ವನ್ನು (ಕುಂಕುಮ ದೋಕುಳಿಯನ್ನು) ಕೆನ್ನೆಗೆ, ಹಣೆಗೆ ಸವರಿ ನಂತರ ಒಬ್ಬರಿಗೊಬ್ಬರಿಗೆ ಸವರಿ ದೇವಿಯನ್ನು ಬೀಳ್ಕೊಡುತ್ತಾರೆ.

ದುರ್ಗಾಪೂಜೆಗೆ ಸಿದ್ಧತೆಗಳು ಆರೇಳು ತಿಂಗಳಿನಿಂದಲೇ ಶುರುವಾಗುತ್ತದೆ. ಮನೆ ಮನೆಯಲ್ಲೂ ಸಮಸ್ತವೂ ಶುಚಿಯಿಂದಿರಬೇಕು! ಬಟ್ಟೆಬರೆ, ಕಸದ ಮೊರ-ಪೊರಕೆಯಿಂದ ಹಿಡಿದು ಅನೇಕಾನೇಕ ಗೃಹೋಪಯೋಗಿ ವಸ್ತುಗಳನ್ನು ಕೊಳ್ಳುವ ಸಂಭ್ರಮ. ಎಲ್ಲೆಲ್ಲೂ ಶಾಪಿಂಗ್‌ನ ಸಡಗರ! ಮಕ್ಕಳೊಡಗೂಡಿ ಮನೆಯವರೆಲ್ಲರೂ ಸಡಗರ, ಸಂಭ್ರಮ, ಉತ್ಸಾಹಗಳಿಂದ ತಯಾರಿಯಲ್ಲಿ ತೊಡಗಿರುವುದು ನೋಡಲೇ ಚೆಂದ!

"ದುರ್ಗಾ ಪೂಜಾ" ದ ದಿನಗಳಲ್ಲಿ ಸಾರ್ವಜನಿಕರು ಎಲ್ಲೆಡೆ ಹರಡಿಕೊಂಡಿರುವ ಪೆಂಡಾಲ್‌ಗಳಿಗೆ ಭೇಟಿ ನೀಡುತ್ತಾ, ರಸ್ತೆಯ ಇಕ್ಕೆಲಗಳಲ್ಲೂ ಮಾರಾಟವಾಗುವ ತಿಂಡಿ ತಿನಿಸು, ಆಟಪಾಟ, ಕಣ್ತುಂಬುವ ಸಾಮಾನುಗಳನ್ನು ಖರೀದಿಸುತ್ತಾ, ಕುಟುಂಬ ಸಮೇತ ಆನಂದಿಸುತ್ತಾರೆ. ಪೆಂಡಾಲ್‌ಗಳಿಗೆ ಎಲ್ಲರಿಗೂ 24 ಗಂಟೆಯೂ ಸ್ವಾಗತ! ಈ ಸಡಗರದಲ್ಲಿ ವಯೋವೃದ್ಧರೂ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ! ಇಡೀ ಪಟ್ಟಣ ವಿವಿಧ ಶಬ್ದ-ನಾದಗಳಿಂದ ಆವರಿಸಿರುತ್ತದೆ. ಬಾಲ್ಕನಿಯಲ್ಲಿ ನಿಂತು ಆಲಿಸಲು, ನೋಡಲೇ ಚಂದ!.

ಪೂಜಾ ನಂತರ ದೇವಿಯ ವಿಸರ್ಜನೆಯೇ ವಿಜೃಂಭಣೆಯಿಂದ ಜರುಗುವ ಒಂದು ಕ್ರಿಯೆಯಾಗಿದೆ. ಮುಖ್ಯ ರಸ್ತೆಗಳಲ್ಲಿ ರಥದಲ್ಲಿ ದೇವಿಯ ಮೂರ್ತಿಯೊಂದಿಗೆ ಮಹಿಳೆಯರು ಗೊರೂದ್ ರೇಷ್ಮೆ ಸೀರೆಯನ್ನು, ಪುರುಷರು ಧೋತಿ ಕುರ್ತಾ ಧರಿಸಿ ಶಂಖವನ್ನು ಊದುತ್ತಾ ರಸ್ತೆಯುದ್ದಕ್ಕೂ ಶಿಸ್ತಿನಿಂದ ಚಲಿಸುವುದು, ಪಾಠಶಾಲೆಯ ಮಕ್ಕಳ ಲಝೀಮ ಮುಂತಾದ ಪ್ರದರ್ಶನ, ನರ್ತಿಸುತ್ತಾ ಚಲಿಸುವ ಸಾರ್ವಜನಿಕರೊಡಗೂಡಿದ ಮೆರವಣಿಗೆಯು ಕಣ್ಣಿಗೆ ಹಬ್ಬ, ಮನಕ್ಕೆ ಮುದ ನೀಡುತ್ತದೆ.

ಮಹಾನವಮಿ, ವಿಜಯದಶಮಿಯಂದು ವ್ಯಾಪಾರ, ವಹಿವಾಟು, ಆಸ್ಪತ್ರೆಗಳು ಇನ್ನಿತರ ಮೂಲ ಸೌಲಭ್ಯಗಳೆಲ್ಲವೂ ಸ್ಥಗಿತಗೊಂಡು ವೈದ್ಯಕೀಯ ತುರ್ತಿನ ಸಮಯದಲ್ಲಿ ಬಹಳಷ್ಟು ಅಡಚಣೆಗಳನ್ನು ಕಾಣಬಹುದು. ಆದರೆ, ಒಟ್ಟಾರೆ ಆ ಸಮಯದಲ್ಲಿ ನಗರವಾಸಿಗಳಲ್ಲಿ ಪಸರಿಸಿರುವ ಸಂತಸ, ನವಚೈತನ್ಯಗಳು ಇದೆಲ್ಲವನ್ನೂ ಮರೆಮಾಚಿಸುತ್ತದೆ.

ದುರ್ಗಾ ಪೂಜೆಯು ಸ್ತ್ರೀಶಕ್ತಿಯ ಆರಾಧನೆಯಾಗಿ, ತನ್ಮೂಲಕ ಭಕ್ತಜನರ ಮನೋಭಿಷ್ಟೆಗಳನ್ನು ಪೂರೈಸುವ ಮಂಗಳಕರ ಸಂದರ್ಭವಾಗಿದೆ.



**ರಾಜೇಶ್ವರಿ ಆರ್.**
9880287962

# ‘ಲೋಕ ಸಂಚಾರ’

ಕೆಲವೊಂದು ಸಲ ನನ್ನ ‘ಲೋಕ ಸಂಚಾರ’ ದ ಸಮಯದಲ್ಲಿ ನನಗೆ ‘ಯುರೇಕಾ’ ಘಳಿಗೆಗಳು ಸಾಕಾರಗೊಳ್ಳುತ್ತವೆ.! ‘ಲೋಕ ಸಂಚಾರ’ ಎಂದರೆ ನಮ್ಮ ‘ವರ್ತನೆ’ಯ ಆಟೋ ಹುಡುಗನನ್ನು ಕರೆದು ಗಾಂಧಿ ಬಜಾರಿನ ಗಲ್ಲಿಗಳನ್ನು ಸುತ್ತಿ, ದಿನಸಿ, ತರಕಾರಿ, ಹೂವು –ಹಣ್ಣುಗಳನ್ನು ತರುವುದು. ಹಾಗೇ ಡಿ.ವಿ.ಜಿ ರೋಡಿನಲ್ಲಿರುವ ಶ್ರೀನಿವಾಸ ಬೇಕರಿಯಲ್ಲಿ ನಮ್ಮನ್ನು ದತ್ತು ತೆಗೆದುಕೊಂಡಿರುವ ‘ದತ್ತ’ನ ಅನುಯಾಯಿಗಳಾಗಿರುವ ಶ್ವಾನಗಳಿಗೆ ಬ್ರೆಡ್ ಮುಂತಾದವುಗಳನ್ನು ತರುವುದು. (ಸ್ವಾಮಿ ಕಾರ್ಯ, ಸ್ವಕಾರ್ಯ ಎರಡೂ ಇವೆ ಇಲ್ಲಿ!)

ಹೀಗೆ ಸೋಮವಾರ ಹೊರಟಾಗ, ಬೇಕರಿಯಲ್ಲಿ ಒಬ್ಬ ಚಿಕ್ಕ ತಾಯಿ ಮತ್ತವಳ ಮೂರು ವರ್ಷದ ಮಗಳ ಭೇಟಿಯಾಯಿತು. ಮಗು ನನ್ನ ಬೆನ್ನು ತಟ್ಟಿ ನಕ್ಕಿತು. ನಾನು ಅದರ ಹೆಸರು ಕೇಳಿ ಮಾತಾಡಲು ಪ್ರಯತ್ನಿಸಿದೆ. ಆದರೆ ಅವಳ ಅಮ್ಮ ಅವಳ ಮೇಲೂ, ನನ್ನ ಮೇಲೂ ಕೋಪಗೊಂಡಳು. ಸರಿ, ‘ಬಡವಾ! ನೀನು ಮಡಗಿದ ಹಾಗಿರು’ ಅಂತ ನನಗೆ ನಾನೇ ಹೇಳಿಕೊಂಡು ಅಲ್ಲಿಂದ ಹೊರಟುಬಂದೆ.

ಆದರೆ, ನನ್ನ ತಲೆ ನನ್ನನ್ನು ಸುಮ್ಮನೆ ಇರಲು ಬಿಡಲಿಲ್ಲ. ಈಗಿನ ಪ್ರಪಂಚ ಬದಲಾದ ಪ್ರಪಂಚ. ಇಲ್ಲಿ ಮಕ್ಕಳನ್ನು ಮುಟ್ಟಬೇಕಾದರೆ, ಅವರ ಜೊತೆ ಫೋಟೋ ತಗೋಬೇಕಾದರೆ, ಮಾತಾಡಬೇಕಾದರೆ ತಂದೆ–ತಾಯಿಯರ ಅನುಮತಿ ಪಡೆಯಬೇಕು. ಮನದಲ್ಲಿ ಮನೆಮಾಡಿರುವ ಏನೇನೋ ಯೋಚನೆ, ಆತಂಕಗಳಿಗೆ ಶರಣಾಗಿ ಮಕ್ಕಳನ್ನು ಮಿತಿಯಿಲ್ಲದ ಅಂಕೆಯಲ್ಲಿಟ್ಟುಕೊಂಡು ಅವರ ಸ್ನೇಹಶೀಲತೆಯನ್ನು ಎಳೆಯ ವಯಸ್ಸಿನಲ್ಲಿಯೇ ಚಿವುಟಿ ಹಾಕುವ ಕೆಲಸ ಈಗ ಸಾಮಾನ್ಯವಾಗಿ ಬಿಟ್ಟಿದೆ.

ಅಷ್ಟೇ ಏಕೆ, ಇದನ್ನು ಸ್ವಲ್ಪ ವಿಸ್ತರಿಸಿದರೆ, ನಾವಿರುವ ಮನೆ ಎದುರಿಗೆ, ಮೇಲೆ, ಪಕ್ಕದಲ್ಲಿ ಯಾರಿದ್ದಾರೆ ಅನ್ನುವ ಅರಿವೇ ನಮಗಿರದಂತ ಕಾಲಮಾನ ಇದು. ನಮ್ಮ ಎದುರಿಗೇ ಯಾರಾದರೂ ತೊಂದರೆಗೆ ಸಿಕ್ಕಿದ್ದರೂ ನಾವು ಬೇರೆ ದಿಕ್ಕಿಗೆ ತಿರುಗಿ ಹೋಗುವ ಕಾಲ.

ನಾಗರಿಕತೆ ನಮ್ಮನ್ನು ಕಷ್ಟಗಳಿಗೆ ಸ್ಪಂದಿಸದಂತೆ, ಸಹಬಾಳ್ವೆ ನಡೆಸದಂತೆ ಮಾಡಿದೆ. ಮುಂಚೆ ನೆರೆಹೊರೆಯವರು, ರಕ್ತಸಂಬಂಧಿಗಳು ಅಲ್ಲದವರೂ ಕಷ್ಟಕ್ಕೆ ಒದಗುತ್ತಿದ್ದರು. ಈಗ ಹಳ್ಳಿಗಳಲ್ಲಿ ಅಂತಹ ಜನರಿರಬಹುದು. ಆದರೆ ಮಹಾನಗರಗಳಲ್ಲಿ ಬಹು ಮಹಡಿ ಫ್ಲಾಟ್‌ಗಳಲ್ಲಿ ಯಾರಿಗೆ ಯಾರೂ ಇಲ್ಲ. ಒಬ್ಬರನ್ನು ಒಬ್ಬರು ಭೇಟಿಯಾಗುವುದು ಮಹಡಿ ಮೆಟ್ಟಿಲಲ್ಲಿ ಅಥವಾ ಲಿಫ್ಟ್‌ಗಳಲ್ಲಿ. ತುಟಿಯ ಕೊಂಕನ್ನು ನಸುನಗು ಎಂದು ನಾವು ಅರ್ಥೈಸಿಕೊಳ್ಳಬೇಕು ಇನ್ನು ಇದಕ್ಕೆ ಮಿಗಿಲಾದ ಒಡನಾಟ ಯಾರಿಗೂ ಬೇಡ.

ಇರಲಿ. ನನಗೆ ಸಿಕ್ಕ ಆ ಮಗು ಮತ್ತದರ ತಾಯಿಯ ಜೀವನಾನುಭವ ಏನೋ! ಅವಳ ಸುಖ ಸಂಕಟಗಳೇನೋ! ಜನ ಸಂಪರ್ಕದ ಅನುಭವವೇನೋ ! ಯಾರಿಗೆ ಗೊತ್ತು!

ಆದರೂ ಖಾಸಗೀಕರಣ , ಉದಾರೀಕರಣ, ಜಾಗತೀಕರಣಗಳ ನಂತರದ ಮನಸ್ಥಿತಿಗಳು, ಆಧುನಿಕ work culture, ಮುಂದುವರೆದ ಟೆಕ್ನಾಲಜಿ ಇವುಗಳು ಮನುಷ್ಯ ಸಂಬಂಧದ ಮೇಲೆ ಬಹಳ ಪ್ರತಿಕೂಲ ಪರಿಣಾಮ ಬೀರಿದೆ. ಮನೆಗಳಲ್ಲೇ ಪರಸ್ಪರ ಮಾತುಕತೆ, ಒಡನಾಟ ಎಲ್ಲಾ ಯಾಂತ್ರಿಕವಾಗಿದೆ. ಎಲ್ಲರೂ ತಮ್ಮ ತಮ್ಮ ಮಟ್ಟಿಗೆ ನಡುಗಡ್ಡೆಗಳು, ದ್ವೀಪಗಳಾಗಿದ್ದಾರೆ. ಹೀಗಿರುವಾಗ ಮನಸ್ಸು ಹೃದಯ ಬಂಜರು ಮರುಭೂಮಿಯಾಗುತ್ತದೆ. ಭೌಗೋಳಿಕ ಸಂರಚನೆಗಳು ಮಾನವನ ಒಳಗೆ ಸಾಕ್ಷಾತ್ಕರಿಸುತ್ತವೆ!

ಇಲ್ಲಿ ಹಿಂದಿ ಸಿನಿಮಾರಂಗದ ಶ್ರೇಷ್ಠ ನಟ ಪಂಕಜ್ ಕಪೂರ್ ಅವರ ವೆಬ್ ಸೀರೀಸ್ , “Thode door, Thode paas” ಜ್ಞಾಪಕಕ್ಕೆ ಬರುತ್ತದೆ. ಅದರಲ್ಲಿನ ಅವರ ಡಿಜಿಟಲ್ ಡಿಟಾಕ್ಸ್ ಮಾಡಲು ಪಡುವ ಪ್ರಯತ್ನ ಇಂದಿನ ಸಮಾಜದ ಮನೋಸ್ಥಿತಿಗೆ ಹಿಡಿದ ಕನ್ನಡಿ!

ಹಿಂದೆ, ಒಂದೊಮ್ಮೆ ಗೌರೀಶ ಕಾಯ್ಕಿಣಿಯವರು ಬರೆದಿದ್ದದ್ದು ಎಷ್ಟು ಸತ್ಯ ಅನಿಸುತ್ತದೆ ! ಇಂದು ಪ್ರಪಂಚದಲ್ಲಿ ಮರುಭೂಮಿ ಹಬ್ಬುತ್ತಿದೆಯಂತೆ! ಈ ಭೌಗೋಳಿಕ ಆಪತ್ತಿಗೂ ಮಿಗಿಲಾಗಿ ನಮ್ಮ ಇಂದಿನ ಜೀವನದಲ್ಲಿ ನಮ್ಮ ನಿಮ್ಮ ಹೃದಯಗಳಲ್ಲಿ ಘೋರವಾದ ಒಂದು ಮರುಭೂಮಿ ಬೆಳೆದು ಹಬ್ಬುತ್ತಿದೆ. ಎದೆ, ಎದೆಯೊಳಗಿನ ನಡುವಿನ ಎಲ್ಲಾ ಹಸಿರು, ತೇವ, ತಂಪು ಆರಿ ಭಣಗುಡುವ ಅಂತರಂಗದ ಈ ಜನ್ಮಸ್ಥಾನ ಶೂನ್ಯವಾಗುತ್ತಾ ಸುತ್ತಲೂ ವಿಸ್ತರಿಸುತ್ತಾ ಸಾಗಿದೆ. ಸದ್ಯದ ಪ್ರಯೋಜನ, ಸಂಕುಚಿತ ಮನೋಭಾವ, ಸ್ವಾರ್ಥ, ದೋಷಾರೋಪಣೆ ಸ್ವಭಾವ, ಇವೆಲ್ಲದರಿಂದ ಅನಿವಾರ್ಯವಾಗಿ ಬೆಳೆದ ಬದುಕಿನ ಹೋರಾಟ, ಏರಾಟ ಅದರ ತುಳಿದಾಟದಲ್ಲಿ ಬಾಂಧವ್ಯವೆಂಬುದು ಬಂಧನವಾಗಿ ಅದೂ ಹರಿದು ಚೂರಾಗಿ ಬಿಡಿ ಬಿಡಿ ವ್ಯಕ್ತಿಗಳು ಹಾಕುವ ಹುಸಿ ಹುಡದಿಯಲ್ಲಿ* ಬಾಳೆಲ್ಲ ಹುಡಿಹುಡಿ ಆಗಿದೆ”

ಮನುಷ್ಯನಲ್ಲಿ ಮನೆಮಾಡುತ್ತಿರುವ ಈ ದ್ವೀಪಗಳ, ಮರುಭೂಮಿಗಳ ಸಕಾರಾತ್ಮಕ ರೂಪಾಂತರಕ್ಕೆ ಎಲ್ಲರೂ ಕೈಜೋಡಿಸೋಣ.

ಪ್ರಸ್ತುತ ಸಾಗುತ್ತಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಇತ್ಯಾದಿಗಳು ಜಗತ್ತಿನ ಒಳಿತಿಗೆ ಸೀಮಿತಗೊಳ್ಳಲಿ, ಮನೆ – ಮನಗಳಲ್ಲಿ ನೆಲೆಯೂರುವುದು ಬೇಡ!

* ಹುಡದಿ – CONTEXUALLY CAN MEAN BONE OR LAND UPROAR



**ರಾಜಲಕ್ಷ್ಮಿ ಎಸ್**
9845371961

# ಕೈಲಾಸ ಮತ್ತು ಮಾನಸ ಸರೋವರ ಯಾತ್ರೆ ನಮ್ಮ ಅವಿಸ್ಮರಣೀಯ ಅನುಭವ



ನಾನು ಮತ್ತು ನನ್ನ ಶ್ರೀಮತಿ ಇಂದಿರಾ ಇಬ್ಬರೂ ಬಹಳ ವರ್ಷಗಳಿಂದ ಕಾತುರದಿಂದ ಎದುರು ನೋಡುತ್ತಿದ್ದ ಈ ಪವಿತ್ರ ಯಾತ್ರೆಯನ್ನು ಈ ವರ್ಷ ಕಡೆಗೂ ಮಾಡಿದೆವು. 2019ರಿಂದ ಭಾರತೀಯರಿಗೆ ಸ್ಥಗಿತಗೊಳಿಸಲಾಗಿದ್ದ ಈ ಯಾತ್ರೆಯ ನಿರ್ಬಂಧವನ್ನು ಈ ವರ್ಷ ತೆರವುಗೊಳಿಸಲಾಗುತ್ತದೆ ಎಂಬ ಸುದ್ದಿ ಬಂದೊಡನೆ, ನಾವು ಬೆಂಗಳೂರಿನ ವಿಜಯನಗರ ದಲ್ಲಿರುವ "ಶಂಕರ್ ಟ್ರೆಕ್ಸ್" ನಲ್ಲಿ ನಮ್ಮ ಹೆಸರುಗಳನ್ನು ನೊಂದಾಯಿಸಿ, ಯಾತ್ರೆಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದೆವು. ಈ ಯಾತ್ರೆಯು ಕಷ್ಟಕರ ವಾದುದರಿಂದ, ದೈಹಿಕ ಸದೃಢತೆ ಮತ್ತು ಮಾನಸಿಕ ಸಿದ್ಧತೆಯು ಅತ್ಯವಶ್ಯಕ. ಪ್ರತಿ ನಿತ್ಯವೂ 4 – 5 ಕಿ.ಮೀ. ನಡಿಗೆ, ಯೋಗ, ಪ್ರಾಣಾಯಾಮ ಮತ್ತು ಮಿತ ಆಹಾರ – ಹೀಗೆ ಎಲ್ಲ ನಿಯಮಗಳನ್ನು ಪಾಲಿಸತೊಡಗಿದೆವು.

ಇದೇ ವರ್ಷ ಜೂನ್ ತಿಂಗಳ 24ರಂದು, ತುಂಬು ಉತ್ಸಾಹದಿಂದ ಪರಶಿವನ ಸನ್ನಿಧಾನವನ್ನು ನೋಡುವ, ನಮ್ಮ ಯಾತ್ರೆ, "ಶಂಕರ್ ಟ್ರೆಕ್ಸ್" ಆಯೋಜಿತ 82 ಸದಸ್ಯರ ತಂಡದೊಡನೆ ಪ್ರಾರಂಭವಾಯಿತು. ಬೆಂಗಳೂರಿನಿಂದ ವಿಮಾನ ಮಾರ್ಗದಲ್ಲಿ ಲಕ್ನೋ ತಲುಪಿ, ಲಕ್ನೋನಿಂದ ರಸ್ತೆ ಮಾರ್ಗದಲ್ಲಿ ನೇಪಾಳಗಂಜ್ (ನೇಪಾಳ ದೇಶದ ಗಡಿ ನಗರ) ಸೇರಿದೆವು. ಅಂದು ಸಂಜೆ ನೇಪಾಳ್ಗಂಜಿನಲ್ಲಿರುವ ಶಕ್ತಿಪೀಠಗಳಲ್ಲಿ ಒಂದಾದ "ಭಾಗೇಶ್ವರಿದೇವಿ"ಯ ದರ್ಶನ ಪಡೆದು, ಮರುದಿನ, ನೇಪಾಳ್ಗಂಜಿನಿಂದ, ಸಣ್ಣ ವಿಮಾನದಲ್ಲಿ ಸಿಮಿಕೋಟ್ ಎಂಬ ಪುಟ್ಟ ಗ್ರಾಮವನ್ನು ತಲುಪಿದೆವು. ಸಿಮಿಕೋಟ್‌ನಿಂದ ಹೆಲಿಕಾಪ್ಟರ್‌ನಲ್ಲಿ ಹಿಲ್ಸಾಗೆ ಪ್ರಯಾಣಿಸಬೇಕಿದ್ದ ನಮಗೆ, "ಹೆಲಿಕಾಪ್ಟರ್ ಸೇವೆ" ರದ್ದಾಗಿದೆ ಎಂಬ ಸುದ್ದಿ ತಿಳಿಸಿ, ತಂಡದ ಮುಖ್ಯಸ್ಥರು, ನೇಪಾಳ – ಟಿಬೆಟ್ ಗಡಿಯಲ್ಲಿರುವ ಹಿಲ್ಸಾ ಎಂಬ ಒಂದು ಪುಟ್ಟ ಗ್ರಾಮ ತಲುಪಲು ಜೀಪ್‌ನ ವ್ಯವಸ್ಥೆ ಮಾಡಿದರು. 30 ನಿಮಿಷದ ಹೆಲಿಕಾಪ್ಟರ್‌ನ ಸುಖ ಪ್ರಯಾಣ, ಜೀಪ್‌ನಲ್ಲಿ 8 ಗಂಟೆಯ, ಗುಡ್ಡಗಾಡು ರಸ್ತೆಯ, ಸುದೀರ್ಘ ಪ್ರಯಾಣವಾಯಿತು. ಎತ್ತರವಾದ ಪರ್ವತ ಶ್ರೇಣಿಗಳು, ಹಿಮ ಶಿಖರಗಳ ಮಧ್ಯೆ, ಕಲ್ಲು ಬಂಡೆಗಳಿಂದ ಕೂಡಿದ ಅತಿ ಕಡಿದಾದ ದಾರಿಯಲ್ಲಿ ನಮ್ಮ ಪ್ರಯಾಣ ಮುಂದುವರಿಸಿದೆವು. ಅಲ್ಲಲ್ಲಿ ಹರಿಯುವ ನದಿಗಳು, ಹಿಮ ಝರಿಗಳು, ಜಲಪಾತಗಳು, ಬಿದಿರಿನ ಸೇತುವೆಗಳು, ಧೂಳು ತುಂಬಿದ ಗಾಳಿ – ಹೀಗೆ ಪ್ರಕೃತಿ ಸುಂದರವಾಗಿದ್ದರೂ, ಕೆಲವೆಡೆ ಹೃದಯ ಬಾಯಿಗೆ ಬಂದಂತ ಅನುಭವಗಳು.

ಮರುದಿನ, ಹಿಲ್ಸಾ ಗ್ರಾಮದಲ್ಲಿನ ತೂಗು ಸೇತುವೆ ದಾಟಿ, ರಸ್ತೆ ಮಾರ್ಗವಾಗಿ, ಚೀನ ಆಕ್ರಮಿತ ಟಿಬೆಟ್‌ನ ತಕಲಾಕೋಟ್ (ಪುರಾಂಗ್) ನಲ್ಲಿರುವ "ಚೀನ ವಲಸೆ ಕಾರ್ಯಾಲಯ" ತಲುಪಿದೆವು. ಅಲ್ಲಿ ನಮ್ಮೆಲ್ಲರ ಲಗೇಜ್ ಹಾಗೂ ಫೋನ್‌ಗಳನ್ನು ತೀಕ್ಷ್ಣ ತಪಾಸಣೆಗೆ ಒಳಪಡಿಸಲಾಯಿತು. ಅಂದು ರಾತ್ರಿ ನಾವು ತಕಲಾಕೋಟ್‌ನಲ್ಲಿ ತಂಗಿ, ಮರುದಿನ ಬೆಳಿಗ್ಗೆ ಮಾನಸ ಸರೋವರಕ್ಕೆ ಬಸ್‌ಗಳಲ್ಲಿ ಹೊರಟೆವು. ಮಾನಸ ಸರೋವರ ಮತ್ತು ಕೈಲಾಸದ ಮೊದಲ ನೋಟಕ್ಕೆ ಮನಸ್ಸು ಹಾತೊರೆಯುತ್ತಿತ್ತು. ತಕಲಾಕೋಟ್‌ನಿಂದ ಮಾನಸ ಸರೋವರವು ಕೇವಲ 100 ಕಿ.ಮೀ. ದೂರವಷ್ಟೆ. ಈ ದಾರಿಯಲ್ಲಿ, ನಮಗೆ ಮೊದಲು ಸಿಗುವುದು "ರಾಕ್ಷಸ್ ತಾಲ್" ಎಂಬ ಉಪ್ಪುನೀರಿನ ಕೊಳ. ರಾವಣನು ತಪಸ್ಸುಗೈದ ಸ್ಥಳವೆಂಬ ಪ್ರತೀತಿ. ಇಲ್ಲಿಂದಲೇ, ನಮಗೆ ಕೈಲಾಸದ ಮೊದಲ ದರ್ಶನ. ಮನಸ್ಸು ಮೂಕವಾಗಿ, ಶಿವನ ಅನುಭಾವವೇ ತುಂಬಿಕೊಂಡು, ನಮಗರಿವಿಲ್ಲದೆಯೇ ಕಣ್ಣೀರು ಹರಿದಿದ್ದು ಒಂದು ಅನಿರ್ವಚನೀಯ ಅನುಭವ. ಮುಂದೆ, ನಾವು ಕಂಡದ್ದು, ಬ್ರಹ್ಮನ ಸಂಕಲ್ಪದಿಂದ ಹುಟ್ಟಿದ ಮಾನಸ ಸರೋವರ. ಇದು ಸಮುದ್ರ ಮಟ್ಟದಿಂದ ಸುಮಾರು 14,950 ಅಡಿಗಳಷ್ಟು ಎತ್ತರದಲ್ಲಿರುವ ಒಂದು ಸುಂದರ ಕೊಳ. ಶಾಂತಿ ಮತ್ತು ಪರಿಶುದ್ಧತೆಯ ಸಂಕೇತ. ಮಾನಸ ಸರೋವರದ ಉತ್ತರ ಮತ್ತು ಪಶ್ಚಿಮದಿಂದ ಕೈಲಾಸ ಪರ್ವತವು ಕಾಣಿಸುತ್ತದೆ. ಸರೋವರದ ದಡದಿಂದ ಕಾಣುತ್ತಿದ್ದ ಕೈಲಾಸ ಪರ್ವತ ಮತ್ತು ಅದರ ಪ್ರತಿಬಿಂಬ ನೋಡಲು ಅಮೋಘವಾಗಿತ್ತು.

ನಾವೆಲ್ಲರೂ ಆ ಪ್ರಶಾಂತವಾದ ಸರೋವರದ ಹತ್ತಿರ ಕುಳಿತು ಶಿವನ ಧ್ಯಾನದಲ್ಲಿ ಮನಸ್ಸು, ಮೈ ಮರೆತೆವು. ಪ್ರಶಾಂತ ವಾತಾವರಣ ಮತ್ತು ದೈವಿಕ ಅನುಭವ ನಮ್ಮನ್ನು ಬೇರೊಂದು

ಪ್ರಪಂಚಕ್ಕೆ ಕರೆದೊಯ್ದಿತ್ತು. ನಾವು ಬಸ್‌ನಲ್ಲಿಯೇ ಮಾನಸ ಸರೋವರದ ಪರಿಕ್ರಮವನ್ನು ಮುಗಿಸಿ, ಸರೋವರದ ದಡದಲ್ಲಿಯೇ ಇದ್ದ ನಮ್ಮ ತಂಗುದಾಣವನ್ನು ಸೇರಿದೆವು, ನಾವೆಲ್ಲರೂ ಮಧ್ಯರಾತ್ರಿ ಸುಮಾರು 2:30 ಸಮಯಕ್ಕೆ, ಸರೋವರದ ತೀರದಲ್ಲಿ ಬಂದು ಕುಳಿತು, ಪ್ರಶಾಂತವಾದ ವಾತಾವರಣದಲ್ಲಿ, ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳ ಮತ್ತು ಕೆಲವು ನಕ್ಷತ್ರಗಳು ಬಂದು ಸರೋವರದಲ್ಲಿ ಬೀಳುವಂತೆ ಕಾಣುವ ದೃಶ್ಯಗಳನ್ನು ಕಣ್ಣುತುಂಬಿಕೊಂಡೆವು. ಚೀನ ಸರ್ಕಾರವು ಮಾನಸ ಸರೋವರದಲ್ಲಿ ಸ್ನಾನ ಮಾಡುವುದನ್ನು ನಿಷೇಧಿಸಿದೆ. ಪ್ರತಿಯಾಗಿ, ಮರುದಿನ ಬೆಳಿಗ್ಗೆ, ಸ್ನಾನಕ್ಕೆ, ಸರೋವರದ ನೀರನ್ನು ಬಕೆಟ್‌ಗಳಲ್ಲಿ ಒದಗಿಸಿದರು. ಅಲ್ಲಿಯೇ, ರುದ್ರಾಭಿಷೇಕ, ಹೋಮ, ರುದ್ರ ಪಠಣ, ಪ್ರಸಾದವನ್ನು ಆಯೋಜಿಸಲಾಗಿತ್ತು. ನಂತರ, ಸಂಜೆಯ ವೇಳೆಗೆ, ದಾರ್ಚೆನ್ ನಗರವನ್ನು ತಲುಪಿದೆವು. ದಾರ್ಚೆನ್ ನಗರದಿಂದಲೇ ಪವಿತ್ರ ಕೈಲಾಸ ಪರ್ವತದ ಪರಿಕ್ರಮ ಶುರುವಾಗುವುದು.

ಮರುದಿನ ಬೆಳಿಗ್ಗೆ, ಪರಿಕ್ರಮಕ್ಕೆ ಬೇಕಾದ ಎಲ್ಲ ಸಾಮಗ್ರಿಗಳನ್ನು ನಮ್ಮ ಚೀಲಗಳಲ್ಲಿ ತುಂಬಿಕೊಂಡು, ಯಮದ್ವಾರಕ್ಕೆ ಬಸ್‌ನಲ್ಲಿ ಹೊರಟೆವು. ಯಮದ್ವಾರದಲ್ಲಿ ಒಳ್ಳೆಯ ಹವಾಮಾನವಿದ್ದು, ಕೈಲಾಸದ ದಕ್ಷಿಣದ ಮುಖ ನಿಚ್ಚಳವಾಗಿ ಕಾಣುತ್ತಿತ್ತು. ಮನಸ್ಸು ಮೌನಕ್ಕೆ ಶರಣಾಗಿತ್ತು. ಆ ಪರಶಿವನು ಪರಿಕ್ರಮ ಮಾಡುವ ಶಕ್ತಿಯನ್ನು ಕೊಟ್ಟೇಕೊಡುವನೆಂಬ ಅಭಯ ನಮಗೆ ಧೈರ್ಯವನ್ನು ತುಂಬಿತ್ತು. ನಾವು, ನಮ್ಮ ಜೊತೆಗೆ ಬರಲು ಪೋರ್ಟರ್‌ಗಳನ್ನು ನೇಮಿಸಿಕೊಂಡು, ಕಾಲ್ನಡಿಗೆಯಲ್ಲಿ, ಮೊದಲ ದಿನದ ಪರಿಕ್ರಮ ಪ್ರಾರಂಭಿಸಿದೆವು. 14 ಕಿ.ಮೀ. ದೂರದ ಮೊದಲ ದಿನದ ಪರಿಕ್ರಮ, ಸಮುದ್ರ ಮಟ್ಟದಿಂದ ಸುಮಾರು 15,500 ಅಡಿಗಳಲ್ಲಿರುವ ಯಮದ್ವಾರದಿಂದ 16,300 ಅಡಿಗಳ ಎತ್ತರದಲ್ಲಿರುವ ದಿರಾಪುಕ್ ತಲುಪಬೇಕು. ಶಿವನ ಧ್ಯಾನ ಮಾಡುತ್ತ, ನಡೆಯಲು ಶುರು ಮಾಡಿದೆವು. ನಮ್ಮ ಎಡಕ್ಕೆ ಹಿಮಚ್ಛಾದಿತ ಬೆಟ್ಟಗಳು, ಹರಿಯುತ್ತಿದ್ದ ನದಿ, ಬಲಕ್ಕೆ ದಿವ್ಯ ದರ್ಶನವೀಯುತ್ತಿದ್ದ ಕೈಲಾಸ ಪರ್ವತ, ಸುಂದರವಾದ ಪ್ರಕೃತಿ. ಸುಮಾರು 8 ಘಂಟೆಗಳ ಕಾಲ ನಡೆದು, ಸಂಜೆಯ ವೇಳಗೆ ಕೈಲಾಸದ ಪಶ್ಚಿಮ ಮುಖದ ದರ್ಶನ ಪಡೆದು, ದಿರಾಪುಕ್ ಸೇರಿದೆವು. ದಿರಾಪುಕ್ ತಂಗುದಾಣದಿಂದ ಕೈಲಾಸದ ಉತ್ತರ ಮುಖ ಬಹಳ ಹತ್ತಿರದಿಂದ ಕಾಣಬಹುದು. ಕಣ್ಮನ ತಣಿಯುವಷ್ಟು ಕೈಲಾಸದ ದರ್ಶನವಾಯಿತು.



ಎರಡನೆಯ ದಿನದ ಪರಿಕ್ರಮ ಬಹಳ ಕಠಿಣವಾದದ್ದು. ಒಟ್ಟು ಕ್ರಮಿಸಬೇಕಾದ ದೂರ 22 ಕಿ.ಮೀ. ಮೊದಲ 7 ಕಿ.ಮೀ. ಅತಿ ಕಡಿದಾದ ಏರುವಿಕೆ. ತೀವ್ರ ಆಮ್ಲಜನಕದ ಕೊರತೆ. ಸರಿ ಸುಮಾರು 16,300 ಅಡಿಗಳ ಎತ್ತರದಿಂದ 18,600 ಅಡಿಗಳ ಎತ್ತರದಲ್ಲಿರುವ "ಡೊಲ್ಮಾಲಾ ಪಾಸ್" ತಲುಪಬೇಕು. ಡೊಲ್ಮಾಲಾ ಪಾಸ್ ಕ್ರಮಿಸುತ್ತಿದ್ದಂತೆಯೇ, ಬಲಕ್ಕೆ "ಗೌರೀ ಕುಂಡ್" ದರ್ಶನ. ನಂತರ, 7 ಕಿ.ಮೀ. ಅತ್ಯಂತ ಇಳಿಜಾರದ ಕಾಲುದಾರಿಯನ್ನು ಕ್ರಮಿಸಿ, ಬಯಲು ಪ್ರದೇಶ ಸೇರಬೇಕು. ಅನಂತರ, ಮತ್ತೆ 10 ಕಿ.ಮೀ. ನಡೆದು ಝುತುಲ್ಪುಕ್ ಎಂಬ ಹಳ್ಳಿ ಪ್ರದೇಶವನ್ನು ಸೇರಬೇಕು. ನಾವು, ನಮ್ಮ ಸಾಮರ್ಥ್ಯವನ್ನು ಸಂದೇಹಿಸುತ್ತಿರುವುದನ್ನು ಕಂಡ ನಮ್ಮ ತಂಡದ ಮುಖ್ಯಸ್ಥರು, "ನೀವು ಖಂಡಿತ ಹಿಂದೆ ಹೋಗಬೇಡಿ, ನಿಧಾನವಾಗಿ, ಮುಂದೆ ನಡೆಯಿರಿ. ನೀವು ಬಯಲು ಪ್ರದೇಶಕ್ಕೆ ಬಂದ ಮೇಲೆ, ನಾವು ನಿಮ್ಮನ್ನು ಜೀಪ್‌ನಲ್ಲಿ ಝುತುಲ್ಪುಕ್ ಮುಖಾಂತರವಾಗಿ ದಾರ್ಚೆನ್‌ಗೆ ತಲುಪಿಸುವೆವು" ಎಂದು ಉತ್ಸಾಹ ತುಂಬಿದರು. ಅವರ ಸಲಹೆಯ ಮೇರೆಗೆ, ನಾವು ಬೆಳಿಗ್ಗೆ 5:00 ಘಂಟೆಗೇ ಹೊರಟು, ದಾರಿಯಲ್ಲಿ, ಉದಯರವಿ ಕಿರಣಗಳಿಂದ ಮೂಡುವ ಬಂಗಾರದ ಕೈಲಾಸ ದರ್ಶನ ಮತ್ತು ನಂದಿಯ ದರ್ಶನ ಮಾಡಿ, ಗೌರಿ ಕುಂಡ್ ಬಳಿ ಪ್ರಾರ್ಥನೆ ಸಲ್ಲಿಸಿ, ಕೈಲಾಸದ ಪೂರ್ವಮುಖದ ದರ್ಶನ ಮಾಡುತ್ತಾ, ಸಂಜೆ 5:00 ಘಂಟೆಯ ಹೊತ್ತಿಗೆ ಬಯಲು ಪ್ರದೇಶವನ್ನು ಸೇರಿದೆವು. ಅನಂತರ, ಜೀಪ್‌ನಲ್ಲಿ ಪರಿಕ್ರಮ ಮುಂದುವರೆಸಿ, ಮೂರು ದಿವಸದ 44 ಕಿ.ಮೀ. ದೂರದ ಪರಿಕ್ರಮವನ್ನು ಎರಡು ದಿನಗಳಲ್ಲೇ ಮುಗಿಸಿದೆವು.

ಕೈಲಾಸ ಮಾನಸಸರೋವರಗಳು ಕೇವಲ ಭೌಗೋಳಿಕ ಸ್ಥಳಗಳು ಮಾತ್ರವಲ್ಲ. ಇವುಗಳ ಯಾತ್ರೆ ಒಂದು ಆಧ್ಯಾತ್ಮಿಕ ಅನುಭವ, ಮಾನವನ "ಜೀವನದಲ್ಲೊಮ್ಮೆ" ಅನುಭವಿಸಲೇಬೇಕಾದ ಶ್ರದ್ಧೆ ಮತ್ತು ಸಹನೆಯ ಪರೀಕ್ಷೆ. ಈ ಯಾತ್ರೆಯನ್ನು ಕೈಗೊಳ್ಳುವ ಪ್ರೇರಣೆ ಕೊಟ್ಟು, ಕರುಣೆಯಿಂದ, ಎಲ್ಲಾ ರೀತಿಯಲ್ಲಿ ನಮಗೆ ಬೇಕಾದ ಸಹಾಯ ಒದಗಿಸಿ, ಶಕ್ತಿ ತುಂಬಿ, ನಮ್ಮ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸುವ ಅವಕಾಶವನ್ನು ಅನುಗ್ರಹಿಸಿದ ಆ ಪರಶಿವನಿಗೆ ನಾವು ಎಂದೆಂದಿಗೂ ಚಿರ ಋಣಿಗಳು.



**ಬಿ.ಎನ್. ಗೋವಿಂದ ಪ್ರಸಾದ್**
9845128229

## ಬೃಹಚ್ಚರಣ ಸಂಘದ ಬಂಧು-ಮಿತ್ರರಿಗೆಲ್ಲ ಶುಭಾಶಯಗಳು



**Smt. R.S. Rukminiamma and Pandit. R.V. Seshadri Gawai**

**ಸವಿ ನೆನಪು**

ಪರಮ ಪಾವನವಯ್ಯ ಗುರು ನಿನ್ನ ಪಾದ
ಕರುಣಿಸಲೆನ್ನ ನಗುತ ಬಂದ ಶಿವ ಪಾದ

ಮರುಳನ ಧರೆಯೊಳು ನೆಲೆಸಿದ ಪಾದ
ದುರಿತಗಳೆಲ್ಲವ ಹರಿಸಿದ ಪಾದ
ಕರವ ಶಿರಧಿರಿಸಿ ಹರಸಿದ ಪಾದ
ಉರಗಚಲಾಧಿಪ ಶ್ರೀನಿವಾಸನ ಪಾದ

ಉರಗಾಚಲ ನಾಮಾಂಕಿತ
ಸಂಗೀತ ಮಹಾಮಹೋಪಾಧ್ಯಾಯ
ಪಂಡಿತ್ ಅರ್.ವಿ .ಶೇಷಾದ್ರಿ ಗವಾಯಿ

**Inserted by**
**Smt. Gowri B.Nataraja and Sri. B.C. Nataraja**
**No.4, Shanmukha Krupa, NG Nilaya**
**SBM Colony, 2nd Main, 3rd Cross**
**Chunchaghatta, Konanakunte, Bangalore-560062**

# "ಕಾಚರಕನಹಳ್ಳಿ" ಯ ಈಗಿನ ಪರಿಚಯ



ನಮಸ್ಕಾರ ಬಂಧುಗಳೇ,

ನಾನು, ನಿಮ್ಮೆಲ್ಲರಿಗೂ ನಾವು ವಾಸವಿರುವ "ಕಾಚರಕನಹಳ್ಳಿ" ಯ ಈಗಿನ ಪರಿಚಯ ಮಾಡಿಕೊಡಲು ಬಯಸುತ್ತೇನೆ .

"ಕಾಚರಕನಹಳ್ಳಿ" ಬೆಂಗಳೂರಿನ "ಸರ್ವಜ್ಞ ನಗರ" ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಕರಿಯನಪಾಳ್ಯ, ಲಿಂಗರಾಜಪುರ, ಕಮ್ಮನ ಹಳ್ಳಿ, ರಾಮಸ್ವಾಮಿ ಪಾಳ್ಯ, ಹತ್ತಿರದಲ್ಲೇ ದೊಡ್ಡ ಬಾಣಸವಾಡಿ, ಹೆಣ್ಣೂರು, ನಾಗವಾರ, ಕಾಡುಗೊಂಡನಹಳ್ಳಿ ಹಾಗೆಯೇ ಹೆಚ್. ಬಿ. ಆರ್. ಬಡಾವಣೆ (ಹೆಣ್ಣೂರು ಬಳ್ಳಾರಿ ರಸ್ತೆ), ಹೆಚ್. ಆರ್. ಬಿ. ಆರ್. ಬಡಾವಣೆ (ಹೆಣ್ಣೂರು ರಸ್ತೆ ಬಾಣಸವಾಡಿ ರಸ್ತೆ) ಸೇರಿದಂತಿದೆ .

"ಕಾಚರಕನಹಳ್ಳಿ" ಹಿಂದಿನ ದಿನಗಳಲ್ಲಿ "ಬೃಹಚ್ಚರಣ ಕುಟುಂಬಗಳು" ವಾಸವಾಗಿದ್ದ ಹಳ್ಳಿಯಾಗಿತ್ತು , ಅನಿವಾರ್ಯ ಕಾರಣದಿಂದ ಇಂದು ನಮ್ಮವರ ಕುಟುಂಬಗಳು ಕಡಿಮೆಯಾಗಿವೆ.

ಇಲ್ಲಿನ ವಿಶೇಷ ಆಕರ್ಷಣೆ "ಶ್ರೀ ಕೋದಂಡರಾಮ ಸ್ವಾಮಿ ದೇವಾಲಯದ ಸಮುಚ್ಚಯ". ಇಲ್ಲಿ ಶ್ರೀ ಕೋದಂಡರಾಮ ಸ್ವಾಮಿ ದೇವಸ್ಥಾನ, ("ದಕ್ಷಿಣ ಅಯೋಧ್ಯೆ"), ಶ್ರೀ ಕನ್ನಿಕಾ ಪರಮೇಶ್ವರಿ ವಾಸವಿ ದೇವಸ್ಥಾನ, ಶ್ರೀ ನವನಾರಸಿಂಹನ ದೇವಸ್ಥಾನ, ಇಸ್ಕಾನ್, ಇದಕ್ಕೆ ಹೊಂದಿಕೊಂಡಿರುವ "ಗೋಶಾಲೆ", ಶ್ರೀ ಶಕ್ತಿ ಶಿರಡಿ ಸಾಯಿ ಮಂದಿರ, ಪಕ್ಕದಲ್ಲೇ ಪ್ರತಿಷ್ಠಾಪನೆಗೊಳ್ಳುತ್ತಿರುವ ಅರವತ್ತೊಂಬತ್ತು ಅಡಿಗಳ, ಭುಜಗಳ ಮೇಲೆ ಶ್ರೀ ರಾಮ ಲಕ್ಷ್ಮಣರನ್ನು ಕೂರಿಸಿಕೊಂಡಿರುವ ಬೃಹದ್ರೂಪಿ ಶ್ರೀಮದಾಂಜನೇಯ ಸ್ವಾಮಿಯ ಏಕಶಿಲಾ ವಿಗ್ರಹ. ಇವುಗಳಿಗೆ ಪ್ರತಿ ನಿತ್ಯ ವಿಜೃಂಭಣೆಯಿಂದ ಪೂಜಾ ಕಾರ್ಯಕ್ರಮ ನಡೆಯುತ್ತಿವೆ .

ಈ ಜಾಗಕ್ಕೆ ಇಷ್ಟು ಮಹತ್ವ ಏಕೆ? ಏಕೆಂದರೆ ಇದು ಇರುವುದು ಕಾಚರಕನಹಳ್ಳಿಯ ಕೆರೆ ಅಂಗಳದಲ್ಲಿ. ಈ ಜಾಗದಲ್ಲಿ ಸುಮಾರು 1989 – 90 ರಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಆಗಿನ ಸರ್ಕಾರ ತೀರ್ಮಾನಿಸಿತ್ತು. ಕಸಾಯಿಖಾನೆ ನಿರ್ಮಾಣ ಮಾಡಲು ಹೊರಟಿದ್ದ ಸ್ಥಳದಲ್ಲಿ ಸುಮಾರು ಹತ್ತು ಹದಿನೈದು ಗ್ರಾಮಗಳ ಮುಖ್ಯಸ್ಥರುಗಳು ಹಾಗೂ ಸಾರ್ವಜನಿಕರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಈ ದೇವಾಲಯಗಳ ಸಮುಚ್ಚಯ ನಿರ್ಮಿಸಿದ್ದಾರೆ. ಈಗ ಇದು ಒಂದು ಪ್ರವಾಸಿ ತಾಣವಾಗಿದೆ. ನಮ್ಮ ಹಾಗೂ ನೆರೆ ರಾಜ್ಯಗಳ ಜನರು ಇಲ್ಲಿಗೆ ಭೇಟಿ ನೀಡುತ್ತಿರುತ್ತಾರೆ .

ಪ್ರತಿ ದಿನವೂ ದೇವಾಲಯದ ಆವರಣದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ.

ಅಲ್ಲದೆ ಈ ಊರಿನಲ್ಲಿ ಚೋಳ ರಾಜವಂಶದವರು ಸ್ಥಾಪಿಸಿರುವ ಪುರಾತನವಾದ ಶ್ರೀ ಸೋಮೇಶ್ವರ ದೇವಾಲಯ, ಶ್ರೀ ಓಂ ಶಕ್ತಿ ದೇವತೆ ದೇವಾಲಯ, ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಶ್ರೀ ಮಾತಂಗ ಗಣಪತಿ ದೇವಸ್ಥಾನಗಳು ಇವೆ.

ಹೆಚ್. ಆರ್. ಬಿ. ಆರ್. ಎರಡನೇ ಬಡಾವಣೆಯಲ್ಲಿ ಶೃಂಗೇರಿ ಜಗದ್ಗುರುಗಳು ಶ್ರೀ ಶ್ರೀ ಶ್ರೀ ಭಾರತಿತೀರ್ಥರವರ ಅಮೃತ ಹಸ್ತದಿಂದ ಸ್ಥಾಪಿತವಾಗಿರುವ ಸುರಭಾರತಿ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ಶ್ರೀ ಶೃಂಗೇರಿ ಶಂಕ ರಾಚಾರ್ಯರ ಮಂದಿರ, ಶ್ರೀ ಶಾರದಾದೇವಿ ಮಂದಿರ, ಶ್ರೀ ಚಂದ್ರಮೌಳೇಶ್ವರ ಸ್ವಾಮಿ ಮಂದಿರಗಳು ಇವೆ. ಇಲ್ಲಿ ವಿಶೇಷ ಹೋಮ ಹವನಗಳು ನಡೆಯುತ್ತಿವೆ, ಮಾರ್ಗಶೀರ್ಷೋತ್ಸವ ಶ್ರೀ ಶೃಂಗೇರಿ ಶಂಕರರ ಪಾದುಕೆಗಳ ನಗರ ಸಂಕೀರ್ತನೆ ಇವುಗಳು ಜರುಗುತ್ತವೆ. ಆ ತಿಂಗಳು ಪೂರ್ತಿ, ಪ್ರತಿ ದಿನವೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ .

ಸಧ್ಯಕ್ಕೆ ನಮ್ಮ ತಾತ ದಿ॥ ರಾಮಯ್ಯನವರ ಪರಿವಾರ ವರ್ಗದವರು ಇಲ್ಲಿ ವಾಸವಾಗಿದ್ದೇವೆ. ಜೊತೆಗೆ, ಶ್ರೀ ವಿಶ್ವೇಶ್ವರನ್ ಮೇಷ್ಟ್ರು, ಕರ್ನಲ್ ಶ್ರೀ ವಿ.ಜಿ.ರಾಜನ್, ಶ್ರೀ ಎನ್.ವಿ. ಸುಂದರ್ ಮತ್ತು ದಿ॥ ಅಶ್ವತ್ಥ್ ನಾರಾಯಣರವರ ಪುತ್ರ ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀ ನಾಗರಾಜ್ ಅವರ ಕುಟುಂಬದವರು ಸಹಾ ಇಲ್ಲಿ ವಾಸವಿದ್ದಾರೆ .



**ನಾಗರಾಜ ಸುಬ್ಬರಾವ್**
9845523145

# ಶ್ರೀ ಸರಸ್ವತೀ ಕನ್ನಡ ವರ್ಣಮಾಲಾ ಸ್ತೋತ್ರಂ



**ಚರಣ ಕಮಲಕೇ ನಮೋ ಸರಸ್ವತಿ**
**ವರವನು ಬೇಡುವೆ ನಮೋ ಸರಸ್ವತಿ**
**ಕರುಣದಿ ಪಾಲಿಸು ನಮೋ ಸರಸ್ವತಿ**

1. ಅಕ್ಷರ ನಿಧಿಯನ್ನು ನೀಡು, ಸರಸ್ವತಿ
2. ಆಜ್ಞೆಯ ನಮಗೆ ಮಾಡು ಸರಸ್ವತಿ
3. ಇಚ್ಛಿಸಿದಂಶವ ನಡೆಸು ಸರಸ್ವತಿ
4. ಈ ಒಂದಭಯವತೋರು ಸರಸ್ವತಿ
5. ಉಜ್ವಲೆ ವಾಗ್ನಿಧಿವಿನುತೆ ಸರಸ್ವತಿ
6. ಊರ್ವರಿ ವೀಣಾ ಪಾಣಿ ಸರಸ್ವತಿ
7. ಋಗ್ರೂಪಿಣಿ ವಾಗ್ದೇವಿ ಸರಸ್ವತಿ
8. ಋಕ್ಷ ಪಶುತ್ವಕ್ಕೆ ಪಾಶ ಸರಸ್ವತಿ
9. ಎತ್ತುತ ಆರತಿ ನಮಿಪೆ ಸರಸ್ವತಿ
10. ಏಕಾಗ್ರತೆಯಿಂ ಭಜಿಪೆ ಸರಸ್ವತಿ
11. ಐಶ್ವರ್ಯದ ಮದ ಬೇಡ ಸರಸ್ವತಿ
12. ಒಲಿಯುತೆ ಜಿಹ್ವಾಸಿದ್ಧಿ ಸರಸ್ವತಿ
13. ಓಜೋ ತೇಜಸ ಧಾತ್ರಿ ಸರಸ್ವತಿ
14. ಔದಾರ್ಯದನುಗ್ರಹ ವರದೆ ಸರಸ್ವತಿ
15. ಅಂಜಲಿ ಬದ್ಧ ಪ್ರಣಾಮ ಸರಸ್ವತಿ
16. ಅಃ! ಏನಿತ್ತು ಕೃಪಾಳು ಸರಸ್ವತಿ
17. ಕಲಾತ್ಮಕ ವಿಶ್ವಕಲ್ಯಾಣಿ ಸರಸ್ವತಿ
18. ಖಗ ವಾಹನೆ ಜಗದ್ಧಾತ್ರಿ ಸರಸ್ವತಿ
19. ಗಂಧರ್ವ ಗಾಯನ ವಿದುಷಿ ಸರಸ್ವತಿ
20. ಘಂಟಾ ಘೋಷಿತ ಚತುರೆ ಸರಸ್ವತಿ
21. ಙಂಕಾರ ಪ್ರಿಯ ಸೌಂದರ್ಯ ಸರಸ್ವತಿ
22. ಚತುರಾನನ ಹೃತ್ಕಮಲೆ ಸರಸ್ವತಿ
23. ಛಂಧಸ ತಾರ್ಕಿಕ ನಿಪುಣೆ ಸರಸ್ವತಿ
24. ಜಗದ್ವಂದ್ಯ ಅನುಭೂತಿ ಸರಸ್ವತಿ
25. ಝುಂಕಾರ ಪ್ರಿಯ ಪರಮ ಸರಸ್ವತಿ
26. ಜ್ಞಾನಗಮ್ಯ ಕರುಣಾಳು ಸರಸ್ವತಿ
27. ಟಕ ಟಮ ವಾದ್ಯ ವಿಶೇಷ ಸರಸ್ವತಿ
28. ಠಕ್ಕಿನ ಜನಗಳ ಶತ್ರು ಸರಸ್ವತಿ
29. ಡಂಕಣ ಜಕಣರ ಸ್ಪೂರ್ತಿ ಸರಸ್ವತಿ
30. ಢಮ ಢಂ ಡಮರುಗ ಶಬ್ದ ಸರಸ್ವತಿ
31. ಣತ ಪಾಲಯ ಮಾಂ ಪಾಹಿ ಸರಸ್ವತಿ
32. ತನ್ಮಯ ಶಕ್ತಿಯನೀವ ಸರಸ್ವತಿ
33. ಥಕ ಥೈ ನರ್ತಿಸು ನಾಟ್ಯ ಸರಸ್ವತಿ
34. ಧಮನಿ ಸಂಚಾರ ಉತ್ಸಾಹೆ ಸರಸ್ವತಿ
35. ಧವಳ ಸುಕಾಂತಿ ಶರೀರೆ ಸರಸ್ವತಿ
36. ನಂಬಿದ ಭಕುತರ ಪ್ರಾಣ ಸರಸ್ವತಿ
37. ಪಂಕಜಲೋಚನ ಲೋಲೆ ಸರಸ್ವತಿ
38. ಫಲ ಪುಷ್ಪಾವೃತೆ ಸೌಂದರ್ಯ ಸರಸ್ವತಿ
39. ಬಡವರ ಬಂಧು ನೀನೆ ಸರಸ್ವತಿ
40. ಭವ ವಾರಿಧಿಗೆ ಸೇತು ಸರಸ್ವತಿ
41. ಮಮಕಾರ ಪ್ರಿಯ ಪ್ರೀತೆ ಸರಸ್ವತಿ
42. ಯಶೋದುಂಧುಭಿ ಧೀರೆ ಸರಸ್ವತಿ
43. ರಜನೀ ರಂಜಿತೆ ಮಾತೆ ಸರಸ್ವತಿ
44. ಲಂಕಾರಪ್ರಿಯ ಪಾಹಿ ಸರಸ್ವತಿ
45. ವದನ ವಿರಾಜಿತೆ ಶ್ವೇತ ಸರಸ್ವತಿ
46. ಶಮದಮ ಕರುಣಾ ವಾಣಿ ಸರಸ್ವತಿ
47. ಷಟ್ ಚಕ್ರವಾಸಿನಿ ಹಂಸೆ ಸರಸ್ವತಿ
48. ಸಂಸ್ಕೃತ ಅಕ್ಷರ ರೂಪ ಸರಸ್ವತಿ
49. ಹಂಸಗಾಮಿನೀ ಶಾಂತಿ ಸರಸ್ವತಿ
50. ಳಕ್ಷಾಂತರ ನಮನ ನಿಮಗೆ ಸರಸ್ವತಿ
51. ಕ್ಷಮಯಾಧರಿತ್ರಿ ನಮ್ಮ ಸರಸ್ವತಿ



**ನಡವತ್ತಿ ಗೋಪಾಲಯ್ಯ**
9880279439

# ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ







# ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ











# "ಶ್ರೀ ವಿಷ್ಣು ಸಹಸ್ರನಾಮ"



ಭರತಖಂಡದ ಅನರ್ಘ್ಯ ರತ್ನಗಳಾದ ಆದಿಕವಿ ಶ್ರೀ ವಾಲ್ಮೀಕಿ ವಿರಚಿತ ಶ್ರೀಮದ್ರಾಮಾಯಣ, ವ್ಯಾಸ ಮಹರ್ಷಿಗಳ ಶ್ರೀ ಮಹಾಭಾರತ ಮತ್ತು ಜಗದ್ಗುರುವಾದ ಶ್ರೀ ಕೃಷ್ಣ ಪರಮಾತ್ಮನೇ ಪಾರ್ಥನಿಗೆ ಬೋಧಿಸಿದ ಶ್ರೀಮದ್ ಭಗವದ್ಗೀತೆ - ಇವು ಪವಿತ್ರ ಗ್ರಂಥಗಳು.

**ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ।**
**ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥**

**ಆ ಚತುರ್ವದನೋ ಬ್ರಹ್ಮ ದ್ವಿಬಾಹುರಪರೋ ಹರಿಃ**
**ಆಫಾಲ ಲೋಚನಃ ಶಂಭುಃ ಭಗವಾನ್ ಬಾದರಾಯಣಃ ।**

**ವಸುದೇವ ಸುತಂ ದೇವಂ ಕಂಸ ಚಾಣೂರ ಮರ್ದನಂ ।**
**ದೇವಕಿ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥**

ಈ ಮೂವರು ಬ್ರಹ್ಮರ್ಷಿಗಳಿಗೆ ಸವಿನಯ ನಮಸ್ಕಾರಗಳು.

ಶ್ರೀ ಮಹಾಭಾರತವು ವೇದವ್ಯಾಸರಿಂದ ರಚಿತವಾಗಿದೆ. ಆ ಮಹಾಭಾರತ ಸಮುದ್ರದಿಂದ ಹೊರಹೊಮ್ಮಿದ ಶ್ರೇಷ್ಠವಾದ ಪಂಚ ಮಹಾರತ್ನಗಳಲ್ಲಿ ಶ್ರೀ ವಿಷ್ಣುಸಹಸ್ರ ನಾಮವೂ ಒಂದಾಗಿದೆ.

ಶ್ರೀಮದ್ ಭಗವದ್ಗೀತೆ, ಶ್ರೀ ವಿಷ್ಣು ಸಹಸ್ರನಾಮ, ಭೀಷ್ಮರು ಕೃಷ್ಣನನ್ನು ಸ್ತುತಿಸುವುದು (ಸ್ತವರಾಜ), ಅನುಸ್ಮೃತಿ ಹಾಗೂ ಗಜೇಂದ್ರ ಮೋಕ್ಷಗಳೆಂಬ ಈ ಐದು ಮಹಾಭಾರತದ ರತ್ನಗಳೆಂದು ಪ್ರಸಿದ್ಧಿಯಾಗಿವೆ.

ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರವು ಅತ್ಯಂತ ಪವಿತ್ರವೂ, ಶ್ರೇಷ್ಠವೂ ಆಗಿದೆ. ವೇದ ಸಹಸ್ರ ಶಾಖೆಗಳನ್ನರಿತ ಸರ್ವಜ್ಞ, ಸ್ವಯಂ ಶ್ರೀಮನ್ನಾರಾಯಣನೇ ಆದ ಶ್ರೀ ವೇದವ್ಯಾಸರು ಇದನ್ನು ಅನುಗ್ರಹಿಸಿದ್ದಾರೆ. ಹೀಗಾಗಿ ಭಗವಂತನ ಈ ದಿವ್ಯ ಸಹಸ್ರನಾಮವು ಮಹತ್ವದ ಸ್ಥಾನವನ್ನು ಪಡೆದಿದೆ.

ಸ್ತೋತ್ರಗಳಲ್ಲಿ ವಿಷ್ಣು ಸಹಸ್ರನಾಮ ಸ್ತೋತ್ರದ ಮೇಲೆ ಅನೇಕ ಭಾಷ್ಯಗಳು ರಚಿತವಾಗಿದೆ. ಇವುಗಳಲ್ಲಿ ಭಗವತ್ಪಾದ ಶ್ರೀ ಶ್ರೀ ಶ್ರೀ ಶಂಕರರ ಭಾಷ್ಯವೇ ಮೊದಲನೆಯದು ಎಂಬುದು ಹೆಮ್ಮೆಯ ವಿಷಯವಾಗಿದೆ. ಶ್ರೀ ರಾಮಾನುಜಾಚಾರ್ಯರ ಪ್ರೇರಣೆಯಂತೆ ಅವರ ಶಿಷ್ಯ ಪರಾಶರ ಭಟ್ಟರು ಮತ್ತು ಮಧ್ವ ಪರಂಪರೆಯಲ್ಲಿ ಸತ್ಯ ಸಂಧೀಯ ಭಾಷ್ಯಗಳು ಪ್ರಚಲಿತವಾಗಿವೆ.

ಭಗವತ್ಪಾದ ಶ್ರೀ ಶ್ರೀ ಶ್ರೀ ಶಂಕರಾಚಾರ್ಯರು ಮೊಟ್ಟ ಮೊದಲು ರಚಿಸಿದ್ದೇ ಶ್ರೀ ವಿಷ್ಣು ಸಹಸ್ರನಾಮ ಭಾಷ್ಯ ಎನ್ನಬಹುದು. ಆಚಾರ್ಯರು ತಮ್ಮ ಗುರುಗಳಾದ ಗೋವಿಂದ ಭಗವತ್ಪಾದರ ಆಣತಿಯಂತೆ ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನು ರಚಿಸಲು ಕಾಶಿಗೆ ತೆರಳಿದರು. ಅಲ್ಲಿ ಭಾಷ್ಯ ರಚಿಸಲು ತಮ್ಮ ಕೈಗೆ ಸಿಕ್ಕಿದ ಮೊದಲ ಗ್ರಂಥ ತರುವಂತೆ ಶಿಷ್ಯರಿಗೆ ಆಜ್ಞಾಪಿಸಿದರು. ಒಬ್ಬೊಬ್ಬ ಶಿಷ್ಯನೂ ತನಗೆ ತೋಚಿದ ಗ್ರಂಥವನ್ನು ತೆಗೆದುಕೊಂಡು ಬರಲು, ಆಚಾರ್ಯರು ಅವುಗಳನ್ನು ಅವಲೋಕಿಸಿದಾಗ ಅವೆಲ್ಲವೂ ವಿಷ್ಣು ಸಹಸ್ರನಾಮದ ಸ್ತೋತ್ರಗಳಾಗಿದ್ದವು. ಈ ರೀತಿಯಿಂದ ಪ್ರಪ್ರಥಮ ಭಾಷ್ಯ ಗ್ರಂಥ ಆಚಾರ್ಯರು ರಚಿಸಿದ್ದು ಆಗಿದೆ. ಆಚಾರ್ಯರಿಗೆ ವಿಷ್ಣು ಸಹಸ್ರನಾಮದಲ್ಲಿ ಅಪಾರ ಗೌರವವಿತ್ತು ಎಂಬುದಕ್ಕೆ ಅವರ ಭಾಷ್ಯ ವಚನವೇ ಸಾಕ್ಷಿ. "ಸಕಲ ಪುರುಷಾರ್ಥ ಸಾಧನಂ, ಸುಖ ಸಂಪಾದ್ಯಂ, ಅಲ್ಪ ಪ್ರಯಾಸಂ ಅನಲ್ಪ ಫಲಂ ಹಿಂಸಾದಿ ರಹಿತಂ, ಕಾಲಾದಿ ನಿಯಮಾನ ಪೇಕ್ಷತ್ವಂ ಚ ಅಧಿಕ್ಯೆ ಕಾರಣಂ."

ಇದು ಸಕಲ ಪುರುಷಾರ್ಥ ಸಾಧನ. ಸುಖವಾಗಿ ಅನುಷ್ಠಾನ ಮಾಡಲು ಸಾಧ್ಯವಾಗಿರುವುದು. ಅಲ್ಪ ಪ್ರಯಾಸದಿಂದಲೇ ಮಹಾ ಫಲ ಕೊಡುವ ದಿವ್ಯಸಾಧನ. ದೇಶ, ಕಾಲ ಮುಂತಾದ ಯಾವ ನಿಯಮವೂ ಇಲ್ಲ. ಆದ್ದರಿಂದ ಅಧಿಕ ಮಾನ್ಯತೆಯ ಯಜ್ಞವೆಂದು ತಿಳಿಯುಬಹುದು. "ಗೇಯಂ ಗೀತಾ ನಾಮ ಸಹಸ್ರಂ" ಎಂದು ಪ್ರಶಂಸಿಸಿದ್ದಾರೆ. ಅಂದರೆ ಪಾರಾಯಣಕ್ಕೆ ಭಗವದ್ಗೀತೆ ಹೇಗೋ ಹಾಗೆಯೇ ವಿಷ್ಣು ಸಹಸ್ರನಾಮ ಸ್ತೋತ್ರವು ಕೂಡ ಎನ್ನಬಹುದು.

"ಭಾರತ ಸಾರ ಉಳ್ಳದ್ದು." ಅದಕ್ಕಿಂತಲೂ ಸಾರ ಉಳ್ಳದ್ದು ವಿಷ್ಣು ಸಹಸ್ರನಾಮ ಸ್ತೋತ್ರ ಎಂದು ಆನಂದ ತೀರ್ಥರು ತಿಳಿಸಿದ್ದಾರೆ. ಚತುರ್ವಿಧ ಪುರುಷಾರ್ಥ ಪ್ರಾಪ್ತಿಗೆ ಇದು ಸಾಧನವಾಗಿದೆ. ಸಕಲರೂ ಅನುಸಂಧಾನ ಮಾಡುವಂತಹುದು. ಹಸುವಿನ ಹಾಲು ಹೇಗೆ ಹಸುಗೂಸಿನಿಂದ ಹಿಡಿದು ಜಗ ಜಟ್ಟಿಯವರೆಗೆ ಆಹಾರವೋ ಅಂತೆಯೇ ವಿಷ್ಣು ಸಹಸ್ರನಾಮ ಸ್ತೋತ್ರವು ಆಧ್ಯಾತ್ಮಿಕ ಉನ್ನತಿಗೆ ಆಹಾರವಾಗಿದೆ. "ಯಸ್ಯ ಸ್ಮರಣ ಮಾತ್ರೇನ ಜನ್ಮ ಸಂಸಾರ ಬಂಧನಾತ್ ವಿಮುಚ್ಯತೇ". ಸಂಸಾರ

ಬಂಧನದಿಂದ ನಮ್ಮನ್ನು ಮುಕ್ತಗೊಳಿಸುವ ಶಕ್ತಿ ಈ ವಿಷ್ಣು ಸಹಸ್ರನಾಮಕ್ಕೆ ಇದೆ. ಇದು ಭಗವದ್ಗೀತೆಗೆ ಸರಿಸಮಾನವಾದ ಮೋಕ್ಷ ಶಾಸ್ತ್ರವೇ ಆಗಿದೆ. ನಾಲ್ಕು ವೇದಗಳ ಜೊತೆಗೆ ಮಹಾಭಾರತವನ್ನು ಪಂಚಮ ವೇದ ಎಂದು ತಿಳಿದವರು ಹೇಳಿದ್ದಾರೆ. ವೇದದಲ್ಲಿ ಬರುವ ಮಂತ್ರದಲ್ಲಿ ಇದು ಮಹಾ ಮಂತ್ರ ಎನ್ನಬಹುದು.

ಅರ್ಥಪೂರ್ಣ ಸಂವಾದ ಎಂಬ ಒಂದು ಪದವಿದೆ. ಯಾರಾದರೂ ಇಬ್ಬರು ಸಜ್ಜನರು ಮಾತನಾಡುವಾಗ ಹೊರಹೊಮ್ಮುವ ಒಂದು ವಿಚಾರ ಅಥವಾ ವಿಷಯವು ಗಣನೀಯವಾಗಿರುತ್ತದೆ.

ಶ್ರೀ ನಾರದ ಮತ್ತು ವಾಲ್ಮೀಕಿ ಅವರ ಸತ್ವಪೂರ್ಣ ಮಾತಿನಲ್ಲಿ ಶ್ರೀಮದ್ರಾಮಾಯಣವು ಆವಿರ್ಭವಿಸಿತು. ಅರ್ಜುನನ ಪ್ರಶ್ನೆಗಳಿಗೆ ಶ್ರೀ ಕೃಷ್ಣನ ಉತ್ತರವಾದ ಮಾತುಗಳಿಂದ ಭಗವದ್ಗೀತೆಯು ಉದ್ಭವವಾಯಿತು. ಗುರು–ಶಿಷ್ಯರ ಸಂವಾದದಿಂದ ಉದ್ಧವ ಗೀತೆಯಾಯಿತು. ಪಾರ್ವತಿ ಪರಮೇಶ್ವರರ ವಾಗ್ವಾದದಿಂದ ಗುರು ಗೀತೆಯಾಯಿತು. ಜನಮೇಜಯ ಕೇಳಿದ, ವೈಶಂಪಾಯನರು ಹೇಳಿದರು – ಅದು ಮಹಾಭಾರತವಾಯಿತು. ಗರುಡನು ಕೇಳಿದ್ದಕ್ಕೆ ಮಹಾವಿಷ್ಣುವು ಉತ್ತರಿಸಿದ್ದೇ ಅದು ಗರುಡ ಪುರಾಣವಾಯಿತು. ಅಗಸ್ತ್ಯರು ಮತ್ತು ಹಯಗ್ರೀವರ ಸಂವಾದದಿಂದ ಶ್ರೀ ಲಲಿತಾ ಸಹಸ್ರನಾಮವಾಯಿತು. ಅಂತೆಯೇ ಯುಧಿಷ್ಠಿರ ಕೇಳಿದ್ದಕ್ಕೆ ಭೀಷ್ಮರು ಉತ್ತರಿಸಿದ್ದೇ ಶ್ರೀ ವಿಷ್ಣು ಸಹಸ್ರನಾಮವೆಂದು ಪ್ರಖ್ಯಾತವಾಯಿತು.

ಮಹಾಭಾರತದ ಯುದ್ಧದ ಅನಂತರದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ಭಗವದ್ದರ್ಶನಕ್ಕಾಗಿ ಕಾದಿದ್ದಾರೆ. ಇಚ್ಛಾಮರಣಿಯಾದ ಅವರು ಉತ್ತರಾಯಣ ಪುಣ್ಯಕಾಲದಲ್ಲಿ ಅಸುನೀಗಲು ಕಾದಿದ್ದಾರೆ. ಚಕ್ರವರ್ತಿಯಾದ ಧರ್ಮರಾಯನು ಎಲ್ಲರನ್ನೂ ಕಳೆದುಕೊಂಡು ಅತ್ಯಂತ ವಿಷಾದದಿಂದ ಬೇಸರಗೊಂಡಿದ್ದಾನೆ. ಪಾಪ ಭೀತಿಯಲ್ಲಿ ನೊಂದು ಬೆಂದು ಬಳಲಿ ನಿರಾಶನಾಗಿದ್ದಾನೆ, ದುಃಖಿತನಾಗಿದ್ದಾನೆ. ಸಕಲ ಶಾಸ್ತ್ರಗಳ ಸರ್ವಜ್ಞರಾಗಿರುವ ಭೀಷ್ಮರು ಪರಂಧಾಮವನ್ನೈದಿದರೆ ಅವರ ಜೊತೆಯಲ್ಲೇ ಎಲ್ಲಾ ಶಾಸ್ತ್ರಗಳು ಅರಿತ ಜ್ಞಾನವು ನಶಿಸಿವುದೆಂದರಿತ ಶ್ರೀ ಕೃಷ್ಣ ಪರಮಾತ್ಮನು ಧರ್ಮರಾಯ ನೊಡಗೂಡಿ ಭೀಷ್ಮರಲ್ಲಿಗೆ ಬರುತ್ತಾನೆ. ಧರ್ಮದ ಸಾರವೆಲ್ಲವೂ ಭೀಷ್ಮರಿಂದ ಯುಧಿಷ್ಠಿರನಿಗೆ ಉಪದೇಶವಾಗಲೆಂದು ಪರಮ ಭಕ್ತನೆಡೆಗೆ ಬರುತ್ತಾನೆ. ಶ್ರೀ ಕೃಷ್ಣ ಪರಮಾತ್ಮನ ಅನುಗ್ರಹಕ್ಕೆ ಸಂತೋಷಪಟ್ಟು ಭೀಷ್ಮರು ಆ ಭಗವಂತನ ದಿವ್ಯದರ್ಶನವನ್ನು ಪಡೆಯುತ್ತಾರೆ. ಭಕ್ತಶಿರೋಮಣಿಯೂ ಪಿತಾಮಹರೂ ಆದ ಶ್ರೀ ಭೀಷ್ಮಾಚಾರ್ಯರಿಂದ ಮಹಾ ವಿಷ್ಣುವಿನ ಅವತಾರವಾದ ಪರಮಾತ್ಮನ ಸನ್ನಿಧಿಯಲ್ಲಿ ಭೀಷ್ಮರು ಯುಧಿಷ್ಠಿರನಿಗೆ ಸಕಲ ಧರ್ಮಗಳ ಸಾರವನ್ನು ಉಪದೇಶಿಸಿದರು. ಅವನ ಆವೇಗವನ್ನು ಉಪಶಮಿಸಿದರು. ಆದರೂ ಸಂಪೂರ್ಣ ತೃಪ್ತಿಯಾಗದ ಧರ್ಮರಾಯನು ಭೀಷ್ಮನಲ್ಲಿ ಆರು ಪ್ರಶ್ನೆಗಳನ್ನು ಕೇಳಿದನು.

1. ಪ್ರಪಂಚಕ್ಕೆ ಆರಾಧ್ಯ ದೈವ ಯಾವುದು?
2. ಪರಮ ಲಕ್ಷ್ಯ ಯಾವುದು?
3. ಯಾರನ್ನು ಸ್ತುತಿಸಿದರೆ ಜನರಿಗೆ ಶುಭ ಉಂಟಾಗುತ್ತದೆ?
4. ಯಾರನ್ನು ಅರ್ಚಿಸಿದರೆ ಸುಖ–ಶಾಂತಿ ಲಭಿಸುತ್ತದೆ?
5. ಧರ್ಮಗಳಲ್ಲೆಲ್ಲಾ ವಿಶಿಷ್ಠ ಧರ್ಮ ಯಾವುದು?
6. ಯಾರನ್ನು ಜಪಿಸಿದರೆ ಪ್ರಾಣಿಕೋಟಿ ಸಂಸಾರ ಬಂಧನದಿಂದ ಮುಕ್ತರಾಗುತ್ತಾರೆ?

ಅದಕ್ಕೆ ಭಿಷ್ಮರು ಉತ್ತರಿಸಿದ್ದು ಹೀಗಿದೆ:
1. ಸರ್ವ ಪ್ರಾಣಿಕೋಟಿಗಳಿಗೆಲ್ಲಾ ಏಕೈಕ ಶ್ರೀ ಮಹಾವಿಷ್ಣುವೇ ಪ್ರಪಂಚಕ್ಕೆ ಆರಾಧ್ಯ ದೈವ.
2. ಅವನೇ ಪರಮ ಲಕ್ಷ್ಯ.
3. ಅವನ ಅನಂತ ನಾಮ ಸ್ತುತಿಸಿದರೆ ಶುಭ ಉಂಟಾಗುತ್ತದೆ.
4. ಅರ್ಚಿಸಿದರೆ ಸುಖ–ಶಾಂತಿ ಉಂಟಾಗುತ್ತದೆ.
5. ಆ ಭಗವಂತನನ್ನು ಸೇವಿಸುವುದೇ ಉತ್ತಮ ಧರ್ಮ.
6. ಅವನ ಅನಂತ ನಾಮಗಳನ್ನು ಜಪಿಸುವುದೇ ಮಾನವ ಕೋಟಿಗೆ ಸರ್ವ ದುಃಖಗಳಿಂದಲೂ ವಿಮುಕ್ತಿ ಎಂದು ಉತ್ತರಿಸಿದರು.

ಸಹಸ್ರ ಮೂರ್ತಿಯಾದ ಪುರುಷೋತ್ತಮನ ಸಹಸ್ರನಾಮವು ಮಹಾಭಾರತದ ಅನುಶಾಸನಿಕ ಪರ್ವದ 149ನೆಯ ಅಧ್ಯಾಯದಲ್ಲಿ ಬರುತ್ತದೆ. 142 ಶ್ಲೋಕಗಳನ್ನು ಒಳಗೊಂಡಿರುವ ಈ ವಿಷ್ಣು ಸಹಸ್ರನಾಮ ಭೀಷ್ಮ ಯುಧಿಷ್ಠಿರ ಸಂವಾದದಲ್ಲಿದೆ.

ವಿಷ್ಣು ಸಹಸ್ರನಾಮದಲ್ಲಿ ಒಮ್ಮೆ ಬಂದ ನಾಮವು ಮತ್ತೆ ಮತ್ತೆ (2–3–4) ಬಾರಿ ಬಂದಿದೆ. ಆದರೆ ಒಂದು ನಾಮಕ್ಕೆ ಕೊಟ್ಟ ಭಾಷ್ಯ ಪುನರುಕ್ತಿಯಾಗಿಲ್ಲ. ಬೇರೆ ಬೇರೆ ಅರ್ಥವನ್ನು ಕೊಟ್ಟಿರುವುದು ಇದೇ ಅದರ ಮಹಿಮೆ ಎನ್ನಬಹುದು. ಇಂತಹ ಪರಮ ಪವಿತ್ರವಾದ ಇಹ–ಪರಗಳೆರಡರ ಶ್ರೇಯಸ್ಸಿಗೆ ಕಾರಣವಾದ ಶ್ರೀ ವಿಷ್ಣು ಸಹಸ್ರನಾಮವು ಪಾರಾಯಣಕ್ಕೆ ಯೋಗ್ಯವಾಗಿದೆ.

ಕೃತಯುಗದಲ್ಲಿ ಧ್ಯಾನ, ತ್ರೇತಾಯುಗದಲ್ಲಿ ಯಜ್ಞ, ದ್ವಾಪರದಲ್ಲಿ ಅರ್ಚನೆಯಿಂದ ಯಾವುದನ್ನು ಪಡೆಯಬಹುದೋ ಅದನ್ನು ಕಲಿಯುಗದಲ್ಲಿ ಕೇಶವನ ಸಂಕೀರ್ತನೆಯಿಂದ ಪಡೆಯಬಹುದು ಎಂದು ವಿಷ್ಣು ಪುರಾಣದಲ್ಲಿ ಹೇಳಿದೆ. ಯಜ್ಞಗಳಲ್ಲಿ ನಾನು ಜಪಯಜ್ಞ ಎಂದು ಭಗವಂತನೇ ನುಡಿದಿದ್ದಾನೆ. ಶ್ರೀ ಶಂಕರಾಚಾರ್ಯರು ಈ ಕಲಿಯುಗದಲ್ಲಿ ಸಹಸ್ರನಾಮ ಜಪವು ಅತ್ಯಂತ ಉತ್ತಮ ಸಾಧನೆ ಎಂದು ಹೇಳಿದ್ದಾರೆ. ಇದಕ್ಕೆ ಏಕೆ ಮಾನ್ಯತೆ ಇದೆ ಎಂದರೆ

ಇದರಲ್ಲಿ ಇತರ ಪ್ರಾಣಿಗಳಿಗೆ ಹಿಂಸೆಯಿಲ್ಲ, ಧನ ದ್ರವ್ಯದ ಅಗತ್ಯವಿಲ್ಲ, ದೇಶ ಕಾಲಗಳ ನಿಯಮವಿಲ್ಲ. ಶುಭಕಾರ್ಯ ಮತ್ತು ಶ್ರಾದ್ಧಾದಿ ಕರ್ಮಗಳ ಸಂದರ್ಭದಲ್ಲೂ ವಿಷ್ಣು ಸಹಸ್ರನಾಮದ ಪಠಣ ಮಾಡಬಹುದು ಮತ್ತು ಸಂಪ್ರದಾಯವೂ ಹೌದು. ಬ್ರಹ್ಮಚರ್ಯಾದಿ ಸಕಲ ಆಶ್ರಮದವರೂ ಪಠಿಸಬಹುದು. ಭಾರತಾದ್ಯಂತ ಶ್ರೀ ವಿಷ್ಣು ಸಹಸ್ರನಾಮ ಎಂದರೆ ಅತ್ಯಂತ ಅತ್ಯುನ್ನತ ಪೂಜ್ಯ ಭಾವ. ಜೀವನದ ಸುಖ–ದುಃಖ ಮುಂತಾದ ಎಂತಹ ಸನ್ನಿವೇಶಗಳಲ್ಲೂ ಈ ವಿಷ್ಣು ಸಹಸ್ರನಾಮ ಸ್ತೋತ್ರವನ್ನು ಪಾರಾಯಣ ಮಾಡುವುದು ಒಳ್ಳೆಯದು.

ಸಕಲ ಗ್ರಹ ಬಲ ನೀನೆ "ಸರಸಿಜಾಕ್ಷ" ಎಂದು ಪುರಂದರದಾಸರು ಹೇಳಿದಂತೆ ಎಲ್ಲಾ ಗ್ರಹಗಳ ಮೂಲ ರೂಪ ಶ್ರೀಮಹಾವಿಷ್ಣು. ಅವನನ್ನೇ ಆಶ್ರಯಿಸಿದರೆ ಗ್ರಹಗಳು ತಾನೇ ಏನು ಮಾಡಬಲ್ಲವು? ಒಟ್ಟು 27 ನಕ್ಷತ್ರಗಳು (12 ರಾಶಿಗಳು) ಮತ್ತು ಒಂದೊಂದಕ್ಕೂ ನಾಲ್ಕು ಪಾದಗಳು. ನಾವು ಯಾವ ನಕ್ಷತ್ರದ ಯಾವ ಪಾದದಲ್ಲಿ ಜನಿಸಿದವರೆಂದು ತಿಳಿದು ಆ ಪಾದಕ್ಕೆ ಸಂಬಂಧಿಸಿದ ಶ್ಲೋಕವನ್ನು ದಿನಕ್ಕೆ 11 ಬಾರಿ 48 ದಿನಗಳವರೆಗೆ ಪಠಿಸಿದರೆ ಗ್ರಹದೋಷ ಪರಿಹಾರವಾಗುವುದು. 108 ಶ್ಲೋಕಗಳು – 27 ನಕ್ಷತ್ರಗಳು x 4 ಪಾದಗಳು = ಒಟ್ಟು 108.

ಅಶ್ವಿನಿ ನಕ್ಷತ್ರದ ಮೊದಲನೆಯ ಪಾದದವರು "ಓಂ ವಿಶ್ವಂ ವಿಷ್ಣುಂ" ಎಂಬ ವಿಷ್ಣು ಸಹಸ್ರನಾಮದ ಮೊದಲನೇ ಪದ್ಯ ಪಠಿಸಬೇಕು. ಅದರಂತೆಯೇ ಎರಡನೆಯ ಪಾದದವರು ಎರಡನೇ ಶ್ಲೋಕ (ಪೂತಾತ್ಮ ಪರಮಾತ್ಮಾಚ) ವನ್ನು ಪಠಿಸಬೇಕು. ಮೂರನೆಯ ಪಾದದವರು ಮೂರನೇ ಶ್ಲೋಕವನ್ನು, ನಾಲ್ಕನೆಯ ಪಾದದವರು ನಾಲ್ಕನೇ ಶ್ಲೋಕವನ್ನು ಪಠಿಸಬೇಕು. ಅದರಂತೆಯೇ ಉಳಿದ ನಕ್ಷತ್ರದವರೂ ಈ ರೀತಿ ಪಠಿಸಬಹುದು.

ನಮಗೆ ವಿಪತ್ತು ಬಂದದೊದಗಿದಾಗ ತಂದೆ–ತಾಯಿ, ಬಂಧು–ಬಳಗ ಯಾರೂ ಏನೂ ಮಾಡಲಾರರು. ಅಂತಹ ಸಮಯದಲ್ಲಿ ದೇವನೊಬ್ಬನೇ ಕಾಪಾಡಲು ಸಮರ್ಥ. ಅಂತಹ ಭಗವಂತನನನ್ನು ಭಜಿಸುವುದು ಸೂಕ್ತ.

ಎಲ್ಲಾ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಹೆಚ್ಚಿನದು. ಅದನ್ನೇ ಆಂಗ್ಲ ಭಾಷೆಯಲ್ಲಿ "HEALTH IS WEALTH" ಎನ್ನುತ್ತಾರೆ. ವೇದ ಷಡಂಗಗಳಲ್ಲಿ ಒಂದಾದ "ಬೃಹತೀ" ಎಂಬ ಛಂದಸ್ಸಿದೆ. ಆ ಛಂದಸ್ಸಿನ ಪ್ರತಿ ಸ್ತೋತ್ರಗಳಲ್ಲಿಯೂ 36 ಸ್ವರಾಕ್ಷರ ಹಾಗೂ 36 ವ್ಯಂಜನಾಕ್ಷರಗಳಿರುತ್ತದೆ. ಒಟ್ಟು 72 ಅಕ್ಷರಗಳು. ಋಗ್ವೇದದ ಈ ಛಂದಸ್ಸಿನ 1000 ಮಂತ್ರಗಳನ್ನು ಒಂದು ಕಡೆ ಸೇರಿಸಿ "ಬೃಹತೀ ಸಹಸ್ರ ಶಾಸ್ತ್ರ" ಎಂದು ಕರೆದಿದ್ದಾರೆ. ಬೃಹತೀ ಛಂದಸ್ಸಿನ 1000 ಸ್ತೋತ್ರಕ್ಕೆ 72,000 ಅಕ್ಷರಗಳಾಗುತ್ತವೆ. ಈ ಬೃಹತೀ ಸಹಸ್ರದ ವ್ಯಾಖ್ಯಾನವೇ ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರ. ಹೇಗೆಂದರೆ ನಮ್ಮ ದೇಹದಲ್ಲಿ 72,000 ನಾಡಿಗಳಿವೆ. ಯೋಗ ಶಾಸ್ತ್ರದಲ್ಲಿ ಇವು ದೇಹದ ಶಕ್ತಿ ಕೇಂದ್ರಗಳೆಂದು ತಿಳಿಯುತ್ತದೆ. ನಮ್ಮ ಆರೋಗ್ಯ ಈ ನಾಡಿಗಳ ಮೇಲೆ ಅವಲಂಬಿಸಿದೆ. ಈ ನಾಡಿ ಶುದ್ಧಿಯಾದರೆ ಪೂರ್ಣ ಆರೋಗ್ಯ ಎನಿಸುತ್ತದೆ. ಇದಕ್ಕಾಗಿ ಯೋಗ ಶಾಸ್ತ್ರದಲ್ಲಿ "ನಾಡೀ ಶುದ್ಧ ಕ್ರಿಯೆ" ಎಂಬುದಾಗಿದೆ. ಇದು ಪ್ರಾಣಾಯಾಮವೇ ಆಗಿದೆ. ನಾವು ವಿಷ್ಣು ಸಹಸ್ರನಾಮ ಸ್ತೋತ್ರವನ್ನು ಪಠಿಸುವಾಗ ಹೊರಡುವ ಸ್ಪಂದನಗಳು ಈ ಎಲ್ಲಾ ನಾಡಿಗಳನ್ನು ಶುದ್ಧೀಕರಿಸುತ್ತದೆ. ನಾಡಿ ಶುದ್ಧಿಯಾದರೆ ದೇಹ ಶುದ್ಧಿ. ದೇಹ ಶುದ್ಧಿಯಾದರೆ ಆರೋಗ್ಯ ಲಭಿಸುತ್ತದೆ.

ನಾವು ಹಿರಿಯರಿಗೆ ನಮಸ್ಕರಿಸಿದಾಗ "ಶತಮಾನಂ ಭವತಿ ಶತಾಯುಃ ಪುರುಷಃ ಶತೇಂದ್ರಿಯಃ। ಆಯುಷ್ಯೇಂದ್ರಿಯೇ ಪ್ರತಿಷ್ಠತಿ" ಎಂದು ಮಂತ್ರವನ್ನು ಹೇಳಿ ಆಶೀರ್ವದಿಸುತ್ತಾರೆ. ಶತಮಾನಂ ಭವತಿ ಎನ್ನುವುದು ದೇವವಾಣಿ. ನಮ್ಮ ಪೂರ್ಣ ಆಯುಸ್ಸು 100 ವರ್ಷಗಳೆಂದು ವೇದವು ನಿಗದಿಪಡಿಸಿದೆ. ಒಂದು ವರ್ಷಕ್ಕೆ ಚಾಂದ್ರಮಾನದ ಪ್ರಕಾರ 360 ದಿನಗಳು – ಹಗಲು–ರಾತ್ರಿ (ಅಹರ್ನಿಶಿ) ಸೇರಿ 720 ಆಗುತ್ತದೆ. 100 ವರ್ಷಕ್ಕೆ 72,000 ಹಗಲು–ರಾತ್ರಿಗಳು. ಶ್ರೀ ವಿಷ್ಣು ಸಹಸ್ರನಾಮವನ್ನು ಪಠಿಸಿದಾಗ 72,000 ಅಕ್ಷರಗಳ ಕಂಪನಗಳು 72,000 ನಾಡಿಗಳನ್ನು ಶುದ್ಧೀಕರಿಸುತ್ತದೆ. ಆರೋಗ್ಯದಿಂದಿರಿಸಿ ಶತಾಯುವಾಗಿ ಪೂರ್ಣಾಯಸ್ಸು ದೊರೆಯುತ್ತದೆ. ಇದು ಪಾರಾಯಣದ ವೈಶಿಷ್ಟ್ಯ ಎನ್ನಬಹುದು.

"ನ ವಾಸುದೇವ ಭಕ್ತಾನಾಂ ಅಶುಭಂ ವಿದ್ಯತೇ ಕ್ವಚಿತ್ । ಪಠೇದ್ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿಚ" ಎಂದು ವಿಷ್ಣು ಸಹಸ್ರನಾಮದ ಫಲಶೃತಿಯಲ್ಲಿ ಹೇಳಿದೆ. ಪ್ರತಿನಿತ್ಯ ಪಠಿಸಿದವರಿಗೆ ಯಾವ ಅಶುಭವೂ ಉಂಟಾಗುವುದಿಲ್ಲ. ಶ್ರೇಯಸ್ಸು, ಐಹಿಕ ಸುಖವೂ ಉಂಟಾಗುತ್ತದೆ. ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ತಿಳಿಸಿದೆ.

ಭಗವತ್ ಪ್ರೇರಣೆಯಿಂದ ಶ್ರೀ ಶ್ರೀ ಶ್ರೀ ಶಂಕರಾಚಾರ್ಯರು ಈ ಸಹಸ್ರನಾಮಕ್ಕೆ ವಿವರಣೆ ಕೊಟ್ಟಿದ್ದಾರೆ. ಈ ಸಹಸ್ರನಾಮದಲ್ಲಿ ಆರು ಲಕ್ಷಣಗಳಿವೆ ಎಂದಿದ್ದಾರೆ. ನಮಸ್ಕಾರ, ಆಶೀರ್ವಾದ, ಸಿದ್ಧಾಂತೋಕ್ತಿ, ಅನಂತ ಶಕ್ತಿ ನಿರೂಪಣೆ, ದಿವ್ಯೈಶ್ವರ್ಯ ವಿವರಣೆ ಮತ್ತು ಪ್ರಾರ್ಥನೆ – ಈ ರೀತಿ ಆರು ಲಕ್ಷಣಗಳಿವೆ.

ಓಂ ನಮೋ ವಿಷ್ಣವೇ ಪ್ರಭವಿಷ್ಣವೇ, ಸರ್ವಪ್ರಹರಣಾಯುಧ ಓಂ ನಮ ಇತಿ – (ನಮಸ್ಕಾರ)

ಶ್ರೀಮನ್ನಾರಾಯಣೋ ವಿಷ್ಣು ವಾಸುದೇವೋಭಿರಕ್ಷತು – (ಆಶೀರ್ವಾದ)

ವಿಷ್ಣವೇ ಪರಮಾತ್ಮ ಎನ್ನುವಂತಹ ದೃಢ ಅಭಿಪ್ರಾಯ –

(ಸಿದ್ಧಾಂತ)
ಪ್ರಕಟನ ನಾಮಗಳಲ್ಲಿ – ಅನಂತ ಶಕ್ತಿ
ದಿವ್ಯೈಶ್ವರ್ಯ – (ನಿರೂಪಣೆ)
ದೇವರನ್ನು ಪ್ರಾರ್ಥಿಸುವುದು – (ಪ್ರಾರ್ಥನೆ)
ಹೀಗೆ ಸ್ತೋತ್ರವು ಲಕ್ಷಣಗಳಿಂದ ಕೂಡಿದೆ.

ವಿಷ್ಣು ಎಂಬ ಹೆಸರನ್ನು ಕೇಳಿದಾಗ ಅಥವಾ ಹೇಳಿದಾಗ ಪ್ರತಿಯೊಬ್ಬರ ಹೃದಯದಲ್ಲೂ ಒಂದು ಶಕ್ತಿ ಏಳುತ್ತದೆ. ಅದರಿಂದ ಮನೋ ಧೈರ್ಯವನ್ನು, ಏಕಾಗ್ರತೆಯನ್ನು ಪಡೆದು ಸಂಪಾದಿಸಿ ಯಾವ ಇಂದ್ರಿಯ ವಿಷಯಕ್ಕೂ ಎಡೆಗೊಡದೆ ಆನಂದದ ಅನುಭವವನ್ನು ಪಡೆಯಬಹುದು.

ಭಗವಂತನ ಸಹಸ್ರ ಕಲ್ಯಾಣ ಗುಣಗಳನ್ನು ವಿಶೇಷವಾಗಿ ವಿಶ್ಲೇಷಣೆ ಮಾಡಿ ನಿರೂಪಿಸುವ ಈ ಸಹಸ್ರನಾಮ ಒಂದು ಪುಣ್ಯ ತೀರ್ಥ. ಇದರಲ್ಲಿ ಮಿಂದು ಪುನೀತರಾಗಿ ನಾವು ರಾಗ–ದ್ವೇಷಗಳನ್ನು ತೊರೆದು ಭಗವಂತನ ಪಾದ ಕಮಲಗಳಲ್ಲಿ ದುಂಬಿಯಾಗಿ ಇದ್ದು ಪಾದ ಕಮಲಗಳ ಮಧುವನ್ನು ಪಾನಮಾಡಿ ಪವಿತ್ರರಾಗುವಂತೆ ಭಗವಂತನು ಕೃಪೆದೋರಲಿ!

ಸರ್ವೇ ಜನಾಃ ಸುಖಿನೋಭವಂತು ಸಮಸ್ತ ಸನ್ಮಂಗಳಾನಿ ಭವಂತು.



**ಜಿ.ಪಿ. ಲಕ್ಷ್ಮೀ ದೇವಿ**
9900128835

**************************************************

# "ಸಣ್ಣ ಶಿಸ್ತು – ದೊಡ್ಡ ವ್ಯಕ್ತಿತ್ವ"



ಶಿಸ್ತು (Discipline) ಎಂಬುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಸಣ್ಣ ವಯಸ್ಸಿನಿಂದಲೇ ರೂಪುಗೊಳ್ಳಬೇಕು. ಶಿಸ್ತಿನ ಜೀವನ ಶೈಲಿ ನಮ್ಮದಾಗಬೇಕಾದರೆ ಸಣ್ಣಪುಟ್ಟ ಅಭ್ಯಾಸಗಳನ್ನು ಸಹ – ಅಸಡ್ಡೆ ಮಾಡದೆ – ಅಳವಡಿಸಿಕೊಳ್ಳಬೇಕು.

**ಒಂದೆರಡು ಉದಾಹರಣೆಗಳು.**

ವಸ್ತುಗಳನ್ನು ಉಪಯೋಗಿಸಿದ ನಂತರ ಅವುಗಳ ಜಾಗದಲ್ಲಿ ಇಡಬೇಕು, ಇದು ಸಣ್ಣ ವಿಷಯವೆಂದು ಲಘುವಾಗಿ ಕಾಣುವಂತಿಲ್ಲ. ಇದನ್ನು ಬಾಲ್ಯದಿಂದಲೇ ರೂಡಿಸಿಕೊಂಡರೆ, ಅದು ಶಿಸ್ತಿನ ಆರಂಭ. ಇಂತಹ ಅಭ್ಯಾಸಗಳಿಂದ ಕ್ರಮಬದ್ಧತೆ, ಶಾಂತಿ ಮತ್ತು ಜವಾಬ್ದಾರಿಯ ಪ್ರಜ್ಞೆ ಇವುಗಳು ನಮ್ಮ ಜೀವನದಲ್ಲಿ ಹೆಣೆದುಕೊಳ್ಳುತ್ತವೆ.

ಮನೆ ಅಚ್ಚುಕಟ್ಟಾಗಿರಬೇಕು ಎಂದರೆ ನಾವು ಅಳವಡಿಸಿಕೊಳ್ಳಬೇಕಾದ ಅತ್ಯಂತ ಮುಖ್ಯವಾದ ಅಂಶಗಳು:

- ವಸ್ತು ತೆಗೆದುಕೊಂಡು ಅದೇ ಜಾಗದಲ್ಲಿ ಇಡುವುದು,
- ವಸ್ತುಗಳನ್ನು ಬಳಸಿದ ನಂತರ – ಅವಶ್ಯವಿದ್ದಲ್ಲಿ – ಸ್ವಚ್ಛಗೊಳಿಸುವುದು,
- ಸಮಯದ ಮಿತಿಯಲ್ಲಿ ಕೆಲಸ ಮುಗಿಸುವುದು,

ಈ ಅಭ್ಯಾಸಗಳು ನಮ್ಮಲ್ಲಿ ಶಿಸ್ತನ್ನು ಮೂಡಿಸುತ್ತವೆ. ಶಿಸ್ತು ನಮ್ಮ ಸಂಸ್ಕೃತಿಯ ಒಂದು ಅಂಗವಾಗುತ್ತದೆ.

ಅಸ್ತವ್ಯಸ್ತ ಮನೆಯನ್ನು ನೋಡಿದರೆ ಮನಸ್ಸು ಗೊಂದಲ, ಕಸವಿಸಿಗೊಳ್ಳುತ್ತದೆ.
ಅಚ್ಚುಕಟ್ಟಾದ ಮನೆ ಮನಸ್ಸಿಗೆ ಶಾಂತಿ ಕೊಡುತ್ತದೆ.
ಅಚ್ಚುಕಟ್ಟುತನ ಕೇವಲ ಮನೆಯನ್ನು ಶುದ್ಧಗೊಳಿಸುವುದಲ್ಲ, ಮನಸ್ಸನ್ನೂ ಶುದ್ಧಗೊಳಿಸುತ್ತದೆ.

**ಸಾರಾಂಶ:**

"ಸಣ್ಣ ಕೆಲಸಗಳನ್ನು ಸಹಾ ಅಚ್ಚುಕಟ್ಟಾಗಿ ಮಾಡಿ ಮುಗಿಸುವ ಶಿಸ್ತು ಬೆಳೆಸಿಕೊಂಡರೆ, ಜೀವನದಲ್ಲಿ ದೊಡ್ಡ ಸಾಧನೆಗಳು ಸುಲಭವಾಗುತ್ತವೆ."



**ಸಂಧ್ಯಾ ನಾಗರಾಜ್**
9980224796

# ಅರುಂಧತಿ



ನಮ್ಮ ಭಾರತ ದೇಶ ಪುಣ್ಯ ದೇಶ, ಪವಿತ್ರ ದೇಶ. ಈ ನಾಡಿನಲ್ಲಿ ಉದಯಿಸಿದ ವೇದಗಳನ್ನು ಪೂಜ್ಯ ಭಾವನೆಯಿಂದ ನೋಡುತ್ತೇವೆ. ಸಂಸ್ಕೃತಿ, ಆಚಾರ–ವಿಚಾರ ಇವುಗಳ ಹಿರಿಮೆಯಿಂದ ಭರತಖಂಡವು ಜಗತ್ತಿನಲ್ಲೇ ಗುರುವಿನ ಸ್ಥಾನದಲ್ಲಿದೆ. ಇದಕ್ಕೆಲ್ಲ ಕಾರಣರಾದವರು ಋಷಿಗಳು. ಜಗತ್ತಿನಲ್ಲಿ ಧರ್ಮವನ್ನು ಸ್ಥಾಪಿಸಿ ಸಂರಕ್ಷಿಸುವ ಸಲುವಾಗಿ ಮಹಾ ತೇಜಸ್ವಿಗಳು ಸಕಲ ಶಾಸ್ತ್ರವನ್ನು ಅರಿತವರು ಕರುಣಾಮಯರಾದ ಬ್ರಹ್ಮ ಮಾನಸ ಪುತ್ರರಾದ ಸಪ್ತಋಷಿಗಳು ಪ್ರಸಿದ್ಧರಾಗಿದ್ದಾರೆ.

ಈ ಸಪ್ತರ್ಷಿಗಳಲ್ಲಿ ವಸಿಷ್ಠರು ಒಬ್ಬರು. ಅವರ ಪತ್ನಿ ಮಹಾ ಪತಿವ್ರತೆ ಸಕಲ ವಿದ್ಯಾ ಪಾರಂಗತೆ ಸಾಧ್ವಿಮಣಿ ಅರುಂಧತಿ.

ಬ್ರಹ್ಮದೇವನ ಮಗನಾದ ಕರ್ದಮನು ದೇವಹೂತಿಯನ್ನು ಮದುವೆಯಾದ. ಆ ದಂಪತಿಗಳಿಗೆ ಒಂಬತ್ತು ಹೆಣ್ಣುಮಕ್ಕಳು. ಆ ಮಕ್ಕಳಲ್ಲಿ ಎಂಟನೆಯವಳೇ ಅರುಂಧತಿ. ಅವಳಿಗೆ ಅಕ್ಷಮಾಲ ಎಂಬ ಹೆಸರು ಇದೆ. ಈಕೆ ವಶಿಷ್ಠ ಮುನಿಯ ಪತ್ನಿ. ಇವಳಿಗೆ ಊರ್ಜೆ (ಶಕ್ತಿ) ಎಂಬ ಇನ್ನೊಂದು ಹೆಸರು ಇದೆ. ಈ ಶಕ್ತಿ ಋಷಿ ಸಮುದಾಯಕ್ಕೆ ಧರ್ಮ ರಹಸ್ಯಗಳನ್ನು ಬೋಧಿಸಿದ್ದಾಳೆ.

ಈ ಯುಗದಲ್ಲಿಯೂ ವಿವಾಹದ ಸಂದರ್ಭದಲ್ಲಿ ನೂತನ ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾರೆ. ಈ ಪದ್ಧತಿ ಎಲ್ಲಾ ವರ್ಣದವರಲ್ಲಿಯೂ ಇದೆ. ಇದು ವೈದಿಕ ಸಂಪ್ರದಾಯವಾಗಿದೆ. ಈ ನಕ್ಷತ್ರ ಯಾರಿಗೆ ಕಾಣುವುದಿಲ್ಲವೋ ಅವರಿಗೆ ಕೆಡಕಾಗುತ್ತದೆ. ಎಂಬ ನಂಬಿಕೆ ಇದ್ದು ಮದುವೆ ಸಮಾರಂಭದಲ್ಲಿ ಮಗಳಿಗೆ ನಕ್ಷತ್ರ ದರ್ಶನ ಮಾಡಿಸಿ ವಧುವಿಗೆ ಅವರ ತಂದೆ ತಾಯಿಗಳು ಮಗಳೇ ನೀನು ಅರುಂಧತಿಯಂತೆ ಪರಮಜ್ಞಾನಿ, ಆದರ್ಶ ನಾರಿ, ಪತಿವ್ರತೆಯಾಗಿ ಸುಖವಾಗಿ ಸಂಸಾರ ಮಾಡು ಎಂದು ಆಶೀರ್ವದಿಸುತ್ತಾರೆ. ಇದರ ಮುಖ್ಯ ಉದ್ದೇಶ ವಸಿಷ್ಠ ಅರುಂಧತಿಯರಂತೆ ಪವಿತ್ರ ದಾಂಪತ್ಯವನ್ನು ಮದುಮಕ್ಕಳು ನಡೆಸಲಿ ಎಂಬುದಾಗಿದೆ.

ಅರುಂಧತಿ ಬಗ್ಗೆ "ಪುರಾಣನಾಮ ಚೂಡಾಮಣಿ"ಯಲ್ಲಿ ಈ ಪ್ರಕಾರವಾಗಿದೆ.

ಬ್ರಹ್ಮ ಲೋಕದಲ್ಲಿ ಚತುರ್ಭುಜ ಬ್ರಹ್ಮ ತನ್ನ ಆಸನದಲ್ಲಿ ವಿರಾಜಮಾನನಾಗಿದ್ದ. ಶ್ರೀಮನ್ನಾರಾಯಣನ ಆಜ್ಞೆಯ ಮೇರೆಗೆ ಪ್ರಜಾಸೃಷ್ಟಿ ಹೇಗೆ ಆರಂಭಿಸಬೇಕೆಂದು ಚಿಂತಿಸುತ್ತಿದ್ದ. ಚಿಂತನ ಮಂಥನದಿಂದ ಒಬ್ಬ ಸ್ತ್ರೀ ಜನಿಸಿದಳು. ಅವಳಿಗೆ ಸಂಧ್ಯಾ ಎಂದು ಹೆಸರು. ಮುಂದೆ ಅವಳೇ ವಸಿಷ್ಠ ಋಷಿಪತ್ನಿ ಅರುಂಧತಿ ಎಂಬ ಹೆಸರು ಪಡೆದಳು.

ಬ್ರಹ್ಮ ಪುನಃ ಕಣ್ಣು ಮುಚ್ಚಿ ಅಂತರ್ಮುಖಿಯಾದ. ಆಗ ಅವನ ಮನದಿಂದ ಕೆಲವರು ಉದ್ಭವಿಸಿದರು. ಮನದಿಂದ ಉದ್ಭವಿಸಿದ್ದರಿಂದ ಅವರುಗಳು ಮಾನಸ ಪುತ್ರರೆನಿಸಿದರು. ಅವರುಗಳೇ ಮರೀಚ, ಅತ್ರಿ, ಪುಲಸ, ಪುಲಸ್ತ್ಯ, ಅಂಗೀರಸ, ಕೃತುಮುನಿ, ವಸಿಷ್ಠ, ನಾರದ, ದಕ್ಷ ಮತ್ತು ಭೃಗು.

ಮನ್ಮಥ ಹುಟ್ಟಿದ್ದರಿಂದ ಸಂಧ್ಯಾಳ ಮೇಲೆ ಮರೀಚಿ ಮುಂತಾದ ಮುನಿಗಳು ದಕ್ಷ ಮೊದಲಾದ ಪ್ರಜಾಪತಿಗಳು ಆಸೆಪಟ್ಟರು. ಸಂಧ್ಯಾಳಿಗೆ ಮನದೊಳಗೆ ತನ್ನಿಂದ ಎಲ್ಲರಿಗೂ ಎಂತಹ ಅವಸ್ಥೆ ಬಂತಲ್ಲಾ ಎಂದು ಕೊರಗು ಕೊರೆಯಿತು. ಇವಳು ಮೇಧಾತಿಥಿ ಎಂಬ ಮುನಿಯ ಯಜ್ಞ ಶಾಲೆಗೆ ಹೋದಳು. ಉರಿಯುತ್ತಿದ್ದ ಯಜ್ಞಾಗ್ನಿಯಲ್ಲಿ ಬಿದ್ದು ಶರೀರ ತ್ಯಾಗ ಮಾಡಿದಳು. ಸೂರ್ಯ ಲೋಕಕ್ಕೆ ಹೋದಳು. ಮುಂದೆ ಇವಳೇ ಅರುಂಧತಿಯಾಗಿ ಹುಟ್ಟಿ ವಸಿಷ್ಠರನ್ನು ಮದುವೆಯಾದಳು.

ಮೇಧಾತಿಥಿ ಋಷಿಗಳ ಯಜ್ಞಕುಂಡದಲ್ಲಿ ದೇಹತ್ಯಾಗ ಮಾಡಿದ ಸಂಧ್ಯಾಳೇ ಅದೇ ಯಜ್ಞಕುಂಡದಿಂದ ಮಗುವಾಗಿ ಜನಿಸಿದಳು. ಮೇಧಾತಿಥಿ ಅರುಂಧತಿ ಎಂದು ನಾಮಕರಣ ಮಾಡಿದನು. ಮಗಳಿಗೆ ಸಕಲ ವಿದ್ಯೆಯನ್ನು ಕಲಿಸಬೇಕೆಂದು ಮೇಧಾತಿಥಿಯು ಅರುಂಧತಿಯನ್ನು ಸರಸ್ವತಿ ದೇವಿಯ ಬಳಿ ಕಳಿಸಿದನು. ಅರುಂಧತಿ ಅತಿ ಚುರುಕಿನ ಹುಡುಗಿ ಆದ್ದರಿಂದ ಸ್ವಲ್ಪ ಸಮಯದಲ್ಲೇ ಸಕಲ ವಿದ್ಯಾ ಪಾರಂಗತಳಾದಳು. ವೇದಾಧ್ಯಯನದ ಜೊತೆಯಲ್ಲಿಯೇ ನಯ, ವಿನಯ, ಸದಾಚಾರ, ಸದ್ಗುಣಗಳನ್ನು ಕಲಿತಳು. ಹನ್ನೆರಡು ವಿದ್ಯೆಗಳಲ್ಲಿ ಅಮೋಘ ಪಾಂಡಿತ್ಯ ಸಂಪಾದಿಸಿ ಲೋಕ ವಿಖ್ಯಾತಳಾದಳು.

ಒಮ್ಮೆ ಮಾನಸ ಸರೋವರದ ಬಳಿ ಸ್ನೇಹಿತೆಯರೊಂದಿಗೆ ವಿಹರಿಸುತ್ತಿದ್ದ ಅರುಂಧತಿ ತಪಸ್ಸಿಗೆ ಕುಳಿತ ವಸಿಷ್ಠರನ್ನು ಕಂಡು

ಅವರಲ್ಲಿ ಮೋಹಗೊಂಡಳು. ಅವಳ ಮನದಾಳದಂತೆ ಅವಳ ತಂದೆ ಬ್ರಹ್ಮನಲ್ಲಿ ವಿಷಯ ಪ್ರಸ್ತಾಪಿಸಿದ. ಬ್ರಹ್ಮನ ಆಜ್ಞೆ ಪಡೆದು ವಸಿಷ್ಠರ ಹತ್ತಿರ ಬಂದು ತಮ್ಮ ಮಗಳು ಅರುಂಧತಿಯನ್ನು ಪತ್ನಿಯನ್ನಾಗಿ ಸ್ವೀಕರಿಸಿ ವಂಶ ಉದ್ಧರಿಸಬೇಕೆಂದು ಪ್ರಾರ್ಥಿಸಿದನು. ಅರುಂಧತಿ ವಸಿಷ್ಠನ ಮಡದಿಯಾದಳು. ಇದೊಂದು ಪವಿತ್ರ ವಿವಾಹ. "ಮದುವೆ" ಎನ್ನುವ ಪದವೇ ಈ ದಂಪತಿಗಳಿಂದ ಉಂಟಾಯಿತು. ಇವರ ದಾಂಪತ್ಯ ಲೋಕಕ್ಕೆ ಆದರ್ಶಪ್ರಾಯವಾಗಿದೆ. ಅರುಂಧತಿ ಪತಿವ್ರತೆಗಳಲ್ಲಿ ಅಗ್ರಗಣ್ಯ ಎನಿಸಿದಳು. ಇವಳ ಪಾಂಡಿತ್ಯ ಅಮೋಘವಾದದ್ದು. ಈಗಲೂ ಸಪ್ತಋಷಿ ಮಂಡಲದಲ್ಲಿ ವಸಿಷ್ಠ ಋಷಿಗಳ ಪಕ್ಕದಲ್ಲಿಯೇ ಕಂಡು ಕಾಣದಂತೆ ಒಂದು ಪುಟ್ಟತಾರೆ ಇದೆ. ಅದೇ ಅರುಂಧತಿ ನಕ್ಷತ್ರ. ಈಗಲೂ ಕಾಣಬಹುದು. ಈಗಲೂ ವಿವಾಹಗಳಲ್ಲಿ ನೆರವೇರಬೇಕಾದ ಕ್ರಿಯೆಗಳಲ್ಲಿ ವಸಿಷ್ಠ – ಅರುಂಧತಿ ನಕ್ಷತ್ರಗಳ ದರ್ಶನವೂ ಒಂದು. ಇದರ ಪವಿತ್ರ ಉದ್ದೇಶ. ಮದುಮಗಳು ಅರುಂದತಿಯಂತೆ ಪತಿವ್ರತೆಯಾಗಿ ಸುಖ ಸಂಸಾರ ಮಾಡಲಿ ಎಂಬುದಾಗಿದೆ.

ಭಾಗವತದ ಪ್ರಕಾರ ಅರುಂಧತಿಯ ಬಗ್ಗೆ ಈ ರೀತಿ ಇದೆ.

ಸ್ವಾಯಂಭುವ ಮನುವು ತನ್ನ ಮಗಳು ದೇವಹೂತಿಯನ್ನು ಆಗ ಪ್ರಸಿದ್ಧನಾದ ಕರ್ದಮನಿಗೆ ವಿವಾಹ ಮಾಡಿಕೊಡುತ್ತಾನೆ. ಈ ದಂಪತಿಗಳು ಸುಖಸಂಸಾರ ಮಾಡಿಕೊಂಡು ಸಂತಾನಕಾರ್ಯ ಪ್ರವೃತ್ತರಾಗುತ್ತಾರೆ. ಅವರಿಗೆ ಶ್ರೀಮನ್ನಾರಾಯಣನೇ ಪುತ್ರನಾಗಿ ಅವತರಿಸುತ್ತಾನೆ. ಅವನ ಹೆಸರು ಕಪಿಲ. ಕರ್ದಮ – ದೇವಹೂತಿ ದಂಪತಿಗಳಿಗೆ ಕಪಿಲ ಅಲ್ಲದೆ ಇನ್ನೂ ಕೆಲವು ಹೆಣ್ಣುಮಕ್ಕಳು ಹುಟ್ಟುತ್ತಾರೆ. ಅದರಲ್ಲಿ ಹೆಸರಾದವಳು ಅರುಂಧತಿ. ಕರ್ದಮ ವರಾನ್ವೇಷಣೆಯಲ್ಲಿ ಇದ್ದಾಗ ಅವರಿಗೆ ಋಷಿ ವಸಿಷ್ಠರ ಬಗ್ಗೆ ತಿಳಿಯುತ್ತದೆ. ಅವರನ್ನು ಹುಡುಕಿಕೊಂಡು ಹೋಗುತ್ತಾರೆ. ಬಂಗಾರದ ಬಣ್ಣದ ಮೈಬಣ್ಣ, ಸೂರ್ಯ ಪ್ರಕಾಶದಂತೆ ಪ್ರಜ್ವಲಿಸುವ ತೇಜಸ್ಸು, ಯೌವ್ವನದಿಂದ ತುಂಬಿದ ಮೈಕಟ್ಟು, ಎಲ್ಲದಕ್ಕೂ ಕಳಸವಿಟ್ಟಂತೆ ಮಹಾತಪಸ್ವಿ. ತನ್ನ ಮಗಳು ಅರುಂಧತಿಗೆ ತಕ್ಕ ವರನೆಂದು ಅರಿತು ಕರ್ದಮನು ಅರುಂಧತಿಯನ್ನು ವಸಿಷ್ಠನಿಗೆ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಡುತ್ತಾರೆ. ವಸಿಷ್ಠ – ಅರುಂಧತಿಯರಿಗೆ ನೂರು ಗಂಡು ಮಕ್ಕಳು ಹುಟ್ಟುತ್ತಾರೆ. ಅಲ್ಲದೆ ಶಕ್ತಿ ಎಂಬ ಮಗುವು ಹುಟ್ಟುತ್ತದೆ. ಒಮ್ಮೆ ವಿಶ್ವಾಮಿತ್ರರ ಶಾಪದಿಂದ ಈ ನೂರು ಮಕ್ಕಳು ಸಾವನ್ನಪ್ಪುತ್ತಾರೆ. ಆಗ ಶಕ್ತಿಯು ವಿಶ್ವಾಮಿತ್ರರನ್ನು ಎದುರಿಸಿ ವೇದ ವಿಷಯದಲ್ಲಿ ಸೋಲಿಸುತ್ತಾನೆ. ಶಕ್ತಿಯ ಹೆಂಡತಿ ಅದೃಶ್ಯಂತಿ ಅವರ ಮಗನೇ ಪರಾಶರ. ವಿಶ್ವಾಮಿತ್ರರಿಗೆ ಅವಮಾನವಾದುದರಿಂದ ಶಕ್ತಿಯನ್ನು ಕೊಲ್ಲುತ್ತಾನೆ. ಹೀಗೆ ಕಥೆ ಮುಂದುವರೆಯುತ್ತದೆ.

ಸಪ್ತ ಮಹರ್ಷಿಗಳಲ್ಲಿ ವಸಿಷ್ಠರು ಒಬ್ಬರು. ಹಿಮಾಲಯಕ್ಕೆ ಹಣ್ಣು ಆಹಾರ ತರಲು ಕಾಡಿನಲ್ಲಿ ಅರುಂಧತಿ ಒಬ್ಬಳನ್ನೇ ಬಿಟ್ಟು ಹೋದರು. ಆಗ ದೊಡ್ಡ ಕ್ಷಾಮ ಬಂದಿತ್ತು. ಹೀಗಾಗಿ ಋಷಿಗಳು ಹಿಮಾಲಯದಲ್ಲೇ ಒಂದು ಆಶ್ರಮ ಕಟ್ಟಿಕೊಂಡು ಇದ್ದುಬಿಟ್ಟರು. ಕ್ಷಾಮ ಹನ್ನೆರಡು ವರ್ಷದವರೆಗೂ ಇದ್ದ ಕಾರಣ ಸಪ್ತ ಮಹರ್ಷಿಗಳು ಹನ್ನೆರಡು ವರ್ಷ ಹಿಮಾಲಯದಲ್ಲೇ ಇದ್ದರು. ಅರುಂಧತಿ ಒಬ್ಬಳೇ ಕಾಡಿನಲ್ಲಿ ಸರಿಯಾದ ಆಹಾರ ದೊರಕದೆ ಕಷ್ಟಪಡುತ್ತಾ ತಪಸ್ಸು ಪ್ರಾರಂಭಿಸಿದಳು. ಅವಳ ತಪಸ್ಸಿಗೆ ಮೆಚ್ಚಿ ಅವಳನ್ನು ಪರೀಕ್ಷಿಸಲು ಪರಶಿವನು ಬ್ರಾಹ್ಮಣನ ವೇಷ ಧರಿಸಿ ಬಂದನು. ಅರುಂಧತಿಗೆ ತಾನು ಬಹಳ ಹಸಿದಿದ್ದೇನೆಂದು ತಿನ್ನಲು ಏನನ್ನಾದರೂ ಕೊಡಲು ಬೇಡಿದ. ಆಗ ಅರುಂಧತಿ ಅತಿ ವಿನಯದಿಂದ ತನ್ನಲ್ಲಿ ತಿನ್ನುವ ಸಾಮಗ್ರಿಗಳು ಇಲ್ಲವೆಂದು ಬದರಿ ಬೀಜಗಳನ್ನು ತಿನ್ನಲು ಕೊಟ್ಟಳು. ಶಿವ ಅದನ್ನು ಬೇಯಿಸಿಕೊಡು ಎಂದನು. ಅರುಂಧತಿ ಒಲೆ ಹಚ್ಚಿ ಆ ಬೀಜಗಳನ್ನು ಬೇಯಲು ಇಟ್ಟಳು. ಅದು ಬೇಯುತ್ತಿರುವಾಗ ಅವಳು ಆ ಬ್ರಾಹ್ಮಣನಿಗೆ ಧರ್ಮದ ವಿಚಾರವನ್ನು ವಿವರಿಸುತ್ತಿದ್ದಳು. ಹೀಗೆ ಹನ್ನೆರಡು ವರ್ಷ ಧರ್ಮದ ಬೋಧನೆ ಮಾಡಿದಳು. ಆ ಹನ್ನೆರಡು ವರ್ಷ ಊಟ ನಿದ್ರೆಗಳನ್ನು ಮಾಡಲೇ ಇಲ್ಲ. ಕೊನೆಗೆ ಕ್ಷಾಮ ಮುಗಿಯಿತು, ಋಷಿಗಳು ಹಣ್ಣು ಹಂಪಲನ್ನು ತೆಗೆದುಕೊಂಡು ಹಿಮಾಲಯದಿಂದ ಹಿಂತಿರುಗಿದರು. ಪರಶಿವನು ಅವಳ ತಪಸ್ಸಿಗೆ ಮೆಚ್ಚಿ ನಿಜರೂಪ ಧರಿಸಿ ಅವಳಿಗೆ ಆಶೀರ್ವದಿಸಿ ವರಗಳನ್ನು ಇತ್ತನು. ನಂತರ ಋಷಿಗಳನ್ನು ಕುರಿತು "ನೀವು ಹಿಮಾಲಯದಲ್ಲಿ ಸಾಧಿಸಿದ ತಪಸ್ಸು ಧ್ಯಾನಗಳಿಗಿಂತ ಅರುಂಧತಿಯ ತಪಸ್ಸೇ ಹೆಚ್ಚಿನದು." ಎಂದನು. ಆ ದಿನದಿಂದ ಅರುಂಧತಿ ವಾಸಿಸುತ್ತಿದ್ದ ಸ್ಥಳ ಪವಿತ್ರವಾಯಿತು. ಅದೇ ಬದರಿಕಾಶ್ರಮ. ಇವತ್ತಿಗೂ ಅದು ಪವಿತ್ರ ಯಾತ್ರಾಸ್ಥಳವಾಗಿದೆ. ಅದನ್ನೇ ಬದರಿ ಎಂದು ಕರೆಯುತ್ತೇವೆ.

ಈ ರೀತಿ ಮಹಾ ಪತಿವ್ರತೆಯಾಗಿ ಧರ್ಮ ಪಾರಂಗತಳಾದುದರಿಂದ ಸಪ್ತಋಷಿ ಮಂಡಲದಲ್ಲಿ ನಕ್ಷತ್ರವಾಗಿ ಶಾಶ್ವತವಾಗಿ ಹೊಳೆಯುತ್ತಿದ್ದಾಳೆ. ಅರುಂಧತಿಯು ಓರ್ವ ಮಹಾ ಸ್ತ್ರೀ ರತ್ನ. ಅವಳನ್ನು ನಾವು ಸದಾ ನೆನಪಿಸಿಕೊಳ್ಳಬೇಕು.



**ಪ್ರಕೃತಿ ದೇವಿ**
9980008928

*With Best Compliments From*

SAMATVA FOUNDATION (R)

Explore Express Embellish Enhance

**Smt. Pallavi Guruprasanna**

**&**

**Sri Khanjira G. Guru Prasanna**

*With Best Compliments From*

ಸಿಟಿ ಸ್ಟೇಷನರ್ಸ್

# CITY STATIONERS

Exclusive Range of

- School & Office Stationery
- Computer Stationery &Consummables
- Novelty & Gift Items

# 262/1 22ndCross, 3rd Block, Jayanagar
Bengaluru 560011

Manjunarayan K.: +91 9886114279
Shivaram K.: +91 9845097855
E-mail a/c: kmncitystationers@gmail.com

# ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು



ಭರತಖಂಡವು ಜಡವಾದದಿಂದ ತುಂಬಿಕೊಂಡು ದೇವರು, ಧರ್ಮ, ಪಾಪ, ಪುಣ್ಯ ಎಂಬ ಯಾವುದೂ ಇಲ್ಲ. ಇವೆಲ್ಲವೂ ತಮ್ಮ ಸ್ವಾರ್ಥ ಸಾಧನೆಗಾಗಿ ಕೆಲವು ದುಷ್ಟರು ಸೃಷ್ಟಿಸಿರುವ ಕಟ್ಟುಕಥೆಗಳು ಎಂದು ಕೆಲವರು ಬೋಧಿಸುತ್ತಿದ್ದ ಕಾಲದಲ್ಲಿ ಭಗವಾನ್ ಬುದ್ಧನು ಜನಿಸಿ ವೇದಾಂತವನ್ನು ಬೆಳಕಿಗೆ ತಂದು ಭರತಖಂಡವನ್ನು ಉದ್ಧರಿಸಿದನು.

ಅವನ ನಿರ್ವಾಣದ ಸಾವಿರ ವರ್ಷಗಳ ನಂತರ ಹಿಂದಿನ ಸ್ಥಿತಿಯೇ ಪುನಃಪ್ರಾಪ್ತವಾಯಿತು. ಕಾಲ ಕ್ರಮೇಣ ಜನರು ಬುದ್ಧನ ಸಂದೇಶವನ್ನು ತಮಗೆ ಬೇಕಾದಂತೆ ತಿರುಚಿಕೊಂಡು ಧರ್ಮವು ನಶಿಸಲು ಕಾರಣರಾದರು. ಅಂತಹವರು ವೈದಿಕ ದರ್ಶನಗಳನ್ನು ದೂಷಿಸುತ್ತಾ, ವೇದ ಪ್ರಣೀತವಾದ ಸಾಮಾಜಿಕ, ಧಾರ್ಮಿಕ, ಕಟ್ಟುಕಟ್ಟಳೆಗಳನ್ನು ನಿಂದಿಸುತ್ತಾ, ವೇದಗಳೆಲ್ಲವೂ ಹೊಟ್ಟೆ ಪಾಡಿಗಾಗಿ ಮಾತ್ರ ಎಂದು ಅವಹೇಳನ ಮಾಡುತ್ತಾ ಎಲ್ಲಾ ಕಡೆಯೂ ಹರಡಿಕೊಂಡುಬಿಟ್ಟರು. ಯಜ್ಞ ಯಾಗಾದಿಗಳು, ಸನ್ಯಾಸ ಸ್ವೀಕಾರ ಮಾತ್ರವಲ್ಲದೆ ಸಂಧ್ಯಾ ವಂದನೆಯಂತಹ ಆಚಾರಗಳೂ ಸಹ ಮೂಲೆ ಗುಂಪಾಗುವ ಆತಂಕಗಳು ಎಲ್ಲರನ್ನೂ ಕಾಡಹತ್ತಿದವು.

ಇಂತಹ ಸಮಯದಲ್ಲಿ ದೇವತೆಗಳ ಪ್ರಾರ್ಥನೆಯಂತೆ ಭಗವಂತನಾದ ಆ ಪರಶಿವನೇ ಆದಿ ಶಂಕರರಾಗಿ ಅವತರಿಸಿದರು. ಜನರಿಗೆ ಅದ್ಭುತವಾದ ಮತ್ತು ಸಮಂಜಸವಾದ ಅದ್ವೈತ ತತ್ವವನ್ನು ಕೊಟ್ಟು ಸನಾತನ ಧರ್ಮಕ್ಕೆ ಪುನರುಜ್ಜೀವನ ನೀಡಿದರು. ಸನಾತನ ಧರ್ಮದ ಪ್ರಭಾವವು ಕ್ಷೀಣಿಸುತ್ತಿದ್ದ ಆ ಸಂದರ್ಭದಲ್ಲಿ ಅದ್ವೈತ ತತ್ವವನ್ನು ಪುನಃ ಸ್ಥಾಪಿಸಿ ಸನಾತನ ಧರ್ಮವನ್ನು ರಕ್ಷಿಸಿದ ಕೀರ್ತಿ ಶ್ರೀ ಶಂಕರಾಚಾರ್ಯರಿಗೆ ಸಲ್ಲುತ್ತದೆ.

ಶಂಕರರು ತಮ್ಮ ಅಲ್ಪ ಜೀವಿತಾವಧಿಯಲ್ಲಿ ದೇಶದಾದ್ಯಂತ ಸಂಚರಿಸಿ ಪ್ರತಿವಾದಿಗಳನ್ನು ಯುಕ್ತಿಬದ್ಧವಾದ ಸರಣಿಗಳಿಂದ ಅಡಗಿಸಿದರು. ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ ತಮ್ಮ ಶಿಷ್ಯೋತ್ತಮರನ್ನು ಅವುಗಳಿಗೆ ಉತ್ತರಾಧಿಕಾರಿಗಳನ್ನಾಗಿ ಮಾಡಿ ಧರ್ಮ ರಕ್ಷಣೆಯ ಭಾರವನ್ನು ಅವರಿಗೆ ವಹಿಸಿ ತಮ್ಮ ಅವತಾರದ ಉದ್ದೇಶವನ್ನು ಪೂರ್ಣಗೊಳಿಸಿದರು.

ಅವರ ಅದ್ಭುತ ಜೀವನ ಮತ್ತು ಸಾಧನೆಗಳ ಬಗ್ಗೆ ಒಂದು ಕಿರುನೋಟ ಇಲ್ಲಿದೆ.

ಕಾಲಟಿ ಎಂಬುದು ಕೇರಳದಲ್ಲಿನ ಒಂದು ಸುಂದರ ಗ್ರಾಮ. ಪೂರ್ಣಾ ನದಿಯ ದಂಡೆಯ ಮೇಲೆ ಇಂದಿಗೂ ಕಂಗೊಳಿಸುತ್ತಿರುವ ಒಂದು ಪ್ರದೇಶ. ಅಲ್ಲಿ ಶಿವಗುರು ಮತ್ತು ಆರ್ಯಾಂಬೆ ಎಂಬ ಸಜ್ಜನ ದಂಪತಿಗಳು ಇದ್ದರು. ಅವರದು ಸಂಪ್ರದಾಯಸ್ಥರೂ ವಿದ್ಯಾವಂತರೂ ಆದ ನಂಬೂದರಿ ಬ್ರಾಹ್ಮಣ ಕುಟುಂಬ. ಇಷ್ಟೆಲ್ಲಾ ಇದ್ದರೂ ತಮಗೆ ಮಕ್ಕಳಿಲ್ಲವೆಂಬ ಚಿಂತೆ ಅವರನ್ನು ಕಾಡುತ್ತಿತ್ತು. ಅವರು ವೃಷಾಚಲೇಶ್ವರನಿಗೆ ಹರಕೆ ಹೊತ್ತ ನಂತರ ಜನಿಸಿದ ಶಿಶುವಿಗೆ ಶಂಕರನೆಂದೇ ನಾಮಕರಣ ಮಾಡಿದರು. ಅವರ ಜೀವನಕಾಲ ಕ್ರಿ.ಶ.788ರಿಂದ 820ರವರೆಗೆ ಎಂದು ನಂಬಲಾಗಿದೆ.

ಶಂಕರರಿಗೆ 5 ವರ್ಷಕ್ಕೆ ಉಪನಯನವಾಯಿತು. ಆ ಹೊತ್ತಿಗೇ ತಂದೆ ಶಿವಗುರು ಕಾಲವಶರಾಗಿದ್ದರು. ಮಗನ ಪೂರ್ಣ ಜವಾಬ್ದಾರಿಯನ್ನು ತಾಯಿಯೇ ಹೊರಬೇಕಾಯಿತು.

ದೇವಾಂಶ ಸಂಭೂತರಾದ ಶಂಕರರು ಬಾಲ್ಯದಿಂದಲೇ ಅಪ್ರತಿಮ ಪ್ರತಿಭಾವಂತರಾಗಿದ್ದರು. ಎಂಟು ವಯಸ್ಸಿಗೇ ವೇದಗಳನ್ನು ಅರಿತಿದ್ದರು. 12 ವರ್ಷವಾಗುವ ಹೊತ್ತಿಗೆ ಎಲ್ಲಾ ಶಾಸ್ತ್ರಗಳೂ ಅವರಿಗೆ ಮನದಟ್ಟಾಗಿತ್ತು. 16 ವರ್ಷ ತುಂಬುವಷ್ಟರಲ್ಲಿ ತಮ್ಮ ಪ್ರಧಾನ ಕೃತಿಗಳೆನಿಸಿರುವ ವೇದಾಂತ ಭಾಷ್ಯಗಳನ್ನು ಬರೆದಿದ್ದರು. ಶಂಕರರು ತಮ್ಮ ಮಾತೃಭಾಷೆಯಾದ ಮಲಯಾಳಂ ಮಾತ್ರವಲ್ಲದೆ ಸಂಸ್ಕೃತ, ಪ್ರಾಕೃತ ಮತ್ತು ಮಾಗಧಿ ಭಾಷೆಗಳಲ್ಲಿಯೂ ಪಾರಂಗತರಾಗಿದ್ದರು.

ಶಂಕರರು ದೀನರ ಬಗ್ಗೆ ಬಹಳ ಕರುಣೆ ಉಳ್ಳವರಾಗಿದ್ದರು. ಒಮ್ಮೆ ಒಂದು ಮನೆಯ ಮುಂದೆ ನಿಂತು " ಭವತಿ ಭಿಕ್ಷಾಂದೇಹಿ" ಎಂದು ಬೇಡಿದರು. ಆ ಮನೆಯಲ್ಲಿದ್ದ ಹೆಂಗಸು ಬಹಳ

ಬಡವಳಾದುದರಿಂದ ದಾನ ಮಾಡಲು ಆಕೆಯ ಬಳಿಯಲ್ಲಿ ಏನೂ ಇರಲಿಲ್ಲ. ತನ್ನ ಬಳಿಯಿದ್ದ ಒಂದು ನೆಲ್ಲೀಕಾಯಿಯನ್ನೇ ಆಕೆ ಶಂಕರರಿಗೆ ಅರ್ಪಿಸಿದಳು. ಆಕೆಯ ಬಗ್ಗೆ ಕರುಣೆಗೊಂಡ ಶಂಕರರು ಲಕ್ಷ್ಮಿ ದೇವಿಯನ್ನು ಪ್ರಾರ್ಥಿಸಲಾಗಿ ಆಕೆಯ ಮನೆಯಲ್ಲಿ ಬಂಗಾರದ ನೆಲ್ಲೀಕಾಯಿಗಳ ಸುರಿಮಳೆಯೇ ಆಯಿತಂತೆ. ಅದೇ ಸ್ತೋತ್ರವು ಕನಕಧಾರಾ ಸ್ತೋತ್ರವೆಂದು ಪ್ರಸಿದ್ಧವಾಗಿದೆ.

ಶಂಕರರ ತಾಯಿ ಆರ್ಯಾಂಬೆ ಪ್ರತಿದಿನ ಪೂರ್ಣಾ ನದಿಯಲ್ಲಿ ಸ್ನಾನ ಮಾಡುತ್ತಿದ್ದರು. ಒಮ್ಮೆ ಅವರು ಅಸ್ವಸ್ಥರಾಗಿದ್ದಾಗ ನದಿಗೆ ಹೋಗಿ ಸ್ನಾನ ಮಾಡಿ ಬರಲು ಕಷ್ಟವಾಗುತ್ತಿತ್ತು. ಆಗ ಶಂಕರರು ಪೂರ್ಣಾ ದೇವಿಯನ್ನು ಪ್ರಾರ್ಥಿಸಿದಾಗ ರಾತ್ರಿಯಿಡೀ ಮಳೆ ಸುರಿದು ನದಿಯು ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಅವರ ಮನೆಯ ಮುಂದೆಯೇ ಹರಿಯಲು ಪ್ರಾರಂಭಿಸಿತು.

ಒಮ್ಮೆ ಶಂಕರರು ಪೂರ್ಣಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮೊಸಳೆಯೊಂದು ಅವರ ಕಾಲನ್ನು ಹಿಡಿದುಕೊಂಡಿತು. ತಕ್ಷಣವೇ ಶಂಕರರು ತಾಯಿಯನ್ನು ಕರೆದು "ಅಮ್ಮಾ, ನನ್ನ ಕಾಲನ್ನು ಮೊಸಳೆಯೊಂದು ಹಿಡಿದುಕೊಂಡಿದೆ. ಅದರಿಂದ ಬಿಡಿಸಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ನೀನು ನನಗೆ ಸನ್ಯಾಸ ಸ್ವೀಕರಿಸಲು ಅಪ್ಪಣೆ ಕೊಟ್ಟರೆ ಮಾತ್ರ ಅದು ನನ್ನನ್ನು ಬಿಡಬಹುದು. ಬೇಗನೆ ಅಪ್ಪಣೆಕೊಡು" ಎಂದು ತಾಯಿಯನ್ನು ಬೇಡಿದರಂತೆ. ತಾಯಿಗೆ ಮಗ ಸನ್ಯಾಸಿಯಾಗಿಯಾದರೂ ಉಳಿದುಕೊಳ್ಳಲಿ ಎಂಬ ಹಂಬಲದಿಂದ ಮಗನಿಗೆ ಸನ್ಯಾಸಿಯಾಗಲು ಅಪ್ಪಣೆಕೊಟ್ಟರು. ತಕ್ಷಣವೇ ಮೊಸಳೆ ಅವರ ಕಾಲನ್ನು ಬಿಟ್ಟು ಹೊರಟುಹೋಯಿತು.

ಸನ್ಯಾಸಿಯಾದ ನಂತರ ತಾಯಿಯ ಅಪ್ಪಣೆ ಪಡೆದು ಶಂಕರರು ಕಾಲಟಿಯಿಂದ ಹೊರಟರು. ಹೊರಡುವಾಗ ಆತಂಕಗೊಂಡಿದ್ದ ತಾಯಿಗೆ "ನಿನ್ನ ಕೊನೆಗಾಲದಲ್ಲಿ ನಾನು ನಿನ್ನ ಬಳಿ ಬರುತ್ತೇನೆ" ಎಂದು ಮಾತು ಕೊಟ್ಟರು.

ಭಾರತದ ಹಲವು ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ಶಂಕರರು ಕಾಶಿಯನ್ನು ತಲುಪಿದರು. ಕಾಶಿಪುರಾಧೀಶ್ವರಿ ಶ್ರೀ ಅನ್ನಪೂರ್ಣೇಶ್ವರಿಯ ದರ್ಶನ ಪಡೆದ ಶಂಕರರು ದೇವಿಯಲ್ಲಿ ಒಂದು ಭಿಕ್ಷೆಯನ್ನು ಬೇಡಿದರು. ಆದರೆ ಅವರು ಬೇಡಿದ ಭಿಕ್ಷೆ ಅಸಾಧಾರಣವಾದುದು "ಜ್ಞಾನ ವೈರಾಗ್ಯ ಸಿದ್ಯರ್ಥಂ ಭಿಕ್ಷಾಂದೇಹಿ ಚ ಪಾರ್ವತೀ" ಅಂದರೆ ಜ್ಞಾನ ಮತ್ತು ವೈರಾಗ್ಯಗಳು ಸಿದ್ಧಿಸುವಂತೆ ಭಿಕ್ಷೆ ನೀಡು ಎಂದು ಅನ್ನಪೂರ್ಣೇಶ್ವರಿಯಲ್ಲಿ ಬೇಡಿದರು.

ಪ್ರಚಂಡ ವಿದ್ವಾಂಸರಾಗಿದ್ದ ಶಂಕರರು ಹಿಂದುಗಳಿಗೆ ನೀಡಿದ ಇನ್ನೊಂದು ಕೊಡುಗೆಯೆಂದರೆ ಅವರು ಪವಿತ್ರ ಗ್ರಂಥಗಳಾದ ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳು ಇವುಗಳಿಗೆ ಭಾಷ್ಯಗಳನ್ನು ಬರೆದುದು. ಇದರಿಂದ ಸಾಮಾನ್ಯರೂ ಸಹ ಇವುಗಳನ್ನು ಓದಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಯಿತು.

ಇದರ ನಂತರ ಶಂಕರರು ಮಾಹಿಷ್ಮತಿ ಎಂಬ ನಗರದಲ್ಲಿದ್ದ ಪ್ರಸಿದ್ಧ ವಿದ್ವಾಂಸರಾದ ಮಂಡನಮಿಶ್ರರೊಡನೆ ಹಲವಾರು ದಿನಗಳ ಕಾಲ ವಾಕ್ಯಾರ್ಥ ನಡೆಸಿ ಅವರನ್ನು ಸೋಲಿಸಿದರು. ಸೋತ ಮಂಡನಮಿಶ್ರರು ಒಪ್ಪಂದದಂತೆ ಸನ್ಯಾಸಿಗಳಾಗಿ ಶಂಕರಾಚಾರ್ಯರ ಶಿಷ್ಯರಾದರು. ಇವರೇ 'ಸುರೇಶ್ವರ' ಎಂಬ ಹೆಸರಿನಿಂದ ಪ್ರಸಿದ್ಧರಾಗಿ ಮುಂದೆ ವೇದಾಂತಕ್ಕೆ ಅಮೋಘವಾದ ಸೇವೆ ಸಲ್ಲಿಸಿದರು.

ಶಂಕರರ ಜೀವನದಲ್ಲಿ ಅನಂತರದ ಮುಖ್ಯ ಪ್ರಸಂಗವೆಂದರೆ ಶೃಂಗೇರಿಗೆ ಆಗಮಿಸಿದ್ದುದು. ತುಂಗಾತೀರದಲ್ಲಿರುವ ಈ ರಮಣೀಯ ಸ್ಥಳವು ಹಿಂದಿನ ಕಾಲದಿಂದ ವಿಭಾಂಡಕ, ಋಷ್ಯಶೃಂಗ ಮುಂತಾದ ಮಹಾಋಷಿಗಳ ತಪೋ ಭೂಮಿಯಾಗಿದ್ದ ಪವಿತ್ರಸ್ಥಳ. ಶಂಕರರು ಇಲ್ಲಿ ತಮ್ಮ ಪ್ರಥಮ ವೇದಾಂತ ಜ್ಞಾನಪೀಠವನ್ನು ಸ್ಥಾಪಿಸಿದರು. ವಿದ್ಯಾಧಿ ದೇವತೆಯಾದ ಶ್ರೀ ಶಾರದೆಯನ್ನು ಪ್ರತಿಷ್ಠಾಪಿಸಿ ಸುರೇಶ್ವರರನ್ನು ಶಾರದಾ ಪೀಠದ ಆಚಾರ್ಯರನ್ನಾಗಿ ನೇಮಿಸಿದರು. ಆಚಾರ್ಯರು ತಮ್ಮ ಯೋಜನೆಯಂತೆ ಪೂರ್ವದಲ್ಲಿರುವ ಜಗನ್ನಾಥದಲ್ಲಿ ಗೋವರ್ಧನ ಪೀಠವನ್ನೂ, ಪಶ್ಚಿಮದಲ್ಲಿರುವ ದ್ವಾರಕೆಯಲ್ಲಿ ಕಾಳಿಕಾ ಪೀಠವನ್ನೂ, ಉತ್ತರದಲ್ಲಿರುವ ಬದರಿಕಾಶ್ರಮದಲ್ಲಿ ಜ್ಯೋತಿರ್ಪೀಠವನ್ನು ಸ್ಥಾಪಿಸಿದರು. ಈ ನಾಲ್ಕುಪೀಠಗಳಿಗೆ 'ಆಮ್ನಾಯ' ಪೀಠಗಳೆಂದು ಹೆಸರು.

ಶಂಕರರ ಶಿಷ್ಯರಲ್ಲಿ ಪ್ರಮುಖರಾದವರು ನಾಲ್ವರು; ಪದ್ಮಪಾದರು, ಸುರೇಶ್ವರರು, ಹಸ್ತಾಮಲಕರು ಮತ್ತು ತೋಟಕಾಚಾರ್ಯರು. ಶಂಕರರು ಇವರನ್ನು ತಾವು ಸ್ಥಾಪಿಸಿದ ನಾಲ್ಕು ವೇದಾಂತ ಪೀಠಗಳಿಗೆ ಆಚಾರ್ಯರನ್ನಾಗಿ ನಿಯೋಜಿಸಿದರು.

ಈ ಮಧ್ಯೆ ಶಂಕರರಿಗೆ ತಮ್ಮ ವೃದ್ಧ ತಾಯಿ ಆರ್ಯಾಂಬೆಯ ಅವಸಾನ ಸಮೀಪಿಸಿತೆಂದು ತಿಳಿದುಬಂದಿತು. ತಾನು ಎಲ್ಲಿದ್ದರೂ ಕಡೆಗಾಲದಲ್ಲಿ ಆಕೆಯ ಸಮೀಪ ಬರುತ್ತೇನೆಂದು ತಾಯಿಗೆ ಮಾತು ಕೊಟ್ಟಿದ್ದರು. ಅದರಂತೆ ಶಂಕರರು ತಾಯಿಯ ಬಳಿಗೆ ಬಂದು ಕೊನೆಗಾಲದಲ್ಲಿ ಆಕೆಯ ಸೇವೆಯನ್ನು ಮಾಡಿ ಆಕೆಯು ದೈವಾಧೀನಳಾದ ನಂತರ ಆಕೆಯ ಅಂತ್ಯ ಸಂಸ್ಕಾರವನ್ನು ನಡೆಸಿ ಕೃತಾರ್ಥರಾದರು.

ಶಂಕರಾಚಾರ್ಯರು ಕಾಶ್ಮೀರಕ್ಕೂ ಭೇಟಿಕೊಟ್ಟರು. ಅವರು ಅಲ್ಲಿನ ಶ್ರೀನಗರದ ಶಾರದಾ ನಿಲಯದಲ್ಲಿರುವ 'ಸರ್ವಜ್ಞಪೀಠ'ವನ್ನು ಅಲಂಕರಿಸಬೇಕೆಂದು ಅಲ್ಲಿದ್ದ ಪಂಡಿತರು ಅವರನ್ನು ಕೇಳಿಕೊಂಡರು. ಆದರೆ ನೆರೆದಿದ್ದ ಜೈನ, ಬೌದ್ಧ, ವೈಶೇಷಿಕ ಮುಂತಾದ ಮತ ಧರ್ಮಗಳ ಮುಖಂಡರು ಹಾಗೂ ಪಂಡಿತರು ಅಡ್ಡ ಬಂದರು. ಅಲ್ಲಿ ಜರುಗಿದ ವಾಕ್ಯಾರ್ಥದಲ್ಲಿ ಪ್ರತಿಯೊಬ್ಬರನ್ನೂ ಜಯಿಸಿ ಶಂಕರರು ಶಾರದಾ

ನಿಲಯವನ್ನುಪ್ರವೇಶಿಸಿ ಸರ್ವಜ್ಞಪೀಠವನ್ನು ಅಲಂಕರಿಸಿದರು.

ತಮ್ಮ 30ನೆಯ ವಯಸ್ಸಿಗೇ ಶಂಕರಾಚಾರ್ಯರು ಭಾರತವನ್ನು ಎರಡು ಸಲ ಪ್ರದಕ್ಷಿಣೆ ಮಾಡಿದ್ದರು. ದಕ್ಷಿಣದ ರಾಮೇಶ್ವರದಿಂದ ಉತ್ತರದ ಕಾಶ್ಮೀರದವರೆಗೆ ಮತ್ತು ಪೂರ್ವದ ಜಗನ್ನಾಥದಿಂದ ಪಶ್ಚಿಮದ ದ್ವಾರಕೆಯವರೆಗೆ ಸಂಚಾರ ಮಾಡಿ ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದರು, ದೇವಸ್ಥಾನಗಳನ್ನು ಪುನರುಜ್ಜೀವನ ಗೊಳಿಸಿದರು. ದಾರಿ ತಪ್ಪಿದ ಅನೇಕರನ್ನು ಧರ್ಮದ ಮಾರ್ಗಕ್ಕೆ ತಂದರು.

ಶ್ರೀ ಶಂಕರರು ಜನರನ್ನು ಧರ್ಮ ಮಾರ್ಗದ ಕಡೆಗೆ ಪ್ರೇರೇಪಿಸುತ್ತಿರುವುದು ಕೆಲವು ಪಟ್ಟಭದ್ರ ಹಿತಾಸಕ್ತರಿಗೆ ಸಹಿಸಲಾಗಲಿಲ್ಲ. ಒಮ್ಮೆ ಅವರು ಶ್ರೀಶೈಲದಲ್ಲಿರುವಾಗ ಬಹು ದುಷ್ಟನಾದ ಕಾಪಾಲಿಕನೊಬ್ಬನು ರಾವಣ ಸನ್ಯಾಸಿಯಂತೆ, ತನ್ನ ದುರುದ್ದೇಶವನ್ನು ಮರೆಮಾಡಿಕೊಂಡು ಸಾಧುವಿನಂತೆ ನಟಿಸುತ್ತಾ ಧ್ಯಾನದಲ್ಲಿಯೇ ಮಗ್ನರಾಗಿದ್ದ ಆಚಾರ್ಯರ ಬಳಿ ಬಂದನು. ಅವರು ಒಬ್ಬರೇ ಕುಳಿತಿದ್ದುದನ್ನು ಕಂಡ ಕಾಪಾಲಿಕನು ಒಳಗೊಳಗೇ ಹರ್ಷಿತನಾದನು.

ಕಪಟ ಸನ್ಯಾಸಿಯಾದ ಆತನು, ಆಚಾರ್ಯರನ್ನು ಬಹಳವಾಗಿ ಸ್ತುತಿಸಿ ತಾನು ಧೀರ್ಘಕಾಲ ತಪಸ್ಸನ್ನು ಮಾಡಿ ಉಗ್ರ ಭೈರವನನ್ನು ಮೆಚ್ಚಿಸಿರುವುದಾಗಿಯೂ, ತನ್ನ ತಪಸ್ಸಿನಿಂದ ಸಂತುಷ್ಟನಾದ ರುದ್ರನು ಒಬ್ಬ ಸರ್ವಜ್ಞನಾದ ವ್ಯಕ್ತಿಯ ಅಥವಾ ಒಬ್ಬ ರಾಜನ ಶಿರಸನ್ನು ಅಗ್ನಿಯಲ್ಲಿ ಹೋಮಮಾಡಬೇಕೆಂದು ಹೇಳಿರುವುದಾಗಿಯೂ, ಆಚಾರ್ಯರು ಕೃಪೆ ತೋರಿ ತಮ್ಮ ಶಿರಸನ್ನು ತನಗೆ ದಾನಮಾಡಬೇಕೆಂದೂ, ಅದರಿಂದ ಅವನ ಅಭಿಲಾಷೆಯು ಈಡೇರುವುದೆಂದೂ, ಜೊತೆಗೆ ಮಹಾತ್ಮನಾದ ದಧೀಚಿಯಂತೆ ಆಚಾರ್ಯರು ಆಚಂದ್ರಾರ್ಕಕೀರ್ತಿವಂತ ರಾಗುವರೆಂದು ಅತಿ ವಿನಯದಿಂದ ನುಡಿಯುತ್ತಾ, ಆ ಕಾಪಾಲಿಕನು ಆಚಾರ್ಯರಿಗೆ ಪುನಃ ಪುನಃ ನಮಸ್ಕರಿಸಿದನು.

ಈ ಮಾತುಗಳನ್ನು ಕೇಳಿ ವಿದ್ವನ್ಮಣಿಗಳೂ, ದಯಾಳುಗಳೂ ಸಮಸ್ತ ಮೋಹಗಳನ್ನೂ ಜಯಿಸಿದ ಶ್ರೀ ಶಂಕರರು ಅವನನ್ನು ಕುರಿತು "ಅಯ್ಯಾ, ನಿನ್ನ ಈ ವಿಚಿತ್ರ ಕೋರಿಕೆಯಿಂದ ನನಗೇನೂ ಬೇಸರವಾಗಿಲ್ಲ, ನಿನ್ನ ಮೇಲೆ ಕೋಪಿಸಿಕೊಳ್ಳುವುದು ಇಲ್ಲ, ಶಿರಸ್ಸನ್ನು ಪ್ರೀತಿಯಿಂದಲೇ ನಿನಗೆ ಕೊಡುತ್ತೇನೆ. ಎಷ್ಟು ರಕ್ಷಿಸಿದರೂ ಕಾಲ ಬಂದಾಗ ಬಿದ್ದು ಹೋಗುವ ಈ ದೇಹವನ್ನು ಕೊಟ್ಟ ಮಾತ್ರದಿಂದ ಪರಾರ್ಥವು ಸಿದ್ಧಿಸುವುದಾದರೆ ಅದೇ ಪರಮ ಪುರುಷಾರ್ಥವಾಗುವುದು. ಆದರೆ ನಾನು ಬಹಿರಂಗವಾಗಿ ಅನ್ಯರಿಗೆ ತಿಳಿಯುವಂತೆ ನನ್ನ ಶಿರಸ್ಸನ್ನು ಕೊಡಲು ಬಯಸುವುದಿಲ್ಲ. ಏಕೆಂದರೆ ಒಂದು ವೇಳೆ ಈ ವಿಷಯವು ನನ್ನ ಶಿಷ್ಯರಿಗೆ ತಿಳಿದರೆ ಅವರು ಸುಮ್ಮನಿರಲಾರರು. ಆದುದರಿಂದ ನೀನು ನಾನು ಏಕಾಂತದಲ್ಲಿ ಸಮಾಧಿ ಸ್ಥಿತಿಯಲ್ಲಿರುವಾಗ ಅಲ್ಲಿಗೆ ಗುಟ್ಟಾಗಿ ಬಂದು ನಿನ್ನ ಅಭಿಲಾಷೆಯನ್ನು ಈಡೇರಿಸಿಕೊ" ಎಂದು ಸೂಚಿಸಿದರು.

ಅದೇ ಪ್ರಕಾರವಾಗಿ ಇಬ್ಬರೂ ಒಂದು ಕಾಲವನ್ನು ಗೊತ್ತುಮಾಡಿಕೊಂಡರು. ತಾನು ಬಂದ ಕಾರ್ಯವು ಯಶಸ್ವಿಯಾಯಿತೆಂಬ ಉತ್ಸಾಹದಿಂದ ಕಾಪಾಲಿಕನು ತನ್ನ ವಸತಿಗೆ ಹೊರಟುಹೋದನು. ಶಂಕರರು ಈ ವಿಷಯವನ್ನು ಶಿಷ್ಯರಾರಿಗೂ ತಿಳಿಸದೆ ಗುಟ್ಟಾಗಿಟ್ಟಿದ್ದರು.

ಸಂಕೇತ ಕಾಲವು ಸಮೀಪಿಸಿದಂತೆ ಶೂಲಧಾರಿಯಾಗಿ, ಮೈಗೆಲ್ಲಾ ಭಸ್ಮವನ್ನು ಬಳಿದುಕೊಂಡು ಶವದ ಮೂಳೆಗಳನ್ನು ಮಾಲಾಕಾರವಾಗಿ ಧರಿಸಿಕೊಂಡು ಮದ್ಯಪಾನದಿಂದ ಕೆಂಪಾಗಿದ್ದ ಕಣ್ಣಾಲಿಗಳನ್ನು ತಿರುಗಿಸುತ್ತಾ ಭಯಂಕರ ರೂಪದಿಂದ ಭೈರವಯೋಗಿಯು ಆಚಾರ್ಯರು ಕುಳಿತಿದ್ದಲ್ಲಿಗೆ ಆಗಮಿಸಿದನು. ಆ ಸಮಯಕ್ಕೆ ಸರಿಯಾಗಿ ಆಚಾರ್ಯರ ಶಿಷ್ಯರು ಸ್ನಾನಾದಿ ಕಾರ್ಯಗಳಿಗೆ ಅಲ್ಲಿಂದ ದೂರಹೋಗಿದ್ದರು. ಆಚಾರ್ಯರು ಸ್ಥಿತಪ್ರಜ್ಞರಾಗಿ ಏಕಾಂತದಲ್ಲಿ ಕುಳಿತಿದ್ದರು.

ಭೀಕರಾಕೃತಿಯಾಗಿ ಬಂದ ಆ ಕಾಪಾಲಿಕನನ್ನು ನೋಡಿದ ಆಚಾರ್ಯರು ಕೊಂಚವೂ ವಿಚಲಿತರಾಗದೆ ತಮ್ಮ ದೇಹವನ್ನು ತ್ಯಜಿಸಲು ಸಿದ್ಧರಾದರು. ಅವರು ತಮ್ಮ ಇಂದ್ರಿಯಗಳನ್ನು ಉಪಸಂಹರಿಸಿ ಬಾಹ್ಯ ಜಗತ್ತಿನೊಡನೆ ಸಂಪರ್ಕವನ್ನು ಪೂರ್ಣವಾಗಿ ಕಡಿದುಕೊಂಡಿದ್ದರು.

ಹೀಗೆ ಬಲಿಪಶುವಿನಂತೆ ಕುಳಿತ ಆಚಾರ್ಯರನ್ನು ಕಂಡು ಬೇರಾರೂ ಅಕ್ಕಪಕ್ಕದಲ್ಲಿ ಇಲ್ಲವೆಂಬುದನ್ನು ನಿಶ್ಚಯ ಮಾಡಿಕೊಂಡು ಆ ದುರುಳ ಕಾಪಾಲಿಕನು ಒಂದು ಕೈಯಲ್ಲಿ ಖಡ್ಗವನ್ನೂ, ಇನ್ನೊಂದು ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡು ಆಚಾರ್ಯರನ್ನು ಸಮೀಪಿಸುತ್ತಿರಬೇಕಾದರೆ, ಶಂಕರರ ಶಿಷ್ಯರಾದ ಪದ್ಮಪಾದರು ತಮ್ಮ ಜ್ಞಾನ ದೃಷ್ಟಿಯಿಂದಲೇ ತಮ್ಮ ಗುರುಗಳಿಗೆ ಉಂಟಾಗಬಹುದಾದ ಅನಾಹುತವನ್ನು ಗಮನಿಸಿದರು. ಅವರು ಆ ಕ್ಷಣವೇ ಶ್ರೀ ನರಸಿಂಹಸ್ವಾಮಿಯನ್ನು ಸ್ಮರಿಸಿಕೊಳ್ಳುತ್ತಾ ತಾವೇ ಸ್ವಯಂ ನರಸಿಂಹರೂಪವನ್ನು ತಾಳಿ ದುಷ್ಟನಾದ ಆ ಕಾಪಾಲಿಕನನ್ನು ಎದುರಿಸಿದರು.

ಉಗ್ರನರಸಿಂಹರೂಪಿಯಾದ ಪದ್ಮಪಾದರು ಕಾಪಾಲಿಕನೆದುರು ಛಂಗನೆ ಹಾರಿ ನಿಂತು ಖಡ್ಗವನ್ನೂ, ತ್ರಿಶೂಲವನ್ನೂ ಏಕಕಾಲದಲ್ಲಿ ಬೀಸುತ್ತಿದ್ದ ಕಾಪಾಲಿಕನ ವಕ್ಷಸ್ಥಳವನ್ನು ಸೀಳಿಹಾಕಿ ದಿಕ್ಕುಗಳು ಬಿರಿಯುವಂತೆ ಘೋರವಾದ ಅಟ್ಟಹಾಸಗೈದರು.

ಹೊರಗೆ ಹೋಗಿದ್ದ ಶಿಷ್ಯರು ಕಿವಿಗಡಚಿಕ್ಕುವ ಆ ಘರ್ಜನೆಯನ್ನು ಕೇಳಿ ಗಾಬರಿಗೊಂಡು ಆಚಾರ್ಯರಿದ್ದೆಡೆಗೆ ಧಾವಿಸಿ ಬಂದರು. ಆಚಾರ್ಯರು ಸಮಾಧಿಯಿಂದ ವಿಚಲಿತರಾಗಿ ಕಣ್ಣು ತೆರೆದು ಆನಂದಭಾಷ್ಪವನ್ನು ಸುರಿಸುತ್ತಾ ಶ್ರೀ ನರಸಿಂಹಸ್ವಾಮಿಯ ಸ್ತುತಿಯನ್ನು ಮಾಡಲಾಗಿ ಪದ್ಮಪಾದರು ಸಹಜ ಸ್ಥಿತಿಗೆ ಮರಳಿದರು.

ಶಂಕರರು ಜನರಿಗೆ ಹಿಂದೂ ಧರ್ಮದ ಸಾರವು ಸುಲಭವಾಗಿ ಅರ್ಥವಾಗಲೆಂದು ಅನೇಕ ಶಾಸ್ತ್ರಗ್ರಂಥಗಳನ್ನು

ಬರೆದರು. ಜೊತೆಗೆ ಜನರಲ್ಲಿ ಭಕ್ತಿಯ ಪೋಷಣೆಗೆ ಅನುಕೂಲವಾಗುವಂತಹ ಅನೇಕ ಸ್ತೋತ್ರಗಳನ್ನು ರಚಿಸಿದರು. ಭಾರತದಾದ್ಯಂತ ಧರ್ಮದ ಆಂದೋಲನ ನಡೆಸಿದರು. ಚಿರಸ್ಮರಣೀಯವಾದ ಧಾರ್ಮಿಕ ಗ್ರಂಥಗಳನ್ನು ರಚಿಸಿ ಸನಾತನ ಧರ್ಮದ ವಿಶಿಷ್ಟತೆಯನ್ನು ತೋರಿಸಿದರು. ಸ್ವಲ್ಪ ದೂರದ ಪ್ರಯಾಣವೂ ಸಹ ಬಹು ಕಷ್ಟವಾಗಿದ್ದ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಸಂಚರಿಸಿದರು. ಬೇರೆ ಬೇರೆ ಪ್ರದೇಶಗಳಲ್ಲಿ ಮಠಗಳನ್ನು ಸ್ಥಾಪಿಸಿ ಭಾರತವೆಲ್ಲಾ ಒಂದೇ ಎಂಬ ಸತ್ಯಕ್ಕೆ ಮೂರ್ತರೂಪ ಕೊಟ್ಟರು.

ಮಹಾ ಗಣೇಶ ಪಂಚರತ್ನಸ್ತೋತ್ರ, ಸೌಂದರ್ಯಲಹರಿ, ಶಿವಾನಂದಲಹರಿ, ಲಿಂಗಾಷ್ಟಕ, ದತ್ತಾತ್ರೇಯ ಅಷ್ಟಚಕ್ರ ಬೀಜಸ್ತೋತ್ರ, ಕನಕಧಾರಾಸ್ತೋತ್ರ, ಲಕ್ಷ್ಮೀನೃಸಿಂಹ ಕರುಣಾರಸ ಸ್ತೋತ್ರ, ವೋಹಮುದ್ಗರ ಮುಂತಾದ, ಪಾಮರರು ಸುಲಭವಾಗಿ ಪಠಿಸಬಹುದಾದಂತಹ ಸ್ತೋತ್ರಗಳನ್ನು ರಚಿಸಿ ಸನಾತನ ಧರ್ಮದ ಉಳಿವಿಗೆ ತಮ್ಮ ಅಮೂಲ್ಯ ಕೊಡಗೆಯನ್ನು ನೀಡಿದರು. ಅವರ ಪ್ರತಿಭೆ, ಕ್ರಿಯಾಸಾಮರ್ಥ್ಯ, ಕಾರ್ಯತತ್ಪರತೆ ಎಷ್ಟು ಎಂಬುದು ನಮಗೆ ಊಹಿಸಲೂ ಆಗದು ಎಂದರೆ ಅದು ಖಂಡಿತ ಅತಿಶಯೋಕ್ತಿಯಾಗಲಾರದು.

ಶಂಕರರು ಬಾಲ್ಯಾವಸ್ಥೆಯಲ್ಲಿದ್ದಾಗ ಸುಧನ್ವ ಎಂಬ ಕೇರಳದ ಒಬ್ಬ ರಾಜನು ಅವರನ್ನು ಸಂದರ್ಶಿಸಿ ಅವರಿಗೆ ತಾನು ರಚಿಸಿದ ಸಾಹಿತ್ಯವನ್ನು ತೋರಿಸಿರುತ್ತಾನೆ. ಅನಂತರ ಅನೇಕ ವರ್ಷಗಳ ನಂತರ ಶಂಕರರು ಸುಧನ್ವ ರಾಜನನ್ನು ಮತ್ತೆ ಭೇಟಿ ಮಾಡಿದಾಗ, ಆ ರಾಜನು ತನ್ನ ಸಾಹಿತ್ಯ ರಚನೆಗಳು ಆಕಸ್ಮಿಕವಾಗಿ ಅಗ್ನಿಗೆ ಆಹುತಿಯಾಗಿ ಹೋಯಿತೆಂದು ದುಃಖ ವ್ಯಕ್ತಪಡಿಸುತ್ತಾನೆ. ಆಗ ಆಚಾರ್ಯರು ತಾವು ಬಾಲ್ಯದಲ್ಲಿ ಕೇಳಿದ್ದ ಆ ರಚನೆಗಳನ್ನು ಪುನರುಚ್ಚರಿಸುತ್ತಾರೆ. ಈ ಸತ್ಯ ಘಟನೆಯಿಂದ ಶಂಕರರ ನೆನಪಿನ ಶಕ್ತಿ ಎಷ್ಟು ಅದ್ಭುತವಾಗಿತ್ತೆಂದು ನಾವು ಊಹಿಸಬಹುದು. ದೈವಾಂಶ ಸಂಭೂತರಲ್ಲದವರಿಗೆ ಇದು ಸಾಧ್ಯವೇ ಇಲ್ಲಎಂಬುದು ಜ್ಞಾನಿಗಳ ಅಭಿಮತವಾಗಿದೆ.

ಇವರು ತಮ್ಮ 32ನೆಯ ವಯಸ್ಸಿನಲ್ಲಿ ಇಹಲೋಕದ ಎಲ್ಲಾ ಸಂಬಂಧಗಳನ್ನೂ ಕಳಚಿಕೊಂಡು ಬ್ರಹ್ಮನಿರ್ವಾಣವನ್ನು ಪಡೆದರು. ಅವರ ಇಹ ಜೀವನದ ಕಾಲ ಕೇವಲ 32 ವರ್ಷವಾಗಿದ್ದರೂ ಅವರು ಸಾಧಿಸಿದ ಸಾಧನೆ ಎಣೆಯಿಲ್ಲದ್ದು. ಅಂತಹ ಮಹಾತ್ಮರ ದಿವ್ಯ ಜೀವನ ನಮ್ಮ ಬಾಳಿಗೆ ಬೆಳಕಾಗಲಿ. ಅವರು ಕಟ್ಟಿದ ಭಾರತದ ಕಲ್ಪನೆ ನಮ್ಮದಾಗಲಿ. ಅವರು ತೋರಿದ ಜೀವನ ತತ್ವವನ್ನು ಎಲ್ಲರೂ ಪಾಲಿಸುವಂತಾಗಲಿ.

**ಸರ್ವೇಜನಾಃ ಸುಖಿನೋ ಭವಂತು.**



**ಗೋವಿಂದ್ ಬಿ.ಈ.**
9167762988

************************************************************

**ಆದಿಗುರು ಶ್ರೀ ಶಂಕರಾಚಾರ್ಯರ "ವಿವೇಕಚೂಡಮಣಿ" ಪ್ರಕರಣ ಗ್ರಂಥದ ಸಾಧನಾ ಚತುಷ್ಟಯ**

ಅದೌ ನಿತ್ಯಾನಿತ್ಯವಸ್ತುವಿವೇಕಃ ಪರಿಗಣ್ಯತೇ ಇಹಾಮುತ್ರಫಲಭೋಗವಿರಾಗಸ್ತದನಂತರಮ್ ।
ಶಮಾದಿಷಟ್ಕಸಂಪತ್ತಿರ್ಮುಮುಕ್ಷುತ್ವಮಿತಿ ಸ್ಫುಟಮ್ ॥ 19 ॥

ನಿತ್ಯಾ ಅನಿತ್ಯ ವಸ್ತು ವಿವೇಕ–ಪರಬ್ರಹ್ಮ ಸತ್ಯ ಜಗತ್ತು ಮಿಥ್ಯ

ಇಹಾಮುತ್ರ ಫಲ ಭೋಗ ವಿರಾಗ–ಅನಿತ್ಯ ಭೋಗ ವಸ್ತುಗಳಲ್ಲಿ ವೈರಾಗ್ಯ

ಶಮಾದಿಷಟ್ಕ ಸಂಪತ್ತು–ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ

- ಶಮ – ಮನಸ್ಸಿನ ನಿಗ್ರಹ
- ದಮ – ಇಂದ್ರಿಯ ನಿಗ್ರಹ
- ಉಪರತಿ – ಜಗತ್ತಿನ ವಸ್ತುಗಳಲ್ಲಿ ಅವಲಂಬನವಿಲ್ಲದಿರುವುದು
- ತಿತಿಕ್ಷೆ – ಸಹನೆ
- ಶ್ರದ್ಧೆ – ಶಾಸ್ತ್ರ ಮತ್ತು ಗುರುವಾಕ್ಯಗಳಲ್ಲಿ ಸತ್ಯವೆಂಬ ಬುದ್ಧಿ
- ಸಮಾಧಾನ – ಪರಬ್ರಹ್ಮನಲ್ಲಿ ಬುದ್ಧಿಯನ್ನು ನೆಲೆಗೊಳಿಸುವುದು

ಮುಮುಕ್ಷುತ್ವ – ಮೋಕ್ಷ ಪಡೆಯಬೇಕೆಂಬ ತೀವ್ರ ಬಯಕೆ



# ಗಿರಿಜಾ ಕಲ್ಯಾಣೋತ್ಸವ ಸಂದರ್ಭ









# ಶ್ರೀ ಶಂಕರ ಜಯಂತಿಯ ದಿನ ಭಕ್ತಿ ಸಂಗೀತ ಕಾರ್ಯಕ್ರಮ







# ಶ್ರೀ ಶಂಕರ ಜಯಂತಿಯ ದಿನ ಭಕ್ತಿ ಸಂಗೀತ ಕಾರ್ಯಕ್ರಮ










# ಶ್ರೀ ಶಂಕರ ಜಯಂತಿಯ ದಿನ ಭಕ್ತಿ ಸಂಗೀತ ಕಾರ್ಯಕ್ರಮ







With Best Compliments From

CA INDIA

# PRASAD & KUMAR

Chartered Accountants

# 315, 6th Main Road, HAL 2nd Stage
Bengaluru 560038

Mobile No.: 9845128229

PRASUN MANAGEMENT SERVICES

Management Consultants

# 315, 6th Main Road, HAL 2nd Stage
Bengaluru 560038

Mobile No.: 9845128229

With Best Compliments From

3SK GROUPS



# 3SK ACADEMY
# 3SK VILLAS
# 3SK Ladies PG
# 3SK Farms

*Scan for Location & Reviews

3sk_academy

3SK Academy

office3skacademy@gmail.com

## 'ನಮ್ಮ ಬದುಕೇ ಒಂದು ಸಂಭ್ರಮವಾಗಿ ಬಿಡಲಿ!'

ಮನುಷ್ಯ ತನ್ನ ನಿತ್ಯ ಜೀವನದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುತ್ತಾನೆ. ಅಂತೆಯೇ ಬೇರೆಯವರ ಜೀವನದ ಸಮಸ್ಯೆಗಳನ್ನೂ ನೋಡುತ್ತಿರುತ್ತಾನೆ. ಸಮಸ್ಯೆ ಸಂಕಷ್ಟಗಳಿಲ್ಲದವರೇ ಭೂಮಿಯ ಮೇಲೆ ಇಲ್ಲವೆನ್ನಬಹುದು. ಹಾಗಾದರೆ ಜೀವನದಲ್ಲಿ ಸುಖಿಯಾಗಿರುವವರು ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರ, ಸಮಸ್ಯೆಗಳು ಗೊಂದಲಗಳು ಜೀವನದಲ್ಲಿ ಸಹಜ. ಆದರೆ ಅವುಗಳನ್ನು ತನ್ನ ಪ್ರಯತ್ನಗಳಿಂದ ಪರಿಹರಿಸಿಕೊಂಡು ತನ್ನ ಜೀವನಕ್ಕೊಂದು ಅರ್ಥಬರುವಂತೆ ಬಾಳುವವನೇ ನಿಜವಾದ ಸುಖಿ. ಇಂತಹ ವ್ಯಕ್ತಿಗಳು ತಾವು ಕಂಡುಕೊಂಡ ಪರಿಹಾರಗಳನ್ನು ಇತರರಿಗೂ ನೀಡಿ ಸಮಾಜಕ್ಕೆ ಸ್ಫೂರ್ತಿಯಾಗಿ ಮೇಲ್ಪಂಕ್ತಿಯಾಗುತ್ತಾರೆ ಮತ್ತು ಮಹಾನ್ ವ್ಯಕ್ತಿಗಳಾಗಿ ಇತಿಹಾಸದ ಪುಟಗಳನ್ನು ಸೇರುತ್ತಾರೆ. ಸತತ ಸೋಲುಗಳಿಂದ ಕಂಗೆಡದೆ ಅಮೇರಿಕದ ಅಧ್ಯಕ್ಷನಾಗಿ ಖ್ಯಾತರಾದ ಅಬ್ರಹಾಂ ಲಿಂಕನ್, ತನ್ನ ಕಷ್ಟ ನೋವುಗಳಿಗೆ ಅಳುಕದೆ ಇಡೀ ಜಗತ್ತನ್ನೇ ನಗಿಸಿದ ಚಾರ್ಲೀ ಚಾಪ್ಲಿನ್, ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದರೂ ಶ್ರೇಷ್ಠ ವಿಜ್ಞಾನಿಗಳ ಸಾಲಿಗೆ ಸೇರಿದ ಸ್ಟೀಫನ್ ಹಾಕಿಂಗ್ ಮೊದಲಾದವರ ಪಟ್ಟಿಯನ್ನು ನೀಡಬಹುದಾದರೆ ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಬಾಬಾ ಸಾಹೇಬ್ ಅಂಬೇಡ್ಕರ್, ಲಾಲ್ ಬಹಾದ್ದೂರ್ ಶಾಸ್ತ್ರಿ, ಅಬ್ದುಲ್ ಕಲಾಂ, ಮೊದಲಾದ ಮಹಾನ್ ಭಾರತೀಯರ ಪಟ್ಟಿಯೂ ಉದ್ದವಿದೆ. ಹಾಗೆಂದ ಮಾತ್ರಕ್ಕೆ ದೊಡ್ಡ ಸಾಧನೆಗಳನ್ನು ಮಾಡಿದ ಇಂತಹವರು ಮಾತ್ರವೇ ಜೀವನದಲ್ಲಿ ಯಶಸ್ಸು ಗಳಿಸಿದವರು ಎಂತಲೂ ಅಲ್ಲ. ಎಳವೆಯಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು ಬಡತನದ ಬೇಗೆಯಲ್ಲಿ ಬೆಂದು ವೈದ್ಯರು, ನ್ಯಾಯವಾದಿಗಳಾಗಿ ಹೆಸರು ಮಾಡಿದವರಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಕಂಡವರ ಮನೆಯಲ್ಲಿ ಕೆಲಸ ಮಾಡಿ ಕರುಳಕುಡಿಗಳಿಗೆ ನೆಲೆ ಮಾಡಿರುವ ತಾಯಂದಿರ ಸಾಧನೆಯೇನು ಕಡಿಮೆಯಿದ್ದಲ್ಲ. ಅಂಗವಿಕಲತೆಯನ್ನು ನ್ಯೂನತೆಯಾಗಿ ಭಾವಿಸದೆ ಪರ್ವತಗಳ ಏರಿದವರ ಸಾಧನೆಯೇನು ಕಡಿಮೆಯೇ?

ಇವರೆಲ್ಲರೂ ತಮ್ಮ ಬದುಕಿನ ಕಷ್ಟಗಳ ಕುಲುಮೆಯಲ್ಲಿ ಬೆಂದು ಅಪರಂಜಿಯಾದವರೇ! ಬೆಂಕಿಯಲ್ಲಿ ಅರಳಿದ ಹೂಗಳೇ!

ಹಾಗಾದರೆ ಇವರೆಲ್ಲರು ತಮ್ಮ ಜೀವನದಲ್ಲಿ ಯಶಸ್ಸು ಕಂಡದ್ದು ಹೇಗೆ ಎಂದು ಅವಲೋಕಿಸುವುದಾದರೆ ಇವರೆಲ್ಲರ ವ್ಯಕ್ತಿತ್ವದಲ್ಲಿನ ಕೆಲ ಸಾಮಾನ್ಯ ಗುಣಗಳನ್ನು ನಾವು ಗಮನಿಸಬಹುದು. ಅವೆಂದರೆ ಆತ್ಮ ವಿಶ್ವಾಸ, ಕಠಿಣ ಪರಿಶ್ರಮ, ಸಕಾರಾತ್ಮಕ ಮನೋಭಾವ, ಸಾಧಿಸುವ ಛಲ, ಭರವಸೆ, ನವೀನ ಆಲೋಚನೆಗಳು, ಬೇರೆಯವರಿಗೂ ಒಳಿತು ಮಾಡುವ ಉದಾತ್ತ ವ್ಯಕ್ತಿತ್ವ, ಮೌಲ್ಯಯುತ ನೀತಿಯುತ ಜೀವನ ಇವೇ ಮೊದಲಾದವುಗಳು. ಸರಿ ಇನ್ನೇಕೆ ತಡ ಅವುಗಳನ್ನು ಒಂದೊಂದಾಗಿ ತಿಳಿಯೋಣ ಬನ್ನಿ. ನಾವೂ ಯಶಸ್ವೀ ಜೀವನದತ್ತ ಸಾಗಲು ಪ್ರಯತ್ನಿಸೋಣ ಬನ್ನಿ!

**ಆತ್ಮವಿಶ್ವಾಸ:** ವ್ಯಕ್ತಿಯೊಬ್ಬನ ಯಶಸ್ಸು ಆತ ಬದುಕು ಭಾವನೆಗಳನ್ನು ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ಆತ್ಮವಿಶ್ವಾಸ ನಮ್ಮ ಜೀವನದಲ್ಲಿ ಬಹುದೊಡ್ಡ ಪಾತ್ರ ನಿರ್ವಹಿಸುತ್ತದೆ. ನಮ್ಮಲ್ಲಿ ನಾವು ನಂಬಿಕೆಯಿಡುವುದೇ ಆತ್ಮವಿಶ್ವಾಸ. ಜೀವನದಲ್ಲಿ ಕಷ್ಟಗಳು ಎದುರಾದಾಗ ನಮ್ಮ ಬಹುತೇಕರ ನಿರೀಕ್ಷೆ ಏನೆಂದರೆ ಯಾರೋ ಬಂದು ನಮ್ಮ ಸಮಸ್ಯೆಗಳನ್ನು ಪರಿಹರಿಸುತ್ತಾರೆ ಅದರಿಂದ ನಮ್ಮ ಬದುಕು ಹಸನಾಗುತ್ತದೆ ಎಂಬುದು. ಆದರೆ ಇದು ತಪ್ಪು ಕಲ್ಪನೆಯಾಗಿದೆ. ನಮ್ಮನ್ನು ನಾವು ಉದ್ಧರಿಸಿಕೊಳ್ಳದ ಹೊರತು ಮತ್ತಾರೂ ನಮ್ಮನ್ನು ಉದ್ಧರಿಸಲಾರರೆಂಬುದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಬೇರೆ ಯಾರೋ ಬಂದು ನಮ್ಮ ಬದುಕಿನಲ್ಲಿ ಮ್ಯಾಜಿಕ್ ಮಾಡಲು ಸಾಧ್ಯವಿಲ್ಲ. 'ನಮ್ಮ ಬಾಳಿಗೆ ನಾವೇ ಶಿಲ್ಪಿ' ಎಂಬುದು ಸದಾ ನೆನಪಿಡೋಣ. ನಮಗೆ ನಾವೇ ದಾರಿದೀಪವಾಗಬೇಕು. ನಮ್ಮ ಬದುಕಿಗೆ ನಾವು ನಮ್ಮನ್ನೇ ಸ್ವಂತ ಆಶ್ರಯವಾಗಿಸಿಕೊಳ್ಳಬೇಕು. ಕಷ್ಟಗಳೇನೇ ಬಂದರೂ ಸತತ ಸೋಲುಗಳೇ ಎದುರಾದರೂ ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಆತ್ಮವಿಶ್ವಾಸದಿಂದ ಇಡೀ ಜಗತ್ತೇ ನಮ್ಮತ್ತ ತಿರುಗಿ ನೋಡುವಂತೆ ಮಾಡಬಹುದು. ಆತ್ಮವಿಶ್ವಾಸದಿಂದ ಹಾಕುವ ಹೆಜ್ಜೆ ದೃಢವಾಗಿರುತ್ತದೆ ಹಾಗೂ ಗೆಲುವಿನತ್ತ ನಮ್ಮನ್ನು ಕರೆದೊಯ್ಯುತ್ತದೆ. 'ಆತ್ಮವಿಶ್ವಾಸಕ್ಕಿಂತ ದೊಡ್ಡ ಗೆಳೆಯ ಯಾರೂ ಇಲ್ಲ', 'ನಿಮ್ಮನ್ನು ನೀವು ಜಯಿಸಿದರೆ ಇಡೀ ಜಗತ್ತೇ ನಿಮ್ಮದಾಗುತ್ತದೆ' ಎಂಬ ಸ್ವಾಮಿ ವಿವೇಕಾನಂದರ ನುಡಿಗಳು ಇಲ್ಲಿ ಸ್ಮರಣಾರ್ಹ. ನಮ್ಮಲ್ಲಿ ನಾವು ನಂಬಿಕೆಯಿಟ್ಟುಕೊಂಡು ಆತ್ಮವಿಶ್ವಾಸದಿಂದ ಸಮಸ್ಯೆ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಲು ಮುಂದಾದರೆ ಅರ್ಧ ಸಮಸ್ಯೆ ಪರಿಹಾರವಾದಂತೆಯೇ. ಹಾಗಾಗಿ ಯಶಸ್ವೀ ಜೀವನಕ್ಕೆ ಆತ್ಮವಿಶ್ವಾಸವೇ ಕೀಲಿಕೈ. ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವಲ್ಲಿ ನಮ್ಮ ಅರಿವು, ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳುವುದು ಬಹುಮುಖ್ಯವಾದದ್ದು. ನಮ್ಮ ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಆತ್ಮವಿಶ್ವಾಸ ಮೂಡಿಸಿಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಉತ್ತಮ ಪುಸ್ತಕಗಳನ್ನು ಓದುವ ಮೂಲಕ, ಸದ್ಗುರುಗಳ ಮಾರ್ಗದರ್ಶನದಿಂದ, ಪರ್ಯಟನೆಗಳಿಂದ, ಉತ್ತಮ ಕೇಳುಗರಾಗುವ ಮೂಲಕ ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬಹುದು. ಇಂದಿನ ಆಧುನಿಕ ವಿದ್ಯುನ್ಮಾನ ಮಾಹಿತಿ ಯುಗದಲ್ಲಿ ಕುಳಿತಲ್ಲಿಯೇ ನಮ್ಮ ಜ್ಞಾನ ಹೆಚ್ಚಿಸಿಕೊಳ್ಳಲು ಅನೇಕ ಸೌಲಭ್ಯಗಳಿದ್ದು ಅವುಗಳ ಪ್ರಯೋಜನವನ್ನು ನಾವು ಪಡೆಯಬಹುದು.

**ಆಲೋಚನೆ ಬದಲಾಯಿಸಿಕೊಂಡರೆ ಬದುಕು ಬದಲಾಗುತ್ತದೆ :**

ನಮ್ಮ ಆಲೋಚನೆಗಳೇ ನಮ್ಮ ಬದುಕನ್ನು ರೂಪಿಸುತ್ತವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ನಾವು ಇಂದು ಏನಾಗಿದ್ದೇವೆಯೋ ಅದು ನೆನ್ನೆಯ ನಮ್ಮ ಆಲೋಚನೆಗಳಿಂದ ಬಂದಿವೆ. ನಮ್ಮ ಪ್ರಸ್ತುತ ಆಲೋಚನೆಗಳು ನಾಳೆ ನಮ್ಮ ಜೀವನವನ್ನು ನಿರ್ಮಿಸುತ್ತವೆ ಎಂಬುದು ನಮ್ಮ ಗಮನದಲ್ಲಿರಲಿ. ನಮ್ಮ ಜೀವನವು ನಮ್ಮ ಮನಸ್ಸಿನ ಸೃಷ್ಟಿಯಾಗಿದೆ. ಆದ್ದರಿಂದ ಸರಿಯಾದ ದಿಕ್ಕಿನಲ್ಲಿ ಆಲೋಚಿಸಿ ಸರಿಯಾದ ಸಮಯಕ್ಕೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವುದರಿಂದ ಜೀವನ ಸುಗಮವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಸ್ವಾಮಿ ವಿವೇಕಾನಂದರ ನುಡಿಯೊಂದು ಬಹಳ ಪ್ರಸಿದ್ಧವಾಗಿದೆ. 'ನಿಮ್ಮ ಆಲೋಚನೆಯಂತೆ ನೀವಾಗುತ್ತೀರಿ. ನಿಮ್ಮನ್ನು ನೀವು ಋಷಿಗಳೆಂದು ನಂಬಿದರೆ ನೀವು ನಾಳೆ ಋಷಿಗಳೇ ಆಗುತ್ತೀರಿ'.

**ದೊಡ್ಡ ಕನಸುಗಳನ್ನು – ಗುರಿಗಳನ್ನು ಇಟ್ಟುಕೊಳ್ಳೋಣ:**

ಬದುಕು ಅರ್ಥಪೂರ್ಣವಾಗಲು ನಾವು ಕನಸು ಕಾಣುವುದು, ಗುರಿಯಿಟ್ಟುಕೊಂಡು ಅದರೆಡೆಗೆ ನಿರಂತರ ಪ್ರಯತ್ನ ಮಾಡುವುದು ಅವಶ್ಯಕ. ಹಾಗಾದಾಗ ಮಾತ್ರ ನಾವು ಬದುಕಿನಲ್ಲಿ ನಿರೀಕ್ಷಿತ ಫಲಿತಾಂಶ ಕಾಣಲು ಸಾಧ್ಯ ಮತ್ತು ಬದುಕಿಗೆ ಶಿಸ್ತು, ಬದ್ಧತೆ ಬರುತ್ತದೆ.

ಭಾರತದ ಕ್ಷಿಪಣಿ ಮನುಷ್ಯ ಎಂದೇ ಖ್ಯಾತರಾದ ಅಬ್ದುಲ್ ಕಲಾಂ 'ನಿಮ್ಮ ಜೀವನದಲ್ಲಿ ದೊಡ್ಡ ಗುರಿಗಳನ್ನು ಇರಿಸಿಕೊಳ್ಳಿ ದೊಡ್ಡ ಕನಸುಗಳನ್ನು ಕಾಣಿ.' ಎಂದು ಯುವ ಜನತೆಗೆ ಕರೆ ನೀಡುತ್ತಾರೆ. 'ನಿರಂತರವಾಗಿ ನೀನು ಕನಸು ಕಾಣು. ನಿನ್ನ ಎಲ್ಲ ಕನಸುಗಳು ನಿನ್ನ ಯೋಚನೆಗಳಾಗಿ ಒಂದಲ್ಲ ಒಂದು ದಿನ ನನಸಾಗೇ ಆಗುತ್ತವೆ' ಎನ್ನುವ ಕಲಾಂ ಅವರು 'ನಿದ್ರಿಸುವಾಗ ಕಾಣುವುದು ಕನಸಲ್ಲ, ಬದಲಿಗೆ ಯಾವುದು ನಿಮ್ಮನ್ನು ಮಲಗಲು ಬಿಡುವುದಿಲ್ಲವೋ ಅದೇ ನಿಜವಾದ ಕನಸು' ಎನ್ನುತ್ತಾರೆ. ಕನ್ನಡದ ಖ್ಯಾತ ನಟ ದಿವಂಗತ ಶಂಕರ್ ನಾಗ್ 'ಭಗವಂತನು ಪ್ರತಿಯೊಬ್ಬನಿಗೂ ಒಂದು ಕ್ಯಾನ್ವಾಸ್ ಕೊಟ್ಟಿರುತ್ತಾನೆ. ಅಲ್ಲಿ ನೀವು ದೊಡ್ಡ ವಿಮಾನವನ್ನು ಬರೆದುಕೊಳ್ಳಿ' ಎಂದು ಹೇಳುತ್ತಿದ್ದರಂತೆ. ಇದರ ಅರ್ಥ ನಮ್ಮ ಬದುಕಿನಲ್ಲಿ ಗುರಿ ದೊಡ್ಡದಿರಬೇಕು. ಆಗ ಮನುಷ್ಯನು ನಿರಂತರವಾಗಿ ತನ್ನ ಗುರಿ ತಲುಪಲು ಪ್ರಯತ್ನಿಸುವನು. ಅವನ ಬದುಕು ಕ್ರಿಯಾಶೀಲವಾಗಿರುವುದು.

**ಕಠಿಣ ಪರಿಶ್ರಮ:**

ನಾವು ಜೀವನದಲ್ಲಿ ಯಶಸ್ಸನ್ನು ಕಾಣಬೇಕಾದರೆ ಗುರಿಯಿಟ್ಟುಕೊಳ್ಳುವುದು ಹೇಗೆ ಅವಶ್ಯಕವೋ ಹಾಗೇ ಅವುಗಳನ್ನು ಸಾಧಿಸಲು ಅದರೆಡೆಗೆ ನಿರಂತರ ಕಠಿಣ ಪರಿಶ್ರಮ ಹಾಕುವುದೂ ಅತ್ಯವಶ್ಯಕ. ಆದ್ದರಿಂದಲೇ ಜಗಜ್ಯೋತಿ ಬಸವಣ್ಣನವರು ವಿಶಾಲವಾದ ಅರ್ಥದಲ್ಲಿ 'ಕಾಯಕವೇ ಕೈಲಾಸ' ಎಂದರು. ನಮ್ಮ ನಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ಪ್ರೀತಿಯಿಂದ ಶ್ರದ್ಧೆಯಿಂದ ಮಾಡಿದರೆ ನಮಗೆ ಬದುಕಿನಲ್ಲಿ ಗೆಲುವು ಕಟ್ಟಿಟ್ಟ ಬುತ್ತಿ. ವಿದ್ಯಾರ್ಥಿಯೊಬ್ಬ ತಾನು ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಬೇಕೆಂದು ಕನಸು ಕಂಡರಷ್ಟೇ ಸಾಲದು ಅದಕ್ಕಾಗಿ ಅವನು ಶ್ರಮವಹಿಸಿ ಯೋಜಿಸಿ ಅಂದಂದಿನ ಪಾಠವನ್ನು ಅಂದೇ ಓದಿ ಸಜ್ಜಾಗಬೇಕಾಗುತ್ತದೆ. ಎರಡು ಸಾವಿರಕ್ಕೂ ಹೆಚ್ಚು ಯಂತ್ರಗಳನ್ನು ಕಂಡುಹಿಡಿದು ಅಸಾಧಾರಣ ವಿಜ್ಞಾನಿ ಎನಿಸಿಕೊಂಡ ಥಾಮಸ್ ಆಲ್ವಾ ಎಡಿಸನ್ 'ಆವಿಷ್ಕಾರಗಳು ಆಕಸ್ಮಿಕಗಳಲ್ಲ. ಅವು ನಿರಂತರ ಪರಿಶ್ರಮಕ್ಕೆ ಒಲಿದ ವರಗಳು' ಎನ್ನುತ್ತಾನೆ. ಸತತ ಪರಿಶ್ರಮ ಮತ್ತು ಸಫಲತೆ ಇವೆರಡೂ ಪರಸ್ಪರ ಪೂರಕವಾಗಿರುತ್ತವೆ. ದೇವರು ಯಾರಿಗೆ ಸಹಾಯ ಮಾಡುತ್ತಾನೆಂದರೆ ಯಾರು ಕಠಿಣ ಪರಿಶ್ರಮಿಗಳಾಗಿರುವರೋ ಅವರಿಗೆ ಮಾತ್ರ. ಹಾಗಾಗಿಯೇ 'ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ' ಎಂಬ ಪ್ರಸಿದ್ಧ ಚಲನಚಿತ್ರ ಗೀತೆ ಸದಾ ಕಾಲಕ್ಕೂ ಪ್ರಸ್ತುತವೆನಿಸುತ್ತದೆ.

**ಸರಿಯಾದ ಯೋಜನೆ:**

ಯಾವುದೇ ಒಂದು ಕಾರ್ಯ ಸಾಧಿಸಲು ನಾವು ಯೋಜಿತ ರೀತಿಯಲ್ಲಿ ಪರಿಶ್ರಮ ಹಾಕಿದರೆ ನಾವು ಹಾಕಿಕೊಂಡ ಗುರಿಗಳನ್ನು ಬಹಳ ಸುಲಭವಾಗಿ ಮತ್ತು ಪರಿಣಾಮ ಕಾರಿಯಾಗಿ ಮುಟ್ಟಲು ಸಾಧ್ಯವಾಗುತ್ತದೆ. ಇಲ್ಲೊಂದು ಸಣ್ಣ ಕಥೆ ತಿಳಿಸುವುದು ಪ್ರಸ್ತುತವೆನಿಸುವುದು. ಒಬ್ಬ ಮರ ಕಡಿಯುವವ ತನ್ನ ಕೊಡಲಿಯಿಂದ ಮರ ಕಡಿಯುತ್ತಿದ್ದ. ಘಂಟೆಗಟ್ಟಲೆ ಕಳೆದರೂ ಅಪಾರ ಶ್ರಮವಹಿಸುತ್ತಿದ್ದರೂ ಅವನು ಮರದ ಸ್ವಲ್ಪ ಭಾಗ ಮಾತ್ರ ಕಡಿದಿದ್ದ. ಇದ್ದಕ್ಕಿದ್ದಂತೆ ಅವನಿಗೆ ಏನೋ ಹೊಳೆದಂತಾಯಿತು. ತಕ್ಷಣ ಅವನು ತನ್ನ ಕೊಡಲಿಯನ್ನು ಅಲ್ಲಿಯೇ ಬಿದ್ದಿದ್ದ ಕಲ್ಲ ಮೇಲೆ ಉಜ್ಜಿ ಮೊನಚಾಗಿಸಿದ. ಅನಂತರ ಮತ್ತೆ ತನ್ನ ಕೆಲಸ ಮುಂದುವರೆಸಿದ. ಈಗ ಕೊಡಲಿ ಬಹಳ ಚೂಪಾಗಿದ್ದರಿಂದ ಮೊದಲಿನಷ್ಟು ಕಷ್ಟವಿಲ್ಲದೆ, ಹೆಚ್ಚು ಸಮಯವನ್ನೂ ತೆಗೆದುಕೊಳ್ಳದೆ  ನಿಗದಿತ ಸಮಯದಲ್ಲಿ ಮರ ಕಡಿದು ಮುಗಿಸಿದ. ಇದರ ಅರ್ಥವೇನೆಂದರೆ ಸರಿಯಾದ ಸಮಯಕ್ಕೆ ಕೆಲಸವನ್ನು ಯೋಜಿಸಿ ಮಾಡುವುದರಿಂದ ನಾವು ನಿಗದಿತ ಗುರಿಯನ್ನು ಸುಲಭವಾಗಿ ತಲುಪಬಹುದು. ಇದು ಜೀವನದ ಎಲ್ಲಾ ಹಂತಗಳಿಗೂ ಅನ್ವಯ. ಯಾರು ತಮ್ಮ ಕೆಲಸಗಳನ್ನು ಯೋಜಿಸಿ ಮಾಡುತ್ತಾರೋ ಅವರು ನಿಶ್ಚಿತವಾಗಿ ಗೆಲುವು ಸಾಧಿಸುತ್ತಾರೆ. ಮೇಲಿನ ವಿದ್ಯಾರ್ಥಿಯ ಉದಾಹರಣೆಯನ್ನೇ ನಾವು ಮತ್ತೆ ತೆಗೆದುಕೊಳ್ಳುವುದಾದರೆ ಆ ವಿದ್ಯಾರ್ಥಿ ತಾನು ಇಟ್ಟುಕೊಂಡಿರುವ ಅಧಿಕ ಅಂಕ ಗಳಿಸಬೇಕೆಂಬ ಗುರಿಯನ್ನು ಸಾಧಿಸಲು ಮೊದಲಿನಿಂದಲೂ ಅಂದಂದಿನ ಪಾಠಗಳನ್ನು ಅಂದೇ ವಿಷಯವಾರು ಸಮಯ ನಿಗದಿಪಡಿಸಿಕೊಂಡು ಓದಿ ಮುಗಿಸುವ ಯೋಜನೆ ಮಾಡಿಕೊಂಡರೆ, ಅವನು ತನ್ನ ಗುರಿಯನ್ನು ಬಹಳ

ಸುಲಭವಾಗಿ ತಲುಪಬಲ್ಲ. ಯೋಜನೆ ಎಂಬುದು ಜೀವನದ ಪ್ರತಿ ವಿಷಯದಲ್ಲೂ ನಮಗೆ ನೆರವಾಗುತ್ತದೆ. ಜೀವನದಲ್ಲಿ ವೃದ್ಧಾಪ್ಯ ಕಾಲದ ಆಸರೆಗಾಗಿ ಇಂದಿನಿಂದಲೇ ಹಣ ಉಳಿಸುವುದು ಯೋಜನೆಯ ಭಾಗವೇ ಆಗಿದೆ. ಪರಿಶ್ರಮದೊಂದಿಗೆ ಯೋಜನೆ ಕೂಡಿದರೆ ಅದ್ಭುತ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ.

**ಸಕಾರಾತ್ಮಕ ಮನೋಭಾವ:**

ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಚರಿತ್ರೆಯನ್ನು ಗಮನಿಸಿದಾಗ ನಮಗೆ ತಿಳಿದು ಬರುವ ಅಂಶವೇನೆಂದರೆ ಆತ ತನ್ನ ಜೀವನದ ಎಂತಹ ಸಂಕಷ್ಟದ ಸಮಯದಲ್ಲೂ ನಿರಾಸೆ ಹೊಂದದೆ ಆಶಾವಾದಿಯಾಗಿ ತನ್ನ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿರುತ್ತಾನೆ. ಇದನ್ನೇ ನಾವು ಸಕಾರಾತ್ಮಕ ಮನೋಭಾವ ಎನ್ನುವುದು. ಉತ್ತಮ ಮತ್ತು ಅನುಕೂಲಕರ ಫಲಿತಾಂಶಗಳನ್ನು ನಿರೀಕ್ಷಿಸುವ ಮಾನಸಿಕ ಮತ್ತು ಭಾವನಾತ್ಮಕ ಮನೋಭಾವವೇ ಸಕಾರಾತ್ಮಕ ಮನೋಭಾವವಾಗಿದೆ. ಸಕಾರಾತ್ಮಕ ಮನೋಭಾವವುಳ್ಳವರು ಯೋಜನೆಗಳು ನಿರೀಕ್ಷಿತ ರೀತಿಯಲ್ಲಿ ಮುಂದುವರೆಯದಿದ್ದಾಗ ನಿರುತ್ಸಾಹಗೊಳ್ಳುವುದಿಲ್ಲ. ಸೋಲೊಪ್ಪಿಕೊಳ್ಳದೆ ಗೆಲುವು ಸಿಗುವವರೆಗೆ ಮತ್ತೆ ಮತ್ತೆ ಪ್ರಯತ್ನಿಸುತ್ತಲೇ ಇರುತ್ತಾರೆ. ತಮ್ಮ ಈ ನಿರಂತರ ಯತ್ನಗಳಿಂದ ಒಂದಲ್ಲ ಒಂದು ದಿನ ತಾವು ಅಂದುಕೊಂಡಿದ್ದನ್ನು ಸಾಧಿಸುತ್ತಾರೆ. ಪ್ರಯತ್ನಿಸಿದರೆ ನಾವೂ ಈ ರೀತಿಯ ಸಕಾರಾತ್ಮಕ ಮನೋಭಾವ ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬಹುದು.

**ನಮ್ಮನ್ನು ನಾವು ಅಪ್ಡೇಟ್ ಮಾಡಿಕೊಳ್ಳೋಣ:**

ಇದು ಸ್ಪರ್ಧಾತ್ಮಕ ಯುಗ. ಇಲ್ಲಿ ಅತ್ಯಂತ ಸಮರ್ಥನಾದವನು ಮಾತ್ರ ಉಳಿಯುತ್ತಾನೆ ಬೆಳೆಯುತ್ತಾನೆ. ಹಾಗಾಗಿ ನಾವು ನಮ್ಮ ದೇಹ, ಮನಸ್ಸನ್ನು ಆರೋಗ್ಯವಾಗಿಟ್ಟುಕೊಂಡು ನಮ್ಮ ಬುದ್ಧಿಶಕ್ತಿಯನ್ನು, ಜ್ಞಾನವನ್ನು, ತಿಳುವಳಿಕೆಯ ಮಟ್ಟವನ್ನು ನಮ್ಮಲ್ಲಿರುವ ಕೌಶಲ್ಯಗಳನ್ನು ನಿರಂತರವಾಗಿ ವೃದ್ಧಿಸಿಕೊಳ್ಳುತ್ತಾ ಸಾಗಬೇಕು. ಇದು ನಮ್ಮ ವ್ಯಕ್ತಿತ್ವವನ್ನು ಮತ್ತಷ್ಟು ಸುಧಾರಿಸಿಕೊಳ್ಳಲು ಅವಕಾಶ ಮಾಡಿಕೊಡುವುದರ ಜೊತೆಗೆ ನಮಗೆ ಸದಾವಕಾಶಗಳ ಬಾಗಿಲನ್ನು ತೆರೆದು ನಮ್ಮ ಜೀವನಮಟ್ಟ ಸುಧಾರಣೆಗೂ ಅವಕಾಶ ಕಲ್ಪಿಸುತ್ತದೆ. ಇದಕ್ಕೊಂದು ಸರಳ ಉದಾಹರಣೆ ನೀಡುವುದಾದಾರೆ ಆಂಗ್ಲ ಭಾಷಾ ಶಿಕ್ಷಕನೊಬ್ಬ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆ ಪಾಠ ಮಾಡುವನೆಂದರೆ ಅದು ಸಾಮಾನ್ಯ ವಿಷಯ. ಆದರೆ ಆತ ಆಂಗ್ಲ ಭಾಷೆಯನ್ನು ಕಲಿಸುವದರೊಂದಿಗೆ ಆಂಗ್ಲ ಭಾಷೆಯನ್ನು ಅಂದವಾಗಿ ಬರೆಯುವ ಕ್ಯಾಲಿಗ್ರಫಿ ಕಲಿತು ಅದನ್ನು ತನ್ನ ವಿದ್ಯಾರ್ಥಿಗಳಿಗೆ ಕಲಿಸುವನೆಂದರೆ ಆತ ತನ್ನ ಕೌಶಲ್ಯವನ್ನು ಹೆಚ್ಚಿಸಿಕೊಂಡು ಅಪ್ಡೇಟ್ ಆಗಿದ್ದಾನೆ ಎಂದರ್ಥ. ಇಂತಹ ಶಿಕ್ಷಕನಿಗೆ ಸಹಜವಾಗಿಯೇ ವೃತ್ತಿಯಲ್ಲಿ ಹೆಚ್ಚು ಉತ್ತಮ ಅವಕಾಶಗಳು ಸಿಗುತ್ತವೆ. ಹೀಗಾಗಿ ಸರಳವಾಗಿ ಹೇಳುವುದಾದರೆ ಅಪ್ಡೇಟ್ ಆಗುವುದು ಎಂದರೆ ಅಪ್ ಗ್ರೇಡ್ ಆಗುವುದೇ ಆಗಿದೆ!

**ನಗುವಿನೊಂದಿಗೆ ಬದುಕನ್ನು ಸಂಭ್ರಮಿಸೋಣ:**

ನಾವು ಪಡೆದಿರುವ ಈ ಬದುಕು ಅತ್ಯಮೂಲ್ಯವಾದದ್ದು. ನಗುತ್ತಾ ಬಾಳಿದರೂ ಸರಿದು ಹೋಗುತ್ತದೆ, ಅಳುತ್ತಾ ಬಾಳಿದರೂ ಸರಿದು ಹೋಗುತ್ತದೆ. ನಾವೇಕೆ ನಗುತ್ತಾ ಬಾಳುವುದನ್ನೇ ಆರಿಸಿಕೊಳ್ಳಬಾರದು! ಜಗವನ್ನೇ ಬೆಳಗುವ ಸೂರ್ಯನೂ ಕೂಡ ಸಂಜೆಯಾಗುತ್ತಿದ್ದಂತೆ ಅಸ್ತಮಿಸಿ ಬಿಡುತ್ತಾನೆ. ಜೀವನವೇ ಸುಖ ದುಃಖಗಳ ಹೂರಣ. 'ನೋವಿಲ್ಲದ ಮನವಿಲ್ಲ ಸಾವಿಲ್ಲದ ಜೀವವಿಲ್ಲ'. ಆದ್ದರಿಂದ ಸುಖದುಃಖಗಳನ್ನು ಸಮಭಾವದಿಂದ ಸ್ವೀಕರಿಸಬೇಕು. ಬದುಕಿನಲ್ಲಿ ಬರುವ ಕಷ್ಟ ನಷ್ಟಗಳಿಗೆ ಅಳುತ್ತಾ ಕೂರುವುದರಲ್ಲಿ ಯಾವುದೇ ಅರ್ಥವಿಲ್ಲ. ಗೆದ್ದಾಗ ಬೀಗದೆ – ಬಿದ್ದಾಗ ಕುಗ್ಗದೆ ಸಮಚಿತ್ತದಿಂದ ಇರುವುದನ್ನು ರೂಢಿಸಿಕೊಳ್ಳೋಣ.

ಈ ನಿಟ್ಟಿನಲ್ಲಿ ಆಧ್ಯಾತ್ಮಿಕ ಅರಿವಿನ ಬೆಳಕು ನಮ್ಮೊಂದಿಗಿರಲಿ. 'ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಭಗವದ್ಗೀತೆಯ ಪ್ರಸಿದ್ಧ ಶ್ಲೋಕದಂತೆ ಫಲಾಫಲದ ಬಗ್ಗೆ ಚಿಂತಿಸದೆ ನಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಬದುಕು ಸಾಗಿಸೋಣ.

'ಹಿಂದೆ ಆಗಿರುವುದೆಲ್ಲವೂ ಒಳ್ಳೆಯದಕ್ಕೆ, ಮುಂದೆ ಆಗುವುದೂ ಒಳ್ಳೆಯದಕ್ಕೆ, ಹಾಗೂ ಈಗ ಆಗುತ್ತಿರುವುದೂ ಒಳ್ಳೆಯದಕ್ಕೆ' ಎಂಬ ತತ್ವದಲ್ಲಿ ನಂಬಿಕೆಯಿಡೋಣ. 'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸವಾಣಿಯಂತೆ ಈಸಬೇಕು ಹಾಗೂ ಇದ್ದು ಜೈಸಬೇಕಿದೆ. ನಾವು ಬಾಳುವುದರೊಂದಿಗೆ ನಾಲ್ಕು ಜನಕ್ಕೆ ಉಪಕಾರಿಯಾಗಿ ಬದುಕುವುದರಲ್ಲೇ ಜೀವನದ ಸಾರ್ಥಕತೆಯೂ ಅಡಗಿದೆ ಎಂಬುದನ್ನು ಅರಿತುಕೊಳ್ಳೋಣ. ಬದುಕಿನಲ್ಲಿ ಸಂಭ್ರಮಿಸುವುದಲ್ಲ, ನಮ್ಮ ಬದುಕೇ ಒಂದು ಸಂಭ್ರಮವಾಗಿ ಬಿಡಲಿ ಎಂಬ ದೃಷ್ಟಿಕೋನ ಬೆಳೆಸಿಕೊಂಡರೆ ನಮ್ಮ ಜೀವನವೇ ಒಂದು ಮಹಾಪರ್ವ ಆಗಿಬಿಡುವುದು. ಈ ದಿಕ್ಕಿನಲ್ಲಿ ಮೇಲೆ ತಿಳಿಸಿದ ಅಂಶಗಳು ನಮಗೆ ದಾರಿದೀಪವಾಗಬಲ್ಲವು. ಇವುಗಳನ್ನು ಅಳವಡಿಸಿಕೊಂಡು ಬದುಕನ್ನೇ ಸಂಭ್ರಮ ಮಾಡಿಕೊಳ್ಳುವತ್ತ ನಾವಿಂದಿನಿಂದಲೇ ಹೆಜ್ಜೆ ಹಾಕೋಣವೇ ಸ್ನೇಹಿತರೇ!



**ಎಸ್.ಎಲ್. ವರಲಕ್ಷ್ಮೀ ಮಂಜುನಾಥ್**
9945653784.

# ಸಂಘದಿಂದ ವಾರ್ಷಿಕ ಒಂದು ದಿನದ ಪ್ರವಾಸಗಳನ್ನು ಕೈಗೊಂಡ ಸಂದರ್ಭ









## ಸಂಘದಿಂದ ವಾರ್ಷಿಕ ಒಂದು ದಿನದ ಪ್ರವಾಸಗಳನ್ನು ಕೈಗೊಂಡ ಸಂದರ್ಭ







## ಸಂಘದಿಂದ ವಾರ್ಷಿಕ ಒಂದು ದಿನದ ಪ್ರವಾಸಗಳನ್ನು ಕೈಗೊಂಡ ಸಂದರ್ಭ









# ತನಾಂತರಂಗ



ನಮ್ಮ "ತನ" ಗಳ ಬಗ್ಗೆ ಹಾಗೇ ಯೋಚಿಸುತ್ತಿದ್ದೆ. ಈ ಬಗ್ಗೆ ಹಿಂದೆಯೂ ಅನೇಕ ಬಾರಿ ಬರದಿದ್ದೂ ಇದೆ. ಆದರೂ ಇಂಥಾ ಗಂಭೀರ ವಿಚಾರಗಳು ತಲೆ ಕೂದಲುಗಳು ಉದುರಿಬಿಡುವಷ್ಟು ಬಿಸಿಯಾಗಿ ತಲೆಯೊಳಗೆ ತೂರಿ ಬಂದುಬಿಡುತ್ತವೆ. ಹೀಗಾಗಿ ತಲೆಯ ಹೊರಗಿರುವುದನ್ನು ಉಳಿಸಿಕೊಳ್ಳಬೇಕಾದರೆ ತಲೆಯ ಒಳಗಿರುವುದನ್ನು ತಕ್ಷಣ ಹೊರಹಾಕಲೇಬೇಕಾದ ಅನಿವಾರ್ಯವೂ ಇತ್ತು. ತಲೆಯೊಳಗೆ ಏನಾದರೂ ಬರಲಿ. ಬಂದದ್ದೆಲ್ಲಾ ಬರವಣಿಗೆಗೂ ಬರಲಿ, ಆದರೆ ಶ್ರೀವಾಣಿಯ ವಿಶೇಷ ದಯವಂತೂ ಇರಲಿ. ಈಗ ವಿಷಯಕ್ಕೆ ಬರೋಣ.

ತನಗಳ ತಾಣವೇ ತನುವಿನೊಳಗಿನ ಮನ. ಸಾಧಕರಿಗದೇ ತಾನೇ ತಪೋವನ? ಅದೇ ತಾನೇ ಚಿಂತಕರ, ಸಂಶೋಧಕರ ಅನ್ವೇಷಣಾ ತಾಣ? ಅದರಲ್ಲೂ ತನ್ನದೇ ತನುವಿನೊಳಗಿರುವ ತನುವಾದ ತಾಣವಾದ ಮನಸ್ಸಿನಲ್ಲಿ, ಎಂದು ಕುತೂಹಲಿ ಮಾನವನ ಚಿಂತನಾ ತರಂಗಗಳಲ್ಲಿ ವಿಶೇಷ ವಿಷಯಗಳ ವಿಷದವಾದ ಯಾದಿಯು ತಯಾರಾಗಿಬಿಟ್ಟಿತೋ ಅಂದೇ ತನ್ನ ದೃಷ್ಟಿಯುಲ್ಲಿ ತನಗನುಕೂಲವೆನಿಸಿದ ತನ್ನತನಗಳೂ ಸೃಜಿತಗೊಂಡು ಸ್ಥಾಪಿತವಾಗಿಬಿಟ್ಟಿದ್ದುವು. ತನಗೆ ಅನುಕೂಲ ಸಿಂಧುವೆನಿಸುವ ತನ್ನತನಗಳ ಭಾವಗಳು ಮಾನವ ಸಹಜವೇನೋ ಎಂದು ಅಂದುಕೊಳ್ಳುವಷ್ಟು ಸಹಜ ವೆನಿಸಿಬಿಟ್ಟಿತ್ತು. ಅವೇ ಜನ್ಮಜಾತ ಸ್ವಭಾವಗಳೇನೋ ಎಂದು ಭಾವಿಸಿಕೊಳ್ಳುವಷ್ಟು ಶಕ್ತ ನಂಬುಗೆಯ ಮೂಲಧಾತುವೇ ಆಗಿಬಿಟ್ಟಿತ್ತೆನ್ನಬಹುದು. ಸ್ವೋಪಜ್ಞತೆ, ಅಸ್ಮಿತೆಯೇ ಮೊದಲಾದ ಪದಗಳ ಅರ್ಥ ವ್ಯಾಖ್ಯಾನಗಳಿಗೆ ಸಮೀಪವೆನಿಸುವ ತನಗಳೆಂಬ ಸಹಜತೆಗಳು ಸಹಜವಾಗಿಯೇ ಮಾನವಸಹಜ ಸಿದ್ಧಾಂತಗಳಾಗಿಬಿಟ್ಟಿತು. ಜತೆಗೆ ಸಹಜತೆಗೆ ಫಲಸಿದ್ಧಿಯ ವಿವಿಧ ಸ್ವಾವ್ಯಾಖ್ಯಾನಗಳನ್ನು ಸೃಷ್ಟಿಸಿ ಸಾಧಿಸುವ ಪರಿಣಿತಿಯನ್ನೂ ನವಮಾನವನು ಸಿದ್ಧಿಸಿಕೊಂಡಿರುವುದಕ್ಕೆ ನಾವೇ ಪ್ರತ್ಯಕ್ಷ ಸಾಕ್ಷಿಯೆನ್ನಬೇಕು. ವಾಸ್ತವದಲ್ಲಿ ನನ್ನತನದ ಹಿಂದೆ ನನ್ನದು ಎಂಬ ಮದಭಾವವೋ ಅಥವಾ ಹೆಮ್ಮೆ ಪಡಬಹುದಾದ ಅಭಿಮಾನದ ಧ್ವನಿಯೋ ಇದ್ದಿರಲೂ ಬಹುದು. ಯಾವಾಗ ಮಾನವನು ತನ್ನದು ಎಂಬ ವಿಶೇಷವಾದ ಗುಣಭಾವದ ವಿಶೇಷಣಕ್ಕೆ ಮಾರುಹೋದನೋ ಅಂದೇ ತನ್ನತನಗಳ ವಿಶೇಷಕ್ಕೆ ತನ್ನದೇ ಆದ ವಿಶೇಷ ಮನ್ನಣೆಯೂ ಸಿದ್ಧವಾಗಿಬಿಟ್ಟಿರಬೇಕು. ಹಾಗೇ ತನ್ನತನಗಳಲ್ಲಿ ವೈವಿಧ್ಯತೆಯೂ ಸೃಷ್ಟಿಯಾಗಿರಬೇಕು. ತನ್ನ ತನ್ನತನಕ್ಕೆ ಸಿಗಬಹುದಾದ ಮನ್ನಣೆಯ ಆಸೆಗಾಗಿಯೋ ಅಥವಾ ತನ್ನತನವನ್ನು ದೈವದತ್ತ ಆತ್ಮಬಂಧುವೆಂದುಕೊಳ್ಳುವ ತೃಪ್ತಭಾವದ ಒಡೆತನಕ್ಕಾಗಿಯೂ ಮಾನವನು ತನ್ನ ತನ್ನತನವನ್ನು ಅಂತರಂಗದಲ್ಲಿ ಸೃಜಿಸಿ, ಬೆಳೆಸಿ ಪೋಷಿಸಿದ್ದಿರಲೂಬಹುದು. ಏನೇ ಆದರೂ ತನ್ನತನಗಳಿಗೆ ತನ್ನದೇ ಆದ ತರ ತಮಗಳ ಸೋಂಕು ಇದ್ದಿರಲೇಬೇಕು. ತರಗಳು ಇದ್ದಾಗಲೇ ತಮಗಳೂ ಇರುವುದು ತಾನೇ? ಅದೇನೇ ಇರಲಿ. ಕೋಟಿಕೋಟಿಗಟ್ಟಲೆ ನಿಃಶಬ್ದವಾಗಿಯೇ ನಿರಂತರವಾಗಿ ಹುಚ್ಚು ಹೊಳೆಯಂತೆ ಕಟ್ಟೆಯೊಡೆದು ನುಗ್ಗಿಬರುವ ಭಾವ ಪ್ರಕಾಶದ ಪ್ರಕಾಂಡತೆಗೆ ಬೆಚ್ಚಿಬೀಳುವ ಮನುಜರೆಷ್ಟೋ! ಅಂಥಾ ವಿಶೇಷ ಭಾವಪ್ರಕಾಶದ ಮಹಾಪೂರದಲ್ಲಿ ಹೆಚ್ಚು ಭಾವ ವಿಶೇಷಗಳು ನಮ್ಮ ತನು ಮನಗಳಿಗೆ ಅರಿವಿಲ್ಲದಂತೆಯೇ ಹರಿದುಹೋಗುವುದೂ ಉಂಟು. ಕೆಲವೊಮ್ಮೆ ಅಂಥ ರಭಸಪೂರ್ಣ ರಸದ ಹರಿಯುವಿಕೆಯು ಮಾನವರ ಸಹಾಯಕ್ಕೆ ಸದಾ ಸಿದ್ಧವಿರುವ ಪ್ರಕೃತಿದತ್ತ ಅವಶ್ಯಕತೆಯೂ ಆಗಿರಬಹುದು. ಹೀಗಾಗಿ ಪ್ರಬಲ ಸ್ಥಾಯೀಶಕ್ತಿಯಿರುವ ಭಾವಗಳಷ್ಟೇ ಮನದಲ್ಲಿ ಸ್ಥಿರವಾಗುಳಿದು ತನುವಿಗೋ ಮನಸಿಗೋ ಮುದವನ್ನೋ ಅಥವಾ ಅಮುದವನ್ನೋ ನೀಡಲು ಮುಂದಾಗುವುದು. ಅಂದರೆ ಭಾವಗಳಿಗೆ ಸ್ಥಾಯೀಶಕ್ತಿಯಿಂದ ಸ್ಥಿತಗೊಂಡ ಮನೋಭಾವಗಳು ಮನದಲ್ಲಿ ತನ್ನತನಗಳಾಗಿ ಜೀವ ಪಡೆದುಕೊಳ್ಳುವುದು. ಆದರೂ ಅವು ಮುದ ನೀಡಿದರೂ ಸರಿ ಅಮುದ ನೀಡಿದರೂ ಸರಿ ಅವುಗಳು ಅವಶ್ಯಕತೆಯಿದ್ದಲ್ಲಿ ಮಾತ್ರ ತನು, ಮನದ ತನ್ನತನವಾಗಿಬಿಡುವುದರಲ್ಲಿ ಆಶ್ಚರ್ಯವಿಲ್ಲ. ಏನೇ ಆದರೂ ಅಮುದವನ್ನೂ ತನ್ನ ಅನುಕೂಲಗಳಿಗೆ ಸುಖವೀವ ಸುಖೋನ್ಮಾದಗಳಾಗಿಸಿಕೊಳ್ಳುವ ಕಲೆ ನಮಗೆ ಕರಗತವಾಗಿ ಬಿಟ್ಟಿದೆಯಲ್ಲಾ! ಹೀಗೆ ಫಲಾಧಾರಿತವಾದ ಭಾವೋದ್ವೇಗಗಳೆಂಬ ತನಗಳು ಮಾನವೇಚ್ಛಿತವಾದ ತನ್ನತನವಾಗುತ್ತಿರುವುದನ್ನು ನಾವು ಗಮನಿಸುತ್ತಲೇ, ಜತೆಜತೆಗೇ ಅನುಭವಿಸುತ್ತಲೇ

ಬಂದಿದ್ದೇವೆ. ಎಷ್ಟೋ ಸಂದರ್ಭಗಳಲ್ಲಿ ತನ್ನತನಗಳು ಹೆಮ್ಮೆ ಪಡುವ ಸ್ವಾಭಿಮಾನದ ಮೂಲವೂ ಆಗಿರಬಹುದು ಅಥವಾ ಹೀನಾಭಿಮಾನದ ಮೂಲವೂ ಆಗಿರಬಹುದು. ಹೀಗಾಗಿಯೇ ತನ್ನತನಗಳು ತನಗಳ ಒಡೆಯರ ಉನ್ನತಿಗೋ ಅಥವಾ ಅವನತಿಗೋ ಕಾರಣವಾಗಬಲ್ಲ ಮೂಲದ್ರವ್ಯವೆಂದಾಯಿತು. ಹೀಗೆ ಎಷ್ಟೋ ಸಂದರ್ಭಗಳಲ್ಲಿ ಎಷ್ಟೋ ಅನ್ಯ ತನಗಳು ತನಗರಿವಿಲ್ಲದೇ ತನ್ನತನಗಳಾಗಿಬಿಟ್ಟು ತನ್ನ ಜೀವನಸಖ್ಯವನ್ನು ಸಾಧಿಸಿಬಿಡುವ ಅಪಾಯಗಳೂ ಇಲ್ಲದಿಲ್ಲ. ಹೀಗಾಗಿಯೇ ತಾನೂ ತನ್ನದು ಎಂಬ ಜೋಡಿಪದವು ಸೃಷ್ಟಿಯಾಗಿದ್ದಿರಬೇಕು. ಏಕೆಂದರೆ ತನ್ನತನ ಎಂದರೆ ತನ್ನದಾದ ವಸ್ತು ಎಂದು ಅಂದುಕೊಳ್ಳಬಹುದಾದುದು ತಾನೇ? ಏಕೆಂದರೆ ತನ್ನದು ತಾನೇ ತನ್ನೊಳಗೆ ಇದ್ದು ತನ್ನಷ್ಟಕ್ಕೆ ತಾನೇ ತನ್ನಿಷ್ಟದಿಂದಷ್ಟೇ ಉಳಿಯುವುದು? ಹೀಗೆ ಅನ್ಯತನಗಳು ತನ್ನತನಗಳಾಗುವ ಪ್ರಾಕೃತಿಕ ಕ್ರಿಯೆ, ಪ್ರಕ್ರಿಯೆಗಳನ್ನು ಗಮನಿಸಿದ್ದಾಯಿತು. ಇನ್ನು ತನ್ನತನದ ಸತ್ಯಾಂತರಂಗವನ್ನು ತಿಳಿಯಬೇಕಿದೆ. ಅಂತರಂಗದಲ್ಲಿ ಅರಳುವ ಭಾವಗಳು ವಾಸ್ತವದಲ್ಲಿ ಸ್ವಯಂಭೂವೆನಿಸುವ ಸೃಷ್ಟಿಯೇ. ಸೃಷ್ಟಿಯ ಸಮಯದಲ್ಲಿ ಅವಕ್ಕೆ ಫಲಪ್ರಾಪ್ತಿಯ ಬಗ್ಗೆ ಚಿಂತೆಯೇ ಇರುವುದಿಲ್ಲವೇನೋ? ಅಣೆಕಟ್ಟಿಲ್ಲದ ಹುಚ್ಚು ಹೊಳೆ ತಾನೇ ಈ ಭಾವಸಾಗರಗಳು? ಇಲ್ಲಿ ಹೇಳಲೇಬೇಕಾದ ಒಳ್ಳೆಯದೊಂದು ವಿಚಾರವೆಂದರೆ ಇಂಥಾ ಹುಚ್ಚು ಹೊಳೆಯ ನಿರೀಕ್ಷಿತ ಅಬ್ಬರಕ್ಕೆ ಬೊಬ್ಬಿರಿದು ತಡೆಯೊಡ್ಡುವ ಕಲೆಯಂತೂ ಮಾನವರಿಗೆ ಕರಗತವಾಗಿದೆ.

ನಮ್ಮ ಪೂರ್ವಜ ಜ್ಞಾನಿಗಳು ಅಣೆಕಟ್ಟಿನ ನಿರ್ಮಾಣಕ್ಕೆ ಅಗತ್ಯವೆನಿಸುವ ಅಸಂಖ್ಯಾತ ಶಾಸ್ತ್ರಾಧಾರಿತ ಸಲಕರಣೆಗಳನ್ನು ಸಿದ್ದಪಡಿಸಿ ಮಾನವಕುಲದ ಸರ್ವತೋಮುಖ ಪ್ರಗತಿಗೆ ಕೊಡುಗೆಯಾಗಿ ನೀಡಿದ್ದಾರೆ. ತಮ್ಮ ಮಕ್ಕಳು ಧರ್ಮಬದ್ಧ ನಡೆ ನುಡಿಗಳನ್ನಷ್ಟೇ ತನ್ನತನಗಳನ್ನಾಗಿಸಿಕೊಳ್ಳಬೇಕೆಂಬ ಸದ್ದಿರಾದೆಯಷ್ಟೇ ನಮ್ಮ ಹಿರಿಯರದು. ಏಕೆಂದರೆ ಸತ್ಯದ ಚಿತ್ತವಿದ್ದಾಗಲೇ ಮನೋವಮುದವು ಸ್ಥಾಪಿತವಾಗುವುದು. ತನ್ಮೂಲಕ ಆನಂದಕಾರಕವಾಗುವುದು ಎಂಬ ಸತ್ಯದ ಅರಿವು ಪೂರ್ವಜರ ಎದೆಗೆ ಬಿದ್ದ ಅನುಭವವೇದ್ಯ ಸತ್ಯವೇ ಆಗಿತ್ತು. ತಮ್ಮಂತೆಯೇ ತಮ್ಮ ಮಕ್ಕಳೂ ಧರ್ಮದಿಂದ ನಡೆಯುವಂತಾಗಬೇಕೆಂಬುದೇ ಅವರ ಏಕೈಕ ಹೆಬ್ಬಯಕೆಯಾಗಿದ್ದಂತೂ ಸತ್ಯ. ಅವರ ಬಯಕೆಗಳಿಗೆ ಸಾಕ್ಷಾತ್ಕಾರ ಲಭಿಸಿತೋ ಇಲ್ಲವೋ ಎಂಬ ಜಿಜ್ಞಾಸೆಗೆ ಅವರವರ ಸಕಾಲಿಕ ಅನುಭವಗಳೇ ಸೂಕ್ತವಾದ ಉತ್ತರ ಹೇಳಬಲ್ಲವು. ಏನಂತೀರಿ?



**ಸುದರ್ಶನ್ ಸುಬ್ಬರಾವ್**
9448253058



# ಅಮ್ಮಣ್ಣಮ್ಮ ವಿದ್ಯಾರ್ಥಿನಿಲಯ – ಸುಮಾರು 1950-60ರ ಕಾಲ

ಗುಂಜೂರ್‌ನಲ್ಲಿ ವಾಸವಾಗಿದ್ದ ಲಾಯರ್ ಶ್ರೀ ವೆಂಕಟರಮಣಯ್ಯರವರು ಬೃಹಚ್ಚರಣದ ಸಮುದಾಯದಲ್ಲಿ ಬಹು ಹೆಸರುವಾಸಿಯಾಗಿದ್ದರು ಹಾಗೂ ಕಿತ್ತಿಗಾನಹಳ್ಳಿಯ ಶ್ರೀನಿವಾಸ ದೇವಾಲಯದ ನಿರ್ಮಾಣದ ಕೃತಕರ್ತರು.

ಇವರು ತಮ್ಮ ಧರ್ಮಪತ್ನಿ ಅಮ್ಮಣ್ಣಮ್ಮ ಅವರ ಹೆಸರಿನಲ್ಲಿ ಗಾಣಿಗರ ಪೇಟೆಯಲ್ಲಿದ್ದ ಅವರದೇ ಗೃಹದಲ್ಲಿ ಬಡ ಬ್ರಾಹ್ಮಣ ವಿದ್ಯಾರ್ಥಿಗಳ ವ್ಯಾಸಂಗದ ಸಲುವಾಗಿ ಬೆಂಗಳೂರು ಶಾಲಾ ಕಾಲೇಜಿನಲ್ಲಿ ಓದಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯವನ್ನು ಉಚಿತವಾಗಿ ಯಾವುದೇ ಶುಲ್ಕವಿಲ್ಲದೆ ನಿಯೋಜಿಸಿದರು.

ಬೃಹಚ್ಚರಣರಲ್ಲದೆ ಇತರ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಸದರಿ ನಿಲಯವು ಕಲಿಕೆಯ ಕೇಂದ್ರವಾಗಿತ್ತು. ನಾನೂ ಸಹ ಅಲ್ಲಿನ ಸಹಪಾಠಿಗಳಿಂದ ಸಂಪರ್ಕ ಪಡೆದು 1953 ರಿಂದ 1958ರವರೆಗೆ ಈ ವಿದ್ಯಾರ್ಥಿನಿಲಯದ ಬೆಳವಣಿಗೆಯನ್ನು ಕಂಡು ಸಂತಸಗೊಂಡಿದ್ದೆ.

ಅಮ್ಮಣ್ಣಮ್ಮರವರ ಉದ್ದೇಶ್ಯವನ್ನು ಸಫಲಗೊಳಿಸಲು ಸಬ್ ಜಡ್ಜ್ ಶ್ರೀನಿವಾಸರವರ ನೇತೃತ್ವದಲ್ಲಿ ಗುಂಜೂರು ಶ್ರೀನಿವಾಸ ಮೂರ್ತಿ, ಆರ್. ವಿ. ನಂಜುಂಡಯ್ಯ, ಲಕ್ಷ್ಮಣಯ್ಯರ್ (ಆಡೇಸನ ಹಟ್ಟಿ), ಡಾ॥ ದಾನಪ್ಪ ಮತ್ತು ನನಗೆ ನೆನಪಿಲ್ಲದ ಇನ್ನೂ ಹಲವು ಬೃಹಚ್ಚರಣ ಬಂಧುಗಳ ಒಂದು TRUST ಸ್ಥಾಪನೆಯಾಯಿತು. ಇದರ ಉಸ್ತುವಾರಿಯಲ್ಲಿ ನಿಲಯ ನಡೆಸಲಾಯಿತು.

ಈ ಮನೆಯಲ್ಲಿಯೇ ಒಂದು ಕಡೆ ವಾಸವಾಗಿದ್ದ ಪದ್ಮಾವತಮ್ಮನವರು ಈ ಉಚಿತ ವಿದ್ಯಾರ್ಥಿನಿಲಯದ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದರು. ಇದರ ಆಡಳಿತ ಜವಾಬ್ದಾರಿ ಮತ್ತು ವಿದ್ಯಾರ್ಥಿಗಳ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದರು.

ನನಗೆ ಈ ಹಾಸ್ಟೆಲ್‌ನ ಒಡನಾಟವಿದ್ದ ಸಮಯದಲ್ಲಿ ನನ್ನ ಶಾಲೆಯ ಸಹಪಾಠಿಗಳಾದ ಬೈಯಪ್ಪನಹಳ್ಳಿ ಚಂದ್ರಶೇಖರ್ ಮತ್ತು ಯಮಲೂರಿನ ಆರ್. ಶಿವಶಂಕರ್ ಅಯ್ಯರ್‌ರವರು ಇದರ ಪ್ರಯೋಜನ ಪಡೆದು ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಓದುತ್ತಿದ್ದರು. ಈ ಕಾಲದಲ್ಲಿ ಸುಮಾರು ನೂರು ಬ್ರಾಹ್ಮಣ ವಿದ್ಯಾರ್ಥಿಗಳ ವಾಸ ಮತ್ತು ಕಲಿಕೆಗೆ ಉಪಯುಕ್ತವಾಯಿತು.

1962ರ ನಂತರ ಈ ಸಂಸ್ಥೆ ಮುಂದುವರಿಯದೇ ನಿಲುಗಡೆ ಕಂಡಿತು. ನಂತರವೂ ಪದ್ಮಾವತಮ್ಮರವರು ಈ ಗೃಹವನ್ನು ನೋಡಿಕೊಂಡಿದ್ದು ಕ್ರಮೇಣ ಈ ಆಸ್ತಿ ಓರ್ವ ಮಾರವಾಡಿ ಮಹನೀಯರಿಗೆ ಹಸ್ತಾಂತರಗೊಂಡಿತು.

ಹಾಗಾಗಿ ಅಮ್ಮಣ್ಣಮ್ಮ ವಿದ್ಯಾರ್ಥಿನಿಲಯ ಬೃಹಚ್ಚರಣ ಬಂಧುಗಳಿಗೆ ಇತಿಹಾಸವಾಗಿ ಈಗ ನೆನಪು ಮಾತ್ರ. ಈಗಿನ ಬೃಹಚ್ಚರಣರಿಗೆ ಈ ಲೇಖನದ ಮೂಲಕ ಅಮ್ಮಣ್ಣಮ್ಮ ವಿದ್ಯಾರ್ಥಿನಿಲಯದ ಮಾಹಿತಿಯನ್ನು ಹಂಚಿಕೊಳ್ಳುವುದೇ ಈ ಲೇಖನದ ಬಯಕೆ.




**ಜಿ.ಎಸ್. ಸತ್ಯಮೂರ್ತಿ**
9844469581



*With Best Compliments From*

**SURYANARAYANA B.S.**



**"Sai Eshwar"**
**#9D, 2nd Street, Car Street Cross**
**Halasuru, Bengaluru 56008**

# ಅರಣ್ಯಗಳು ಮತ್ತು ವನ್ಯಜೀವಿಗಳ ಸೌಂದರ್ಯ ಮತ್ತು ಪ್ರಾಮುಖ್ಯತೆ

ನಾನು ನನ್ನ ಕ್ಯಾಮೆರಾದೊಂದಿಗೆ ಅರಣ್ಯಕ್ಕೆ ಕಾಲಿಡುವ ಪ್ರತಿ ಬಾರಿಯೂ, ಕಾಡುಗಳು ಕೇವಲ ಮರಗಳ ಸಮೂಹಗಳಲ್ಲ – ಅವು ತಮ್ಮದೇ ಆದ ಜೀವಂತ, ಉಸಿರಾಡುವ ಪ್ರಪಂಚಗಳಾಗಿವೆ ಎಂದು ನನಗೆ ನೆನಪಾಗುತ್ತದೆ. ದಟ್ಟವಾದ ಮರಗಳ ಮೂಲಕ ನುಗ್ಗಿ ಬರುವ ಬೆಳಗಿನ ಬೆಳಕಿನ ಆಟ, ದೂರದಲ್ಲಿ ಕೇಳಿಬರುವ ಪಕ್ಷಿಗಳ ಕರೆ, ಎತ್ತರದ ಹುಲ್ಲಿನ ಮೂಲಕ ಕಾಡು ಪ್ರಾಣಿಗಳ ರಹಸ್ಯ ಚಲನೆ – ಪ್ರತಿ ಚೌಕಟ್ಟು ಸಮತೋಲನ, ಸ್ಥಿತಿಸ್ಥಾಪಕತ್ವ ಮತ್ತು ಸೌಂದರ್ಯದ ಕಥೆಯನ್ನು ಹೇಳುತ್ತದೆ.

ಕಾಡುಗಳನ್ನು ಸಾಮಾನ್ಯವಾಗಿ "ಭೂಮಿಯ ಶ್ವಾಸಕೋಶಗಳು" ಎಂದು ಕರೆಯಲಾಗುತ್ತದೆ. ಅವು ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುತ್ತವೆ, ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ ಮತ್ತು ಜಾಗತಿಕ ತಾಪಮಾನವನ್ನು ನಿಯಂತ್ರಿಸುತ್ತವೆ. ಆದರೆ ಅವುಗಳ ಪರಿಸರ ಪಾತ್ರವನ್ನು ಮೀರಿ, ಕಾಡುಗಳು ಜೀವನದ ತೊಟ್ಟಿಲುಗಳು – ಲೆಕ್ಕವಿಲ್ಲದಷ್ಟು ಪ್ರಾಣಿ ಮತ್ತು ಸಸ್ಯ ಪ್ರಭೇದಗಳ ಪರಿಪೂರ್ಣ ಸಾಮರಸ್ಯದಿಂದ ಸಹಬಾಳ್ವೆ ನಡೆಸುವ ಸಂಕೀರ್ಣ ವ್ಯವಸ್ಥೆಗಳಾಗಿವೆ.

ವನ್ಯಜೀವಿ ಛಾಯಾಗ್ರಾಹಕನಿಗೆ, ಪ್ರಕೃತಿಯಲ್ಲಾಗುವ ಪ್ರತಿಯೊಂದು ಸದ್ದು, ಚಿಲಿಪಿಲಿ ಮತ್ತು ಬೀಸು ಬದುಕುಳಿಯುವಿಕೆ ಮತ್ತು ಸಹಬಾಳ್ವೆಯ ಕ್ಷಣ ಮಧುರವಾದ ಸಂಗೀತವಾಗಿರುತ್ತದೆ. ಈ ಸುಂದರ ಕ್ಷಣಗಳನ್ನು ಕ್ಯಾಮೆರಾ ಮೂಲಕ ಸೆರೆಹಿಡಿಯುವುದು ಈ ಸುಂದರ ಭೂ ಗ್ರಹದ ಹೃದಯ ಬಡಿತವನ್ನು ಛಾಯಾಚಿತ್ರ ಮಾಡಿದಂತೆ ಭಾಸವಾಗಿರುತ್ತದೆ.

ಅತ್ಯಂತ ಚಿಕ್ಕ ಚಿಟ್ಟೆಯಿಂದ ಹಿಡಿದು ದೊಡ್ಡ ಆನೆಯವರೆಗೆ ಕಾಡಿನಲ್ಲಿರುವ ಪ್ರತಿಯೊಂದು ಪ್ರಾಣಿಯೂ ಪ್ರಕೃತಿಯ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪರಭಕ್ಷಕಗಳು (ಮಾಂಸಾಹಾರಿ) ಪ್ರಾಣಿಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿಡುತ್ತವೆ, ಸಸ್ಯಾಹಾರಿಗಳು ಸಸ್ಯವರ್ಗದ ಮಾದರಿಗಳನ್ನು ರಕ್ಷಿಸುತ್ತವೆ ಮತ್ತು ಕೊಳೆಯುವ ಪಳೆಯುಳಿಕೆಗಳು ಮಣ್ಣಿನಲ್ಲಿ ಬೆರೆತು ಮರುಬಳಕೆಗೆ ಯೋಗ್ಯವಾಗಿರುತ್ತದೆ. ಈ ನೈಸರ್ಗಿಕ ಚಟುವಟಿಕೆಗಳನ್ನು ನೋಡುವುದು ಭಾಗ್ಯವೇ ಸರಿ – ಆದರೆ ಮಾನವನಲ್ಲಿ ನಡೆಯದ ಈ ಎಲ್ಲಾ ಪುನರ್ಯೌವನಗೊಳಿಸುವ ಚಟುವಟಿಕೆಗಳು ನಾವು (ಮಾನವ) ಅವರ (ವನ್ಯಜೀವಿ) ಮನೆಯಲ್ಲಿರುವ ಕೇವಲ ಸಂದರ್ಶಕರು ಎಂದು ನೆನಪಿಸುತ್ತದೆ.

ಛಾಯಾಗ್ರಹಣವು ಈ ಜೀವಿಗಳ ಸೌಂದರ್ಯವನ್ನು ಮಾತ್ರವಲ್ಲದೆ ಅವುಗಳ ಸೂಕ್ಷ್ಮತೆಯನ್ನು ಸಹ ಗಮನಿಸಲು ಅವಕಾಶ ನೀಡುತ್ತದೆ. ಚಿರತೆ ಕೊಂಬೆಯ ಮೇಲೆ ವಿಶ್ರಾಂತಿ ಪಡೆಯುವುದು ಅಥವಾ ಆನೆ ತನ್ನ ಮರಿಯನ್ನು ರಕ್ಷಿಸುವುದು, ತನ್ನ ಮರಿಗಳಿಗೆ ಬೇಟೆಯಾಡುವ ಕೌಶಲ್ಯವನ್ನು ಕಲಿಸುತ್ತಿರುವ ಹುಲಿ, ತಮ್ಮ ಮರಿಗಳಿಗೆ ಆಹಾರ ನೀಡುವ ಪಕ್ಷಿಗಳು – ಇಂತಹ ಚಿತ್ರಗಳು ವೀಕ್ಷಕರಲ್ಲಿ ವನ್ಯಜೀವಿಗಳ ಬಗ್ಗೆ ಸಹಾನುಭೂತಿ ಮತ್ತು ಜಾಗೃತಿಯನ್ನು ಉಂಟುಮಾಡುತ್ತವೆ ಹಾಗೂ ಮಾನವ ಮತ್ತು ಕಾಡುಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ.

ಇಂದಿನ ಜಗತ್ತಿನಲ್ಲಿ, ಕಾಡುಗಳು ಕಣ್ಮರೆಯಾಗುತ್ತಿವೆ ಮತ್ತು ವನ್ಯಜೀವಿಗಳ ಆವಾಸಸ್ಥಾನಗಳು ಆತಂಕಕಾರಿ ವೇಗದಲ್ಲಿ ಕುಗ್ಗುತ್ತಿವೆ. ಅಕ್ರಮ ಬೇಟೆ, ಅರಣ್ಯನಾಶ, ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯು ಸೂಕ್ಷ್ಮವಾದ ಜೀವ ಜಾಲಕ್ಕೆ ಬೆದರಿಕೆ ಹಾಕುತ್ತವೆ.

ಮಾನವರಾಗಿ, ವನ ಹಾಗೂ ವನ್ಯಜೀವಿಗಳನ್ನು ರಕ್ಷಿಸುವಲ್ಲಿ ನಮಗೆ ಪ್ರಮುಖ ಪಾತ್ರವಿದೆ. ಛಾಯಾಗ್ರಾಹಕರಾಗಿ ಪ್ರತಿಯೊಂದು ಚಿತ್ರವೂ ಸಂರಕ್ಷಣೆಯ ಮೂಕ ರಾಯಭಾರಿಯಾಗುತ್ತದೆ, ಉಳಿದಿರುವ ಅರಣ್ಯ ಸಂಪತ್ತನ್ನು ರಕ್ಷಿಸುವಂತೆ ಜನರನ್ನು ಪ್ರೇರೇಪಿಸುವುದು ಮತ್ತು ಶಿಕ್ಷಣ ನೀಡುವುದು ತಕ್ಷಣದ ಕರ್ತವ್ಯವಾಗಿದೆ.

ಒಂದು ಛಾಯಾಚಿತ್ರವು ಗ್ರಹಿಕೆಗಳನ್ನು ಬದಲಾಯಿಸಬಹುದು, ಸಂಭಾಷಣೆಗಳನ್ನು ಹುಟ್ಟುಹಾಕಬಹುದು ಮತ್ತು ಹೃದಯಗಳನ್ನು ಕ್ರಿಯೆಗೆ ಪ್ರೇರೇಪಿಸಬಹುದು. ಜನರು ಕಾಡಿನ ಕಚ್ಚಾ ಸೌಂದರ್ಯವನ್ನು ಅಥವಾ ಅಳಿವಿನಂಚಿನಲ್ಲಿರುವ ಪ್ರಾಣಿಯ ಭಾವಪೂರ್ಣ ಕಣ್ಣುಗಳನ್ನು ನೋಡಿದಾಗ, ನಾವು ಈಗ ಕಾರ್ಯನಿರ್ವಹಿಸದಿದ್ದರೆ ನಾವು ಏನನ್ನು ಕಳೆದುಕೊಳ್ಳುತ್ತೇವೆ ಎಂಬುದನ್ನು ಅವರು ಅರಿತುಕೊಳ್ಳುತ್ತಾರೆ.

ರಕ್ಷಿಸಲು ಯೋಗ್ಯವಾದ ಸೌಂದರ್ಯ ಮತ್ತು ಪ್ರಾಮುಖ್ಯತೆಯನ್ನು ಮೀರಿ, ಕಾಡುಗಳು ಮತ್ತು ವನ್ಯಜೀವಿಗಳು ಮಾನವ ಚೈತನ್ಯವನ್ನು ಪೋಷಿಸುತ್ತವೆ. ಅವು ನಮಗೆ ತಾಳ್ಮೆ, ಗೌರವ ಮತ್ತು ನಮ್ರತೆಯನ್ನು ಕಲಿಸುತ್ತವೆ. ಸೌಂದರ್ಯವು ಸರಳತೆಯಲ್ಲಿದೆ ಎಂದು ಅವು ನಮಗೆ ನೆನಪಿಸುತ್ತವೆ – ನನಗೆ, ಪ್ರತಿಯೊಂದು ಛಾಯಾಚಿತ್ರವು ಕಲಾತ್ಮಕ ಅನ್ವೇಷಣೆ ಮತ್ತು ಸಂರಕ್ಷಣಾ ಸಂದೇಶ ಎರಡೂ ಆಗಿದೆ. ನನ್ನ ದೃಷ್ಟಿಕೋನದ ಮೂಲಕ, ಪ್ರಕೃತಿಯನ್ನು ರಕ್ಷಿಸುವುದು ಕೇವಲ ಕರ್ತವ್ಯವಲ್ಲ – ಅದು ಜೀವನದ ಆಚರಣೆಯಾಗಿದೆ ಎಂದು ತೋರಿಸಲು ಶ್ರಮಿಸುತ್ತೇನೆ.

ಕಾಡುಗಳು ಮತ್ತು ವನ್ಯಜೀವಿಗಳು ನಮ್ಮ ಗ್ರಹದ ಆತ್ಮದ ಸಾರ. ಅವುಗಳ ಸೌಂದರ್ಯವನ್ನು ಮೆಚ್ಚುವುದಷ್ಟೇ ಅಲ್ಲ, ಸಂರಕ್ಷಿಸುವುದೂ ಅಗತ್ಯ. ಒಬ್ಬ ವನ್ಯಜೀವಿ ಛಾಯಾಗ್ರಾಹಕನಾಗಿ, ಪ್ರತಿಯೊಂದು ಚಿತ್ರವೂ ನಮಗೆ ಒಂದು ಸರಳ ಸತ್ಯವನ್ನು ನೆನಪಿಸಬೇಕು ಎಂದು ನಾನು ನಂಬುತ್ತೇನೆ – ನಾವು ಪ್ರಕೃತಿಯ ಭಾಗ, ಅದರಿಂದ ದೂರವಿಲ್ಲ ಮತ್ತು ನಾವು ಅದನ್ನು ಹೆಚ್ಚು ಗೌರವಿಸುತ್ತೇವೆ ಮತ್ತು ರಕ್ಷಿಸುತ್ತೇವೆ, ಇಂದು ನಮ್ಮ ಸ್ವಂತ ಭವಿಷ್ಯವನ್ನು ನಾವೇ ರಕ್ಷಿಸಬೇಕಾದ ದುಃಸ್ಥಿತಿಯಲ್ಲಿದ್ದೇವೆ.



**ಎನ್. ಶಿವಕುಮಾರ್**
9886505505

With Best Compliments From

# OM SUPER SEALS

**R.S. Prashanth**
Life Member
Bangalore Printers Association
&
Karnataka Small Scale Industries Association

# 420 / 63, 2nd Floor, “Sri Rama Nilaya”
9th Main road, Vijayanagara, Bengaluru 560040
**Mobile No.: 9844141691, 9986586884**
e-mail: superseals@rediffmail.com /
omsuperseals@gmail.com

With Best Compliments From

# Finishing Systems

Manufacturers Of
Powder Coating, Painting Booth, Ovens, Conveyors
Guns & Cooling Systems, Doll & Deepa Stand
Pollution Control Euipments

**Sri Raghu T.N.**

#12, Pipe West Kasturba Nagar, Off Mysore Road
Bengaluru - 560 026. Ph : 080 - 49515042 M : 98450 23744
E-mail : fsraghu@yahoo.com

With Best Compliments From

# RAGHUNANDANA S.

**ADVOCATE**

# 301, 3rd Floor
"KUMARA ASHRAYA APARTMENTS
9th Cross, Jayanagar 2nd Block
Bengaluru 560011

With Best Compliments From

# SREENIVASA DENTAL CLINIC

**Dr. S. Ramadevi**

**Mob. No. 9845765411**

# 384/12, 14th Cross, 16th Main,
Lakkasandra Extention, Wilson Garden,
Bengaluru 560030

## ಕಾರ್ಯಕಾರಿ ಸಮಿತಿ ಸಭೆಯು ನಮ್ಮವರ ಗ್ರಾಮಗಳಲ್ಲಿ : ಕಿತ್ತಿಗಾನಹಳ್ಳಿ, ಗುಮ್ಮಳಾಪುರ, ಬನ್ನೇರುಘಟ್ಟ









## ಕಾರ್ಯಕಾರಿ ಸಮಿತಿ ಸದಸ್ಯರ ಸಭೆ "ಸಂಪತ್ತು" ಸಂಸ್ಥೆಯಲ್ಲಿ





# ಬೃಹಚ್ಚರಣದ ಬೃಹತ್ ವ್ಯಕ್ತಿ ಪಂಡಿತ್ ಶೇಷಾದ್ರಿ ಗವಾಯಿ (1924-2003)



ನಮ್ಮ ಸಮುದಾಯದ ಬಹುಮುಖ ಪ್ರತಿಭೆಗಳಲ್ಲಿ ಒಬ್ಬರಾದ ಶೇಷಾದ್ರಿ ಗವಾಯಿಗಳವರು ನನ್ನ ಗುರುಗಳು ಎಂದು ಹೇಳಿಕೊಳ್ಳಲು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ.

ಇವರ ಪ್ರತಿಭೆ ಎಷ್ಟೇ ದೂರಕ್ಕೆ ಹಬ್ಬಿ, ಇತರರಿಗೆ ಶ್ರೀ ಶೇಷಾದ್ರಿ ಗವಾಯಿಗಳು ಆದರೂ ನಮಗೆ ಇವರು ಚೇಚಿ ಮೇಷ್ಟ್ರು. ಶ್ರೀಯುತರು ಚಿಕ್ಕ ವಯಸ್ಸಿನಲ್ಲೇ ಶ್ರೀ ಪಂಚಾಕ್ಷರಿ ಗವಾಯಿ ಹಾಗೂ ಶ್ರೀ ಪುಟ್ಟರಾಜ ಗವಾಯಿಗಳ ಗರಡಿಯಲ್ಲಿ ಪಳಗಿ ಹಿಂದುಸ್ತಾನಿ ಹಾಗೂ ಕರ್ನಾಟಕ ಸಂಗೀತವನ್ನು ಹಲವಾರು ಕಾಲ ಅಭ್ಯಸಿಸಿ, ಹಿಂದುಸ್ತಾನಿ ಸಂಗೀತದಲ್ಲಿ ಪರಿಣಿತಿ ಗಳಿಸಿದವರು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ "ಶ್ರೀ ಅರವಿಂದ ಸಂಗೀತ ವಿದ್ಯಾಲಯ" ಎಂಬ ಸಂಗೀತ ಶಾಲೆಯನ್ನು ಸ್ಥಾಪಿಸಿ, ಅನೇಕ ಶಿಷ್ಯಂದಿರನ್ನು ತಯಾರು ಮಾಡಿರುತ್ತಾರೆ. ಹಲವಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಗೀತ ವಿದ್ಯೆಯನ್ನು ಬೋಧಿಸಿದ್ದಾರೆ. ಬಾಯಿ ಹಾಡುಗಾರಿಕೆ ಅಲ್ಲದೆ ಹಾರ್ಮೋನಿಯಂ, ಸಿತಾರ್, ತಬಲಾ ವಾದನದಲ್ಲೂ ನಿಸ್ಸೀಮ ಪಾಂಡಿತ್ಯ ಪಡೆದಿದ್ದರು.

ಈ ಮಹನೀಯರು ಸಂಗೀತದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಅನೇಕ ಪುಸ್ತಕಗಳನ್ನು ಹೊರ ತಂದರು. ಅದರಲ್ಲಿ "ಸಂಗೀತ ಕಲಾರವಿಂದ", "ತತ್ವಜ್ಞಾನ ರತ್ನಾಕರ" ಗಳನ್ನು ಉದಾಹರಿಸಬಹುದು. ಇದಲ್ಲದೆ "ಗಾಯನ ಗಂಗಾ" ಎಂಬ ಮಾಸಪತ್ರಿಕೆಯನ್ನು ತಪ್ಪದೇ ಪ್ರಕಟಿಸುತ್ತಿದ್ದರು. ಅದರ ಮೊದಲ ಪುಟದಲ್ಲಿ "ಉರಗಾಚಲ" ಎಂಬ ಅಂಕಿತದಿಂದ ತಾವೇ ರಚಿಸಿದ ಅದ್ಭುತವಾದ ಸಾಹಿತ್ಯವನ್ನುಳ್ಳ ಹಾಡುಗಳನ್ನು ರಾಗ, ತಾಳ, ಸ್ವರ ಸಮೇತ ಮುದ್ರಿಸಿ, ಕಲಿಯುವ ವಿದ್ಯಾರ್ಥಿಗಳಿಗೆ ಬಹಳ ಅನುಕೂಲ ಮಾಡಿಕೊಡುತ್ತಿದ್ದರು.

ರಾಜ್ಯ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು, ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಚಂದ್ರಹಾಸ ಪ್ರಶಸ್ತಿ, ರಾಜ್ಯೋತ್ಸವ, ಕೆಂಪೇಗೌಡ ಪ್ರಶಸ್ತಿ, ಭಾರತೀಯ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತ ಮಹೋಪಾಧ್ಯಾಯ ಪ್ರಶಸ್ತಿ ಗಳೊಂದಿಗೆ ಇನ್ನೂ ಹಲವಾರು ಪ್ರಶಸ್ತಿ ಗಳಿಸಿದ್ದರು.

ಇಂದಿಗೂ ಅವರ ಶಿಷ್ಯರಲ್ಲಿ ಪ್ರಸಿದ್ಧರಾದ ಶ್ರೀ ಎಂ.ವಿ. ನಾಗರಾಜ್ ಹಾಗು ಶ್ರೀ ಗುಂಡಾ ಶಾಸ್ತ್ರಿ, ಗುರುಗಳ ನೆನಪನ್ನು ಸತತವಾಗಿ ಮಾಡಿಕೊಳ್ಳುತ್ತಾ, ಅದರ ಸಲುವಾಗಿ ಪ್ರತಿ ವರ್ಷವೂ "ಉರಗಾಚಲಾಂಕಿತ" ಹಾಡುಗಳನ್ನು ಹಾಡುವ ಮೂಲಕ ಗುರು ನಮನವನ್ನು ತಪ್ಪದೇ ಸಲ್ಲಿಸುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದೇ ನಮಗೆಲ್ಲ ಒಂದು ಹೆಮ್ಮೆಯ ವಿಷಯ. ಇಂತಹ ಗುರುಗಳಲ್ಲಿ ಶಿಷ್ಯ ವೃತ್ತಿಯನ್ನು ಮಾಡುವ ಸೌಭಾಗ್ಯ ನನ್ನ ಪಾಲಿಗೆ ಬಂದದ್ದು ದೇವರ ಅನುಗ್ರಹವೇ ಸರಿ. ನನ್ನ ಗುರುಗಳಿಗೆ ಮತ್ತೊಮ್ಮೆ ನನ್ನ ಗೌರವ ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.



**ಸರಸ್ವತಿ ನಟರಾಜ್**
9480619730

*With Best Compliments From*

# Vyaasapragna

**Visit Website : www.vyaasapragna.com**
**Visit YouTube channel : Vyaasa Pragna**



## ಅಧ್ಯಾತ್ಮಿಕ ಕನ್ನಡ ಪ್ರವಚನ ಮಾಲಿಕೆ

ವಾಚನ : ಶ್ರೀಮತಿ ಶಾರದಾ ರಮೇಶ್
ವ್ಯಾಖ್ಯಾನ : ಶ್ರೀ ಹೆಚ್.ಎಸ್. ರಮೇಶ್

**ಪ್ರವಚನಗಳು**

ಗುರುಪಾದುಕಾ ಸ್ತೋತ್ರ, ಗುರುಭಕ್ತಿ ಸ್ತೋತ್ರ, ದೃಗ್-ದೃಶ್ಯ ವಿವೇಕ,
ಉಪದೇಶ ಸಾರ, ಅದ್ವೈತ ಮಕರಂದ, ಪುರುಷ ಸೂಕ್ತ,
ಭಜಗೋವಿಂದಂ, ಶ್ರೀಮದ್ಭಗವದ್ಗೀತಾ, ವಿವೇಕಚೂಡಾಮಣಿ,
ಮಂಕುತಿಮ್ಮನ ಕಗ್ಗ, ಶಿವಾನಂದಲಹರಿ, ಸೌಂದರ್ಯಲಹರಿ,
ಉಪನಿಷತ್ ಪರಿಚಯ, ಈಶಾವಾಸ್ಯ ಉಪನಿಷತ್, ಕೇನೋಪನಿಷತ್,
ಕಠೋಪನಿಷದ್, ಪ್ರಶ್ನೋಪನಿಷತ್,
ಮುಂಡಕೋಪನಿಷತ್, ಐತರೇಯೋಪನಿಷತ್,
ಮಾಂಡೂಕ್ಯೋಪನಿಷತ್, ಕೈವಲ್ಯೋಪನಿಷತ್, ತೈತ್ತಿರಿಯೋಪನಿಷತ್

**Contact**
**Email : vyaasapragna@gmail.com**
**Mobil No.: 97396 59834 / 98860 34048 / 99451 99637**



श्री आदिशङ्कराचार्य शारदा लक्ष्मीनृसिंह पीठम्, श्री मठम् – हरिहरपुरम्

SRI ADISHANKARACHARYA SHARADA LAKSHMI NARASIMHA PEETAM

ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್



# ಶ್ರೀ ಸ್ವಯಂಪ್ರಕಾಶ ಆರ್ಷ ವಿದ್ಯಾಪೀಠ

## ದಿವ್ಯಕ್ಷೇತ್ರ, ಹರಿಹರಪುರ









ಧರ್ಮಾಭಿಮಾನಿಗಳೇ,

ಪವಿತ್ರ ತುಂಗಾ ನದೀ ತೀರದಲ್ಲಿರುವ ದಿವ್ಯಕ್ಷೇತ್ರ ಹರಿಹರಪುರದಲ್ಲಿ ಪರಮಪೂಜ್ಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ, 'ಸ್ವಯಂಪ್ರಕಾಶ ಆರ್ಷ ವಿದ್ಯಾ ಪೀಠವು' ಪ್ರಾರಂಭವಾಗಿದ್ದು, ಇದೀಗ 24 ಸಂವತ್ಸರಗಳನ್ನು ಮುಗಿಸಿ 25ನೇ ವಸಂತಕ್ಕೆ ಕಾಲಿಡುತ್ತಲಿರುವ ಸಂದರ್ಭದಲ್ಲಿ, ಅತ್ಯಂತ ಪವಿತ್ರವಾದ, ಶ್ರೇಷ್ಠವಾದ ಮೌಲ್ಯಗಳನ್ನು ಹೊಂದಿರುವ ನಮ್ಮ ಸನಾತನ ಪ್ರಾಚೀನ ವಿದ್ಯೆಯನ್ನು ಈಗಿನ ಆಧುನಿಕ ಕಾಲಕ್ಕೆ ತಕ್ಕಂತೆ ಅತ್ಯಂತ ಸಮರ್ಥವಾಗಿ ಸದ್ಬಳಕೆ ಮಾಡಿಕೊಳ್ಳಲು ಅನುಕೂಲವಾಗುವಂತೆ ವೇದವಿದ್ಯೆಯೊಂದಿಗೆ ಸಾಮಾನ್ಯ ಜೀವನದ ಲೌಕಿಕ ವಿದ್ಯೆಯನ್ನು ಪ್ರಾರಂಭಿಸಲಾಗಿದೆ.

ಪ್ರಾಚೀನ ವಿದ್ಯೆಯನ್ನು ಸಂರಕ್ಷಿಸುವ ಈ ಪವಿತ್ರ ಕಾರ್ಯದಲ್ಲಿ ತಾವುಗಳು, ತನು, ಮನ, ಧನ ಸಹಕಾರದೊಂದಿಗೆ ಪಾಠಶಾಲೆಯ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಸಂಪಿಗೆ ಶ್ರೀನಿವಾಸ ಮೂರ್ತಿ

ಗೌರವಾಧ್ಯಕ್ಷರು, ಸ್ವಯಂಪ್ರಕಾಶ ಆರ್ಷ ವಿದ್ಯಾ ಪೀಠ

**Name :** SRI SWAYAMPRAKASHA AARSHA VEDHA VIDYA PEETHA

**Bank :** KARNATAKA BANK.

**Branch :** HARIHARAPURA, HOSAKOPPA

**A/c No :** 0322252500007801

**IFSC :** KARB0000322

Karnataka Bank 100

Cheques/DD favouring of

SRI SWAYAMPRAKASHA AARSHA VEDHA VIDYA PEETHA

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9986410039 / 7975790541 / 9964004873**

# ಮಂಕುತಿಮ್ಮನ ಕಗ್ಗ



ಕಗ್ಗದ ಕಥೆ – ತಿಮ್ಮ ಗುರು ತೋರಿದ ಜೀವನದ ನಿವೃತ್ತಿ ಮಾರ್ಗದ ಆದರ್ಶ–ತನ್ನ ಆಶಯಗಳನ್ನು ಪೂರೈಸಿಕೊಂಡದ್ದು

ಸಂತಸವನ್ನು ಸೋಮಿಯ ಏಳ್ಗೆಯಿಂದಲೀಗ ಕಂಡೆನು

ಆಸೆಗಳನ್ನು ಪೂರೈಸಿಕೊಳ್ಳುವ ಬಗೆ ಹೇಗೆ? ಎಂಬುದಕ್ಕೆ ಒಂದು ವಿಶ್ಲೇಷಣೆ. ಆಸೆಗಳನ್ನು ಇಟ್ಟುಕೊಂಡರೆ ಕೈಗೂಡಿತೇ? ಆಸೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನವಂತು ಇರಲೇಬೇಕು. ಆದರೆ ಆಸೆ ಎಂಬುದರ ನಿರಂತರತೆ ಆಸೆಗಳ ಪುನರುದಯದ ಬಗ್ಗೆ ಗುಂಡಪ್ಪನವರು ಇದೊಂದು ಜೀವ ಗುಣ ಎನ್ನುತ್ತಾರೆ.

ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ ।

ಬೇಸರದ ನುಡಿಯೋಳಂ ಲೇಸುಗಳ ನೆನಪು ॥

ಆಶೆ ಸಾಯ್ತೊಂದೊಡಂ ಚೆಲುವೆನಲು ಕಣ್ಣಲೆತ ।

ಮಾಸವೀ ಜೀವಗುಣ – ಮಂಕುತಿಮ್ಮ ॥ 480 ॥

ಹೊಸ ಹೊಸ ಆಸೆಗಳು ಮತ್ತೆ ಮತ್ತೆ ನಮ್ಮ ಮುಂದೆ ಬಂದು ನಿಂತು ನಮ್ಮನ್ನು ಹೇಗೆ ಕೆಣಕುತ್ತವೆ ಎನ್ನುವುದು ಎಲ್ಲರೂ ತಿಳಿದುಕೊಂಡ ಸತ್ಯ. ಆಸೆಗಳನ್ನು ಸಾಯದಂತೆ ನೋಡಿ ಕೊಂಡರೆ ಆಸೆಗಳೆ ನಮ್ಮ ಜೀವನಕ್ಕೆ ಮುಂದುವರೆಸುವ ಭರವಸೆಯನ್ನು ನೀಡುತ್ತವೆ ಮತ್ತು ಜೀವನ ಉತ್ಸಾಹವನ್ನು ಹೆಚ್ಚಿಸುತ್ತದೆ. ತಿನ್ನಬಹುದು ಗಮನವಿರಲಿ ದುರಾಸೆಯಲ್ಲ.

ಈ ಕಾಲ ಹೀಗೆ ಇರುವುದಿಲ್ಲ ಎಂಬ ಕೃಷ್ಣನ ಉಕ್ತಿ ಈ ಆಸೆಗಳ ಪುನರುದಯಕ್ಕೆ ಸಾಕ್ಷಿ. ಮುಂದೆ ಒಳ್ಳೆಯ ದಿನಗಳು ಬರುತ್ತವೆ ಎನ್ನುವ ಭರವಸೆಯೇ ಕಷ್ಟಗಳನ್ನು ಸಹಿಸಲು ಪ್ರೇರಣೆ ನೀಡುತ್ತವೆ. "ಇನ್ನು ಮಿಡತೆ ನೀಡುವವನ್ ಎನ್ನುವೋಲ್" ಆಗಿದ್ದು, ಆಗಿದ್ದು ಆಗಿಹೋಯಿತು ಮುಂದಿನದನ್ನು ನೋಡಿ ಎಂದಂತೆ "ಬೇಸರದ ನುಡಿಮೊಳಂ ಲೇಸುಗಳ ನೆನಪು". ಯಾರೇ ಏನೇ ಬಿರುನುಡಿಯನ್ನು ನುಡಿದರೂ, ಅವರೇ ಯಾವಾಗಲೋ ನುಡಿದಿದ್ದ ಒಳ್ಳೆಯ ಸಾಂತ್ವನ ಮಾತುಗಳನ್ನು ಜ್ಞಾಪಿಸಿಕೊಳ್ಳುವುದರಿಂದ ಮನಸ್ಸಿಗೆ ಆಗುವ ಗಾಯ ತಪ್ಪುತ್ತದೆ ಮತ್ತು ನಮ್ಮನ್ನು ಉತ್ಸಾಹಿತರನ್ನಾಗಿ ಮಾಡುತ್ತದೆ.

ಮನುಷ್ಯನ ಜೀವನವನ್ನು "ಶೋಕಹತುಚ ಸಮೀಪ್ಯಂ" ಎಂದು ವರ್ಣಿಸಿದ್ದಾರೆ.

ನಿಮಗೆ ಬೇಕಾದ್ದು ಸಿಗದಿದ್ದಾಗ ನೋವು ಆಗುವುದು ಸಹಜ ಆದರೆ ಆಸೆ ಪಡುವುದರ ಜೊತೆಗೆ ಬೇಕೆಂದ ವಸ್ತುವನ್ನು ಪಡೆಯುವುದಕ್ಕೆ ನಮಗೆ ಅರ್ಹತೆ ಇತ್ತೇ? ಅರ್ಹತೆಯನ್ನು ಸಂಪಾದಿಸಿಕೊಂಡಿದ್ದೇವೆಯೆ ಎಂಬುದನ್ನು ಗಮನಿಸಬೇಕು.

ಆದರೆ ಭಗವಂತನು ಸೃಷ್ಟಿಯಲ್ಲಿ ರಹಸ್ಯ, ಸೊಬಗು, ಕುತೂಹಲ, ಆಕರ್ಷಣೆ, ವಿಚಿತ್ರ, ವೈವಿಧ್ಯತೆ ಇವೆಲ್ಲವನ್ನೂ ಇಟ್ಟಿರದಿದ್ದರೆ ಈ ಜಗತ್ತು ಅದೆಷ್ಟು ನೀರಸವಾಗುತ್ತಿತ್ತು ಎನ್ನುವುದನ್ನು ಯೋಚಿಸಿ "ತಣಿ ತಣಿವ ನಿನ್ನ ಕಣ್ಣಿನ ಪುಣ್ಯವೋ ನೋಡು ಯಾಕೆ ಕಾರಣವೊಂದೇ? (ಮಂಕುತಿಮ್ಮನ ಕಗ್ಗ 53). ಈ ಭೂಮಿಯಲ್ಲಿ ಕಂಗೊಳಿಸುವ ಚಿತ್ತಾಕರ್ಷಕ ವಸ್ತುಗಳಿಗೆ ಬಣ್ಣ ಸುಗಂಧ ಚೆಲುವಿಗೆ ಕಾರಣಗಳನ್ನು ಯಾವುದರಿಂದ ಎಂದು ಕಂಡುಹಿಡಿಯುವುದು ಹೇಗೆ? ಎಲ್ಲದಕ್ಕೂ ಒಂದೇ ಕಾರಣವನ್ನು ಆರೋಪಿಸಲಾಗಿದೆ ಅಲ್ಲವೇ? ಅವನು ನೋಡುವ ಸೌಭಾಗ್ಯ ನಮಗೆ ಸಿಕ್ಕಿತಲ್ಲ ಎನ್ನುವ ಸಂತೋಷವನ್ನು ಹೊಂದು ಎನ್ನುತ್ತಾರೆ ಡಿವಿಜಿ. ಭಗವಂತನ ಸೃಷ್ಟಿಯ ಜೊತೆಗೆ ಮಾನವನ ನಿರ್ಮಾಣದ ಕಲಾ ಕೃತಿಗಳು ಮಧುರ ಸಂಗೀತ ಬಾಳಿನ ಆಸೆಯನ್ನು ಚಿಗುರಿಸುತ್ತವೆ. ಆಸೆ ಸಾಯಲು ಬಿಡುವುದಿಲ್ಲ. ಮರಣದ ಬಾಗಿಲಲ್ಲಿ ಬೇಕೆಂದೇ ಮಲಗಿದ್ದವರೊಬ್ಬರು ಮಗನ ಮಾತಿನಿಂದಾಗಿ ಜೀವಿಸುವ ಆಸೆ ಚಿಗುರೊಂದನ್ನು ವಿವರಿಸುವ ಕಥೆಯೊಂದಿದೆ.

ನನ್ನ ಪೂರ್ವಜನ್ಮದಾತರು ನನ್ನ ಮಕ್ಕಳು ಎಂಬ ಮಾತು ಎಷ್ಟು ಸತ್ಯವಲ್ಲವೇ! ಪ್ರಖ್ಯಾತ ನೃತ್ಯ ಕಲಾ ಶಾಲೆಯ ಸ್ಥಾಪಕರು ಒಬ್ಬರು ಸಂದರ್ಶನದಲ್ಲಿ ಮಾತನಾಡುತ್ತಾ, ನನ್ನ ತಂದೆ ತಾಯಿಯವರ ಬಗ್ಗೆ ಹೇಳಿ ನಂತರ ನನ್ನ ಪುನರ್ಜನ್ಮದಾತರು ನನ್ನ ಇಬ್ಬರು ಮಕ್ಕಳು! ಎಂದಾಗ ಸಂದರ್ಶಕ ತಬ್ಬಿಬ್ಬು.

ಮಕ್ಕಳು ಪುನರ್ಜನ್ಮದಾತರು, ಹೇಗೆ?

ಅವರು ಬಾಲ ಕಲಾವಿದೆ. ತಾರುಣ್ಯ ತಲಪುವ ಹೊತ್ತಿಗೆ ಸಾಕಷ್ಟು ಹೆಸರು, ಹಣಗಳಿಸಿದ್ದರು. ಮದುವೆಯಾಯಿತು ನಾಲ್ಕು ಮತ್ತು ಎಂಟು ವರ್ಷದ ಮಕ್ಕಳಿದ್ದರೂ ಅವರ ಹಣಕಾಸಿನ ವ್ಯವಹಾರವನ್ನೆಲ್ಲ ಅವರ ಪತಿಯೇ ನೋಡಿಕೊಳ್ಳುತ್ತಿದ್ದರು ಎಲ್ಲವೂ ಚೆನ್ನಾಗಿತ್ತು. ಸಂತೃಪ್ತಿ ಜೀವನದ ಪರಿಣಾಮವಾಗಿ ಇವರ ಮೈ ತೂಕ ಜಾಸ್ತಿಯಾಗುತ್ತಿತ್ತು. ದಪ್ಪನಾದಂತೆ ಬೇಡಿಕೆ ಕಡಿಮೆಯಾಯಿತು. ಆದಾಯ ಕಡಿಮೆಯಾಯಿತು. ಹಿಂದೆ ಗಳಿಸಿದ್ದು ಇದೆಯಲ್ಲಾ ಎಂದುಕೊಳ್ಳುವಷ್ಟರಲ್ಲಿ ಪತಿ ನಾಪತ್ತೆಯಾದರು ಸಾಕಷ್ಟು ಸಾಲ ಮಾಡಿದ್ದ ಪತಿಯಿಂದಾಗಿ ಮನೆ ಮಾರಾಟಕ್ಕೆ ಬಂತು. ಆರೋಗ್ಯ ಹದಗೆಡುವುದಕ್ಕೆ ಪ್ರಾರಂಭವಾಯಿತು. ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಆಗ ಅವರಿಗೆ ತೋಚಿದ್ದು – ಆತ್ಮಹತ್ಯೆ.

ಒಂದು ದಿನ ಮಧ್ಯರಾತ್ರಿ ಇಬ್ಬರು ಮಕ್ಕಳನ್ನು ಕರೆದುಕೊಂಡು ಮನೆಯ ಬಳಿ ರೈಲು ಹಳಿಯ ಬಳಿ ಹೋದರು. ಮಕ್ಕಳನ್ನು ಕಟ್ಟಿಕೊಂಡು ಹಳಿಯ ಮೇಲೆ ಮಲಗಿದರು. ತಾಯಿಯಾದ ತಮ್ಮ ಎಲ್ಲಾ ಕಷ್ಟಗಳನ್ನು ಅಂದರೆ ಮನೆ ಇಲ್ಲದಿರುವುದು, ಹಣ ಇಲ್ಲದಿರುವುದು, ಬದುಕು ಶೂನ್ಯ

ಎಂದೆಲ್ಲ ಮಕ್ಕಳಿಗೆ ವಿವರಿಸಿದರು. ಚಿಕ್ಕ ಮಗು ಹೆದರಿಕೆಯಾಗಿ ಒಂದೇ ಸಮನೆ ಅಳುವುದಕ್ಕೆ ಶುರು ಮಾಡಿತು. ದೊಡ್ಡ ಮಗ ಸುಮ್ಮನಿದ್ದ ಅಷ್ಟರಲ್ಲಿ ಬೆಳಕಾಗುತ್ತ ಬಂತು ಅದೇನು ಪವಾಡವೊ ಎಂಬಂತೆ ವೇಳೆಗೆ ಸರಿಯಾಗಿ ರೈಲು ಬರಲಿಲ್ಲ .

ಹತ್ತಿರದ ಮರದಲ್ಲಿದ್ದ ಹಕ್ಕಿಯೊಂದು ಕುಹೂ ಕುಹೂ ಎಂದು ಹಾಡತೊಡಗಿತ್ತು. ಅದರೊಂದಿಗೆ ಇನ್ನೂ ಹಲವು ಹಕ್ಕಿಗಳು ಹಾಡಲು ಪ್ರಾರಂಭಿಸಿದವು. ಆಗ ದೊಡ್ಡ ಮಗ ಹಕ್ಕಿಗೂ ಮನೆ ಇಲ್ಲ, ಕಂಠದಲ್ಲಿ ಹಾಡಿದೆ ಹಾಡಿಕೊಂಡು ಬದುಕಿತ್ತಲ್ಲವೇ ಅಮ್ಮ? ನಿನಗೆ ನೃತ್ಯದ ಜೊತೆಗೆ ಸಂಗೀತವೂ ಗೊತ್ತು, ನೀನದನ್ನು ಬೇರೆಯವರಿಗೆ ಹೇಳಿಕೊಟ್ಟು ಬದುಕಲು ಸಾಧ್ಯವಿಲ್ಲವೇನಮ್ಮ! ಎಂದ. ಏನು ಅರ್ಥವಾಗದಿದ್ದ ಅವನು ಮನೆಗೆ ಹೋಗೋಣ ಎಂದ.

ತಾಯಿ ತಕ್ಷಣ ಎದ್ದು ನಿಂತರು. ಮನೆಗೆ ಮರಳಿದರು. ಅಂದೆ ಮನೆಯ ಮುಂದೆ ಸಂಗೀತ ಕಲಿಸಲಾಗುತ್ತದೆ ಎಂಬ ಬೋರ್ಡ್ ಹಾಕಿದರು. ಸಾಲಗಾರರಿಗೆಲ್ಲ ಸಮಯ ಕೇಳಿದರು. ಒಂದೆರಡು ವರ್ಷ ಬಹಳ ಕಷ್ಟ ಪಟ್ಟರು. ಆದರೆ ಈಗ ಆ ಸಂಸ್ಥೆಗೆ 25 ವರ್ಷದ ವಾರ್ಷಿಕೋತ್ಸವ! ಅವರೇ ಹೇಳಿದ್ದು, ನನ್ನ ಪುನರ್ಜನ್ಮದಾತರು ನನ್ನ ಮಕ್ಕಳು! ಎಂಬ ಮಾತು ಎಷ್ಟು ಸತ್ಯವಲ್ಲವೇ?

ಗುಂಡಪ್ಪನವರು ಹೇಳಿದ

ಕ್ಲೇಶ ನೂರಾಗಿರೆಯುಮಾಶೆಗಳ ಪುನರುದಯ ।
ಬೇಸರದ ನುಡಿಯೋಳಂ ಲೇಸುಗಳ ನೆನಪು ।।
ಆಶೆ ಸಾಯ್ತೆಂದೊಡಂ ಚೆಲುವೆನಲು ಕಣ್ಣಲೆತ ।
ಮಾಸವೀ ಜೀವಗುಣ – ಮಂಕುತಿಮ್ಮ ।।

ಅದಷ್ಟೇನ? ಎನಿಸುವುದಿಲ್ಲವೇ? ದೊಡ್ಡ ಮನದ ಆಸೆ ಪೂರೈಸಿದ್ದಲ್ಲವೇ? ಮತ್ತೆ ಕಗ್ಗದಲ್ಲೇ ಆಡುವುದಾದರೆ ಮತ್ತೊಂದು ಥರವಾದ ಕಗ್ಗ ಸಿಗುತ್ತದೆ. .

ಬೊಮ್ಮನೇ ಸಂಸ್ಕೃತಿಯ ಕಟ್ಟಿಕೊಂಡುತ್ಸಹಿಸೆ ।
ಸುಮ್ಮನಿರೆಚಣವಿರದೆ ಪ್ರಕೃತಿ ತೊಡಗುತಿರೆ ॥
ಜನ್ಮ ಸಾಕೆನುವುದೇಂ? ದುಮ್ಮಾನವಡುವುದೇಂ? ।
ಚಿಮ್ಮುಲ್ಲಸವ ಧರೆಗೆ – ಮಂಕುತಿಮ್ಮ ॥ 272 ॥

ಬ್ರಹ್ಮ ಸಂಸಾರಿ

ನಮ್ಮ ಒಂದು ಸಂಸಾರವನ್ನು, ಸಮಾಜವನ್ನು, ದೇಶವನ್ನು ಕಟ್ಟಿಕೊಂಡು ಸಂಕಟಪಡುವುದು ಸರಿಯೇ? ಭಗವಂತ ಇಷ್ಟೊಂದು ಅಸಾಧ್ಯವಾದ ಜಗತ್ತನ್ನು ನಿರ್ವಹಿಸಲು ಪ್ರತಿಕ್ಷಣ ತೊಡಗಿಕೊಂಡು ಉತ್ಸಾಹಿತನಾಗಿರುವಾಗ ಅವನ ಕ್ರಿಯಾಶೀಲತೆ ನಮ್ಮ ಕಣ್ಣೆದುರಿಗೆ ಇರುವಾಗ ಜನ್ಮ ಸಾಕಪ್ಪಾ ಎಂದು ಕೊರಗುವುದು ಏಕೆ? ಚಿಮ್ಮುಲ್ಲಸವ ಧರೆಗೆ– ಮಂಕುತಿಮ್ಮ. ಈ ಜಗತ್ತಿನಲ್ಲಿರುವ ಅನ್ಯಜೀವಿಗಳಿಗೂ ನಿನ್ನಲ್ಲಿರುವ ಪ್ರೀತಿ ಸಂತೋಷ ಆನಂದವನ್ನು ಹಂಚು. ಆದರೆ ತಿಮ್ಮ ಗುರು ತನ್ನ ಮುಂದಿನ ಜೀವದಾವಧಿಯನ್ನು ಸನ್ಯಾಸಿಯ ತರದಲ್ಲಿ ಕಲಿಯಬೇಕೆಂದಿದ್ದರೇನೋ ಎಂದೆನಿಸುವಂತಿದೆ. ಸನ್ಯಾಸದಲ್ಲಿ ಜ್ಞಾನಪ್ರಸಾರವೇ ಮುಖ್ಯ ಉದ್ದೇಶ.

ಈ ಮೂಲಕ ಸಮಾಜವನ್ನು ಸುಸ್ಥಿತಿಯಲ್ಲಿಡುವುದು.

ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು ಬಿಡು ।
ರಸವು ನವನವತೆಯಿಂದನುದಿನವು ಹೊಮ್ಮಿ ॥
ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ ।
ಪಸರುತಿರೆ ಬಾಳ್ ಚೆಲುವು – ಮಂಕುತಿಮ್ಮ ॥ 720 ॥

ಜೀವನದಲ್ಲಿ ಹೊಸತನವನ್ನು ತುಂಬಿಕೊಂಡರೆ ಬಾಳು ಚೆಲುವನ್ನು ಹೊಂದುತ್ತದೆ ಎಂಬುದು ಡಿವಿಜಿಯವರ ಅನುಭವದ ಮಾತು. ಎಲ್ಲರ ಜೀವನದಲ್ಲೂ ಸಾಮಾನ್ಯವಾಗಿ ನಿವೃತ್ತಿಯ ನಂತರ ಹೆಚ್ಚಿಗೆ ಜವಾಬ್ದಾರಿಗಳನ್ನು ಹೊತ್ತುಕೊಳ್ಳು ವುದಿಲ್ಲ. ತಿಮ್ಮ ಗುರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊಸದೊಂದು ಜೀವನ ವಿಧಾನವನ್ನು ಆರಿಸಿಕೊಂಡರು ಎಂದೆನ್ನಬಹುದು.

ನೀತಿ ನಿರ್ಣಯ : ಒಂದು ಎಚ್ಚರಿಕೆ ಬದುಕಿನಲ್ಲಿ ಹೊಸತನವು ಇರಬೇಕೇ ವಿನಹ ಅದು ಕೆಟ್ಟ ಹಸಿವಾಗಬಾರದು.

ಬೆದಕಾಟ ಬದುಕೆಲ್ಲ; ಚಣಚಣವು ಹೊಸ ಹಸಿವು ।
ಅದಕಾಗಿ ಇದಕಾಗಿ ಮತ್ತೊಂದಕಾಗಿ ॥
ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ ।
ಕುದಿಯುತಿಹುದಾವಗಂ – ಮಂಕುತಿಮ್ಮ ॥ 208 ॥

ಎನ್ನುವಂತೆ ಯಾವಾಗಲೂ ತಹತಹಿಸುವಂತೆ ಸಂತೋಷ ಆಗದಿದ್ದರೆ ಕೊನೆಗೆ ತಿಮ್ಮ ಗುರು ಸವಿನಯವಾಗಿ ಈಶನನ್ನು ಯಾವ ಪರಿಯಲ್ಲಿ ಬೇಡಿಕೊಂಡಿರಬಹುದು ಎಂಬುದು ನಮಗೆ ಈಗ ವೇದ್ಯವಾಗುತ್ತಿದೆ. ಡಿವಿಜಿ ನಮಗೆ ನಿರಂತರವಾಗಿ ಮಾಡಬೇಕಾದ ವಿಶಿಷ್ಟವಾದ ಪ್ರಾರ್ಥನೆ ಇದಾಗಿದೆ.

ಆಶೆಗಳ ಕೆಣಕದಿರು, ಪಾಶಗಳ ಬಿಗಿಯದಿರು ।
ಕ್ಲೇಶದ ಪರೀಕ್ಷೆಗಳಿಗೆನ್ನ ಕರೆಯದಿರು ॥
ಬೇಸರದ ಪಾತಕಸ್ಮೃತಿಯ ಚುಚ್ಚದಿರ್: ಎನ್ನು– ।
ತೀಶನನು ಬೇಡುತಿರೊ – ಮಂಕುತಿಮ್ಮ ॥ 792 ॥

ಆಸೆಗಳನ್ನು ಪಡಬೇಡ, ಸುಖ ಬಂಧನಗಳು ಸುತ್ತಿಕೊಳ್ಳುವಂತೆ ಮಾಡಬೇಡ, ಕಷ್ಟವಾದ ಪರೀಕ್ಷೆಗಳು ಎದುರಾಗುವಂತೆ, ಬೇಸರವಾಗುವಂತಹ ಕೆಟ್ಟ ಕೆಲಸಗಳ ನೆನಪುಗಳು ಸುಳಿಯುವಂತೆ ಮಾಡಬೇಡ. ಈಗ ಕಷ್ಟಪಟ್ಟು ಉನ್ನತವಾದ ಸ್ಥಿತಿಗೆ ಏರಿದ್ದೇನೆ. ಮತ್ತೆ ಹೆಚ್ಚಿನ ಆಸೆಗಳು ಚಿಗುರದಿರಲಿ ಈ ರೀತಿಯಲ್ಲಿ ಜೀವನದ ನಾನಾ ಪಾಶಗಳಿಂದ ಬಿಡುಗಡೆಯಾಗುವಂತೆ ಬೇಡಿ ಕೊಳ್ಳುವುದು ಉತ್ತಮ.



**ಎಸ್. ಶ್ರೀನಿವಾಸಯ್ಯ**
7899318098

# ಕೂರ್ಮದಾಸನ ಭಕ್ತಿ

ಕೂರ್ಮದಾಸನು ಜನ್ಮದಿಂದಲೇ ದೈಹಿಕ ಅಶಕ್ತಿಯುಳ್ಳವನು. ಕಾಲುಗಳು ಸರಿಯಾಗಿ ನಡೆಯುತ್ತಿರಲಿಲ್ಲ. ಹಲವಾರು ಕೆಲಸಗಳಿಗೆ ಅವನು ಅಡ್ಡಬಿದ್ದಿದ್ದ. ಆದರೆ ಅವನು ಪಾಂಡುರಂಗನನ್ನು ಭಜಿಸುವುದರಲ್ಲಿ ಒಂದೂ ಅಡ್ಡಿಯಾಗಿರಲಿಲ್ಲ. ಅವನ ಕಣ್ಣುಮುಚ್ಚಿದ ಪ್ರಾರ್ಥನೆ, ನೆನಪು ಎಲ್ಲಾ ವಿಠಲನದಾಗಿತ್ತು.

ಒಮ್ಮೆ ಭಕ್ತರ ದೊಡ್ಡ ಗುಂಪು ಪಾಂಡುರಂಗನ ದರ್ಶನಕ್ಕಾಗಿ ಫಂಡರಾಪುರಕ್ಕೆ ಹೊರಟಿತ್ತು. ಕೂರ್ಮದಾಸನ ಹೃದಯವೂ ಪಾಂಡುರಂಗನ ದರ್ಶನಕ್ಕೆ ಹಾತೊರೆಯಿತು. ಆದರೆ ಅವನ ದೇಹ ಸಹಕರಿಸಲಿಲ್ಲ. ದೂರದ ಪ್ರಯಾಣ ಸಾಧ್ಯವಿಲ್ಲವೆಂದು ಎಲ್ಲರೂ ಹೇಳಿದರು.

ಕೂರ್ಮದಾಸ ಮನಸ್ಸಿನಲ್ಲಿ ಮಾತ್ರ ಒಂದು ಪ್ರಾರ್ಥನೆ ಮಾಡಿದ್ದ:

"ಪಾಂಡುರಂಗಾ, ನಾನು ನಿನ್ನ ಮನೆಗೆ ಬರಲಾಗುವುದಿಲ್ಲ. ನೀನೇ ನನ್ನ ಬಳಿಗೆ ಬರಲಾರೆಯಾ?."

ರಾತ್ರಿ ಅವನು ತನ್ನ ಮನೆಯಲ್ಲಿ ಭಜನೆಯನ್ನು ಮಾಡುತ್ತಾ ಕುಳಿತಿದ್ದ. ಆ ಕ್ಷಣದಲ್ಲಿ ಮನೆ ತುಂಬಾ ದಿವ್ಯ ಬೆಳಕು ಚೆಲ್ಲಿತು.

ಕೂರ್ಮದಾಸ ತಲೆ ಎತ್ತಿ ನೋಡಿದಾಗ— ಪಾಂಡುರಂಗನೇ ಅವನ ಮುಂದೆ ನಿಂತಿದ್ದ!

ಪಂಢರಿನಾಥ ಪಾಂಡುರಂಗನ ತೇಜೋಮಯವಾದ ಮುಖ, ಆ ತುಳಸಿ ಮಾಲಾಧಾರಿಯ ಮುಖದಲ್ಲಿನ ಮಂದಹಾಸ, ಕಣ್ಣಲ್ಲಿ ಕರುಣೆ ಕಂಡು ಕೂರ್ಮದಾಸ ಪುಳಕಿತನಾದ.

ಪಾಂಡುರಂಗನು ಬಾಗಿ ಕೂರ್ಮದಾಸನನ್ನು ಹಿಡಿದು "ಕೂರ್ಮದಾಸ, ನಿನ್ನ ಹೆಜ್ಜೆಗಳು ನನ್ನ ಕಡೆ ಬರಲಾರದಲ್ಲವೇ? ನಿನ್ನ ನೋಡಲು ನಾನೇ ಬಂದಿದ್ದೇನೆ," ಎಂದು ಮಧುರ ಶಾರೀರದಿಂದ ನುಡಿದನು.

ಕೂರ್ಮದಾಸನ ಕಣ್ಣುಗಳು ತುಂಬಿಬಂದವು. ಅವನು ಪಾಂಡುರಂಗನ ಪಾದಗಳನ್ನು ತಲೆಗೆ ಹಿಡಿದು, "ನನ್ನ ದೇಹ ದುರ್ಬಲವಾದರೂ, ನನ್ನ ಮನಸ್ಸು ಎಂದೂ ನಿನ್ನಿಂದ ದೂರವಾಗಿರಲಿಲ್ಲ," ಎಂದು ಹೇಳಿದನು.

ಆ ರಾತ್ರಿ ಪಾಂಡುರಂಗನು ಅವನೊಂದಿಗೆ ಕೆಲಕಾಲ ಇದ್ದು, ಆಶೀರ್ವಾದ ನೀಡಿ ಅಂತರ್ಧಾನನಾದನು.

ಜನರು ನಂತರ ಕೇಳಿದಾಗ ಕೂರ್ಮದಾಸ ನುಡಿದ ಮಾತು — "ಲೋಕವು ದೇಹದ ಬಲಕ್ಕೆ ಬೆಲೆ ಕೊಡುತ್ತದೆ ಆದರೆ ದೇವರು ಹೃದಯದ ಭಕ್ತಿಗೆ ಬೆಲೆ ಕೊಡುತ್ತಾನೆ."



**ಭ್ರಮರಾ ಗೋಪಿನಾಥ್**
6366701153

*With Best Compliments From*

**SUDHA GENERAL STORES & STATIONERS**

**DEALERS IN QUALITY BOOKS & STATIONERY**

**No. 186, Sri Maruthi Buildings, RV Road, VV Puram, Bengaluru 560004**

STAR Health Insurance
Personal & Caring
The Health Insurance Specialist

**Proprietor**
**T.P. Suryanarayan**
**Top Advisor, L.I.C. &**
**STAR Health Insurance**
**Mob. No.: 9945484268**
**tpshbs@gmail.com**

LIC
भारतीय जीवन बीमा निगम
LIFE INSURANCE CORPORATION OF INDIA

With Best Compliments From

YASHASWINI
BUILDTECH
CIVIL ENGINEERS & CONTRACTORS

## Sri M.R. Ravishankar

DCE, BE, Civil, DBM
Managing Partner

*Will do all types of Construction Works & Consultant*

# 678/D, 9th Main, 8th Cross, 1st Stage, 2nd Block, HBR Layout,
Bengaluru - 560 043. E-mail : yashaswinibuildtech@gmail.com
Web: www.yashaswinibuildtech.com Phone : +91 98454 72948

With Best Compliments From

# SAPS

## Total Travel Solutions

**Specialized in :-**

Passport Assistance
Visa Processing
for all Countries
Pan Card Processing

## Sri A.C. Sridhar

**Mob.: 94819 04360**

#135/24, Juganahalli, 2nd Block
Rajajinagar, Bengaluru - 560 010

# ಯುವಕರಿಗೆ ಅತ್ಯವಶ್ಯಕ ಸಂದೇಶ

ಇಂದಿನ ಯುವಕರೇ ನಾಳಿನ ಪ್ರಜೆಗಳು ಎಂಬ ಮಾತು ಬಹಳ ಪ್ರಚಲಿತವಾಗಿದೆ. ತಮ್ಮ ಮುಂದಿನ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಇಂದಿನ ಯುವಕರಿಗೆ ಉತ್ತಮ ಸಂದೇಶ ನೀಡುವ ಪ್ರಯತ್ನವೇ ಈ ಬರಹ.

ಮೊದಲನೆಯದಾಗಿ ಪೀಳಿಗೆ ಅಥವಾ ತಲೆಮಾರು ಎಂಬುದರ ಬಗ್ಗೆ ಪ್ರಚಲಿತವಿರುವ ವಿವರಣೆಯನ್ನು ತಿಳಿದುಕೊಳ್ಳೋಣ. ಈ ಎಲ್ಲ ಪೀಳಿಗೆಗಳು ಸಾಂಪ್ರದಾಯಿಕತೆಗಿಂತ ಬಹುಶಃ ಹೆಚ್ಚು ಮುಖ್ಯವಾದ ಸಾಂಸ್ಕೃತಿಕ ಮಟ್ಟದ ಸೂಚಕಗಳಾಗಿವೆ.

1. ಪೀಳಿಗೆ ಶೂನ್ಯ – 1925 ಕ್ಕಿಂತ ಮೊದಲು

2. ಶ್ರೇಷ್ಠ ಪೀಳಿಗೆ – 1914 ರಿಂದ 1924

3. ಮೌನ (ಆದರೆ ಕ್ರಿಯಾಶೀಲ) ಪೀಳಿಗೆ – 1925 ರಿಂದ 1945

4. ಬೇಬಿ ಬೂಮರ್ಸ್ – 1946 ರಿಂದ 1964

5. ಮೈಕ್ರೋ/ಜನರೇಷನ್ ಜೋನ್ಸ್ – 1954/56 ರಿಂದ 1965/67

6. ಜನರೇಷನ್ ಕ್ಷ – 1965 ರಿಂದ 1980

7. ಕ್ಸಿಲೆನಿಯಲ್ಸ್ [ಮೈಕ್ರೋಜೆನೆರೇಶನ್] – 1977 ರಿಂದ 1983

8. ಮಿಲೇನಿಯಲ್ಸ್ – 1981 ರಿಂದ 1996

9. [ಮೈಕ್ರೋಜೆನೆರೇಶನ್] ಜಿಲ್ಲೆನಿಯಲ್ಸ್ – 1992/93 ರಿಂದ 1999/2000

10. ಜನರೇಷನ್ ಜ – 1997 ರಿಂದ 2010 ರ ದಶಕ

11. ಜನರೇಷನ್ ಆಲ್ಫಾ – 2010 ರಿಂದ ನಂತರದ ವರೆಗೆ.

ಮೇಲ್ಕಂಡ ಪಟ್ಟಿಯಿಂದ ನಾವು ಯಾವ ಪೀಳಿಗೆ ಅಥವ ತಲೆಮಾರಿನವರು ಎಂಬುದು ತಿಳಿಯುತ್ತದೆ. ಈಗೆಲ್ಲ ಕಂಪ್ಯೂಟರ್ ಹಾಗೂ ಮೊಬೈಲ್ ಯುಗ. ಇಂದಿನ ಯುವಕರಲ್ಲಿ ಅಪಾರ ಶಕ್ತಿ ಹುದುಗಿದೆ. ಆದರೆ ಸರಿಯಾಗಿ ಮಾರ್ಗದರ್ಶನ ಮಾಡುವವರ ಕೊರತೆ ಇದೆ ಎಂದು ಹಲವರ ಅಭಿಪ್ರಾಯ. ಯೌವನ ಎನ್ನುವಂತದ್ದು ಒಂದು ವಿಶೇಷ ಸ್ಥಿತಿ. ದೈಹಿಕ ಬಲ ಹೆಚ್ಚಿರುತ್ತದೆ. ಆದರೆ ಅನುಭವ ಎಂಬುದು ಇರುವುದಿಲ್ಲ. ವೃದ್ಧರಲ್ಲಿ ಅನುಭವ, ಜ್ಞಾನವಿರುತ್ತದೆ. ಆದರೆ ಅದನ್ನು ಉಪಯೋಗಿಸಲು ಶಕ್ತಿ ಇರುವುದಿಲ್ಲ. ಈ ಎರಡು ಸ್ಥಿತಿಗಳು ಪ್ರತ್ಯೇಕವಾಗಿ ಪ್ರಯೋಜನಕ್ಕೆ ಬರುವುದಿಲ್ಲ. ವಿವೇಕವೂ ಚೆನ್ನಾಗಿ ಜಾಗೃತವಾಗಿದ್ದು ಅದನ್ನು ಕಾರ್ಯರೂಪಕ್ಕೆ ತರಲು ಶಕ್ತಿಯೂ ಯಾರಲ್ಲಿ ಇದೆಯೋ ಅವರು ಉಪಯೋಗಕ್ಕೆ ಬರುವ ವ್ಯಕ್ತಿ. ಶರೀರ, ಮನಸ್ಸು, ಬುದ್ಧಿ ಮತ್ತು ಆಧ್ಯಾತ್ಮ ಈ ನಾಲ್ಕು ಮಜಲುಗಳು ವಿಕಾಸವಾಗಿರಬೇಕು. ಉತ್ಸಾಹ ತುಂಬಿದ, ಆರೋಗ್ಯಯುತವಾದ ಶರೀರ, ಸದ್ಗುಣಗಳಿಂದ ವಿಕಸಿತಗೊಂಡ ಮನಸ್ಸು, ವಿವೇಕಯುತವಾದ ಬುದ್ಧಿ ಎಂದರೆ ಶಾಸ್ತ್ರ ಮತ್ತು ಗುರುಗಳ ವಾಕ್ಯಗಳಿಂದ ಪರಿಷ್ಕೃತವಾದ, ತನ್ನ ಅನುಭವಗಳಿಂದ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಂಡು, ಬುದ್ಧಿ, ಅಧ್ಯಾತ್ಮದಲ್ಲಿ ಬಲವಿದ್ದು, ಭಗವಂತನಲ್ಲಿ ಭಕ್ತಿ, ವಿವೇಕ ವೈರಾಗ್ಯಾದಿಗಳು ಜಾಗೃತವಾಗಿರಬೇಕು; ಈ ನಾಲ್ಕು ಮಜಲುಗಳು ವಿಕಾಸವಾಗಿದ್ದರೆ, ಆ ವ್ಯಕ್ತಿಯ ಜೀವನ ಸುಂದರವಾಗಿರುತ್ತದೆ.

ಅದಕ್ಕೆ ನಾವು ಮಾಡಬೇಕಾದದ್ದು ಏನು? ಹಿರಿಯರು, ಸಾಧು ಸಂತರು ಮತ್ತು ಮಹಾತ್ಮರುಗಳು ಹೇಳಿರುವಂತೆ, ಒಂದು ಸಂತ, ಒಂದು ಗ್ರಂಥ, ಒಂದು ಮಂತ್ರ, ಒಂದು ಕ್ಷೇತ್ರ, ಒಂದು ಪಂಥ– ಈ ಐದು ಸಂಗತಿಗಳನ್ನು ಜೀವನ ಶೈಲಿಯಲ್ಲಿ ಅಳವಡಿಸಿಕೊಳ್ಳಬೇಕು.

ಒಂದು ಸಂತ ಅಂದರೆ ಒಬ್ಬ ಗುರು;

ಒಂದು ಗ್ರಂಥ ಅಂದರೆ ನಮಗೆ ತಿಳುವಳಿಕೆ ಕೊಡುವಂಥಹ ಒಂದು ಗ್ರಂಥ;

ಒಂದು ಮಂತ್ರ– ನಿರಂತರವಾಗಿ ಅನುಸಂಧಾನ ಮಾಡುವುದಕ್ಕೆ;

ಒಂದು ಕ್ಷೇತ್ರ – ಯಾವುದಾದರು ಆಶ್ರಮವೋ, ದೇವಸ್ಥಾನವೋ ಆಗಬಹುದು

ಒಂದು ಪಂಥ– ಯಾವುದಾದರೂ ಒಂದು ಪಂಥದ ನಿಯಮಗಳನ್ನು ಪಾಲಿಸುವವರಾಗಿರಬೇಕು; ಇವುಗಳನ್ನು ಮಾಡಿದರೆ, ಆ ನಾಲ್ಕೂ ಮಜಲುಗಳು ವಿಕಾಸವಾಗುತ್ತವೆ.

1. ಮೊದಲನೇದಾಗಿ ಒಂದು ಸಂತ – ಒಬ್ಬ ಗುರು ಬೇಕು. ಮುಂದೆ ಗುರಿ, ಹಿಂದೆ ಗುರು ಇರಬೇಕೆಂದು ಹಿರಿಯರು ಹೇಳುತ್ತಾರೆ. ಗುರು ಎಂದರೆ ಯಾರು? ಶಾಸ್ತ್ರಗಳನ್ನು ಅಧ್ಯಯನ ಮಾಡಿ ತನ್ನ ಅನುಭವದಲ್ಲಿ ಕಂಡುಕೊಂಡಿದ್ದಾನೋ, ಅಂತಹವರ ಸಂಪರ್ಕದಲ್ಲಿ ನಾವಿದ್ದರೆ ಗುರುವು ಪುಸ್ತಕಗಳು ಕಲಿಸುವುದಕ್ಕಿಂತ ಹೆಚ್ಚಾಗಿ ಕಲಿಸುತ್ತಾರೆ. ಒಮ್ಮೆ ಒಬ್ಬ ಸ್ವಾಮಿಗಳ ಬಳಿ ಒಬ್ಬ ಮಹಿಳೆ ತನ್ನ ಮಗುವಿನೊಂದಿಗೆ ಬಂದಿರುತ್ತಾಳೆ. ಆಕೆಯು ಮಗು ಗುಲಾಬಿಯ ಗಿಡದ ಹತ್ತಿರ ಹೋದಾಗ ಆಕೆ "ಆ ಗಿಡದಲ್ಲಿ ಮುಳ್ಳು ಇದೆ, ಮುಟ್ಟಬೇಡ" ಎನ್ನುತ್ತಾಳೆ. ಆಗ ಗುರುಗಳು ಹೇಳುತ್ತಾರೆ, 'ಗುಲಾಬಿಯ ಗಿಡದಲ್ಲಿ ಮುಳ್ಳಿದೆ ಎಂದು ಹೇಳಿಕೊಡಬೇಡ, ಮುಳ್ಳಿನ ಗಿಡದಲ್ಲಿ ಗುಲಾಬಿ ಇದೆ' ಎಂದು ಹೇಳಿಕೊಡು ಎಂದರಂತೆ. ಆಗ ಆ ಮಹಿಳೆ "ಇದು

ನಾನು ಜೀವನದಲ್ಲಿ ಕಲಿತ ದೊಡ್ಡ ಪಾಠ" ಎಂದಳಂತೆ. ಸಂತ ಮಹಾತ್ಮರ ಜೊತೆ ಒಡನಾಟ ಇಟ್ಟುಕೊಳ್ಳುವುದು, ಅದರಲ್ಲಿ ಪ್ರಶ್ನೆಗಳನ್ನು ಕೇಳಿ ವಿಷಯಗಳನ್ನು ತಿಳಿದುಕೊಳ್ಳುವಂಥದ್ದು, ಇದನ್ನು ಮಾಡಬೇಕು. ಗುರುವಿನ ಸಾಮೀಪ್ಯ ನಮಗೆ ಬೇಕು.

2. ಒಂದು ಗ್ರಂಥ– ನಮ್ಮ ಪ್ರಾಚೀನರು ಒಳ್ಳೆಯ ಗ್ರಂಥಗಳನ್ನು ಒಂದು ದೊಡ್ಡ ಆಸ್ತಿಯನ್ನು ನಮಗೆ ಕೊಟ್ಟಿದ್ದಾರೆ. ಉಪನಿಷತ್ತುಗಳು, ಭಗವದ್ಗೀತೆ, ಮಹಾಭಾರತ, ರಾಮಾಯಣ ಇವೆಲ್ಲ ಅದ್ಭುತವಾದ ಜ್ಞಾನದ ಖನಿ. ನಾವುಗಳು ಅವುಗಳ ಮೌಲ್ಯವನ್ನು ಕಂಡುಕೊಂಡಿಲ್ಲ. ವಿದೇಶಿಯರು ಅದನ್ನು ಕಂಡುಕೊಂಡು ಭಾರತಕ್ಕೆ ಮೊರೆ ಹೋಗುತ್ತಿದ್ದಾರೆ. ನಾವು ಬೇರೆಲ್ಲಾ ವಸ್ತುಗಳಿಗೆ ಪ್ರಾಶಸ್ತ್ಯ ಕೊಡುತ್ತಿದ್ದೇವೆ. ನಾವೆಲ್ಲರೂ ಆ ಜ್ಞಾನ ಸಂಪತ್ತಿನ ಸಂಪರ್ಕಕ್ಕೆ ಬರಬೇಕು.

3. ಒಂದು ಮಂತ್ರ – ಸಾಧನೆಗಳಲ್ಲಿ ಸರ್ವಶ್ರೇಷ್ಠ ಸಾಧನೆಯೆಂದರೆ ಜಪದ ಸಾಧನೆ. 'ಮನನಾತ್ ತ್ರಾಯತೇ ಇತಿ ಮಂತ್ರಃ" ಜಪಿಸುತ್ತಾ ಜಪಿಸುತ್ತಾ ನಮ್ಮ ಪಾಪವು ಕ್ಷಯವಾಗಿ ನಮ್ಮ ಉದ್ಧಾರವಾಗುತ್ತದೆ. ಆದ್ದರಿಂದ ರಾಮನಾಮವಾಗಲಿ, ಕೃಷ್ಣನಾಮವಾಗಲಿ, ಶಿವನಾಮವಾಗಲಿ ಯಾವುದೋ ಒಂದು ನಾಮವನ್ನು ತೆಗೆದುಕೊಂಡು ಜಪಿಸುತ್ತಿರಬೇಕು. ನಾಮಗಳಲ್ಲಿ ಶ್ರೇಷ್ಠ, ಕನಿಷ್ಠ ಎಂದಿಲ್ಲ. ಶ್ರೀ ರಾಮಕೃಷ್ಣರು ಕಾಳಿ ಮಾತೆಯನ್ನು ಜಪಿಸಿದರು. ಪುರಂದರದಾಸರು ವಿಠಲ ವಿಠಲ ಎಂದು ಜಪಿಸಿದರು. ಮೀರಾಬಾಯಿ 'ಮೇರೇ ತೋ ಗಿರಿಧರ ಗೋಪಾಲ' ಎಂದು ಜಪಿಸಿದರು. ಆದ್ದರಿಂದ, ಯಾವುದೋ ಒಂದು ನಾಮವನ್ನು ತೆಗೆದುಕೊಂಡು ಜಪಿಸುತ್ತಿರಬೇಕು.

4. ಒಂದು ಕ್ಷೇತ್ರ –ನಮ್ಮ ಮನೆ ದೇವರ ಕ್ಷೇತ್ರವೋ ಇಲ್ಲವೇ ಬೇರೆ ಯಾವುದಾದರೂ ಒಂದು ಕ್ಷೇತ್ರಕ್ಕೆ ಪ್ರತಿ ವರ್ಷ ಹೋಗಿ ದರ್ಶನ ಮಾಡಬೇಕು. ವಾರದಲ್ಲಿ ಒಂದು ದಿನ ಮನೆ ಹತ್ತಿರವೇ ಇರುವ ದೇವಸ್ಥಾನಕ್ಕೆ ಹೋಗುವುದು ಒಳ್ಳೆಯ ಸಾಧನೆಯಾಗುತ್ತದೆ.

5. ಒಂದು ಪಂಥ– ನಾವು ಯಾವುದೋ ಒಂದು ಪಂಥಕ್ಕೆ ಸೇರಿದವರಾಗಿರುತ್ತೇವೆ. ದ್ವೈತ, ಅದ್ವೈತ, ಶೈವ ಅಂತಹ ಯಾವ ಪಂಥಕ್ಕೆ ನಾವು ಸೇರಿರುವೆವೋ ಆ ಪಂಥದ ಆಚರಣೆಗಳನ್ನು ಚೆನ್ನಾಗಿ ತಿಳಿದುಕೊಂಡು ಅಲ್ಲಿ ವಿಧಿಸಲ್ಪಟ್ಟಿರುವ ದಿನನಿತ್ಯದ ಆಚರಣೆಗಳನ್ನು ತಪ್ಪದೇ ಮಾಡಬೇಕು.

ಈ 5 ಸಂಗತಿಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ನಮ್ಮ ವ್ಯಕ್ತಿತ್ವ ವಿಕಾಸವಾಗುತ್ತದೆ. ನಮ್ಮ ಜೀವನ ಸಾರ್ಥಕವಾಗುತ್ತದೆ. ಇದೇ ನಾವು ಇಂದಿನ ಯುವಕರಿಗೆ ಕೊಡುವ ಒಂದು ಸಂದೇಶ. ಈ ನನ್ನ ಲೇಖನಕ್ಕೆ ನನ್ನ ಪೂಜ್ಯ ಮಾತಾಪಿತೃಗಳೇ ನನಗೆ ಪ್ರೇರಣೆ. ಅವರುಗಳ ಮಾರ್ಗದರ್ಶನ ಮತ್ತು ವ್ಯಕ್ತಿತ್ವ, ಮೇಲ್ಕಂಡ ಸಂಗತಿಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಜೀವಿಸಿದ ಪರಿ ನನ್ನಲ್ಲಿ ಇನ್ನೂ ಹಸಿರಾಗಿ ನೆನಪಿನಲ್ಲಿದೆ. ಇವುಗಳನ್ನು ನಮ್ಮ ಯುವ ಪೀಳಿಗೆ ರೂಢಿಸಿಕೊಂಡರೆ ಅದೇ ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ.



**ಜಲಜ ಎಸ್. ಪ್ರಕಾಶ್**
98451 64823

**********************************************************










**ಮಂಡಲ ಕಲೆ: ಸೋನಿಯಾ ಶಿವರಾಂ**
9880755587

# ನಮ್ಮ ಚಾರ್ ಧಾಮ್ ಯಾತ್ರೆಯ ಪ್ರವಾಸ ಕಥನ (೨೦೨೫)



ಭಾರತ ದೇಶದಲ್ಲಿ ಉತ್ತರಾಖಂಡ ರಾಜ್ಯವು ಪುಣ್ಯ ಭೂಮಿಯಾಗಿದ್ದು ಇಲ್ಲಿ ಅನೇಕ ಪ್ರಖ್ಯಾತ ದೇವಾಲಯಗಳಿವೆ. ರಾಮಾಯಣ, ಮಹಾಭಾರತ, ಪುರಾಣಗಳಲ್ಲಿನ ಎಲ್ಲಾ ಪಾತ್ರಗಳೂ ಇಲ್ಲಿ ಒಂದಲ್ಲ ಒಂದು ಜಾಗದಲ್ಲಿ ನಮಗೆ ಕಾಣಸಿಗುತ್ತವೆ. ಮಹಾಭಾರತವನ್ನು ಗಣೇಶನ ಕೈಲಿ ಬರೆಸಿದ ವ್ಯಾಸ ಮಹರ್ಷಿಯ ಪೀಠ, ಗಣೇಶನು ಮಹಾಭಾರತವನ್ನು ಬರೆದ ಸ್ಥಳ, ಭೀಮನಿಗೆ ಹನುಮಂತನಿಂದ ಗರ್ವಭಂಗವಾದ ಸ್ಥಳ, ಮುಂತಾದವು ಅವುಗಳಲ್ಲಿ ಕೆಲವು. ಅವುಗಳಲ್ಲಿ ವಿಭಿನ್ನವೆನಿಸಿರುವ, "ಚಾರ್ ಧಾಮ್" ಎಂದೇ ಗುರುತಿಸಲ್ಪಡುವ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ ಹಾಗು ಬದರಿನಾಥ ಸ್ಥಳಗಳು ಪುಣ್ಯಕ್ಷೇತ್ರಗಳಾಗಿವೆ. ಈ ನಾಲ್ಕೂ ಧಾಮಗಳಿಗೆ ಯಾತ್ರೆ ಕೈಗೊಳ್ಳುವುದು ಸ್ವಲ್ಪ ಪ್ರಯಾಸದ ಕೆಲಸ ಆದರೆ ಜೀವನದ ಒಂದು ಪ್ರಮುಖ ಸಾಧನೆ.

ಈ "ಚಾರ್ ಧಾಮ್" ಕ್ಷೇತ್ರಗಳಿಗೆ ಹರಿದ್ವಾರ ಮತ್ತು ಹೃಷೀಕೇಶಗಳು ಹೆಬ್ಬಾಗಿಲುಗಳು ಎನಿಸಿಕೊಂಡಿವೆ. ಹರಿ–ಹರರ ಸನ್ನಿಧಿಗೆ ಮುಖ್ಯದ್ವಾರವಾಗಿರುವ ಹರಿದ್ವಾರವು ಗಂಗಾ ನದಿಯ ದಡದಲ್ಲಿರುವ ಪವಿತ್ರ ಹಿಂದೂ ಯಾತ್ರ ಸ್ಥಳವಾಗಿದೆ. ಗಂಗಾ ನದಿಯು ಪರ್ವತಗಳಿಂದ ಇಳಿದು ಬಯಲು ಪ್ರದೇಶವನ್ನು ತಲುಪುವ ಮೊದಲ ಸ್ಥಳ ಇದಾಗಿದೆ. ಹರಿದ್ವಾರದಲ್ಲಿನ ಪ್ರಮುಖ ಸ್ಥಳಗಳೆಂದರೆ, ಹರ್ ಕಿ ಪೌರಿ – ದಕ್ಷ ಮಹಾದೇವನ ದೇವಸ್ಥಾನ, ಸಪ್ತರ್ಷಿ ಆಶ್ರಮ ಮತ್ತ್ ಬಿರ್ಲಘಾಟ್. ಹರ್ ಕಿ ಪಾರಿ ಯಲ್ಲಿ ಪ್ರತಿದಿನ ಸಂಜೆ. ಗಂಗಾ ಆರತಿಯನ್ನು ನಡೆಸಲಾಗುತ್ತೆ. ಇನ್ನು ಹೃಷೀಕೇಶದಲ್ಲಿ ಸುಮಾರು 133 ವರ್ಷಗಳ ಪುರಾತನ ಕೈಲಾಸ ಆಶ್ರಮವಿದೆ. ಇದಕ್ಕೆ ಬ್ರಹ್ಮವಿದ್ಯಾ ಪೀಠ ಎಂದೂ ಹೆಸರು. ಇಲ್ಲಿ ರಾಮ ಜೂಲ, ಲಕ್ಷ್ಮಣ ಜೂಲ ಇವೆರಡೂ ಪ್ರಮುಖ ಆಕರ್ಷಣೆ. ನಮ್ಮಯ "ಚಾರ್ ಧಾಮ್" ಯಾತ್ರೆಯು ಈ ಪುಣ್ಯ ಸ್ಥಳದಿಂದ ಪ್ರಾರಂಭಗೊಂಡಿತು.

"ಚಾರ್ ಧಾಮ್" ಯಾತ್ರೆಗೆಂದು ಟ್ರಾವಲ್ಸನಲ್ಲಿ ಸೀಟು ಕಾಯ್ದಿರಿಸಿದಾಗಿನಿಂದ, ನಮಗೆ ಯಾತ್ರೆಯದೇ ಚಿಂತೆ. ನಾವು ಹೋಗುತ್ತಿದುದು ಅಕ್ಟೋಬರ್ ತಿಂಗಳಲ್ಲಿ. ಅಲ್ಲಿ ವಿಪರೀತ ಛಳಿ ಎಂದು ಎಲ್ಲರೂ ಹೆದರಿಸುವವರೇ! ನಮ್ಮದು ಸೀಜನ್ ನ ಕೊನೆಯ ಯಾತ್ರೆ. ನಾವು ದೆಹಲಿ ವಿಮಾನ ನಿಲ್ದಾಣ ತಲುಪಿದನಂತರ ನಮ್ಮೆಲ್ಲರನ್ನು ಎರಡು ಬಸ್ ಗಳಲ್ಲಿ ಹರಿದ್ವಾರಕ್ಕೆ ಕರೆದೊಯ್ದರು. ನಾವುಗಳು ದೆಹಲಿಯನ್ನು ಬಿಟ್ಟು ಸಂಜೆ ಹೊತ್ತಿಗೆ ಹರಿದ್ವಾರವನ್ನು ಸೇರಿದೆವು. ಅಲ್ಲಿನ ಹೋಟೆಲೊಂದರಲ್ಲಿ ನಾವು ತಂಗಲು ವ್ಯವಸ್ಥೆ ಮಾಡಲಾಗಿತ್ತು.

ನಮ್ಮ ಟೂರ್ ಮ್ಯಾನೇಜರ್ ಮುಂದಿನ ನಮ್ಮ ಪ್ರಯಾಣದ ಬಗ್ಗೆ ಎಲ್ಲ ವಿವರಗಳನ್ನು ನೀಡಿದರು. ಬರುವ 20 ದಿನಗಳು ನಾವುಗಳು ಅವರು ಹೇಳಿದಂತೆ ನಡೆಯಬೇಕು. ದಿನಾ ಬೆಳಗ್ಗೆ 4 ಗಂಟೆಗೆ ಏಳಬೇಕು. ಕಾಫಿ ಕುಡಿದು 5 ಗಂಟೆಯ ಹೊತ್ತಿಗೆ ತಯಾರಾಗಿ ಬೆಳಗ್ಗೆ ಉಪಹಾರ ಸೇವಿಸಿ 7 ಗಂಟೆಗೆ ಬಸ್ಸಿನಲ್ಲಿರಬೇಕು. ಕೆಲವು ದಿನಗಳಲ್ಲಿ 5 ಗಂಟೆಗೇ ಹೊರಡಬೇಕಾಗಬಹುದು ಎಂದು ತಿಳಿಸಿದರು. ಅಂತೆಯೇ, ಮಾರನೆಯ ದಿನ ಬೆಳಗಿನ ಝಾವ 5 ಗಂಟೆಗೇ ಎದ್ದು ಗಂಗಾ ಸ್ನಾನ ಮಾಡಿದೆವು. ಸ್ವಲ್ಪ ಛಳಿಯಿದ್ದರೂ ನೀರು ಬಹಳ ಶುಭ್ರವಾಗಿತ್ತು. ದೇಹ ಮನಸ್ಸುಗಳೆಲ್ಲವೂ ಶುಚಿಯಾಗಿ ಮನಸ್ಸಿಗೆ ಆಹ್ಲಾದವೆನಿಸಿತು. ಸ್ನಾನದ ನಂತರ ಬೆಳಗಿನ ಬಿಸಿ ಬಿಸಿ ಉಪಹಾರ ಸೇವಿಸಿದನಂತರ ನಮ್ಮ ಪ್ರಯಾಣ. ಮೊದಲಿಗೆ ರಾಣಾಚಟ್ಟಿ ಕಡೆ ಹೊರಟೆವು. ಸಂಜೆಯ ಹೊತ್ತಿಗೆ ಜಾನಕಿ ಚಟ್ಟಿ ಎಂಬ ಸ್ಥಳಕ್ಕೆ ಸೇರಿದೆವು. ಮರುದಿನ ಬೆಳಿಗ್ಗೆ ಉಪಹಾರದ ನಂತರ ಯಮುನೋತ್ರಿಯ ಕಡೆ ನಮ್ಮ ಪ್ರಯಾಣ ಶುರುವಾಯಿತು.

ಜಾನಕಿ ಜಟ್ಟಿ ಎಂಬ ಸ್ಥಳದಿಂದ ಯಮುನೋತ್ರಿಗೆ ಹೋಗಿ ಬರಲು 8 ಕಿಲೋಮೀಟರಿನ ಬಹಳ ದುರ್ಗಮವಾದ ದಾರಿ. ರಾಣಾ ಚೆಟ್ಟಿಯಿಂದ ಜಾನಕಿ ಚೆಟ್ಟಿಯ ಸುಮಾರು 4 ಕಿ.ಮಿ. ದಾರಿಯನ್ನು ಮಿನಿ ವಾಹನದಲ್ಲಿ ಕ್ರಮಿಸಿ, ನಂತರ ಅಲ್ಲಿಂದ ನಮ್ಮಲ್ಲಿ ಕೆಲವರು ಡೋಲಿಯಲ್ಲಿ, ಕುದುರೆ, ಪಿಟ್ಟು ಹಾಗು ಇನ್ನು ಕೆಲವರು ನಡಿಗೆಯಲ್ಲಿ ಹತ್ತಲು ತೀರ್ಮಾನಿಸಿಕೊಂಡು ಯಮುನೋತ್ರಿಯನ್ನು ತಲುಪಿದೆವು.

ರಾಣಾ ಚಟ್ಟಿಯಿಂದ ಜಾನಕಿ ಚಟ್ಟಿಯ ಮೂಲಕ ಯಮುನೋತ್ರಿಯ ನಮ್ಮ ಪ್ರಯಾಣ ಒಂದು ಕನಸಿನಂತೆ ಇತ್ತು. ಆಳವಾದ ಪ್ರಪಾತ, ಪ್ರಪಾತದ ಅಡಿಯಲ್ಲಿ ಮೈಲುಗಟ್ಟಲೆ ಒಂದೇ ಸಮನೆ ಹರಿಯುತ್ತಿರುವ ಯಮುನಾ ನದಿ, ಮಧ್ಯೆ ಮಧ್ಯೆ ಸೇತುವೆಗಳು, ಪರ್ವತ ಶ್ರೇಣಿ, ಅವುಗಳ ಮೇಲೆ ಬಿಸಿಲು ಬಿದ್ದಾಗ ಥಳ ಥಳ ಹೊಳೆಯುವ ಹಿಮದಿಂದ ಆವೃತವಾದ ಶಿಖರಗಳು, ಸ್ವರ್ಗವೇ ಧರೆಗಿಳಿದಂತ ಅನುಭವ. ಈ ಪ್ರವಾಸದಲ್ಲಿ ಮಧ್ಯೆ ದಾರಿಯಲ್ಲಿ ಬಸ್ಸು ನಿಲ್ಲಿಸಿದಾಗ ಫೋಟೋ ತೆಗೆಯಲು ನಿಂತಾಗ ಕಂಡ ದೃಶ್ಯಗಳು ಎಲ್ಲರನ್ನೂ ಮಂತ್ರ ಮುಗ್ಧರನ್ನಾಗಿ ಮಾಡುತ್ತಿದ್ದವು. ಪ್ರಕೃತಿಯ ಈ ಅಗಾಧತೆಯ ಮುಂದೆ ನಾವೆಷ್ಟು ಕುಬ್ಜರು ಅನ್ನಿಸುತಿತ್ತು. ಮೂಕ ವಿಸ್ಮಿತವಾಗಿ

ಫೋಟೋಗಳನ್ನು ಕ್ಲಿಕ್ಕಿಸಿ ಬಸ್ಸಿನಲ್ಲಿ ಬಂದು ಕುಳಿತುಕೊಳ್ಳುತ್ತಿದ್ದೆವು.

ಯಮುನೋತ್ರಿ ಹತ್ತಲು ಬಹುತೇಕ ಹಿರಿಯ ನಾಗರೀಕರು ಡೋಲಿಯಲ್ಲಿ ಹಾಗು ಪಿಟ್ಟುವಿನಲ್ಲಿ, ಮತ್ತೆ ಕೆಲವರು ಕುದುರೆ ಉಳಿದವರು ನಡೆಯಲು ಪ್ರಾರಂಭಿಸಿದರು. ಡೋಲಿ ಮತ್ತು ಪಿಟ್ಟುವಿನಲ್ಲಿ ಕುಳಿತವರನ್ನು ಹೊತ್ತೊಯ್ಯುವುದನ್ನು ನೋಡಿ ಯಾಕೋ ಮನಸ್ಸು ಚುರ್ ಎನ್ನಿಸಿತು. ಹೊಟ್ಟೆ ಪಾಡಿಗಾಗಿ ಆ ಜನರು ಹೊತ್ತುಕೊಂಡು ನಡೆಯುವುದನ್ನು ನೋಡಿ ಅವರುಗಳನ್ನು ಈ ಬಗ್ಗೆ ಮಾತಿಗೆಳೆದಾಗ, ಆ ಹುಡುಗರು ಮಾತ್ರ, ತಮಾಷೆಯಾಗಿ ನಿಮ್ಮನ್ನು ಸಾಗಿಸುವುದೇ ನಮ್ಮ ಕೆಲಸ ಎನ್ನುತ್ತಾ ನಮ್ಮ ಕೆಲ ಸಹ ಪ್ರಯಾಣಿಕರನ್ನು ಹೊತ್ತುಕೊಂಡು ನಡೆದರು. ಆ ಎತ್ತರದಲ್ಲಿ ಆಮ್ಲಜನಕದ ಕೊರತೆ ಇರುವ ಆ ಜಾಗದಲ್ಲಿ ಹತ್ತು ಹೆಜ್ಜೆ ಇಟ್ಟರೇ ಏದುಸಿರು ಬಿಡುವ ನಮಗೆ ಅವರ ಲವಲವಕೆಯನ್ನು ನೋಡಿ ಆಶ್ಚರ್ಯವಾಯಿತು.

ಯಮುನೋತ್ರಿ ತಲುಪಿದ ಮೇಲೆ ನಮಗೆ ಮತ್ತೊಂದು ಆಶ್ಚರ್ಯವೆಂದರೇ, ಯಮುನಾ ನದಿಯ ಪೂಜೆ ಮಾಡುವ ಮೊದಲು ನದಿಯಲ್ಲಿ ಸ್ನಾನ ಮಾಡಬೇಕೆಂಬುದು. ಆ ಕೊರೆಯುವ ಛಳಿಯಲ್ಲಿ ಹೇಗೆ ಸ್ನಾನ ಮಾಡಲು ಸಾಧ್ಯ ಎನಿಸಿತು. ಆದರೆ ಅಲ್ಲಿನ ಹಬೆಯಾಡುತ್ತಿರುವ ಬಿಸಿ ಬಿಸಿ ನೀರಿನ ಸೂರ್ಯ ಕುಂಡ ಕೊಳವನ್ನು ನೋಡಿದಾಗ, ಇದು ನಿಜವೇ ಎಂದೆನಿಸಿತು.

ಬಿಸಿ ನೀರಿನ ಆ ಕೊಳದಲ್ಲಿ ಸ್ನಾನ ಮಾಡಿ ಎದ್ದಾಗ ಮೈ ಮನಸ್ಸುಗಳಲ್ಲಿ ಹರ್ಷೋಲ್ಲಾಸಗಳುಂಟಾದವು. ಆ ಕೊರೆಯುವ ಛಳಿಯಲ್ಲಿ, ಯಮುನಾ ನದಿಯ ಉಗಮ ಸ್ಥಾನದ ಬಳಿ ಬಿಸಿ ನೀರಿನ ಈ ಸ್ನಾನ ಯಾವ ಪಂಚತಾರಾ ಹೋಟಲಿನಲ್ಲಿಯೂ ಸಿಗದ ಅನುಭವವಾಗಿತ್ತು. ಯಮುನಾ ನದಿಗೆ ಮಹಿಳೆಯರೆಲ್ಲಾ ಬಾಗಿನ ಕೊಟ್ಟು, ದೇವಾಲಯದ ದರ್ಶನ ಮಾಡಿ ಮತ್ತೆ ಅವರವರ ಇಚ್ಛಾನುಸಾರ ಡೋಲಿ/ ಪಿಟ್ಟು / ಕುದುರೆ / ನಡಿಗೆಯಲ್ಲಿ ವಾಪಸ್ಸು ಬಂದು ಜಾನಕಿಚೆಟ್ಟಿ ತಲುಪಿ ನಂತರ ಅಲ್ಲಿಂದ ಮಿನಿ ವಾಹನದಲ್ಲಿ ರಾಣಾಚೆಟ್ಟಿಯಲ್ಲಿ ನಾವುಗಳು ತಂಗುವ ಹೋಟಲನ್ನು ತಲುಪಿದಾಗ ರಾತ್ರಿಯಾಗಿತ್ತು.

ಮುಂದೆ ಬಸ್ಸಿನಲ್ಲಿ ಪ್ರಯಾಣವೇ ಜಾಸ್ತಿ. ಬಾರಕೋಟ್ ಮುಖಾಂತರ ಉತ್ತರಕಾಶಿ ಕಡೆಗೆ ನಮ್ಮ ಪಯಣ. ಇಲ್ಲಿ ನಾವುಗಳು ಶಕ್ತಿಮಂದಿರ ಮತ್ತು ವಿಶ್ವನಾಥನ ದೇವಸ್ಥಾನಗಳನ್ನು ನೋಡಿ ಸಂಜೆ ಗಂಗಾನದಿಯ ತಟದಲ್ಲಿ ಗಂಗಾರತಿಯನ್ನು ನೋಡಿದೆವು. ಸಾವಿರಾರು ಜನರು ನದಿಯ ತಟದಲ್ಲಿ ಕುಳಿತು ಸಾಮೂಹಿಕವಾಗಿ ಭಜನೆ ಮಾಡುವ, ಗಂಗಾರತಿಯನ್ನು ಮಾಡುತ್ತಾ, ಗಂಗಾರತಿಯನ್ನು ನೋಡುತ್ತಾ ಭಾವ ಪರವಶರಾಗುವುದನ್ನು ನೋಡುವುದೇ ಒಂದು ರೋಚಕವಾದ ಅನುಭವ. ಮೊದಲಿನಂತೆ ಗಂಗಾನದಿಯ ತಟದಲ್ಲಿ ಈಗ ಸ್ವಚ್ಛತೆಯ ಸಮಸ್ಯೆ ಇದ್ದಂತೆ ಕಾಣಿಸಲಿಲ್ಲ. ಎಲ್ಲವೂ ವ್ಯವಸ್ಥಿತವಾಗಿ ಶುಭ್ರವಾಗಿದ್ದವು.

ಬೆಂಗಳೂರಿನ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಸೇವಾಕರ್ತರಾಗಿರುವ ನಮ್ಮ ತಂಡವನ್ನು ಅಲ್ಲಿ ಗಂಗಾರತಿಯನ್ನು ನೆರವೇರಿಸುವ ಸಮಿತಿಯವರು ಬರಮಾಡಿಕೊಂಡು ಆದರಿಸಿದ್ದು ಒಂದು ವಿಶೇಷ.

ಮುಂದೆ ಗಂಗೋತ್ರಿಗೆ ಪ್ರಯಾಣ. ನಮ್ಮ ಬಸ್ಸಿನ ಪ್ರಯಾಣದ ಬಗ್ಗೆ ಒಂದು ಮಾತನ್ನು ಹೇಳಲೇಬೇಕು. ನಮ್ಮ ಜೊತೆಗೆ ಪ್ರಯಾಣಿಸುತ್ತಿದ್ದ ಎಲ್ಲರೂ ದೈವಭಕ್ತರು. ಹೇಳಿ ಕೇಳಿ ನಮ್ಮದು "ಚಾರ್ ಧಾಮ್" ತೀರ್ಥಯಾತ್ರೆ. ಬೆಳಗ್ಗೆ 5 ಗಂಟೆಗೆ ಬಸ್ಸಿನಲ್ಲಿ ಕುಳಿತ ಕೂಡಲೇ ಸಹಪ್ರಯಾಣಿಕ ಮಹಿಳಾಮಣಿಯರು ಒಬ್ಬೊಬ್ಬರಾಗಿ ಭಜನೆಯನ್ನು ಹಾಡುತ್ತಿದ್ದರು. ಮಿಕ್ಕ ಎಲ್ಲರೂ ದನಿಗೂಡಿಸುತ್ತಿದ್ದರು. ಮೊದಲು ವೆಂಕಟೇಶ ಸುಪ್ರಭಾತ, ನಂತರ ವಿಷ್ಣು ಸಹಸ್ರನಾಮ, ಮೋಹಮುದ್ಗರ, ಲಿಂಗಾಷ್ಟಕ, ಹೀಗೆ ಎಲ್ಲಾ ದೇವರುಗಳ ಭಜನೆ ನಡೆಯುತ್ತಿದ್ದವು. ಇದರ ಮಧ್ಯೆ, ನಾವು 11–12 ಮಂದಿ ನಮ್ಮೊಂದಿಗಿದ್ದ ಡಾ॥ ಕೇಶವಮೂರ್ತಿಯವರ ನೇತೃತ್ವದಲ್ಲಿ ಶತರುದ್ರ ಪಾರಾಯಣವನ್ನು ಮಾಡುತ್ತಿದ್ದೆವು. ನಮ್ಮ ಗುರಿ ಕೇದಾರನಾಥನ ದರ್ಶನಕ್ಕೆ ಮೊದಲು 11 ಬಾರಿ ಶತರುದ್ರ ಪೂರ್ತಿಯಾಗಬೇಕೆಂಬುದಾಗಿತ್ತು. ಅದರಲ್ಲಿ ನಾವು ಸಫಲರಾದೆವು ಸಹ. ನಮ್ಮ ಟೂರ್ ಮ್ಯಾನೇಜರ್ ಪ್ರತಿದಿನ ಬೆಳಗ್ಗೆ ನಾವು ತಲುಪಲಿರುವ ಕ್ಷೇತ್ರದ ಬಗ್ಗೆ ಸ್ಥಳ ಮಾಹಿತಿಯನ್ನು ನೀಡುತ್ತಿದ್ದರು.

ನಾವು ಉತ್ತರಕಾಶಿಯಲ್ಲಿ ರಾತ್ರಿ ಉಳಿದು ಮರುದಿನ ಬೆಳಗ್ಗೆ ಗಂಗೋತ್ರಿಗೆ ಹೊರಟೆವು. ಅಲ್ಲಿ ಗಂಗಾ ಮಾತೆ ಮತ್ತು ಕಾಲಭೈರವ ದೇವಾಲಯಕ್ಕೆ ಭೇಟಿನೀಡುವ ಮೊದಲು ಭಾಗೀರಥಿ ನದಿಯಲ್ಲಿ ಮಿಂದು ಮಾತೆಯ ದರ್ಶನ ಪಡೆದು ಸಂಜೆ ಹೊತ್ತಿಗೆ ವಾಪಸ್ ಉತ್ತರಕಾಶಿಗೆ ಹಿಂತಿರುಗಿದೆವು. ರಾತ್ರಿ ಅಲ್ಲಿಯೇ ಉಳಿದು ಮರುದಿನ ಬೆಳಗ್ಗೆ ಇನ್ನೊಮ್ಮೆ ಉತ್ತರಕಾಶಿಯ ಈಶ್ವರನ ದರ್ಶನ ಪಡೆದು ಉಪಹಾರ ಸೇವಿಸಿ ಬದರಿನಾಥ ಕ್ಷೇತ್ರದ ಕಡೆಗೆ ನಮ್ಮ ಪ್ರಯಾಣ ಬೆಳೆಸಿದೆವು.

ಉತ್ತರಕಾಶಿಯ ಮೂಲಕ ಶಕ್ತಿ ಮಂದಿರ, ವಿಶ್ವನಾಥ ದೇಗುಲಗಳನ್ನು ನೋಡಿ ಉತ್ತರಾ ಖಂಡದ ಅದ್ಭುತ ಟೆಹರಿ ಜಲಾಶಯ (ಡ್ಯಾಮ್) ಅನ್ನು ನೋಡುವ ಅವಕಾಶ ನಮಗೆ ಸಿಕ್ಕಿತು. ಭಾಗೀರಥಿ ನದಿಗೆ ಅಡ್ಡಲಾಗಿ ಕಟ್ಟಿರುವ ಈ ಜಲಾಶಯ ದೇಶದ ಅತ್ಯಂತ ಎತ್ತರದ ಜಲಾಶಯ ಮತ್ತು ಪ್ರಪಂಚದ ಅತಿ ಎತ್ತರದ ಜಲಾಶಯಗಳಲ್ಲಿ ಒಂದು. ಇಲ್ಲಿಂದ ಸರಿಸುಮಾರು 60 ಕಿ.ಮೀ. ವರೆಗೆ ಸತತವಾಗಿ ಹರಿಯುತ್ತಿರುವ ಸ್ವಾಭಾವಿಕ ಕಾಲುವೆಗಳನ್ನು ನೋಡುವುದೇ ಒಂದು ಆನಂದ. ಸಂಜೆ ಸುಮಾರು ಆರೂವರೆ ಸಮಯಕ್ಕೆ ಅಲ್ಲಿನ ಧಾರೀಮಾತೆಯ ಸಾನ್ನಿಧ್ಯದಲ್ಲಿ ದೇವಿ ಸ್ತುತಿಗಳನ್ನು ಪಾರಾಯಣ ಮಾಡಿದೆವು. ಈ ಮಾತೆ ನದಿಯ ಮಧ್ಯದಲ್ಲಿ ನೆಲೆಸಿದ್ದಾಳೆ. ಆಕೆಯ ಸ್ಥಳಾಂತರಕ್ಕೆ ಯತ್ನಿಸಿದಾಗ ಇಡೀ ಊರಿಗೆ ಬಹಳಷ್ಟು ಸಂಕಷ್ಟಗಳು ಉಂಟಾದದ್ದರಿಂದ, ಆಕೆ ಈಗಾಗಲೇ ಇರುವ ಕಡೆಯೇ ಮೋಹಕವಾದ ಭವ್ಯ ದೇಗುಲ ನಿರ್ಮಾಣವಾಯಿತು. ಇಲ್ಲಿಯ ಸಮೀಪದ ತಂಗುದಾಣದಲ್ಲಿ ವಿಶ್ರಾಂತಿ ಪಡೆದು ಬೆಳಗ್ಗೆ 5:30 ರ ಹೊತ್ತಿಗೆ ಬದರಿಗೆ ಹೊರಡುವ ಏರ್ಪಾಟಾಗಿತ್ತು.

ಚಾರ್ ಧಾಮ್ ಗಳಲ್ಲಿ ಎರಡು ಧಾಮಗಳ ಯಾತ್ರೆ ಮುಗಿದಿತ್ತು. ಇನ್ನುಳಿದದ್ದು ಬದರೀನಾಥ ಮತ್ತು ಕೇದಾರನಾಥ ದರ್ಶನ. ಬದರಿಯಲ್ಲಿ ಬೆಟ್ಟ ಗುಡ್ಡ ಹತ್ತುವ ಅವಶ್ಯಕತೆ ಇಲ್ಲದಿದ್ದರೂ ಹವಾಮಾನ ಮಾತ್ರ 4 ಡಿಗ್ರಿ ಇತ್ತು. ಆ ನಡುಗುವ ಛಳಿಯಲ್ಲಿ ಬೆಳಿಗ್ಗೆ 5 ಗಂಟೆಗೇ ಎದ್ದು, ದೇವಸ್ಥಾನಕ್ಕೆ ತೆರಳಿ, ಬದರಿನಾರಾಯಣ ದರ್ಶನ ಪಡೆದು ಅರುಣ ಪಾರಾಯಣ, ಇತರ ಸೂಕ್ತ ಪಾರಾಯಣವನ್ನು ಮಾಡಿದೆವು. ಏನೆಂದರೂ ನಮ್ಮ ನಾರಾಯಣ ಅಲಂಕಾರ ಪ್ರಿಯ. ವಜ್ರ, ವೈಢೂರ್ಯಗಳಿಂದ ಅಲಂಕೃತನಾಗಿ ಕಂಗೊಳಿಸುತ್ತಿದ್ದ ದೃಶ್ಯ ನಯನ ಮನೋಹರವಾಗಿತ್ತು. ಆ ಹೊತ್ತಿಗೆ ಬದರೀನಾಥ ನಮ್ಮ ಮೇಲೆ ಕರುಣೆ ತೋರಿದ್ದ. ಬೆಳಗಿನ ಸೂರ್ಯ ಕಿರಣಗಳು ಛಳಿಯನ್ನು ಕಡಿಮೆ ಮಾಡಿದ್ದವು. ನದಿಯ ತಟದಲ್ಲಿ ದಂಪತಿಗಳೆಲ್ಲಾ ಜೊತೆ ಜೊತೆಯಾಗಿ ಪುರೋಹಿತರ ನಿರ್ದೇಶನದಲ್ಲಿ ಸಾಂಗೋಪಾಂಗವಾಗಿ ಪೂಜೆ ನಡೆಸಿದೆವು. ಬಿಸಿಲು ಬಂದಿದ್ದರಿಂದ ನಾವುಗಳು ಸಂಪ್ರದಾಯದಂತೆ ಪಂಚೆ ಶಲ್ಯಗಳನ್ನು ಉಟ್ಟುಕೊಂಡೇ ಪಿತೃಕಾರ್ಯಗಳನ್ನೂ ಮಾಡಲು ಸಾಧ್ಯವಾಯಿತು. ಬದರಿನಾಥದಲ್ಲಿನ ಹೋಟೆಲ್ ಒಂದರಲ್ಲಿ ನಾವೆಲ್ಲ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು.

ಮರುದಿನ ಬದರೀನಾಥನ ಸಾನಿಧ್ಯದಲ್ಲಿ ವಿಷ್ಣು ಸಹಸ್ರನಾಮ ಹೋಮವನ್ನು ನೆರವೇರಿಸಿದ್ದು ಮರೆಯಲಾರದ ಅನುಭವ. ಅದು ಒದಗಿ ಬಂದದ್ದು ನಮ್ಮೆಲ್ಲರ ಸುಕೃತ. ಉತ್ತಮ ಭೋಜನಾನಂತರ, ನೇಪಾಳದಿಂದ ಗಡಿ ದಾಟಿಬಂದರೆ ಸಿಗುವ ಭಾರತದ ಪ್ರಥಮ ಹಳ್ಳಿ ಎನಿಸಿರುವ ಮಾನ ಸ್ಥಳಕ್ಕೆ ಭೇಟಿ, ವ್ಯಾಸ ಗುಹ, ಗಣೇಶ ಗುಹ, ಕೇಶವ ಪ್ರಯಾಗಗಳ ದರ್ಶನದ ಕ್ಷಣಗಳು ಅದ್ಭುತವಾಗಿದ್ದವು.

ನಂತರ ಪಿಪಲ್ ಕೋಟಿಯ ಕಡೆಗೆ ಪ್ರಯಾಣ. ಮಾರ್ಗಮಧ್ಯದಲ್ಲಿ ಜೋಶೀಮಠ ಮತ್ತು ಉಶಿಮಠ ನೋಡುವ ಅವಕಾಶ ಕಲ್ಪಿಸಿದರು. ಅಂದು ರಾತ್ರಿ ಪಿಪಲ್ ಕೋಟಿಯಲ್ಲಿ ಉಳಿದುಕೊಂಡೆವು.

ಮರುದಿನ ಪಿಪಲ್ ಕೋಟಿಯಿಂದ ಹೊರಟು ಪ್ರಯಾಣಿಸಿ ಮಧ್ಯಾಹ್ನದ ಹೊತ್ತಿಗೆ ಸಿತಾಪುರವನ್ನು ತಲುಪಿದೆವು. ಸನಿಹದಲ್ಲಿನ 'ತ್ರಿಯುಗಿ ನಾರಾಯಣ" ದೇವಾಲಯ ದರ್ಶನವಾದದ್ದು ಒಂದು ಸದಾವಕಾಶವೇ ಸರಿ. ಈ ಮಂದಿರವು ಶಿವ–ಪಾರ್ವತಿಯರ ವಿವಾಹ ಸ್ಥಳ. ಮಹಾವಿಷ್ಣುವಿನ ನೇತೃತ್ವದಲ್ಲಿ ಈ ವಿವಾಹ ನಡೆಯಿತು ಎಂಬ ಐತಿಹ್ಯವುಂಟು. ಆ ಸಂಧರ್ಭದಲ್ಲಿ ಬ್ರಹ್ಮದೇವನು ನೆರವೇರಿಸಿದ ಹೋಮ ಕುಂಡ ಇಲ್ಲಿಯವರೆಗೂ ಆರಿಲ್ಲ. ಈ ಮಂದಿರಕ್ಕೆ ಮೂರು ಯುಗ– ಯುಗಗಳಿಂದ ಪೂಜೆಯನ್ನು ಮಾಡಿಕೊಂಡು ಬಂದಿರುವುದರಿಂದ ಈ ಸ್ಥಳಕ್ಕೆ ತ್ರಿಯುಗಿ ನಾರಾಯಣ ಮಂದಿರ ಎಂದು ಕರೆಯುತ್ತಾರೆ.

ಮರುದಿನ ನಮ್ಮ ಪ್ರಯಾಣ ಸಿತಾಪುರದಿಂದ ಸೆರ್ಸಿ/ಗೌರಿಕುಂಡದೆಡೆಗೆ. ಈ ಗೌರಿಕುಂಡ ಸ್ಥಳವೇ ಕೇದಾರನಾಥ ಹತ್ತಲು ಪ್ರಾರಂಭವಾಗುವ ಸ್ಥಳ. ಇಲ್ಲಿಗೆ ನಮ್ಮ ನಾಲ್ಕರಲ್ಲಿ ಮೂರು ಪುಣ್ಯಕ್ಷೇತ್ರಗಳ ಯಾತ್ರೆ ಮುಗಿದಿದ್ದವು. ಮುಂದೆ ನಮ್ಮ ಪ್ರಯಾಣ ಕೇದಾರನಾಥದತ್ತ.

ಕೇದಾರನಾಥ: –

ಕೆ ಅಂದರೆ ಸ್ವರ್ಗ –ದಾರ್ ಅಂದರೆ ಬಾಗಿಲು. ಇನ್ನೊಂದು ಅರ್ಥದಲ್ಲಿ ಕೇದಾರ ಅಂದರೆ 'ಎತ್ತಿನ ಭುಜ'. ಪರಮೇಶ್ವರನು ಭೂಲೋಕದಲ್ಲಿ ವಾಸಿಸುವ ಸ್ಥಳವಿದು. 'ಕೇದಾರನಾಥ' ಎಂಬ ಪದ ಸಂಸ್ಕೃತ ಮೂಲವಾಗಿದ್ದು, ಕೇದಾರ ಎಂದರೆ ತಪೋಭೂಮಿ ಅಥವಾ ಶ್ರೀ ಪರ್ವತ ಎಂಬುದಾಗಿದೆ 'ನಾಥ' ಎಂದರೆ ಸ್ವಾಮಿ –ಪಾಲಕ– ಅಧಿಪತಿ. ಜಗತ್ತಿನ ಸೃಷ್ಟಿಕರ್ತ ಎಂದಾಗುತ್ತದೆ. ಈ ದೇವಸ್ಥಾನ ಹಿಮಾಲಯ ಪರ್ವತ ಶ್ರೇಣಿಯ ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಂದಾಕಿನಿ ನದಿಯ ದಂಡೆಯ ಮೇಲಿದ್ದು ಪವಿತ್ರ ಪುಣ್ಯಕ್ಷೇತ್ರವಾಗಿದೆ. "ಚಾರ್ ಧಾಮ್"ಗಳಲ್ಲಿ ಇದು ಪ್ರಮುಖವಾದದ್ದು. ನಾಲ್ಕು ಪವಿತ್ರ ಯಾತ್ರಾ ಕ್ಷೇತ್ರದಲ್ಲಿ ಯಮುನೋತ್ರಿಯಿಂದ ಆರಂಭವಾಗಿ, ಗಂಗೋತ್ರಿ ಕೇದಾರನಾಥ ದರ್ಶನದ ನಂತರ ಕೊನೆಗೆ ಬದರಿನಾಥ ದರ್ಶನ ಮಾಡಿದಾಗ ಚಾರ್ ದಾಮ್ ಯಾತ್ರೆಯ ಫಲ ಪೂರ್ಣ ದೊರೆಯುತ್ತದೆ. ಪ್ರತಿ ವರ್ಷ ಅಕ್ಷಯ ತೃತೀಯದಂದು ದಿನ ದೇವಸ್ಥಾನದ ಬಾಗಿಲು ತೆರೆಯಲಾಗುತ್ತದೆ. ಕೇದಾರನಾಥ ದೇವಸ್ಥಾನದ ಸುತ್ತ ಹಿಮಾವೃತವಾದ ಪರ್ವತಶ್ರೇಣಿ, ಮನಸೂರೆಗೊಳ್ಳುವ ಪ್ರಕೃತಿ ದೃಶ್ಯಗಳಿಂದ ತುಂಬಿದ್ದು, ಇದು ವಿಶೇಷ ಆಧ್ಯಾತ್ಮಿಕ ತಾಣವಾಗಿದೆ. ಈ ಪುಣ್ಯಕ್ಷೇತ್ರದ ಬಗ್ಗೆ ಪೌರಾಣಿಕ ಹಾಗೂ ದಂತೆ ಕತೆಗಳು ಇವೆ.

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಕೇದಾರೇಶ್ವರ ಜ್ಯೋತಿರ್ಲಿಂಗ ಪ್ರಮುಖವಾಗಿದೆ. 12 ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಿ ಇದು ಅತ್ಯಂತ ಎತ್ತರವಾದ ಪ್ರದೇಶದಲ್ಲಿದೆ. ಪಾಂಡವರು ಪ್ರತಿಷ್ಠಾಪಿಸಿದ 'ಪಂಚ ಕೇದಾರಗಳಲ್ಲಿ' ಕೇದಾರೇಶ್ವರ ಪ್ರಮುಖ ಜ್ಯೋತಿರ್ಲಿಂಗ. ಜೀವನದಲ್ಲಿ ಒಮ್ಮೆಯಾದರೂ ಈ ಕ್ಷೇತ್ರಗಳ ದರ್ಶನ ಮಾಡಿದರೆ ಏಳು ಜನ್ಮಗಳ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ಹಾಗೆ ಕೇದಾರೇಶ್ವರನ ನಾಮ ಸ್ಮರಣೆ ಮಾತ್ರದಿಂದಲೇ ಮೋಕ್ಷ ಪ್ರಾಪ್ತಿಯಾಗುತ್ತದೆ. ಪ್ರತಿವರ್ಷ ಸಾವಿರಾರು ಸಂಖ್ಯೆಯ ಭಕ್ತರು ಬಂದು ಕೇದಾರೇಶ್ವರನ ದರ್ಶನ, ಪೂಜೆ ಮಾಡಿ ತೃಪ್ತರಾಗುತ್ತಾರೆ.

ಇಲ್ಲಿ ಹಿಮಪಾತ ಜಾಸ್ತಿ ಇರುವುದರಿಂದ ವರ್ಷದಲ್ಲಿ ಆರು ತಿಂಗಳು ಅಂದರೆ ಮೇ ತಿಂಗಳ ಅಕ್ಷಯ ತೃತೀಯದಿಂದ, ನವೆಂಬರ್ ಕೊನೆ ಅಂದರೆ ದೀಪಾವಳಿ ಮರುದಿನದವರೆಗೆ ಭಕ್ತರು ಭೇಟಿ ಕೊಡಬಹುದು. ನಂತರ ಬಾಗಿಲು ಮುಚ್ಚಿದರೆ ಮತ್ತೆ ತೆರೆಯುವುದು ಆರು ತಿಂಗಳ ನಂತರ. ಬಾಗಿಲು ಮುಚ್ಚಿದ ಆರು ತಿಂಗಳು ಹಿಮ ಬೀಳುವ ಸಮಯವಾಗಿದ್ದು, ದೇವ ಗಣಗಳಾದ ನಂದಿ, ಬೃಂಗಿ, ಭೈರವ, ವೀರಭದ್ರರು ಬಂದು ಶಿವನನ್ನು ಪೂಜಿಸುತ್ತಾರೆ ಎಂಬ ಪ್ರತೀತಿ ಇದೆ. ಆದ್ದರಿಂದ ಮಾನವರಿಗೆ ಅವಕಾಶ ಇರುವುದಿಲ್ಲ. ಆದರೆ ವರ್ಷವಿಡೀ ಗರ್ಭಗುಡಿಯಲ್ಲಿ ದೀಪ ಉರಿಯುತ್ತಲೇ ಇರುತ್ತದೆ. ಚಳಿಗಾಲದ ಆರು ತಿಂಗಳ ಕಾಲ ಉತ್ಸವ ಮೂರ್ತಿಯನ್ನು ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯಲ್ಲಿರುವ ಉಶಿ ಮಠ ಎಂಬಲ್ಲಿಗೆ ಕರೆದೊಯ್ದು ಅಲ್ಲಿ ನಿತ್ಯ ಪೂಜೆ ಮಾಡುತ್ತಾರೆ. ದೇವಾಲಯ

ಮುಚ್ಚಿದ ಸಮಯದಲ್ಲಿ ಆರು ತಿಂಗಳ ನಂತರ ಬಾಗಿಲನ್ನು ತೆಗೆದಾಗ 'ಅಖಂಡ ಜ್ಯೋತಿ' ಬೆಳಗುತ್ತಿರುತ್ತದೆ. ಮೊದಲು ಆ ದೀಪ ನೋಡಿದವರಿಗೆ ಪುಣ್ಯಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯು ಇದೆ. ಬಾಗಿಲು ತೆರೆದ ಆರು ತಿಂಗಳಲ್ಲಿ ಬೆಳಗ್ಗೆ 12 ಗಂಟೆವರೆಗೂ ಅಲ್ಲಿಗೆ ಹೋದ ಭಕ್ತರೆಲ್ಲರೂ ಕೇದಾರನಾಥನನ್ನು ಮುಟ್ಟಿ ಪೂಜಿಸಬಹುದು. ಆದರೆ ಹಾಲು ನೀರಿಂದ ಅಭಿಷೇಕ ಮಾಡುವುದಿಲ್ಲ. ತುಪ್ಪವನ್ನು ಮಾತ್ರ ಅರ್ಪಿಸಬಹುದು. ಕೇದಾರೇಶ್ವರ ಸ್ವಯಂಭೂ ಲಿಂಗವಾಗಿದ್ದು ತ್ರಿಕೋನಾಕಾರದಲ್ಲಿದೆ. ಕೈಲಾಸ ಪರ್ವತದನಂತರ ಶಿವನ ಎರಡನೇ ವಾಸಸ್ಥಾನ ಕೇದಾರನಾಥ. ಈ ಕ್ಷೇತ್ರದಲ್ಲಿ ಮರಣಹೊಂದಿದರೆ ಮೋಕ್ಷವನ್ನು ಪಡೆದು ಕೈಲಾಸ ಪಡೆಯುತ್ತಾರೆ ಎನ್ನುವ ಪ್ರತೀತಿಯುಂಟು.

ಇದೇ ಕೇದಾರನಾಥನ ದರ್ಶನಕ್ಕೆ, ಶ್ರೀನಗರ, ಶ್ರೀಕೋಟಾ, ಸೀತಾಪುರ ಮಾರ್ಗವಾಗಿ ಸೋಮಪ್ರಯಾಗಕ್ಕೆ ನಮ್ಮ ಪ್ರಯಾಣ ಮುಂದುವರೆಯಿತು. ಅಲ್ಲಿಂದ ಸಾಮಾನ್ಯವಾಗಿ ಗೌರೀ ಕುಂಡಕ್ಕೆ ಹೋಗಿ ಕೇದಾರನಾಥನ ದರ್ಶನಕ್ಕೆ 21 ಕಿ.ಮೀ. ರಸ್ತೆಯನ್ನು ಡೋಲಿ ಅಥವಾ ಕುದುರೆ ಅಥವಾ ಕಾಲ್ನಡಿಗೆಯಲ್ಲಿ ಪ್ರಯಾಣಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದ ಪದ್ಧತಿ. ಇತ್ತೀಚಿನ ಕೆಲವು ವರುಷಗಳಿಂದ ಹೆಲಿಕಾಪ್ಟರ್ ಸೇವೆಯು ಲಭ್ಯವಿರುತ್ತದೆ. ನಮ್ಮ ಗುಂಪಿನ 40 ಜನರ ಪೈಕಿ 20 ಮಂದಿಗೆ ಹೆಲಿಕಾಪ್ಟರ್ ನಿಗದಿಯಾಗಿತ್ತು. ಉಳಿದವರು ಡೋಲಿ ಅಥವಾ ಕುದುರೆ ಅಥವಾ ಕಾಲ್ನಡಿಗೆಯಲ್ಲಿ ಪ್ರಯಾಣಿಸುವುದು ಅನಿವಾರ್ಯವಾಗಿತು. ನಮ್ಮ ಗುಂಪಿನ 21 ಸದಸ್ಯರು ಹೆಲಿಕಾಪ್ಟರಿನಲ್ಲಿ ಕೇದಾರ ಪರ್ವತವನ್ನು ತಲುಪಿದೆವು. ಹೆಲಿಕಾಪ್ಟರ್ ಯಾತ್ರೆ ಕೇವಲ 7 ನಿಮಿಷಗಳದ್ದಾದರೂ ರೋಮಾಂಚಕತೆಗೆ ಏನೂ ಕೊರತೆಯಿರಲಿಲ್ಲ. ಪ್ರಪಾತದೊಳಗಿನಿಂದ ಮೇಲೆ ಹಾರಿ ಸಾಗುವಾಗ ಕಾಣುವ ಪ್ರಕೃತಿ ಸೌಂದರ್ಯ ಅವರ್ಣನೀಯ. ಹಿಮದಿಂದ ಕೂಡಿದ ಶಿಖರಗಳನ್ನು ಹತ್ತಿರದಿಂದಲೇ ನೋಡುತ್ತಿರುವ ಭ್ರಮೆ. ಪ್ರಕೃತಿಯ ವೈಭವವನ್ನು ಪೂರ್ಣವಾಗಿ ಕಣ್ತುಂಬಿಕೊಳ್ಳುವ ಮೊದಲೇ ಹೆಲಿಕಾಪ್ಟರ್ ಪ್ರಯಾಣ ಮುಗಿದುಹೋಗಿತ್ತು.

ಕೇದಾರನಾಥನ ದರ್ಶನ, ಪೂಜೆ, ಅತ್ಯಂತ ಭಾವುಕತೆಯಿಂದ ಕೂಡಿತ್ತು. ಶಿವಲಿಂಗವನ್ನು ನಾವೇ, ಕೈಯಾರ, ತುಪ್ಪದ ಅಭಿಷೇಕದಿಂದ ಹಿಡಿದು ಗಂಧ, ಪುಷ್ಪಗಳಿಂದ ಪೂಜಿಸಿದ್ದಾಯಿತು. ನಂತರದ ನೈವೇದ್ಯ ಸಮರ್ಪಣೆ ಎಲ್ಲವೂ ಸಾಂಗೋಪಾಂಗವಾಗಿ ನಡೆದು ಆಚೆ ಬಂದಾಗ ನಾವಂತೂ ಅತ್ಯಂತ ಭಾವುಕರಾಗಿದ್ದೆವು. ಉಳಿದ ನಮ್ಮ ಸಹಪ್ರಯಾಣಿಕರು ಅವರವರ ಸಮಯಾನುಸಾರ ಕೇದಾರವನ್ನು ತಲುಪಿದರು. ಅಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿದ್ದರಿಂದ ದಣಿವಾರಿಸಿಕೊಳ್ಳಲು ಅವಕಾಶವಾಯಿತು. ನಂತರ ದೇವಾಲಯದ ಹಿಂಬದಿಯಲ್ಲಿ ಅತ್ಯಂತ ಸುಂದರವಾಗಿ ಮೂಡಿಬಂದಿರುವ ನಮ್ಮ ಮೈಸೂರಿನ ಕಲಾ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೈಚಳಕದಲ್ಲಿ ಏಕಶಿಲೆಯಲ್ಲಿ, ಕೃಷ್ಣಶಿಲೆಯಿಂದ ಕೆತ್ತನೆಯಾಗಿರುವ ಆದಿಗುರು ಶ್ರೀ ಶಂಕರಾಚಾರ್ಯರ ಮೂರ್ತಿ ಪ್ರತಿಷ್ಠಾಪಿಸಲ್ಪಟ್ಟಿದೆ. ಅದನ್ನು ನೋಡುವುದೇ ಒಂದು ಸೌಭಾಗ್ಯ. ಹವಾಮಾನ ವೈಪರೀತ್ಯದಿಂದ ಹಲವು ವರ್ಷಗಳ ಹಿಂದೆ ಪ್ರಳಯವಾದ ಸಂಧರ್ಭದಲ್ಲಿ ಎಲ್ಲಿಂದಲೋ ಬಂದ ದೈತ್ಯಾಕಾರದ ಬಂಡೆ ಭೀಮ ಶಿಲೆ ದೇವಾಲಯಕ್ಕೆ ಅಡ್ಡಲಾಗಿ ನಿಂತು ದೇವಾಲಯವನ್ನು ಸಂರಕ್ಷಿಸಿರುವುದು ನಿಜಕ್ಕೂ ಅಸ್ತಿಕ – ನಾಸ್ತಿಕರೆಲ್ಲರನ್ನೂ ಬೆರಗಾಗಿಸುತ್ತದೆ. ಈ ದೈತ್ಯ ಭೀಮ ಶಿಲೆಗೆ ಈಗ ಪೂಜೆ ಪುನಸ್ಕಾರಗಳೂ ಸಲ್ಲುತ್ತಿವೆ. ಮರುದಿನ ಬೆಳಿಗ್ಗೆ 1.00 ಘಂಟೆಗೆ ಎಲ್ಲರಿಗೂ ಸ್ಪರ್ಶಲಿಂಗ ದರ್ಶನಕ್ಕೆ ಏರ್ಪಾಡಾಗಿದ್ದರಿಂದ ರಾತ್ರಿಯೇ ಹೊರಟು ಸೇವೆ ಮಾಡಲು ಅವಕಾಶವಾಯಿತು. ತದನಂತರ, ಮೊದಲೇ ಸಂಕಲ್ಪಿಸಿದಂತೆ ಕೇದಾರನಾಥನ ಸಾನಿಧ್ಯದಲ್ಲಿ ರುದ್ರಪಾರಾಯಣವನ್ನು ನಡೆಸಿ ಕೃತಾರ್ಥರಾದೆವು. ನಂತರ ಭೈರವನಾಥನ ಸನ್ನಿಧಿಯಲ್ಲಿ ರುದ್ರಹೋಮವನ್ನು ನೆರವೇರಿಸಲಾಯಿತು. ಕೇದಾರನಾಥನ ದರ್ಶನಮಾಡುವುದೇ ಒಂದು ಸವಾಲು. ಅಂತಹುದರಲ್ಲಿ ಅಲ್ಲಿ ರುದ್ರಹೋಮವನ್ನು ನೆರವೇರಿಸುವುದು ಕನಸಿನಮಾತೇ ಸರಿ. ಈ ಸುಕೃತ ಅವಕಾಶವನ್ನು ಕರುಣಿಸಿದ ಆ ಕೇದಾರೇಶ್ವರನಿಗೆ ಕೋಟಿ ನಮನಗಳು. ಅಕ್ಟೋಬರ್ 23ಕ್ಕೆ ಕೇದಾರನಾಥ ದೇವಸ್ಥಾನದ ಬಾಗಿಲು ಮುಚ್ಚುವುದರಲ್ಲಿತ್ತು.

ಪುರಾಣ ಕಥೆ:– ಮಹಾಭಾರತ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರು ತಮ್ಮ ದಾಯಾದಿಗಳಲ್ಲದೆ, ಗುರು ಹಿರಿಯರನ್ನು, ಬಂಧು ಬಾಂಧವರನ್ನು ವಧಿಸಬೇಕಾಗಿ ಬಂದಿತು. ಈ ಕಾರಣದಿಂದ ಗುರು – ಬ್ರಾಹ್ಮಣ – ಬಂಧು – ಬಾಂಧವರ ಹತ್ಯೆ ಮಾಡಿದ ದೋಷ ತಗುಲುತ್ತದೆ ಎಂಬ ಪಾಪ ಪ್ರಜ್ಞೆ ಕಾಡುತ್ತಿತ್ತು. ಪಾಪ ಪರಿಹಾರಕ್ಕೆ ಏನು ಮಾಡಬೇಕೆಂದು ಶ್ರೀ ಕೃಷ್ಣನನ್ನು ಕೇಳಿದರು. ಭಗವಾನನು "ಇದರ ಪರಿಹಾರಕ್ಕೆ ಇರುವ ಉಪಾಯ ಒಂದೇ. ಪರಶಿವನನ್ನು ಹೊರತು ಪಡಿಸಿ ಯಾರಿಂದಲೂ ಪರಿಹಾರ ಸಾಧ್ಯವಿಲ್ಲ ಆದ್ದರಿಂದ ಶಿವನ ಬಳಿ ಹೋಗಿ ತಪಸ್ಸು ಪ್ರಾರ್ಥನೆ ಮಾಡಿ ಒಲಿಸಿಕೊಳ್ಳಿರಿ" ಎಂದು ತಿಳಿಸಿದನು. ಕೃಷ್ಣನ ಸಲಹೆಯಂತೆ ಪಾಂಡವರು ಪಾಪ ಪರಿಹಾರ ಮಾಡಿಕೊಳ್ಳಲು ವಾರಣಾಸಿಗೆ ಬರುತ್ತಾರೆ. ಪಾಂಡವರ ಮೇಲೆ ಕೋಪಿಸಿಕೊಂಡಿದ್ದ ಶಿವನು ಅವರನ್ನು ಪರೀಕ್ಷಿಸ ಬೇಕೆಂದು ಹರಿದ್ವಾರಕ್ಕೆ ಬರುತ್ತಾನೆ. ಅಲ್ಲಿಯೂ ಪಾಂಡವರಿಗೆ ಕಾಣಿಸದೆ ಗುಪ್ತ ಕಾಶಿಯಲ್ಲಿ ಕಣ್ಮರೆಯಾಗಿ ಎತ್ತರದ ಮೇರು ಪರ್ವತದ ಕೇದಾರದಲ್ಲಿ ಪ್ರಕಟಗೊಂಡ ಶಿವನು. ಅಲ್ಲಿ ಮೇಯುತ್ತಿದ್ದ ದನ ಕರುಗಳ ಹಿಂಡಿನಲ್ಲಿ ದೊಡ್ಡ ಗೂಳಿಯಾಗಿ ಸೇರಿಕೊಂಡನು.

ಪಾಂಡವರು ಗುಪ್ತಕಾಶಿಗೆ ಬಂದಾಗ ಅಲ್ಲಿ ನೆಲೆಸಿದ್ದ ಅರ್ಧನಾರೀಶ್ವರ ರೂಪದಲ್ಲಿದ್ದ ಪಾರ್ವತಿ ಪಾಂಡವರಿಗೆ ದರ್ಶನ ಕೊಟ್ಟು "ನೀವು ಮಹಾ ಪಾಪ ಮಾಡಿದ್ದೀರಿ, ಪ್ರಾಯಶ್ಚಿತ್ತಕ್ಕೆ ಇನ್ನಷ್ಟು ಓಡಾಡಬೇಕು." ಎಂದಳು. "ತಾಯಿ ಎಲ್ಲಿ ಹೋಗಬೇಕು?" ಎಂದು ದೈನ್ಯದಿಂದ ಕೇಳಿಕೊಂಡಾಗ, ಪಾರ್ವತಿದೇವಿಯು "ಹಿಮಾಲಯದ ತಪ್ಪಲಿನ ಮೇರು ಶಿಖರದತ್ತ ಹೋಗಿರಿ." ಎಂದಳು. ಪಾಂಡವರು ಅಲ್ಲಿಗೆ ಬಂದರು. ಭೀಮ ಯೋಚಿಸಿದ, ಇನ್ನೂ ಶಿವನನ್ನು ಹುಡುಕುತ್ತಾ ಹೋಗುವುದಲ್ಲ, ಶಿವನನ್ನು ಕಾಣಲೇಬೇಕು ಎಂದು ಪರ್ವತ ಗಾತ್ರಕ್ಕೆ ದೇಹವನ್ನು ಹೆಚ್ಚಿಸಿಕೊಂಡು. ಎರಡು ಪರ್ವತಗಳ ಮೇಲೆ ಆಚೆ ಈಚೆ ಕಾಲಿಟ್ಟು ನಿಂತುಬಿಡುತ್ತಾನೆ. ಅವನ

ದೈತ್ಯಾಕಾರದ ದೇಹ ನೋಡಿ ಮೇಯುತ್ತಿದ್ದ ಎಲ್ಲಾ ಹಸು ಎತ್ತುಗಳು ಹೆದರಿ ಅವನ ಕಾಲ ಸಂದಿಯಲ್ಲಿ ನುಸುಳಿ ಹೋದವು. ಒಂದು ಎತ್ತು ಮಾತ್ರ ಹೋಗದೆ ಅಲ್ಲೇ ನಿಂತಿತ್ತು. ಆ ಎತ್ತು ಪರಶಿವನೆ ಆಗಿದ್ದಾನೆ ಎಂದು ಭೀಮನಿಗೆ ಅರಿವಾಗಿ ಎತ್ತನ್ನು ಹಿಡಿಯಲು ಹೋಗುತ್ತಾನೆ ಭೀಮನ ಕೈಗೆ ಸಿಗದಂತೆ ಎತ್ತು ಭೂಮಿಯೊಳಗೆ ಇಳಿಯುತ್ತದೆ ಭೀಮನಿಗೆ ಎತ್ತಿನ ಡುಬ್ಬ ಮಾತ್ರ ಕೈಗೆ ಸಿಕ್ಕಿತು ಅದನ್ನೇ ಎಳೆದು ಮೇಲೆ ಎತ್ತಿದನು. ಇದರಿಂದ ಎತ್ತಿನ ಡುಬ್ಬ ಮಾತ್ರ ಕೇದಾರದಲ್ಲಿ ಉಳಿಯುತ್ತದೆ. ಮುಖದ ಭಾಗ ರುದ್ರನಾಥ, ಮುಂಡವು ಮಧ್ಯಮಹೇಶ್ವರದಲ್ಲಿ, ತೋಳುಗಳು ತುಂಗಾನಾಥದಲ್ಲಿ ಹಾಗೂ ದೇಹದ ಉಳಿದ ಭಾಗಗಳು ಕಲ್ಪೇಶ್ವರದಲ್ಲಿ ಸೇರುತ್ತದೆ. ಹಿಮಾಲಯದ ತಪ್ಪಲಲ್ಲಿರುವ ಈ ಐದು ಸ್ಥಳಗಳನ್ನು "ಪಂಚ ಕೇದಾರ ಕ್ಷೇತ್ರಗಳು" ಎಂದು ಗುರುತಿಸಲಾಗಿದೆ.

ನಂತರ, ಪಾಂಡವರ ಸಂಕಲ್ಪಕ್ಕೆ ಅನುಗುಣವಾಗಿ ಶಿವನು ಪ್ರತ್ಯಕ್ಷನಾದನು. ಪಾಂಡವರ ಶ್ರದ್ಧೆಗೆ ಮೆಚ್ಚಿದ ಕರುಣಾಮಯಿ ಶಿವನು ಅವರ ಪಾಪಗಳಿಗೆ ಮುಕ್ತಿ ಕರುಣಿಸಿ ಪಾಂಡವರಿಗೆ ದರ್ಶನ ಕೊಟ್ಟು ಮತ್ತೆ ಗೂಳಿಯಾಗಿ ಭೂಮಿ ಒಳಗೆ ಜಾರಿ ಅದೃಶ್ಯನಾಗಲು ಹೊರಟನು. ಭೀಮನು ಇದನ್ನು ಗಮನಿಸಿ ಭೂಮಿಯೊಳಗೆ ಜಾರುತ್ತಿದ್ದ ಗೂಳಿಯ ಡುಬ್ಬವನ್ನು ಹಿಡಿದು ಮೇಲಕ್ಕೆ ಎಳೆಯುತ್ತಾನೆ.

ಆದರೆ ಅವನ ಕೈಗೆ ಎತ್ತಿನ ಡುಬ್ಬ ಮಾತ್ರ ಬಂದಿತು ಆ 'ಡುಬ್ಬ' ರೂಪದಲ್ಲೇ 'ಕೇದಾರನಾಥದಲ್ಲಿ ಕೇದಾರೇಶ್ವರನ ಹೆಸರಿನಲ್ಲಿ ನೆಲೆಸುವುದಾಗಿ ಶಿವನು ಹೇಳಿದಾಗ, ಪಾಂಡವರು "ಶಿವಲಿಂಗ" ರೂಪದಲ್ಲಿ ನೆಲೆಸಬೇಕೆಂದು ಶಿವನನ್ನು ಪ್ರಾರ್ಥಿಸುತ್ತಾರೆ. ಅವರ ಪ್ರಾರ್ಥನೆಯನ್ನು ಮನ್ನಿಸಿದ ಶಿವನು ಎತ್ತಿನ ಆಕಾರದ ಪಾಣೀಪೀಠದ ನಡುವೆ ಡುಬ್ಬದ ಲಿಂಗಾಕೃತಿ ಇರುವಂತೆ "ಸ್ವಯಂಭೂಲಿಂಗ"ವಾಗಿ ನೆಲೆಸಿದನು. ಇಲ್ಲಿನ ಶಿವಲಿಂಗ ಸ್ವರ್ಗ ಶಿಲೆಯಿಂದ ನಿರ್ಮಿತವಾಗಿದ್ದು ವಿಶೇಷ ಶಕ್ತಿಯ ಪ್ರತೀಕವಾಗಿದೆ. ಪಾಂಡವರ ವಂಶಸ್ಥನಾದ ಜನಮೇಜಯರಾಯನು ಕೇದಾರನಾಥೇಶ್ವರನ ಶಿಲಾನ್ಯಾಸ ಮಾಡಿದನೆಂದು ಪುರಾಣಗಳು ತಿಳಿಸುತ್ತವೆ.

ಕಾಲ ಕಳೆದಂತೆ ಎಂಟನೇ ಶತಮಾನದಲ್ಲಿ ಅವತರಿಸಿದ 'ಆದಿಗುರು ಶ್ರೀಶಂಕರಾಚಾರ್ಯರು' ಕೇದಾರನಾಥ ದೇವಸ್ಥಾನವನ್ನು ಪುನರ್ನಿರ್ಮಿಸಿದರು. ಶಂಕರರು ತಮ್ಮ ಜೀವಿತಾವಧಿಯ ಕೊನೆಯಲ್ಲಿ ಕೇದಾರನಾಥದ ಸಮೀಪದ ಗುಹೆಯೊಂದರಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದು ಶಿವನೊಳಗೆ ಐಕ್ಯರಾದರು ಎಂಬ ಐತಿಹ್ಯವಿದೆ. ಕೇದಾರೇಶ್ವರ ದೇವಾಲಯದ ಬಲಭಾಗದ ಬೆಟ್ಟದ ಮೇಲೆ ಈ ಗುಹೆ ಇದ್ದು ಇದನ್ನು ಶಂಕರಾಚಾರ್ಯರ ಸಮಾಧಿ ಸ್ಥಳ ಎಂದು ಕರೆಯುತ್ತಾರೆ. ಹೀಗೆ ಪುರಾಣ ಕಾಲದಿಂದಲೂ ಶಿವನು ಇಲ್ಲಿ ನೆಲೆಸಿದ್ದು ಭಕ್ತರನ್ನು ಕಾಯುತ್ತಿದ್ದಾನೆ.

ದೇವಾಲಯದ ಹೊರ ಭಾಗದಲ್ಲಿ ಬಂಡೆಕಲ್ಲಿನ ಕೆತ್ತನೆಯಲ್ಲಿ ದ್ರೌಪದಿ ಸಹಿತ ಪಂಚ ಪಾಂಡವರ ಮತ್ತು ವೀರಭದ್ರನ ಕೆತ್ತನೆ ಮಾಡಲಾಗಿದೆ. ಗರ್ಭಗುಡಿಯು ಶಿವಲಿಂಗ ತ್ರಿಕೋನಾಕಾರದಲ್ಲಿದೆ. ದೇವಾಲಯದ ಕಟ್ಟಡವು ತುಂಬಾ ಎತ್ತರವಾಗಿದ್ದು ಕಲ್ಲಿನ ಕಟ್ಟಡವು "ಕಸ್ತೂರಿ ಶೈಲಿ"ಯಲ್ಲಿ ನಿರ್ಮಾಣವಾಗಿರುವುದು ವಿಶೇಷವಾಗಿದೆ. ಕೇದಾರನಾಥನು ಹಿಮಾಚ್ಛಾದಿತ ಶಿಖರಗಳ ಮಧ್ಯೆ ನಿಂತಿದ್ದು ಬಂದ ಭಕ್ತರಿಗೆ ಎದ್ದುನಿಲ್ಲುವ ಶಕ್ತಿಯನ್ನು, ಶುದ್ಧ ಮನಸ್ಸನ್ನು, ಪವಿತ್ರ ಭಾವವನ್ನು ಕೊಟ್ಟು ಮುಕ್ತಿಯ ಪಥ ತೋರಿಸುತ್ತಾನೆ ಎಂಬ ನಂಬಿಕೆ ಇದೆ. ಪಾಂಡವರು ಶಿವನನ್ನು ಒಲಿಸಿಕೊಳ್ಳಲು ಕೇದಾರ ಪರ್ವತ ಶ್ರೇಣಿಗಳಲ್ಲಿ ತಪಸ್ಸು ಮಾಡಿದ್ದರು ಎಂಬ ನಂಬಿಕೆಯುಂಟು.

ಇಷ್ಟುಹೊತ್ತಿಗೆ ನಮ್ಮ ಚಾರ್ ಧಾಮ್ ಯಾತ್ರೆ ಭಾಗಶಃ ಮುಗಿದಿತ್ತು. ಕೇದಾರನಾಥ, ಭೀಮಶಿಲೆ ಹಾಗು ಶ್ರೀ ಶಂಕರಾಚಾರ್ಯರ ದರ್ಶನ ನಂತರ ನಾವೆಲ್ಲರೂ ಅವರವರ ಅನುಕೂಲ ಮತ್ತು ವ್ಯವಸ್ಥೆಗೆ ತಕ್ಕಂತೆ ಪುನಃ ಇಳಿದು, ತಳದಲ್ಲಿರುವ ಸಿತಾಪುರಕ್ಕೆ ಬಂದು ತಲುಪಿದೆವು. ಮರುದಿನ ಬೆಳಿಗ್ಗೆ, ಉಪಹಾರದ ನಂತರ ಮತ್ತೆ ಹರಿದ್ವಾರಕ್ಕೆ ನಮ್ಮ ಪ್ರಯಾಣ ಬೆಳೆಸಿದೆವು. ಮಾರ್ಗ ಮಧ್ಯೆ ಫೋಟೋಗಳನ್ನಿ ಕ್ಲಿಕ್ಕಿಸಿ ಕೊಂಡು ಮುಂದುವರಿದೆವು. ಮಾರ್ಗದಲ್ಲಿ ದೇವಪ್ರಯಾಗ, ಹೃಶೀಕೇಶ, ಲಕ್ಷ್ಮಣ ಜೂಲ, ರಾಮ ಮಂದಿರ, ಗೀತಾಮಂದಿರ ಇವೆಲ್ಲದರ ದರ್ಶನ ವಾಯಿತು. ಮರುದಿನ ಅಲ್ಲಿನ ಮಾನಸ ದೇವಿ ಮಂದಿರ, ಚಂಡೀ ದೇವಿ, ಪವನ ಧಾಮ ಇವೆಲ್ಲ ಮಂದಿರಗಳಿಗೆ ರೋಪ್ ವೇ ಮೂಲಕ ತೆರಳಿದುದು ಒಂದು ವಿಶಿಷ್ಟ ಅನುಭವ. ಸಂಜೆ ಹರ್ ಕಿ ಪೌರಿ ಯಲ್ಲಿ ಗಂಗಾರತಿಯನ್ನು ವೀಕ್ಷಿಸಿ ಧನ್ಯರಾದೆವು. ಮರುದಿನ ಬೆಳಿಗ್ಗೆ ಉಪಹಾರ ಮುಗಿಸಿ ನವದೆಹಲಿಗೆ ವಾಪಸಾಗಲು ಅಣಿಯಾದೆವು. ದೆಹಲಿ ವಿಮಾನ ನಿಲ್ದಾಣದಿಂದ ಬೆಂಗಳೂರು ತಲುಪವ ಹೊತ್ತಿಗೆ ಬೆಳಗಿನ ಝಾವ 2.00 ಗಂಟೆ ಯಾಗಿತ್ತು.

ನಮ್ಮ ಎಲ್ಲ ಯಾತ್ರಾರ್ಥಿಗಳ ಮೈ ಮನಸ್ಸುಗಳು ಪ್ರಫುಲ್ಲವಾಗಿದ್ದವು. ಕಳೆದ 10–12 ದಿನಗಳ ಪ್ರಕೃತಿಯ ರುದ್ರ ರಮಣೀಯ ದೃಶ್ಯಗಳು. ಕೇದಾರನಾಥದಲ್ಲಿ ಕೆಲವೇ ವರ್ಷಗಳ ಹಿಂದೆ, ಕೇವಲ ಹದಿನೈದು ನಿಮಿಷಗಳ ಪ್ರವಾಹದಿಂದ ಕೊಚ್ಚಿ ಹೋದ ನೂರಾರು ಯಾತ್ರಿಕರು, ಅಂಗಡಿ ಮುಂಗಟ್ಟುಗಳು, ಕಟ್ಟಡಗಳ ನಡುವೆಯೂ ದೇವಾಲಯವು ಸುರಕ್ಷಿತವಾಗಿದ್ದು, ಹಲವರಿಗೆ ಆಶ್ರಯ ನೀಡಿದ್ದು, ದೇವಾಲಯದ ಹಿಂಬದಿಯಲ್ಲಿರುವ ಭೀಮಬಂಡೆಗೆ ನೀರು ಬಡಿದು ಅದು ದೇವಾಲಯವನ್ನು ರಕ್ಷಿಸಿದ ಪರಿ ಎಂಥಹ ನಾಸ್ತಿಕರಿಗೂ, ನಮ್ಮ ಅರಿವಿಗೂ ನಿಲುಕದ ಒಂದು ಶಕ್ತಿಯ ಇರುವಿಕೆಯ ಬಗ್ಗೆ ಮನದಟ್ಟು ಮಾಡುತ್ತದೆ, ಎಂದು ಯೋಚಿಸುತ್ತಾ ಮತ್ತೊಮ್ಮೆ, ಬದರೀನಾಥ, ಕೇದಾರನಾಥ, ಗಂಗೆ, ಯಮುನೆಯರಿಗೆ ನಮಿಸುತ್ತಾ ನಮ್ಮ ಈ ಸಫಲ ಯಾತ್ರಾ ಕಥನವನ್ನು ಮುಗಿಸುತ್ತೇವೆ.





**ಹೆಚ್.ಕೆ. ಶಶಿಧರ್**
98451 73766

**ಎಸ್.ಸಿ. ಶ್ರೀನಿವಾಸ**
98453 76949

# ಎಂ.ಎಂ.ಡಿ.ಬಿ.ಎಸ್. – ಭವಿಷ್ಯದಲ್ಲಿ ಬೆಳವಣಿಗೆಯ ಮಾರ್ಗನಕ್ಷೆ

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ನಮ್ಮ ಸಮುದಾಯದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಏಳಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಮಹತ್ವದ ವೇದಿಕೆ. ಭವಿಷ್ಯದಲ್ಲಿ ಸಂಘವನ್ನು ಇನ್ನಷ್ಟು ಬಲಿಷ್ಠ, ಸಮೃದ್ಧ ಮತ್ತು ಜನಪರವಾಗಿಸಲು ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಗಮನಹರಿಸಬಹುದು.

1. ಸದಸ್ಯರ ಸಂಖ್ಯೆಯ ವೃದ್ಧಿ:

ಸಂಘದ ಚಟುವಟಿಕೆಗಳಿಗೆ ಹೆಚ್ಚಿನ ಜನರನ್ನು ಆಕರ್ಷಿಸಲು, ಯುವಪೀಳಿಗೆಯೊಂದಿಗೆ ಸಂಪರ್ಕ ಹೆಚ್ಚಿಸುವುದು ಅತ್ಯವಶ್ಯ. ಸಾಮಾಜಿಕ ಮಾಧ್ಯಮಗಳ ಸದುಪಯೋಗ, ಕುಟುಂಬ ಸಮಾವೇಶಗಳು, ಯುವಕರಿಗಾಗಿ ವಿಶೇಷ ಕಾರ್ಯಕ್ರಮಗಳು ಹಾಗೂ ಸಮುದಾಯದ ಮನೆಗಳಿಗೆ ತಲುಪುವ ಸಕ್ರಿಯ ಪ್ರಚಾರ—ಇವು ಹೊಸ ಸದಸ್ಯರ ಸೇರ್ಪಡೆಗೆ ದಾರಿಯಿಡಲಿವೆ. ಸದಸ್ಯರ ಸಂಖ್ಯೆ ಹೆಚ್ಚಾದಂತೆ ಸಂಘದ ಶಕ್ತಿ ಮತ್ತು ಪ್ರಭಾವ ಸಹ ಸ್ವಾಭಾವಿಕವಾಗಿ ವೃದ್ಧಿಯಾಗುತ್ತದೆ.

2. ವಿದ್ಯಾರ್ಥಿಗಳಿಗೆ ಹೆಚ್ಚಿನ ಪುರಸ್ಕಾರ:

ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸತ್ಕರಿಸುವುದು ಸಂಘದ ಗೌರವವನ್ನು ಹೆಚ್ಚಿಸುವ ಮಹತ್ವದ ಹೆಜ್ಜೆ. ಭವಿಷ್ಯದಲ್ಲಿ ಪುರಸ್ಕಾರದ ಮೊತ್ತವನ್ನು ಹೆಚ್ಚಿಸುವ ಮೂಲಕ ವಿದ್ಯಾರ್ಥಿಗಳಿಗೆ ಬೆಂಬಲವನ್ನು ವಿಸ್ತರಿಸಬಹುದು. ಇದರಿಂದ ವಿದ್ಯಾರ್ಥಿಗಳಲ್ಲಿ ಉತ್ತೇಜನ ಹೆಚ್ಚುವುದು ಮಾತ್ರವಲ್ಲ, ಸಮುದಾಯದ ಪಾಲಕರಲ್ಲೂ ಸಂಘದ ಮೇಲಿನ ನಂಬಿಕೆ ಬಲಗೊಳ್ಳುತ್ತದೆ.

3. ವೈದ್ಯಕೀಯ ತುರ್ತು ಪರಿಸ್ಥಿತಿಗಳಿಗೆ ಹೆಚ್ಚಿನ ನೆರವು:

ಸಮುದಾಯದ ಸದಸ್ಯರು ಆರೋಗ್ಯ ತುರ್ತು ಪರಿಸ್ಥಿತಿಗಳನ್ನು ಎದುರಿಸುವಾಗ ಸಂಘವು ಶಕ್ತಿಯಾಗಿ ನಿಲ್ಲುವುದು ಅವಶ್ಯ. ಇದಕ್ಕಾಗಿ ವಿಶೇಷ ವೈದ್ಯಕೀಯ ನೆರವು ನಿಧಿ (Medical Relief Fund) ರಚಿಸಿ, ವರ್ಷಕ್ಕೆ ಒಂದು ಬಾರಿ ಅದಕ್ಕಾಗಿ ದೇಣಿಗೆ ಸಂಗ್ರಹಿಸಬಹುದು. ಈ ನಿಧಿ ಅಗತ್ಯದ ಸಂದರ್ಭದಲ್ಲಿ ಜೀವರಕ್ಷಕವಾಗಿ ಪರಿಣಮಿಸುತ್ತದೆ.

4. ಅರ್ಥಪೂರ್ಣ ಹಾಗೂ ಸಂವೇದನಾ ಶೀಲ ಕಾರ್ಯಕ್ರಮಗಳು:

ಸಾಮಾನ್ಯ ಕೂಟಗಳನ್ನು ಮೀರಿ, ಸಮುದಾಯಕ್ಕೆ ಕಾರಣಕಾರಿಯಾಗುವ ಕಾರ್ಯಕ್ರಮಗಳನ್ನು ಆಯೋಜಿಸ ಬಹುದು.

ಉದಾಹರಣೆಗೆ

* ವಿದ್ಯಾರ್ಥಿ ಯುವಕರಿಗೆ ಮಾರ್ಗದರ್ಶನ
* ಮಹಿಳೆಯರಿಗಾಗಿ ಸ್ವಾವಲಂಬನಾ ಕಾರ್ಯಾಗಾರ
* ಆರೋಗ್ಯ ಶಿಬಿರಗಳು
* ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕೂಟಗಳು

ಈ ರೀತಿಯ ಕಾರ್ಯಕ್ರಮಗಳು ಸಂಘದ ಒಳಗಿನ ಏಕತೆ, ಆತ್ಮೀಯತೆ ಮತ್ತು ಜ್ಞಾನ ವಿನಿಮಯವನ್ನು ಬಲಪಡಿಸುತ್ತವೆ.

5. ನಮ್ಮ ಬೃಹಚ್ಚರಣ ಸಂಘವು ತನ್ನ ಸದಸ್ಯರ ಆರೋಗ್ಯ ಭದ್ರತೆಗಾಗಿ ವಿಶೇಷವಾದ ವೈದ್ಯಕೀಯ ವಿಮಾ ಯೋಜನೆಗಳನ್ನು ರೂಪಿಸಬಹುದು. ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೂ ಕಡಿಮೆ ಪ್ರೀಮಿಯಂನಲ್ಲಿ ಆರೋಗ್ಯ ವಿಮೆ ಸೌಲಭ್ಯ ಒದಗಿಸುವುದು, ಸಮೂಹ ವೈದ್ಯಕೀಯ ವಿಮಾ ಪಾಲಿಸಿಗಳನ್ನು ಜಾರಿಗೆ ತರುವುದರಿಂದ ಆಸ್ಪತ್ರೆ ಚಿಕಿತ್ಸಾ ವೆಚ್ಚದ ಹೊರೆ ಕಡಿಮೆಯಾಗುತ್ತದೆ. ತುರ್ತು ವೈದ್ಯಕೀಯ ಸಹಾಯಕ್ಕಾಗಿ ನಿಧಿ ಸ್ಥಾಪಿಸುವುದು ಮತ್ತು ಸರ್ಕಾರದ ಆರೋಗ್ಯ ಯೋಜನೆ ಗಳೊಂದಿಗೆ ಸಹಭಾಗಿತ್ವ ಮಾಡಿಕೊಳ್ಳುವುದು ಸದಸ್ಯರ ಜೀವನ ಭದ್ರತೆಯನ್ನು ಇನ್ನಷ್ಟು ಬಲಪಡಿಸುತ್ತದೆ.

6. ಸಂಘದ ಮಹಿಳೆಯರು ಮತ್ತು ಯುವಕರಿಗಾಗಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಬಹುದು. ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಬಹುದು. ಯುವಕರಿಗಾಗಿ ನಾಯಕತ್ವ ತರಬೇತಿ, ಕ್ರೀಡಾ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಮಾಜ ಸೇವಾ ಶಿಬಿರಗಳನ್ನು ನಡೆಸುವುದರಿಂದ ಅವರಲ್ಲಿ ಆತ್ಮ ವಿಶ್ವಾಸ, ಶಿಸ್ತು ಮತ್ತು ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸಬಹುದು.

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘವು ಸಮುದಾಯದ ಪ್ರಗತಿ ಮತ್ತು ಕಲ್ಯಾಣದ ಕೇಂದ್ರ ಬಿಂದು. ಸದಸ್ಯರ ಒಗ್ಗಟ್ಟು, ಪಾರದರ್ಶಕತೆ, ಬದ್ಧತೆ ಮತ್ತು ಚೇತನದಿಂದ ನಡೆಸಿದ ಪ್ರತಿಯೊಂದು ಹೆಜ್ಜೆಯೂ ಸಂಘವನ್ನು ಮುನ್ನಡೆಸುವ ಶಕ್ತಿ ಹೊಂದಿದೆ. ಮುಂದಿನ ವರ್ಷಗಳಲ್ಲಿ ಸಂಘವು ಹೆಚ್ಚು ಸದಸ್ಯರನ್ನು ಸೇರಿಸಿ, ಸಮಾಜಮುಖಿ ಕಾರ್ಯಗಳನ್ನು ವಿಸ್ತರಿಸಿ, ಶಿಕ್ಷಣ, ಆರೋಗ್ಯ ಮತ್ತು ಕಲ್ಯಾಣ ಎಲ್ಲ ಕ್ಷೇತ್ರಗಳಲ್ಲೂ ಸಮುದಾಯದ ಬೆಳವಣಿಗೆಗೆ ಮಾದರಿಯಾಗಬೇಕು. ಪ್ರತಿಯೊಬ್ಬ ಸದಸ್ಯರ ಸಹಭಾಗಿತ್ವ ಮತ್ತು ಸಮೂಹ ಶಕ್ತಿ ಸಂಘವನ್ನು ಇನ್ನಷ್ಟು ಸಮೃದ್ಧಿ, ಶಾಂತಿ ಮತ್ತು ಏಳಿಗೆಯ ದಾರಿಗೆ ಕೊಂಡೊಯ್ಯುತ್ತದೆ ಎಂಬ ನಂಬಿಕೆ ನನ್ನದು.

ನಮಸ್ಕಾರ



**ಡಾ॥ ಶುಭ ಗಾಯತ್ರಿ ಎನ್.**
9482536047

ಬೃಹಚ್ಚರಣ ಸಂಘದ ಬಂಧು-ಮಿತ್ರರಿಗೆಲ್ಲ ಶುಭಾಶಯಗಳು



# ದಿ॥ ಶ್ರೀ ಜೆ.ಎಸ್. ಶ್ರೀಕಂಠೇಶ್ವರನ್

(ವಕೀಲರು)

## ಇವರ ಸವಿನೆನಪಿಗಾಗಿ

ಶ್ರೀಮತಿ ಭಾರತಿ ಶ್ರೀಕಂಠೇಶ್ವರನ್
ಮತ್ತು ಕುಟುಂಬದವರಿಂದ.

*With Best Compliments From*



## NAVEEN N.

MBA (HR), LLB
Purohith, Journalist & Lawyer
S/O. Late S.R. Nagaraj
TF-302, Ravi Hill View Layout,
Manjunath Nagar, Ittamadu, BSK 3rd Stage,
Bangalore-560085
Mobile: 9019263399, 8317308824

*With Best Compliments From*



## SATHYANARAYANA S.

# 49,
Kittiganahalli
Bommasandra Industrial Area Post
Anekal Taluk,
Bengaluru 560099

*With Best Compliments From*



## SEKHAR K.C.

# 501, "saraswathy"
Andal Temple Street,
Garuthman Park
Basavanagudi, Bengaluru 560004

*With Best Compliments From*

In Memory of

## SRI SANNE SURAPPA

&

## SMT. PADMAVATHAMMA

Inserted By
**SOMASUNDARA S.**
# 8, 3rd Cross,
Annayyappa Block
Kumarapark West,
Bengaluru 560020

*With Best Compliments From*





**SREENIVASA S.C.**
**&**
**RAGHAVA PRASAD S.C.**

# 353,
"Sree Sathya Ganesh"
10th Main, Poornaprajna Layout
Subramanyapura Post
Bengaluru 560061

*With Best Compliments From*

**UMESH SOMASEKHARAN**
**&**
**FAMILY**
**Bengaluru**

*With Best Compliments From*



**RAMESH R.S.**

Flat # 2123,
"SHOBHA ARENA PEBBLE COURT"
Judicial Layout 2nd Phase,
Thalaghattapura
Kanakapura Road, Bengaluru 560062

*With Best Compliments From*

ಜಯ ಶೇಷರ ಕೃಪೆ ನಮ್ಮೊಂದಿಗಿರಲಿ,
ಗೌರಿಶಂಕರರ ರಕ್ಷಾ ಕವಚವು ನಮ್ಮೊಂದಿಗಿರಲಿ
ಮಣಿ ರಂಗರ ಆಶೀರ್ವಾದ
ಸದಾ ನಮ್ಮೊಂದಿಗಿರಲಿ

ನಮ್ಮೆಲ್ಲ ಬಂಧು ಬಾಂಧವರಿಗೆ
ಶುಭಹಾರೈಕೆ ಇರಲಿ

**ಮಣಿ ರಂಗಣ್ಣ ಕುಟುಂಬದವರಿಂದ**

# ನಮ್ಮ ಸಮುದಾಯದ ಹೆಮ್ಮೆಯ ನಿಸ್ವಾರ್ಥ ವ್ಯಕ್ತಿಗಳು



**1. ಕಾಮನಹಳ್ಳಿ ರಾಜಣ್ಣ**

ನಮ್ಮ ಸಮುದಾಯದ ಗೌರವಾನ್ವಿತ ಸದಸ್ಯರಾದ ಶ್ರೀ ನಾಗರಾಜ್ ಕಾಮನಹಳ್ಳಿ, ಎಲ್ಲರಿಗೂ ಪ್ರೀತಿಯಿಂದ ರಾಜಣ್ಣ ಎಂದೇ ಪರಿಚಿತರು. ಇವರು ದಿ॥ ಕೃಷ್ಣಮೂರ್ತಿ ಮತ್ತು ದಿ॥ ಸಾವಿತ್ರಮ್ಮ (ಮರಿ) ದಂಪತಿಗಳ ಸುಪುತ್ರರು. ನಾಲ್ವರು ತಂಗಿಯರೊಡನೆ ಬೆಳೆದ ಇವರು ಹದಿನಾಲ್ಕನೇ ವಯಸ್ಸಿನಲ್ಲೇ ತಮ್ಮ ತಂದೆಯನ್ನು ಕಳೆದುಕೊಂಡು, ತಾಯಿ ಮತ್ತು ತಂಗಿಯರೊಡನೆ ತಮ್ಮ ತಾತಂದಿರಾದ ಗುಂಜೂರು ಸುಬ್ಬಯ್ಯ ಅವರ ಆರೈಕೆಯಲ್ಲಿ ಬೆಳೆದರು. ಕುಟುಂಬದ ಜವಾಬ್ದಾರಿಯಿಂದ ತಮ್ಮ ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸಿದರು ಮತ್ತು ಅವಿವಾಹಿತರಾಗಿಯೇ ಜೀವನವನ್ನು ಸಮರ್ಪಿತವಾಗಿ ಕಳೆದರು.

ರಾಜಣ್ಣನವರು ಸರ್ಜಾಪುರದ ಅಂಚೆ ಇಲಾಖೆಯಲ್ಲಿ ಹಂಗಾಮಿ ಪೋಸ್ಟ್‌ಮ್ಯಾನಾಗಿ ಸೇವೆ ಸಲ್ಲಿಸಿದರು. ನಂತರ ಕೃಷಿ ಹಾಗೂ ಸಣ್ಣಪುಟ್ಟ ಕೆಲಸಗಳ ಮೂಲಕ ಜೀವನ ಸಾಗಿಸುತ್ತಿದ್ದರು, ತಮ್ಮ ಸಮುದಾಯದ ಮನೆಗಳಲ್ಲಿ ಸಾವು–ನೋವು ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿ ಅಗತ್ಯ ಕಾರ್ಯಗಳನ್ನು ನಿಸ್ವಾರ್ಥದಿಂದ ಮಾಡುತ್ತಿದ್ದರು. ಎಲ್ಲರೂ ದುಃಖ ಭರಿತರಾಗಿದ್ದರೂ ರಾಜಣ್ಣನವರನ್ನು ನೋಡಿದ ತಕ್ಷಣ ಮುಂದಿನ ಕೆಲಸವು ಯಾವುದೇ ಲೋಪವಿಲ್ಲದಂತೆ ನೆರವೇರುತ್ತದೆ ಎಂಬ ನಿರಾಳತೆ ಎಲ್ಲರಿಗೂ ಬರುತ್ತಿತ್ತು. ಇಂತಹ ಸೇವಾಭಾವ ಈಗಿನ ಕಾಲದಲ್ಲಿ ಅಪರೂಪ. ಇಂದು 88 ವರ್ಷ ವಯಸ್ಸಾಗಿದ್ದರೂ ಅವರು ಜೀವನೋತ್ಸಾಹದಿಂದ ತುಂಬಿದ್ದು, ಎಲ್ಲರಿಗೂ ಪ್ರೇರಣೆಯಾಗಿದ್ದಾರೆ. ಇವರಿಗೆ ನಮ್ಮ ವಂದನೆಗಳು.

ಇವರು ನಮ್ಮ ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಎಸ್.ಸಿ. ಶ್ರೀನಿವಾಸ್ ಹಾಗೂ ಸಂಘದ ಸದಸ್ಯರುಗಳಾದ ಎಸ್.ಸಿ. ರಾಘವ ಪ್ರಸಾದ್, ಎಸ್.ಸಿ. ಪರಿಮಳ, ವೆಂಕಟೇಶ್, ಪಾರ್ಥಸಾರಥಿ, ಪದ್ಮಾವತಿ ಮತ್ತು ಆರ್. ವೆಂಕಟೇಶ್ ಪ್ರಸಾದ್ ರವರ ಸೋದರಮಾವ.



**2. ನೀರಿನ ನಂಜುಂಡಯ್ಯ**

ದಿ| ಶ್ರೀ ನಂಜುಂಡ ಅವರು ಮೂಲತಃ ವರ್ತೂರು ಗ್ರಾಮದವರು. ಜಾತ್ರೆ ಸಮಯದಲ್ಲಿ ನಾವು ಸರ್ಜಾಪುರ, ಆನೇಕಲ್ ಅಥವಾ ಕಿತ್ತಗಾನಹಳ್ಳಿಗೆ ಹೋದಾಗ ಅವರನ್ನು ಭೇಟಿಯಾಗುತ್ತಿದ್ದೆವು. ಅವರ ವಿಳಾಸವನ್ನು ಯಾರಾದರೂ ಕೇಳಿದರೆ ಅವರು ನಗುತ್ತಾ "ವಾಟರ್ ಸಪ್ಲೈ ನಂಜುಂಡ, ನೋ ಅಡ್ರೆಸ್" ಎಂದು ಹೇಳುತ್ತಿದ್ದರು!

ಈಗಿನ ಕಾಲದಂತೆ ಆಗಿನ ಕಾಲದಲ್ಲಿ ನೀರಿನ ಸೌಲಭ್ಯವಿರಲಿಲ್ಲ. ನೀರಿಗಾಗಿ ಊರಿನ ಹೊರಗೆ ಕಿಲೋಮೀಟರ್ ಗಟ್ಟಲೆ ಹೋಗಿ ಕೆರೆ ಬಾವಿಗಳಿಂದ ತರಬೇಕಾತ್ತು. ಹಾಗಾಗಿ ಊರಿನಲ್ಲಿ ಯಾವುದೇ ಶುಭ, ಅಶುಭ ಕೆಲಸವಿದ್ದರೂ ನಂಜುಂಡಯ್ಯ ಅವರು ಬಂದು ನೀರಿನ ದಾಹವನ್ನು ತೀರಿಸುತ್ತಿದ್ದರು ಅಂದರೆ ಕಾರ್ಯಕ್ರಮಕ್ಕೆ ಕೊರತೆ ಬಾರದಂತೆ ಬೆಳಗ್ಗಿನಿಂದ ಸಂಜೆವರೆಗೂ ನೀರನ್ನು ಊರಿನ ಹೊರಗಿನಿಂದ ತಂದು ಪೂರೈಸುತ್ತಿದ್ದರು.

ಶ್ರೀಯುತರು ತಮ್ಮ ಜೀವಿತಕಾಲದ ಕೊನೆಯ ಘಟ್ಟವನ್ನು ಬನ್ನೇರುಘಟ್ಟ ಚಂಪಕಧಾಮದ ಸನ್ನಿದಿಯಲ್ಲಿ ಕಳೆದರು. ದೇವಾಲಯದ ದೀಕ್ಷಿತರು ಇವರನ್ನು ನೋಡಿಕೊಂಡರು. ಇವರಿಗೆ ನಮ್ಮ ಪ್ರಣಾಮಗಳು.

ಹೀಗೆ ನಮ್ಮ ಸಮುದಾಯದಲ್ಲಿ ಇನ್ನೂ ಸಾಕಷ್ಟು ಜನರು ನಿಸ್ವಾರ್ಥದಿಂದ, ಎಲೆಮರೆ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ಮಹನೀಯರನ್ನು ನಾವೆಲ್ಲರೂ ನೆನಪಿಸಿಕೊಳ್ಳೋಣ — ಅವರು ನಮಗೂ ಮತ್ತು ಮುಂದಿನ ಪೀಳಿಗೆಯವರಿಗೂ ಆದರ್ಶಪ್ರಾಯರು.

ನಾನು ನೋಡಿದ ಮಹನೀಯರ ಬಗ್ಗೆ ಪರಿಚಯಿಸುವ ಸಣ್ಣ ಪ್ರಯತ್ನ. ವಂದನೆಗಳೊಂದಿಗೆ ನಿಮ್ಮವ

**ಗಣಶ್ರೀ**

With Best Compliments To

# All Our Bruhacharana Relatives & Friends

## SRI S.R. SATYAPRASAD
## &
## SMT. J.R. NAGARATHNA

"Sree Matha"
Baya Temple Bells Apartment

Flat No. 249, 3rd Floor
Door No. 103, 6th Cross
BEML Layout, 3rd Stage
Rajarajeshwarinagar,
Bengaluru 560098
Mobile no.: 9880923210

# ಪುಣ್ಯಸ್ಮರಣೆ



## ದಿ|| ಶ್ರೀಮತಿ ವೆಂಕಟಲಕ್ಷಮ್ಮ ಮತ್ತು ದಿ|| ಶ್ರೀ ವೆಂಕಟರಾಮಯ್ಯ

**ಶ್ರೀಮತಿ ಜಲಜ ಮತ್ತು ಶ್ರೀ ಎನ್.ವಿ. ಸೂರ್ಯಪ್ರಕಾಶ್**
**ಹಾಗೂ ಶ್ರೀಮತಿ ಮೈಥಿಲಿ ಮತ್ತು ಶ್ರೀ ಎನ್.ವಿ. ರಮೇಶ್**
**ಅವರಿಂದ**

*With Best Compliments From*

# "GUNJUR"





## Late Smt. Janakamma &
## Late Sri G. Srinivasa Murthy

**"Sri Venkateshwara Nilaya"**
**# 5, 3rd Cross, VIT College Road, KR Layout,**
**Puttenahalli Main Road, JP Nagar, Bengaluru 560078**

*With Best Compliments From*

# Seheri Boutique

By Megha

**Specialized in**
**Ladies & Kids Wear**

- Blouses
- Salwar Sets
- Kurthis
- Gowns
- Lehengas
- Saree Kucchu
- Saree Fall and Pico
- Embroidery Blouse

**9986278842**



# ಬೃಹಚ್ಚರಣ ಕಾಲೋನಿ – ಒಂದು ಸವಿ ನೆನಪು

ಸುಮಾರು 70 ವರ್ಷಗಳ ಹಿಂದಿನ ಒಂದು ಸುಂದರ ನೆನಪಿನ ಚಿತ್ರಣದ ಲೇಖನ.

ಆಗ ಇದ್ದದ್ದು ಬೆಂಗಳೂರು ಸಿಟಿ ಹಾಗೂ ದಂಡು (Contonment). ಒಂದೇ ಜಾತಿ ಅಥವಾ ಭಾಷೆ ಮಾತನಾಡುವವರು ವಾಸಿಸುವ ಸ್ಥಳಕ್ಕೆ ಕಾಲೋನಿ ಎನ್ನುತ್ತಿದ್ದರು.

ನನಗಾಗ 12 ವರ್ಷ (ಈಗ 82). ತಂದೆ ಕೆ.ಎಸ್. ಛಾಯಾಪತಿ. ಲಾರಿ ಕಂಪನಿಯೊಂದರಲ್ಲಿ (S.R.V.S.) ಕೆಲಸ ಹಾಗೂ ಸಂಗೀತದ ಮೇಷ್ಟ್ರು. ವಾಸ – ನಂ. 8, "G Street" Cleveland Townನಲ್ಲಿ. ನಮ್ಮ ತಾತ ಸಂಪಂಗಿರಾಮಯ್ಯ ಅಜ್ಜಿ ರಂಗಮ್ಮ ಚೆನ್ನಾಗಿ ಹಾಡುತ್ತಿದ್ದರು. ನಾವು ವಾಸವಾಗಿದ್ದ ಮುಂದಿನ ರಸ್ತೆ ಪೂರ್ತಿ ಬೃಹಚ್ಚರಣ ಪಂಗಡದ ತುಂಬು ಸಂಸಾರಗಳು. ಎಲ್ಲರ ಮನೆಯಲ್ಲೂ ಎಂಗಲ್ದೇ ವಾತೆ. ಕೊಟ್ಟು ತೆಗೆದುಕೊಳ್ಳುತ್ತಿದ್ದ ಮದುವೆಗಳು ನಮ್ಮವರೊಂದಿಗೇ ಮಾತ್ರ. ಮಧ್ಯಮವರ್ಗದವರಾದರೂ ನೆಮ್ಮದಿಯಿಂದ ಇದ್ದವರು. ನೆರೆಯವರಿಗೆ ಪ್ರೀತಿ, ವಿಶ್ವಾಸ ತೋರುತ್ತಿದ್ದವರು.

ನಮ್ಮ ಮನೆ ಮುಂದಿನ ರಸ್ತೆಯಲ್ಲೇ. ಮೇಷ್ಟ್ರು ಡಿ.ವಿ. ಚಲಯ್ಯ–ಅಲಮೇಲಮ್ಮನವರ ಸಂಸಾರ. ಅವರ ಮಗಳು ಶಕುಂತಲ, ಸುಬ್ಬಮ್ಮ ನನ್ನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದರು. ಚಲಯ್ಯನವರ ಮಕ್ಕಳಾದ ಶೇಷಗಿರಿ, ನಟರಾಜ್, ಪ್ರಕಾಶ (ನನಗೆ Drill ಮೇಷ್ಟ್ರು), ಪುಟ್ಟಣ್ಣ ಹಾಗೂ ರುಕ್ಮಿಣಿ. ಇವರೆಲ್ಲ ರೊಂದಿಗಿನ ಓಡಾಟವೇ ಚೆನ್ನಾಗಿತ್ತು.

ಅವರ ಮನೆ ಪಕ್ಕದಲ್ಲಿ ಮೇಷ್ಟ್ರು ರಾಮಯ್ಯ. ಇವರ ಮೊದಲನೇ ಹೆಂಡತಿಯ ಮಗ ರಾಧಾಕೃಷ್ಣ (ನಮ್ಮ ತಂದೆಯ ಜೊತೆ ಸಂಗೀತದಲ್ಲಿ ಸಹಕರಿಸುತ್ತಿದ್ದರು). ಇವರ ಹೆಂಡತಿ ಮೀನಾಕ್ಷಮ್ಮ ಮತ್ತು ಇಬ್ಬರು ತಮ್ಮಂದಿರು.

ಇವರ ಮನೆ ಬಿಟ್ಟು ಎರಡು ಮನೆ ಆದರೆ ವೆಂಕಟರಾಯರು ಹಾಗೂ ಹೆಂಡತಿ ಸಾವಿತ್ರಮ್ಮನವರ ಮನೆ. ಇವರ ಮಗಳು ಇಂದಿರ. ಮುಂದಿನ ಮನೆ ಲಲಿತಮ್ಮ. ಅವರ ಮನೆಯಲ್ಲಿ ಕೃಷ್ಣಮೂರ್ತಿ, ರಾಜಮ್ಮ, ನಾರಾಯಣ. ಅವರ ಮನೆ ಎದುರು ಚಲಯ್ಯನವರ ಹಿರಿಯ ಮಗ ನಟರಾಜ್ ಕುಟುಂಬದವರು ವಾಸವಾಗಿದ್ದರು. ಇವರ ಹೆಂಡತಿ ಶಾರದ (ಸುಶ್ರಾವ್ಯ ಸಂಗೀತಗಾರ್ತಿ) ಮಕ್ಕಳು ಶ್ರೀನಿವಾಸ್, ಪ್ರಭಾಕರ, ವಿಶ್ವನಾಥ, ಬಾನು ವಸುಂಧರ ಹಾಗೂ ಶಶಿ.

ತುಳಸಿರಾಮದಾಸ ಮಠದ ಕಡೆಯಿಂದ ಬಂದರೆ ನಮ್ಮವರೇ ಆದ ಮ್ಯಾಜಿಸ್ಟ್ರೇಟ್ ಶ್ರೀನಿವಾಸಯ್ಯ ಅವರ ಕುಟುಂಬ. ಇವರ ಒಬ್ಬನೇ ಮಗ ಸತ್ಯಮೂರ್ತಿ. ಹೆಣ್ಣು ಮಕ್ಕಳಾದ ಸುಬ್ಬಲಕ್ಷ್ಮಿ ಹಾಗೂ ವರಲಕ್ಷ್ಮಿ ನಮ್ಮ ತಂದೆಯ ಹತ್ತಿರ ಸಂಗೀತ ಕಲಿಯಲು ಬರುತ್ತಿದ್ದರು.

ಹಾಗೆಯೇ ಮುಂದೆ ಬಂದರೆ ಬೇಕರಿ ಗೋಪಾಲಯ್ಯನವರ ಕುಟುಂಬ ಮತ್ತು ಹೋಟೆಲ್ ಭೀಮೇಶ್ವರ ಹಾಗೂ ಅವರ ಮಕ್ಕಳು ಶರ್ಮ, ಸುರೇಶ್ ಹಾಗೂ ಮುರಳಿ (ಈಗಲೂ ನನ್ನ ಸ್ನೇಹಿತರು).

ನಮ್ಮ ತಂದೆಯ ಸ್ನೇಹಿತರಾದ ಶಾಮಣ್ಣ, ಡ್ರೈರಿ ದಾನಪ್ಪ, court ಛಾಯಾಪತಿ, ಇವರ ಕುಟುಂಬಗಳ ವಾಸ.

ತುಳಸಿ ತೋಟದ ಹಿಂದೆ ಆನೇಕಲ್ ಡಾ॥ ಸುಬ್ಬರಾಮಯ್ಯ ಅವರ ಕುಟುಂಬ (ಇವರು ನಮ್ಮ ತಾಯಿಯ ಸೋದರ ಮಾವ). ಇವರ ಮಗ ಸ್ವಾಮಿ ಹಾಗೂ ಮಗಳು ಸರೋಜ.

ಓ...... ನೆನೆಸಿಕೊಳ್ಳುತ್ತಿದ್ದರೆ ಎಲ್ಲರ ಹೆಸರೂ ಬರೆಯ ಬೇಕೆನಿಸುತ್ತದೆ. ಓದುಗರ ತಾಳ್ಮೆ ಪರೀಕ್ಷಿಸುವುದು ತಪ್ಪು.

ಬೃಹಚ್ಚರಣ ಬಂಧುಗಳೆಲ್ಲಾ ಒಂದೇ ಕಡೇ ವಾಸಿಸುತ್ತಿದ್ದಿದ್ದು ನೆನಪಾದರೆ ಮನಸ್ಸಿಗೆ ಹಿತವಾದ ಅನುಭವವಾಗುತ್ತದೆ. ಈಗಿನ ಕುಟುಂಬಗಳು ಇರುವ ಒಂದೋ ಎರಡೋ ಮಕ್ಕಳನ್ನು ಓದಿಸಿ, ವಿದೇಶಕ್ಕೆ ಕಳುಹಿಸಿ ವಯಸ್ಸಾದ ಮೇಲೆ ಅನಾಥರಂತೆ ಇರುವ ಹಲವು ಸಂಸಾರಗಳನ್ನು ನೆನೆಸಿಕೊಂಡರೆ ಹಿಂದಿನವರೇ ಸುಖಿಗಳೆನಿಸುತ್ತದೆ. ನಮಸ್ಕಾರ.



**ಕೆ.ಸಿ. ನಟರಾಜ್**
9845113475

*With Best Compliments From*

# Smt. SAVITHA ESHWARAN
# &
# Sri. A. ESHWARAN

**# 102, 12th 'A' Cross, 13th Main**
**BTM Layot 2nd Stage, Bengaluru 560076**
**Mobile No.: 98451 56503**

*With Best Compliments From*

# Vidwan R. Karthik

**Musician and Music Organizer**

**"A" Grade Artist of All India Radio and Doordarshan Bangalore,**
**In Khanjira, Mridangam and Konnakkol Art Forms**

**Contact- +919844535114**
**Karthikvasumathi@gmail.com**

**Smt. S.Vasumathi & Sri R.S. Ravikumar**

*With Best Compliments From*

# Padmanabha (Real Estate)
# & Krishnakumar

**S/o Late Sri Gundashastri**

**# 151,Ganigara street,**
**Near Venkateshwaraswamy Temple,**
**Sarjapura, Anekal Taluk, Bangalore - 562125**

*With Best Compliments From*

# DVM STATIONERY, FANCY & GENERAL STORE

**Shekhar D.M.**
**Dommasandra, Sarjapura Hobali**
**Anekal Taluk, Bengaluru - 562125**
**Mobile : 9448686796 / 9606279707**

*With Best Compliments From*

**Muthuraj D. S.**

Engagement. Wedding. Pre/Post wedding. Haldi ceremony.
Meternity Shoot. Mehendi Ceremony, Birthday Party.
Half Saree, Naming Ceremony & House Warming

**Mobile/Whatsapp:6366279707**

MYEDITS
Photography
6366279707

@MY_EDITSOFFICIAL



Any Kind of Functions we do Photography and Videography.
Baloon Decoration and Flower Decorations.
Music System for events. We organise events as you prefer
Catering services, Pure veg. Bridal, and Non Bridal Makeup.

**WE SERVE AS YOUR DREAM**

*With Best Compliments From*

# Muthuraj D. S.

**Financial Advisor**

जिंदगी के साथ भी
जिंदगी के बाद भी

LIC
भारतीय जीवन बीमा निगम
LIFE INSURANCE CORPORATION OF INDIA

- **Term Life Insurance**
- **Children Plans**
- **Whole Life Insurance**
- **Endowment Plans**
- **ULIP Plans**
- **Pension Scheme**

**Mobile/Whatsapp: 6366279707**

*With Best Compliments From*

**H.K. RAVI KIRAN**
Ex Regional Manager, Mktg., CLIA
Mobile No.: 94485 62258
E-mail: arkiran62@gmail.com

**H.K. SHASHIDHAR**
B.Sc., AWI (U.K.)
Senior Development Officer
Mobile No.: 98451 73788
E-mail: shashi66@gmail.com

# Life Insurance Corporation of India
# Bengaluru

LIC
भारतीय जीवन बीमा निगम
LIFE INSURANCE CORPORATION OF INDIA

*With Best Compliments From*

## Strength That Shines.
## Performance That Endures.

**Your end-to-end partner for all your industrial needs.**

For decades, we've delivered solutions that meet the highest standards of strength, finish, and reliability. From industrial-grade materials to precision-engineered components, we support industries across medical, automotive, construction, engineering, food processing, and more.

Our commitment is simple: consistent quality, on-time delivery, and total technical support.







- Complete Metal Solution
- Hospital Solution
- Electrical & Electronic Servicing
- Corporate Gifting Solution

AMICO
SALES CORPORATION

#25, 1 A Cross, 1st Floor, Lalbagh Road, Bengaluru - 560027 | 9844139915 | manjunath.amico@gmail.com

# ಮರೆಯಲಾಗದ ವ್ಯಕ್ತಿತ್ವ – ನಮ್ಮ "Soil" ವಾಸು



ನಮ್ಮಲ್ಲಿ ಬಹು ಮಂದಿ, ಇತರರು ಬಿಟ್ಟುಹೋದ ದಾರಿಯಲ್ಲೇ ನಡೆಯುತ್ತೇವೆ. ಸಮಾಜ ನಮ್ಮಿಂದ ನಿರೀಕ್ಷಿಸುವ ಕೆಲಸಗಳನ್ನು ಮಾಡುತ್ತಾ, ನಾವು ಒಂದು ಸುಖಮಯ ಜೀವನದ ಭಾಗವಾಗುತ್ತೇವೆ. ಆದರೆ ಕೆಲವರು ಮಾತ್ರ ತಮ್ಮ ಬದುಕಿನ ಮೂಲಕ ಇತರರಿಗೆ ಹೊಸ ದಾರಿಯನ್ನು ನಿರ್ಮಿಸುತ್ತಾರೆ.

ಶ್ರೀನಿವಾಸ್ ಪಿ — ನಮ್ಮ ಪ್ರಿಯ ವಾಸು ಪಿ, ಅಂದರೆ "Soil ವಾಸು" — ಅಂತಹವರಲ್ಲಿ ಒಬ್ಬರು. 2025ರ ಸೆಪ್ಟೆಂಬರ್ 13ರಂದು ಅವರು ನಮ್ಮನ್ನು ಅಗಲಿದರು — ಮಾತಿಗೆ ಸಿಗದಷ್ಟು ಆಳವಾದ ನೋವನ್ನು ನಮಗೆ ಬಿಟ್ಟು ತೆರಳಿದರು.

ಅವರು ಜೊತೆಯಲ್ಲಿದ್ದರೆ ಅದು ಸಂಪೂರ್ಣ ಸಂತೋಷವಾಗುತ್ತಿತ್ತು. ಅವರು ಹಾಡುತ್ತಿದ್ದರು, ಕಥೆ ಹೇಳುತ್ತಿದ್ದರು, ತಮ್ಮ ಕಿರುಕುಳಗಳಿಂದ ಎಲ್ಲರನ್ನೂ ನಗಿಸುತ್ತಿದ್ದರು, ಕಣ್ಣೀರು ಒರೆಸುತ್ತಿದ್ದರು, ತಿಂಡಿ ತರುತ್ತಿದ್ದರು, ನಮ್ಮ ನೋವುಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಅವರು ನನಗೆ ನಿಜವಾದ ಅಣ್ಣನಂತಿದ್ದರು. ಏನೇ ಸಮಸ್ಯೆಯಿದ್ದರೂ ಅವರೊಡನೆ ಹಂಚಿಕೊಳ್ಳಬಹುದಿತ್ತು. ಇದು ಸತ್ಯ. ನಮ್ಮ ಪರಿವಾರದಲ್ಲಿ ನಾನು ನಿಸ್ಸಂಕೋಚವಾಗಿ ಮನದಾಳದ ಮಾತುಗಳನ್ನು ಹಂಚಿಕೊಳ್ಳಬಹುದಾದ ಒಬ್ಬ ವ್ಯಕ್ತಿ ಇದ್ದರೆಂದರೆ ಅವರು ವಾಸು.

ಒಮ್ಮೆ ನಾನು ಏಳು ವರ್ಷದಾಗಿದ್ದಾಗ ಬಿದ್ದು ಮೊಣಕಾಲು ಗಾಯಗೊಂಡಿತ್ತು. ರಕ್ತ ಹರಿಯುತ್ತಿತ್ತು, ನಾನು ಅತ್ತಿದ್ದೆ. ಆದರೆ ವಾಸು ಒಂದು ಹಾಸ್ಯಪೂರ್ಣ ಹಾಡು ಹಾಗೂ ನೃತ್ಯ ಮಾಡಿ, ನನ್ನನ್ನು ಎಷ್ಟು ನಗಿಸಿದರು ಅಂದರೆ ನೋವೇ ಮರೆತು ಹೋಯಿತು. ಅವರದ್ದು ಜನರ ಹೃದಯವನ್ನು ಸುಲಭವಾಗಿ ತಲುಪುತ್ತಿದ್ದ ಸ್ವಭಾವ. ಅವರಲ್ಲಿ ಕಪಟವಿರಲಿಲ್ಲ, ನಾಟಕವಿರಲಿಲ್ಲ, ಇದ್ದದ್ದು ಸ್ವಭಾವ ಸಹಜವಾದ ದಯೆ ಮಾತ್ರ. ಅವರ ಮಾತುಗಳಲ್ಲಿ ಅದ್ಭುತ ಶಕ್ತಿ ಇರುತ್ತಿತ್ತು; ನಾನು ನನ್ನ ಜೀವಿತದ ವಿವಿಧ ಮುಖಗಳ ಕುರಿತು ಅನೇಕ ಬಾರಿ ಅವರ ಸಲಹೆ ಕೇಳುತ್ತಿದ್ದೆ.

ನಾನು ಬೆಳೆದಂತೆ, ಅವರು ನನ್ನ ಸ್ಫೂರ್ತಿಯಾಗಿದ್ದರು. ಸಾಮಾನ್ಯ ಲೋಕದಲ್ಲಿ ಬಹು ಮಂದಿ ಕಾಣದ್ದನ್ನು ಅವರು ಕಂಡರು. ಸಮಾಜದಲ್ಲಿ ಹಿಂದೆಬಿದ್ದವರ ನೋವು–ಕಷ್ಟಗಳು ಅವರಿಗೆ ತಿಳಿದಿತ್ತು ಅವರು ಮನದಿಂದ ಅರ್ಥಮಾಡಿಕೊಂಡರು ಅವರಲ್ಲಿ ಇದ್ದ ಸಹಜ ಕರುಣೆ ಅಪರೂಪದ್ದು. ಅವರಲ್ಲಿದ್ದ ಶಾಂತವಾದ ಧೈರ್ಯ, ನಾನು ಯಾರಲ್ಲಿಯೂ ನೋಡಿರಲಿಲ್ಲ. ಅನ್ಯರ ಮಾತಿಗೆ ತಲೆಕೆಡಿಸಿಕೊಳ್ಳದೇ ತಮ್ಮದೇ ದಾರಿಯಲ್ಲಿ ತಮ್ಮಪಾಡಿಗೆ ತಾವು ನಡೆದರು.

ವಾಸು ಅವರ ಪೋಷಕರು ಕನ್ನಡ ಮತ್ತು ಗಣಿತದಲ್ಲಿ ಪರಿಣಿತರಾಗಿದ್ದವರು. ಅವರ ಎರಡನೇ ಮಗನಾದ ವಾಸು ಸುಖ–ಸುಲಭವಾದ ಡೆಸ್ಕ್ ಜಾಬ್ ಸೇವೆಯ ಬಿಟ್ಟು ಕಷ್ಟಸಾಧ್ಯವಾದ ಜೀವನವನ್ನು ಆರಿಸಿಕೊಂಡದ್ದು ಹೇಗೆ? ಅವರು ತಮ್ಮ ಜೀವನದ ಧ್ಯೇಯವನ್ನು ಮುಂಚಿನಿಂದಲೇ ನಿರ್ಧರಿಸಿಕೊಂಡಿದ್ದವರು. ತಮ್ಮ ವೈಯುಕ್ತಿಕ ಸುಖ ಇತರ ಒಳಿತಿನಿಂದ ಬರುವುದೆಂದು ನಂಬಿದರು. ಅದೇ ಅವರ ಜೀವನದ ಪರಮೋದ್ದೇಶವಾಗಿ ರೂಪುಗೊಂಡಿತು.

ಅವರ ಪಯಣ ಫೆಡಿನಾ FEDINA (Foundation for Educational Innovations in Asia) ಯಿಂದ ಪ್ರಾರಂಭವಾಯಿತು. ಕಟ್ಟಡ ನಿರ್ಮಾಣ ಕಾರ್ಮಿಕರು, ಸ್ವಚ್ಛತಾ ಕಾರ್ಮಿಕರು, ಗಾರ್ಮೆಂಟ್ ಉದ್ಯೋಗದ ಕಾರ್ಮಿಕರು ಮತ್ತು ರೈತರು ಇವರುಗಳ ನಡುವೆ ವಾಸುವಿಗೆ ಕೆಲಸ.. ನಂತರ ICRA (Institute for Cultural Research and Action) ಯಲ್ಲಿ ಕೆಲಸ ಪ್ರಾರಂಭಿಸಿದಾಗ, ರೈತರ ವಿಷಯದಲ್ಲಿ ಅವರ ಆಸಕ್ತಿ ತೀವ್ರಗೊಂಡಿತು. ಈ ಸಮಯದಲ್ಲಿ ಅವರು ಆಫ್ರಿಕೆಯ ಸೆನೆಗಲ್‌ಗೆ ಪ್ರಯಾಣಿಸಿದರು — ಸಹಾರಾ ಮರಳುಗಾಡಿನ ನಡುವೆ ವಾಸಿಸುತ್ತಾ ಅಲ್ಲಿ ಲಭ್ಯವಿರುವ ಅತ್ಯಲ್ಪ ಜಲ ಮತ್ತು ಮಣ್ಣಿನ ಮೇಲೆ ಅಲ್ಲಿಯ ಜನ ಎಷ್ಟು ಅವಲಂಬಿತರಾಗಿದ್ದಾರೆ, ಅವರ ಬದುಕು ಅಲ್ಲಿನ ವಿಷಮ ಪ್ರಕೃತಿಯೊಡನೆ ಹೇಗೆ ಏರುಪೇರಾಗುತ್ತಿರುತ್ತದೆ ಎಂಬುದನ್ನು ಅಧ್ಯಯನ ಮಾಡಿದರು. ಬಹುಶಃ ಅಲ್ಲಿ ಅವರ "ಮಣ್ಣಿನ" ಮೇಲಿನ ಪ್ರೀತಿ ಹುಟ್ಟಿತು.

ಮುಂದಿನ ಎರಡು ದಶಕಗಳಲ್ಲಿ ಅವರು ಕರ್ನಾಟಕದ

ಅಂಚು ಅಂಚಿಗೂ ಹೋದರು. ನಾನು ಒಮ್ಮೆ ಹಾಸ್ಯವಾಗಿ ಕೇಳಿದ್ದೆ, "ನೀ ಭೇಟಿಯಾಗದ ಒಂದು ಹಳ್ಳಿ ಇದೆಯಾ?" ಅವರು ನಕ್ಕು, "ಬಹುಶಃ ಇಲ್ಲ ಕಂದ!" ಎಂದರು.

ಅದು ಅವರ ಸ್ವಯಂ ನಿರ್ದೇಶಿತ ದಾರಿಯಾಗಿತ್ತು ಹಲವಾರು ವರ್ಷಗಳು ಅವರ ಬೆನ್ನಿಗೆ ಯಾವುದೇ ಸಂಸ್ಥೆಯ ಬೆಂಬಲವಿರಲಿಲ್ಲ. ಅಂಥ ಸಮಯದಲ್ಲಿ ಬೆಳಕಿಗೆ ಬಂತು ವಾಸುವಿನ ಧೈರ್ಯ–ಸ್ಥೈರ್ಯದ ಸ್ವಭಾವ. ಅವರು ಹಿಡಿದ ದಾರಿ ಸುಲಭದ್ದಾಗಿರಲಿಲ್ಲ. ಸಾವಯವ ಕೃಷಿಯ ಮಹತ್ವವನ್ನು ಕೆಲವೇ ಜನ ಅರ್ಥಮಾಡಿಕೊಂಡಿದ್ದ ಕಾಲದಲ್ಲಿ ಅದರ ಬಗ್ಗೆ ಸಂಶೋಧನೆ ನಡೆಸಿ ಅದರ ಬಗ್ಗೆ ಪ್ರಚಾರ ಮಾಡುವುದು, ಆರ್ಥಿಕ ಬೆಂಬಲವಿಲ್ಲದಿದ್ದರೂ ಟೆಂಪೋ, ಬಸ್ಸು, ಬೈಕ್ ಗಳಲ್ಲಿ ಅಥವಾ ಮೈಲಿಗಟ್ಟಲೆ ನಡೆದುಕೊಂಡೇ ಹಗಲು–ರಾತ್ರಿ ಎನ್ನದೇ ಸಂಚಾರ, ರೈತಾಪಿ ಜನರಿಗೆ ಪಾಠಮಾಡುವುದು ಇವೆಲ್ಲ ಸಾಮಾನ್ಯರು ಮಾಡಲಾಗದ ಕೆಲಸ. ದೈವದ ಕರೆಗೆ ತನ್ನನ್ನು ಸಮರ್ಪಿಸಿಕೊಂದವರಿಗೆ ಮಾತ್ರ ಸಾಧ್ಯ.

ತಂತ್ರಜ್ಞಾನದೊಂದಿಗೆ ವೇಗವಾಗಿ ಮುನ್ನುಗ್ಗುತ್ತಿದ್ದ ಜಗತ್ತಿನಲ್ಲಿ ವಾಸು ಒಂದು ಮುರುಕಲು ಲ್ಯಾಪ್ ಟಾಪ್ ಮತ್ತು ಹಳೆಯ ನೋಕಿಯಾ ಇಟ್ಟುಕೊಂಡು ಹೆಜ್ಜೆ ಹೆಜ್ಜೆಯಾಗಿ ಇಂಚುಇಂಚಾಗಿ ಏಕಾಗ್ರತೆಯಿಂದ ಕಲಿತರು. ರಾತ್ರಿಯಿಡೀ ಕೆಲಸ ಮಾಡುತ್ತಿದ್ದರು. ಹಾಡುಗಳನ್ನು ರಚಿಸುತ್ತಿದ್ದರು,, ಅಂಕಿ–ಅಂಶಗಳ ಚಾರ್ಟ್ ಗಳು, ಪವರ್ ಪಾಯಿಂಟ್ ಪ್ರೆಸೆಂಟೇಷನ್ ಗಳನ್ನು ತಯಾರಿಸುತ್ತಿದ್ದರು. ನನ್ನ ತಂಗಿ ಚಿತ್ರಾ, ಅವರ ಅಣ್ಣನ ಮಗ ಭಾರ್ಗವ ಮತ್ತು ನಮಗೆ ಅವುಗಳನ್ನು ತೋರಿಸುತ್ತಿದ್ದರು. ಬ್ಲಾಗಿಂಗ್ ಕೂಡ ಕಲಿತರು. ಮುಂದೆ ಫೇಸ್‌ಬುಕ್ ಅವರ ಹಿಡಿತಕ್ಕೆ ಸಿಕ್ಕನಂತರ ಮಣ್ಣಿನ ಕುರಿತು ಅವರ ಪ್ರತಿದಿನದ ಪೋಸ್ಟ್‌ಗಳಮೂಲಕ ಇತರ ಕೃಷಿಕರ ಜೊತೆ ಸಂಪರ್ಕ ಬೆಳೆಸಿಕೊಂಡರು. ಕ್ರಮೇಣ ಸಾವಯವ ಭೂಮಿಯ ಬಗ್ಗೆ ಪರಿಣಿತರಾದರು. ಅವರ ಜೋಳಿಗೆಯಂಥ ಚೀಲದಲ್ಲಿ ಪೇಪರ್ ಗಳ ಪೊಟ್ಟಣಗಳಲ್ಲಿ ಮಣ್ಣಿನ ಮಾದರಿಗಳು ಇರುತ್ತಿದ್ದವು. “Soil” ಎಂದರೆ ಸಾಕು ಒಂದು ಲೆಕ್ಚರ್ ಸಿಗುತ್ತಿತ್ತು.

ನಮಗೆಲ್ಲರಿಗೂ ವಾಸುವಿನ ಆರೋಗ್ಯದ ಬಗ್ಗೆ ಚಿಂತೆ ಇತ್ತು. ಅವರು 55 ದಾಟಿದನಂತರ ಒಮ್ಮೆ

“ಮೆಡಿಕಲ್ ಚೆಕಪ್ ಮಾಡಿಸಿಕೊ ವಾಸು." ಎಂದೆ.

"ನಾನು ನನ್ನ ಹಾಡುಗಳು, ಚಾರ್ಟ್‌ಗಳು, ಕೆಲಸ, ಇವುಗಳಿಗೆ ಏನಾದರೂ ಮೌಲ್ಯವಿದೆಯಾ?"

"ಹೌದು," ಎಂದೆ.

"ರೈತರಿಗೆ ಸಹಾಯ ಮಾಡುವುದು ಮುಖ್ಯವಾ?”

“ಖಂಡಿತ."

“ಹಾಗಿದ್ದಲ್ಲಿ ಸಾವಯುವ ಕೃಷಿಯನ್ನು ಅಳವಡಿಸಿ ಕೊಂಡಿಲ್ಲದ ಒಬ್ಬನೇ ಒಬ್ಬ ರೈತ ಇರುವವರೆಗೂ ನಾನು ವಿಶ್ರಮಿಸಲಾರೆ.” ಎಂದು ಮಾತು ಬದಲಾಯಿಸಿದರು.

ಅಂದರೆ, ರೈತಾಪಿ ಜನರಿರುವವರೆಗೂ ಇವರಿಗೆ ಈ ಕೆಲಸದ ಶ್ರಮ ತಪ್ಪಿದ್ದಲ್ಲ!

ವಾಸು ಎಲ್ಲರನ್ನೂ ‘ಬುದ್ದಿ’, ‘ತಾಯಿ’, ‘ಗುರೂ’ ಅಂತ ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಯಾವಾಗಲೂ ಏನನ್ನಾದರೂ ಕಲಿಯಬೇಕು ಎಂಬ ಹಂಬಲ. ಪ್ರತಿ ಹುಟ್ಟುಹಬ್ಬ ಅಥವಾ ವಿಶೇಷ ದಿನಗಳಲ್ಲಿ ಅವರಿಂದ ಬೆಳಿಗ್ಗೆ 5:00 ಗಂಟೆಗೆಲ್ಲ ಪ್ರೀತಿ ಮತ್ತು ಹೊಗಳಿಕೆಯ ಮಸೇಜ್ ಗಳು ಬರುತ್ತಿದ್ದವು.

ಅವರಿಗೆ ಸ್ವಭಾವತಃ ಹಾಸ್ಯಪ್ರಜ್ಞೆ ಇತ್ತು. ಬದುಕಿನ ಬಗ್ಗೆ ತುಂಬ ಖುಷಿ ಇತ್ತು. ಅವರ ಸುತ್ತಲಿರುವವರೆಲ್ಲ ಚೆನ್ನಾಗಿ, ಖುಷಿಯಾಗಿ ಇರಬೇಕು ಎಂಬುದು ಅವರ ಆಸೆಯಾಗಿತ್ತು. ನಮ್ಮ ತಂದೆ ಹಾಸ್ಪಿಟಲ್ ನಲ್ಲಿದ್ದಾಗ ಮದ್ಯಾಹ್ನ ಅಲ್ಲಿಗೆ ಹೋಗಿ ಅವರ ಜೊತೆ ಟೈಂ ಕಳೆಯುತ್ತಿದ್ದರು. ಹಾಡು ಹೇಳ್ತಾ, ನಗಿಸ್ತಾ ಸರಳವಾಗಿ ಖುಷಿ ಹರಡುವ ಮೂಲಕ ಸಾಂತ್ವನ ಕೊಡುತ್ತಿದ್ದರು. ಹಾಸ್ಯವೇ ಅವರ ಜೀವಶಕ್ತಿ. ಎಷ್ಟೇ ಕಷ್ಟ ಬಂದರೂ ಹಸನ್ಮುಖರಾಗಿದ್ದುಕೊಂಡು ಅದನ್ನೆಲ್ಲ ಎದುರಿಸುತ್ತಿದ್ದರು.

ಅವರ ಮಗ ನಂದನ್ ಎಂದರೆ ಅವರಿಗೆ ಬಹಳ ಹೆಮ್ಮೆ. ಅವನೇ ಅವರ ಜೀವಶಕ್ತಿ. ಅವನು ಸಂಯೋಜಿಸಿದ ಮ್ಯೂಸಿಕ್ ಅನ್ನು ಎಲ್ಲರ ಜೊತೆ ಖುಷಿಯಿಂದ ಹಂಚಿಕೊಳ್ಳುತ್ತಿದ್ದರು.

ನಮ್ಮೆಲ್ಲರ ಅಚ್ಚುಮೆಚ್ಚಿನ “Soil ವಾಸು” ಅವರದು ಒಂಟಿಜೀವ ಆಗಿರಲಿಲ್ಲ. ಅವರ ತಂದೆ – ತಾಯಂದಿರು (ಪ್ರೊ॥ ಜಿ. ಪದ್ಮನಾಭಯ್ಯ ಮತ್ತು ಜಿ. ಪಿ. ಲಕ್ಷ್ಮೀದೇವಿ) ಅವರಿಗೆ ಸದಾ ಬೆಂಬಲವಾಗಿದ್ದವರು. ಯಾವಗಲೂ ಅವರ ನೆರಳಾಗಿದ್ದ ಅಣ್ಣ, ಬಾಲ್ಯದಿಂದಲೇ ಸ್ನೇಹಿತೆಯಾಗಿದ್ದ ಅತ್ತಿಗೆ ಮತ್ತು – ವಾಸು ಹಾಸ್ಯಮಯವಾಗಿ ಹೇಳುತ್ತಿದ್ದಹಾಗೆ – “ಕಟ್ಟುನಿಟ್ಟಿನ ತಾಯಂದಿರು” ಆಗಿದ್ದ ಇಬ್ಬರು ತಂಗಿಯರು ಅವರ ಜೊತೆಗಿದ್ದವರು. ಮತ್ತೆ, ಸಹಜವಾಗಿ ನಮ್ಮ ಕುಟುಂಬ. ನಾವೆಲ್ಲರೂ ಅವರಿಗೆ “ಸಪೋರ್ಟಿಂಗ್ ಟೀಮ್” ಆಗಿದ್ವಿ.

ವಾಸು! ನೀವು ನಿಮ್ಮ ದಾರಿಯಲ್ಲಿ ದೊರೆಮಗನಂತೆ ನಡೆದಿರಿ! ನೀವು ನೀವಾಗಿ ಜೀವಿಸುವುದರ ಮೂಲಕ ಸಜ್ಜನಿಕೆಯ ಮೇಲ್ಪಂಕ್ತಿ ಹಾಕಿಕೊಟ್ಟಿರಿ. ಒಳ್ಳೆಯ ಜೀವನ ನಡೆಸಲು ನೀವು ಮಾದರಿಯಾಗಿದ್ದಿರಿ. ನಮ್ಮ ಬದುಕಿಗೆ ಅಂತರಂಗದ ಶ್ರೀಮಂತಿಕೆಯನ್ನು ತಂದಿರಿ. ನಮ್ಮಲ್ಲಿ ಮಾನವೀಯತೆ ಯನ್ನು ಪ್ರಚೋದಿಸಿದಿರಿ. ನಿಮಗೆ ನನ್ನ ನಮನಗಳು.



**ದೀಪ್ತಿ ಚಂದ್ರಶೇಖರ್**
8105042274



## ವಾರ್ತಾಚಿತ್ರ



# ವಿವಾಹ



ಸಂಘದ ಪೋಷಕ ಡಾ॥ ಜಿ. ಸ್ವಾಮಿನಾಥ್ ಮತ್ತು ಶ್ರೀಮತಿ ವಸುಧಾ ದಂಪತಿಗಳ ಸುಪುತ್ರ ಚಿ॥ ಸಂತೋಷ್ ಅವರ ವಿವಾಹವು ಶ್ರೀಮತಿ ಗಾಯತ್ರಿ ಮತ್ತು ಶ್ರೀ ವಿಶ್ವನಾಥ್ ಅವರ ಪುತ್ರಿ ಡಾ॥ ಪೃಥ್ವಿ ಅವರೊಡನೆ ದಿನಾಂಕ 18.8.2025ರಂದು ಮಂಗಳೂರಿನಲ್ಲಿ ನೆರವೇರಿತು.

ಸಂಘದ ಸದಸ್ಯ ಶ್ರೀ ಎನ್. ವಿಶ್ವನಾಥ್ ಮತ್ತು ಶ್ರೀಮತಿ ಸುಧಾ ದಂಪತಿಗಳ ಸುಪುತ್ರಿ ಚಿ॥ ಪ್ರತಿಮಾ ಅವರ ವಿವಾಹವು ಶ್ರೀಮತಿ ಸುಜಾತಾ ರಾಮಕೃಷ್ಣ ಮತ್ತು ಶ್ರೀ ಪಿ.ವಿ. ರಾಮಕೃಷ್ಣರಾವ್ ಅವರ ಪುತ್ರ ಚಿ॥ ಮಿಥುನ್ ಅವರೊಡನೆ ದಿನಾಂಕ 5.10.2025ರಂದು ಬೆಂಗಳೂರಿನಲ್ಲಿ ನೆರವೇರಿತು.



**ಸಂಘವು ನೂತನ ದಂಪತಿಗಳಿಗೆ ಶುಭ ಕೋರುತ್ತಾ ದೀರ್ಘಕಾಲದ ಸಂತಸಕರ ದಾಂಪತ್ಯವನ್ನು ಹಾರೈಸುತ್ತದೆ.**

***************************************************************************************

# ಸಾಧನೆ





ಹಿರಿಯ ಮಹಾಪೋಷಕ ಶ್ರೀ ಕೆ.ಸಿ. ಶೇಖರ್‌ರವರಿಗೆ "ಅಸೋಸಿಯೇಷನ್ ಆಫ್ ಕ್ರಿಕೆಟ್ ಅಂಪೈರ್ಸ್ ಕರ್ನಾಟಕ (ರಿ.)" ಸಂಸ್ಥೆಯಿಂದ 50 ವರ್ಷಗಳ ಕಾಲ ಅಂಪೈರಿಂಗ್ ಸೇವೆ ಸಲ್ಲಿಸಿದ ಸವಿ ನೆನಪಿಗಾಗಿ ವಿಶೇಷ ಪದಕವನ್ನು ನೀಡಲಾಗಿದೆ. ಇದು ನಮ್ಮ ಸಂಘಕ್ಕೆ ಒಂದು ಹೆಮ್ಮೆಯ ವಿಷಯ.

# ವಾರ್ತಾಚಿತ್ರ

## ಸಾಧನೆ



ಸಂಘದ ಸದಸ್ಯೆ ಶ್ರೀಮತಿ ಶುಭ ಗಾಯತ್ರಿ ಅವರಿಗೆ ಕೇಂದ್ರ ಸರ್ಕಾರ "ನೀತಿ ಆಯೋಗ್" ನಿಂದ ಮಾನ್ಯತೆ ಗಳಿಸಿರುವ Well Education and Peace Council ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ.

ಸಂಘದ ಪೋಷಕ ಶ್ರೀ ಎಸ್. ನಾಗರಾಜನ್ ಅವರ ಪತ್ನಿ ವಿದೂಷಿ ನಾಗಲಕ್ಷ್ಮಿ ಅವರ ಕೃತಿ "ಭರತನಾಟ್ಯ ನೃತ್ಯ ಜ್ಞಾನಂ (ಪಲ್ಲವ ಆವೃತ್ತಿ)" ಕೃತಿಯು ಮೈಸೂರಿನ ಚಂಪಕ ಅಕಾಡೆಮಿ ಮತ್ತು ವಸುಂದರಾ ಕಲಾ ಸಂಸ್ಥೆಯ ಆಶ್ರಯದಲ್ಲಿ 26–11–2025ರಂದು ಬಿಡುಗಡೆಯಾಯಿತು.





ಸಂಘದ ಸದಸ್ಯ ಶ್ರೀ ಧೀಮಂತ್ ಕುಮಾರ್ ಅವರ ತಂದೆ ಶ್ರೀ ಲಕ್ಷ್ಮೀರಮಣಕುಮಾರ್ ಅವರು ಸಿಂಗಸಂದ್ರದ ಶ್ರೀಮಹಾಗಣಪತಿ ದೇವಾಲಯದ ಅಭಿವೃದ್ಧಿ ಮತ್ತು ವಿಶೇಷವಾಗಿ ಪ್ರತಿವರ್ಷದ ಶ್ರೀಗಣೇಶ ಚತುರ್ಥಿಯಂದಿನ ಉತ್ಸವಾಚರಣೆಗೆ ಸಲ್ಲಿಸುತ್ತಿರುವ ಸೇವೆಗಾಗಿ ದೇವಸ್ಥಾನದ ಆಡಳಿತವರ್ಗದಿಂದ ಶ್ರೀಯುತರಿಗೆ ಗೌರವ ಸಲ್ಲಿಸಿದೆ.

**ಸಂಘವು ಈ ಸಾಧಕರನ್ನು ಹಾರ್ದಿಕವಾಗಿ ಅಭಿನಂದಿಸುತ್ತಾ ಇವರುಗಳಿಗೆ ಆರೋಗ್ಯಪೂರ್ಣ ಮತ್ತು ಕ್ರಿಯಾಶೀಲ ಜೀವನವನ್ನು ಹಾರೈಸುತ್ತದೆ.**

With Best Compliments From



**Smt. Lalitha Murthy**
**&**
**Family**

# 597, "SRINIVASA" 44th Cross
Jayanagar 8th Block, Bengaluru

With Best Compliments From



**Arun K.S.**
**President, M.M.D.B.S.**

With Best Compliments From

**Sri H. Gopala Swamy**
**Sri H.G. Ananth**
**Smt B.G. Vijayashree**
**Kum. Mahathi S. Ananth**
**Sarjapura**

**Mobile No.: 9845011464**

*With Best Compliments From*



**Shyamsunder R. A.**
**Secretary, M.M.D.B.S.**

*With Best Compliments From*



**Nagesha**
**Joint Secretary, M.M.D.B.S.**

*With Best Compliments From*



**Shivakumar N.**
**Internal Auditor, M.M.D.B.S.**

*With Best Compliments From*



**Sharma K. B. S.**
**Member, Executive Committee**
**M.M.D.B.S.**

*With Best Compliments From*



**Ravishankar R. P.**
**Member, Executive Committee**
**M.M.D.B.S.**



*With Best Compliments From*



**Nithin B.**
Member, Executive Committee
M.M.D.B.S.

*With Best Compliments From*



**Lalitha H. R.**
Member, Executive Committee
M.M.D.B.S.

*With Best Compliments From*



**Arun H. G.**
Member, Executive Committee
M.M.D.B.S.

*With Best Compliments From*



**Vijayakumar S. R.**
Member, Executive Committee
M.M.D.B.S.

*With Best Compliments From*



**Subramanyam B.**
Member, Executive Committee
M.M.D.B.S.



**Smt. Nalini Subramanyam**
9886196008

## ಗಣ್ಯರಿಂದ "ಬೃಹಚ್ಚರಣ" ಪತ್ರಿಕೆ ವೀಕ್ಷಣೆ







## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರುಗಳನ್ನು ಭೇಟಿ ಮಾಡಿದ ಸಂದರ್ಭ





# ಸಂಘದ ಇತ್ತೀಚಿನ ನೋಂದಣಿ ಪ್ರಮಾಣ ಪತ್ರ

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ನೋಂದಣಿ ಸಂಖ್ಯೆ:49/12-13

ಕಡತ ಸಂಖ್ಯೆ: 698/2024-25

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ

ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ

ದಿನಾಂಕ: 06-03-2025

## -:ಸ್ವೀಕೃತಿ ಪತ್ರ :-

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರ ಕಲಂ 13ರನ್ವಯ ಸಲ್ಲಿಸ ಬೇಕಾದ 2023-24ನೇ ಸಾಲಿನ ಲೆಕ್ಕಪತ್ರಗಳು/ಸರ್ವಸದಸ್ಯರ ಸಭೆಯ ನಡವಳಿಕೆ ಹಾಗೂ 2024-25ನೇ ಸಾಲಿನ ಕಾರ್ಯಕಾರಿ ಸಮಿತಿ ಪಟ್ಟಿಯನ್ನು

**" ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ"**

ನಂ. 27/1, ಬುಲ್‌ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು-560004.

ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರು ದಿನಾಂಕ:24-02-2025 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ದಸ್ತಾವೇಜುಗಳನ್ನು ದಿನಾಂಕ: 06-03-2025 ರಂದು ದಾಖಲಿಸಿದೆ. ಪಾವತಿಸಬೇಕಾದ ಫೈಲಿಂಗ್ ಶುಲ್ಕ ರೂಪಾಯಿ.1,100/-ಗಳನ್ನು (ಅಕ್ಷರಗಳಲ್ಲಿ ಒಂದುಸಾವಿರದ ಒಂದುನೂರು ಮಾತ್ರ) ಪಾವತಿಸಿರುತ್ತಾರೆ.

ಈ ಸ್ವೀಕೃತಿ ಪತ್ರ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಸಂಘದ ಚಟುವಟಿಕೆಗಳು ಸಾರ್ವಜನಿಕರ ಹಿತಾಸಕ್ತಿ ಹಾಗೂ ಕಾನೂನಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕಂಡು ಬಂದರೆ.
2. ಸಂಘದ ಬಗ್ಗೆ ನ್ಯಾಯಾಲಯಗಳಲ್ಲಿ ಅಥವಾ ಯಾವುದೇ ಅಧಿಕಾರಿಯವರ ಮುಂದೆ ವಿಚಾರಣೆ ನಡೆದು ಸಂಘವು ಸಲ್ಲಿಸಿರುವ ಪ್ರಸ್ತುತ ದಾಖಲೆಗಳು ಸಿಂಧುವಲ್ಲವೆಂದು ಧೃಢಪಟ್ಟರೆ.
3. ಸಂಘದಲ್ಲಿ ಶೇಖರಿಸಿರುವ ಎಲ್ಲಾ ರೀತಿಯ ವಂತಿಗೆ ಹಾಗೂ ಸದಸ್ಯತ್ವ ಶುಲ್ಕವನ್ನು ಸಂಘದ ಉದ್ದೇಶಗಳಿಗಾಗಿ ಬಳಸದೆ, ಯಾವುದೇ ರೀತಿಯ ಹಣ ದುರುಪಯೋಗವಾಗಿದೆ ಎಂದು ಕಂಡುಬಂದರೆ.
4. ಸಂಘವು ನೀಡಿರುವ ದಾಖಲಾತಿಗಳಲ್ಲಿ ಯಾವುದೇ ರೀತಿಯ ಆಕ್ಷೇಪಣೆಗಳು/ಲೋಪದೋಷಗಳು ಕಂಡು ಬಂದಲ್ಲಿ ಅಥವಾ ಸಂಘಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ದೂರುಗಳು ಸಾಬೀತಾದಲ್ಲಿ.
5. ಲೆಕ್ಕ ಪತ್ರಗಳು ಅಥವಾ ಆದಾಯ ಮತ್ತು ವೆಚ್ಚಗಳಲ್ಲಿ ತಪ್ಪು ಮಾಹಿತಿ ನೀಡಿ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕದಲ್ಲಿ ಕಡಿಮೆ ಪಾವತಿ ಸಾಬೀತಾದಲ್ಲಿ.
6. ಸಂಘದ ಲೆಕ್ಕಪತ್ರಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಮಾಹಿತಿ ಸಂಬಂಧ ಸಲ್ಲಿಸಿರುವ ಯಾವುದೇ ದಾಖಲಾತಿಗಳು ತಪ್ಪು ಮಾಹಿತಿಯಿಂದ ಕೂಡಿದ್ದರೆ.
7. ಇನ್ನು ಮುಂದೆ ಸಂಘದ ಸರ್ವಸದಸ್ಯರ ಸಭೆ ಹಾಗೂ ಕಾರ್ಯಕಾರಿ ಸಮಿತಿ ಚುನಾವಣೆಯನ್ನು ಕಾಲಕಾಲಕ್ಕೆ ಜರುಗಿಸಿ, ಸಕಾಲದಲ್ಲಿ ಲೆಕ್ಕಪತ್ರಗಳನ್ನು ಸಲ್ಲಿಸಿ, ಸ್ವೀಕೃತಿ ಪಡೆಯತಕ್ಕದ್ದು. ತಪ್ಪಿದಲ್ಲಿ ಈ ಸ್ವೀಕೃತಿಯನ್ನು ರದ್ದುಪಡಿಸಲಾಗುವುದು ಲೋಪವಾದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೇ ಹೊಣೆಗಾರರಾಗುತ್ತಾರೆ.
8. ಈ ಸ್ವೀಕೃತಿಯನ್ನು ಸಂಘದ ನಿಬಂಧನೆಯಲ್ಲಿ ಏನೇ ಇದ್ದರೂ ಸಹ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕೆಂಬ ಷರತ್ತಿಗೆ ಒಳಪಟ್ಟು ನೀಡಲಾಗಿದೆ. ಒಂದುವೇಳೆ ಸದರಿ ಅಧಿನಿಯಮಕ್ಕೆ ವ್ಯತಿರಿಕ್ತವಾದ ಉದ್ದೇಶಗಳನ್ನು ಸಂಘ ಕಾರ್ಯಚಟುವಟಿಕೆಯಲ್ಲಿ ಅಳವಡಿಸಿಕೊಂಡಿದ್ದಲ್ಲಿ ಅಥವಾ ನಿರ್ವಹಿಸಿದ್ದಲ್ಲಿ ಅಂತಹ ಸಂದರ್ಭದಲ್ಲಿ ಅಸಿಂಧುವಾಗುತ್ತದೆ.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು,

ಎರಡನೇ ವಲಯ, ಬೆಂಗಳೂರು ನಗರ ಜಿಲ್ಲೆ

*In Memory Of*



## Late Sri R.S. Venkatagiriyappa
## &
## Late Smt. Susheelamma

**Kithiganahalli, Anekal Taluk**
**Bengaluru District**

**Inserted by**
**Col. V.G. Rajan**
**V.S. Mani**
**V. Sunanda**



*With Best Compliments From*



SV

***Authorised Channel Partners for Kimberley Clark***
***Super Stockists for Protec Korchem***
***Authorised Dealers for User Friendly Waterless***
***Urinal and Sustainable Chemicals***

# Esvee Stationers

*The State Stationery People*

# 28, 'A' Street, 1st Main Road, New Guddadahalli,
Mysore Road, Bengaluru - 560026
Telephone: (080) – 26741974

**Arun V. - 9880166001**
**Ashok V. – 9845063630**
**e-mail: sales@essveestationers.com**



